ಪ್ರಜಾವಾಣಿ ಶನಿವಾರ • ಸೆಪ್ಟೆಂಬರ್ 21, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER
ಕ್ಲಾಸಿಫೈಡ್ಸ್

Commercial Site for Sale at Ramohalli Mysore Road
Ready for Registration
Call: 93411 18999
Bank Loan Available

LONG TERM OFFICE RENTAL ON OLD AIRPORT ROAD
7447 Sqft FULLY Fitted Out Office with 96 Workstations, 3 Meeting Rooms,
1 MD Cabin || 5 Cabins || 1 Board || 1 Cafeteria
On Old Airport Road Next to HAL Museum.
MSG ONLY BY WHATSAPP FOR MORE DETAILS 98450 31550

READY TO MOVE IN
₹ 45 Lakhs 2 BHK FLAT
Fully Furnished including AC & Wardrobe
RENTAL POTENTIAL ₹ 30,000 PM FOR THIS APARTMENT
TENANT READILY AVAILABLE FOR THESE FLATS!
Chandapura, Near Narayana Hrudayalaya Metro Station on Hosur Road
NISARGA BUILDERS Call For Site Visit 6366 864 500

B SHIP® First Arya Vysya Business Networking Group
Business EXPO
Bridging Businesses
Powered By wallepace SUMADHURA
21st & 22nd September 2024
10am - 8pm
at Shubh Convention
(Formerly Elaan Convention,) J.P. Nagar 7th Phase, Brigade Millenium, Bangalore.
Visit Bengaluru's
Biggest Family Exhibition

* Garments * Office needs
* Food * Stationery
* Lifestyle * Healthcare
* Home * Styling
* Furniture * Electronics
* Makeup * Accessories
and many more

FREE ENTRY With Registration
Scan & Register
www.bship.biz

PROPERTY CORNER
ಕ್ಲಾಸಿಫೈಡ್ಸ್

REAL ESTATE SELLING

Sites

Banashankari

BANASHANKARI 6TH-STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT CONTACT: 8050908920/ 9986866661

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

KEMPEGOWDA LAYOUT, COMMERCIAL BDA SITE FOR SALE 20X30, 30X40, 40X60, 50X80 CONTACT KUMAR: 9945119449

Mysore Road

"KENGERI CONTACT for Buying/ Selling of BDA, BMRDA Sites near Kumbulgud, Hejjala, BigBanyan Tree. 9845178335"

SALE BDA 50x80 South Facing Site Vishweshwaraiah Lyt 2nd Block 8500/- Per sft Negotiable Further Details Call:9845545977 6366661239

BDA SITE SALE VISHWESHWARIAH LAYOUT 50X80 WEST FACE 80FT ROAD PARALLEL 7000 NEGOTIABLE 30X40 OWNER MEETING 1ST BLOCK CONTACT: 8892901567

Bangalore North

SITE'S SALE RMV 2nd Stage 50x90, 50x80, Sanjaynagar 40x60, Judicial Layout 60x90, 50x80, 40x60: 7090777677

Hosur Road

SALE EXCELLENT DC Conversion Villa Site 30x40 Total 36 Sites at Chandapura Marsur Rs.3000/- Sft 7892531744 9448369117

Hebbal

BDA 60X40 Site 511 East Face, Rajivgandhi nagar, NTI PH2, Kodigehalli Call 6364712736

HSR Layout

HSR 30X40 40X60 50X80 SALE RESIDENTIAL COMMERCIAL RENTAL INCOME BUILDINGSAVAILABLE ACES 30X40 40X60: 9900966336

Kengeri

KENGERI UPANAGAR BDA Site 25x42, E/F, BANASHANKARI 6th Stage, 7th Block 20x30,W/F :9632822225/ 9110467577

Kempegowda Layout

NADAPRABHU KEMPEGOWDA LAYOUT 7th block 'F' Sector50x80 W/F behind 100-feet-road on50 feet-road,near Nayara Petrol-bunk. *VISHVESHWARAIH LAYOUT*2nd block 40x60 W/F.Contact: 9686469799

Flat

Sadashiva Nagar

FLAT FOR Sale 4 BHK Servant Room 3370sft, Bagamane Triumph,13 Sadashiva Nagar Sankey Road covered parking for Two cars. Contact: 6281741101

House

Electronic City

CHANDAPURA BMRDA Approved 3 & 4 Bedroom Villa Ready To Occupy Only Genuine Buyers: 9916763727

Commercial Building

Chamarajpet

SALE: CHAMARAJPET

Commercial Building
18,000 Sft
Rental Income 8.5 Lacs
Sale Price 14.50 Crores
Contact: 96322-37557 / 96069-07557

MAXWORTH REALTY®
ಪ್ರಸ್ತುತಪಡಿಸುತ್ತಿದೆ
ಪ್ರತಿಷ್ಠಿತ ಪ್ರೀಮಿಯಂ ಪ್ರಾಜೆಕ್ಟ್‌ಗಳು
ಅತ್ಯುತ್ತಮ ಸ್ಥಳಗಳಲ್ಲಿ

BBMP APPROVED
Max Madhura Apartment
Vidyaranyapura

Urban Classic Villa project
Devanahalli Town

Farm Land / Villa Plots
Hoskote

Farm Land / Villa Plots
Sulibele International Airport Road
MAXWORTH REALTY® worth to own ISO 9001-2008
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 99808 83333 / 9900058097
MAXWORTH REALTY INDIA LIMITED
ಕೆಎಂವಿ ಹೌಸ್, ನಂ. 12/2, ಯಮುನ ಬಾಯಿ ರಸ್ತೆ, ಮಾಧವನಗರ, ಬೆಂಗಳೂರು.

Vijayanagar

FOR SALE: 50X90 (4500Sft) South facing site with old building at 1-A Main Road, Govindarajanagar, Near Hotel Swathi Green Land, (Jaimunirao Circle) Bengaluru. Broker's excuse. Contact: 9343432456

Vishweshwariah Layout

"VISHVESHWARAIAH LAYOUT Wanted/ Available 20x30,30x40, 40x60, 50x80 sites for immediate settlement. "Anugraha Construction"- 9886294610"

VISHWESHWARAIAH LAYOUT 6th Block BDA 40x60 EF 40ft Road, KLE Law College Owner Meeting: 9980860138

Nagarabhavi

SALE: SITE 30x60 Nagarabhavi 2nd Stage 'A' Khata. Bank loan Available. Immediate Registration. Genuine Buyers. 6361819741.

Vidyaranyapura

3 BHK Flat For Sale East Facing 72 Lacs Negotiable Contact: 96323 21155

Rajajinagar

PURVA BLUBELLE Adjacent to Magadi road Metro station Rajajinagar Centre of the City 3 Bedroom & Exclusive 5Bedroom Flats +servant room with all luxurious Amenities, Only few units for Sale. Contact: 9844027560

Srirampura

HOUSE FOR SALE, in Sriramapuram, Land measuring 1500sqft. Building 4000+. Ground +2. Covered parking for 2 Cars. Contact: 9171918295, 9442514001.

Commerical

Malleshwaram

SRIRAMPURAM MN RD VACANT LAND 'A' KHATA COMMERCIAL/RESIDENCIAL SITE 27 X 30 FT 1 KM FROM MANTRI MALL 9620140619

Seshadripuram

SRIRAMPURAM MN RD - VACANT LAND 'A' KHATA COMMERICAL/RESIDENCIAL SITE 27 X 30 FT 1 KM FROM MANTRI MALL 9620140619

Villas/Bunglows

J P Nagar

3 BHK independent, semi furnished House with garage built on 60x40. Prime Location close to shopping malls, temples at JP Nagar 3rd Phase. Genuine buyers contact 9108152220

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

REAL ESTATE BUYING

Farm House/ Land/ Resorts

Multiple Locations

ADELIE INTERNATIONAL SCHOOL: Chain of schools backed by Eduweft group looking to take over management of Preschools, CBSE, CISCE & Residential Schools (Long Lease/ Partnership/ Investment) Looking for multiple locations across Karnataka. Requirement: Excellent Location. Contact: Sumanth Narayan of Eduweft Services Pvt Ltd. Mobile: 9606353036 Email: info@eduweft.com www.eduweft.com

Devanahalli

WANTED LAND: In and around Nandi Hills- Chikaballapura, Devanahalli we are looking for 2 to 15 acres of top-notch property for school with at least 40 feet wide attractive access road and frontage of at least 400 feet. Clear Titles & Real Owners. Contact SUMANTH NARAYAN. Email: info@eduweft.com/ 9606353036

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact:9902038118, 9449060605

WANTED BDA & BBMP SITES. Anjanapura, JP.Nagar,Banashankari 6th Stage, Vishweshwaraiah Layout. Any Measurements Immediate Settlement Genuine Sellers Contact: 9972223222, 9606632777

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Nagarabhavi

"WANTED NAGARBHAVI RHSCS, Visweshwaraiah all Block, MPM, Genuine Sellers/ Owners promptly Feel free Contact: 7259675150"

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

CONNECT

ಶೋ ಆಫ್

SHOWOFFF
Jayanagar, Commercial Street
Mantri Square Mall, Gopalan Arcade
UPTO 50% OFF
• Bangalore: • Commercial Street • DVG • Gopalan Arcade • Gopalan Signature Mall • Jayanagar • Mantri Square Mall • Malleswaram • Phoenix Market City • Royal Meenakshi Mall • Yelahanka New Town
• Belagavi • Bellary • Bidar • Bijapur • Chikmagalur • Gulburga • Hassan • Hubli • Mangalore • Mysore • Tumkur • Ahmednagar (Maharashtra)

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

AVAILABLE ON RENT

MAGADI ROAD
LOWER GROUND - 6000 Sqft
1st FLOOR -6500 Sqft Suitable For Office/ Gym / Beauty Parlor/ Warehouse / Cloud Kitchen.
Call : 9845049000

NAGARBHAVI BDA Complex opp Annapoorneshwarinagar Commercial Space newly Built 1st-floor and 2nd-floor Each-floor 1760sqft for rent.Contact.7676403884

MORE Classifieds IN MAIN ISSUE

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಕ್ರಿಕೆಟ್ ವೀಕ್ಷಕ ವಿವರಣೆಗಾರ್ತಿ ಶಿಬಾನಿ ಭಾಸ್ಕರ್ ಸಂದರ್ಶನ

ಚರ್ಚೆ — ಕನ್ನಡ ಚಿತ್ರೋದ್ಯಮದಲ್ಲಿ ಲೈಂಗಿಕ ದೌರ್ಜನ್ಯ ತಡೆಗೆ ಸಮಿತಿ ಬೇಕಿದೆಯೇ?

‘ಸೇನಾ ಅಧಿಕಾರಿ ಗೆಳತಿ ಮೇಲೆ ಲೈಂಗಿಕ ದೌರ್ಜನ್ಯ’ 8

ಹೊರನಾಡು ದೇಗುಲದಲ್ಲಿ ವಸ್ತ್ರಸಂಹಿತೆ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
84,544	25,790	₹75,950 (ಬೆಂಗಳೂರು)	₹90,900 (ಬೆಂಗಳೂರು)	83.55

‘ಗೋಪ್ಯ ಮಾಹಿತಿ ಸಿಕ್ಕಿದ್ದು ಹೇಗೆ?’

ಬೆಂಗಳೂರು: ‘ಎಚ್.ಡಿ.ಕುಮಾರ ಸ್ವಾಮಿ, ಮುರುಗೇಶ ನಿರಾಣಿ, ಶಶಿಕಲಾ ಜೊಲ್ಲೆ ಮತ್ತು ಜಿ. ಜನಾರ್ದನ ರೆಡ್ಡಿ ಅವರ ವಿರುದ್ಧ ತನಿಖೆ ಮತ್ತು ವಿಚಾರಣೆಗೆ ಅನುಮತಿ ಕೋರಿ ಲೋಕಾಯುಕ್ತವು ರಾಜ್ಯಪಾಲರಿಗೆ ಮನವಿ ಸಲ್ಲಿಸಿದೆ ಎಂಬ ಗೋಪ್ಯ ಮಾಹಿತಿ ರಾಜ್ಯ ಸರ್ಕಾರಕ್ಕೆ ಗೊತ್ತಾಗಿದ್ದಾದರೂ ಹೇಗೆ’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಪ್ರಶ್ನಿಸಿದ್ದಾರೆ. 7

ದಸರಾ ಉದ್ಘಾಟನೆಗೆ ಹಂಪನಾ

ಮೈಸೂರು: ‘ಹೆಸರಾಂತ ಸಾಹಿತಿ ಹಂ.ಪ. ನಾಗರಾಜಯ್ಯ ಅವರನ್ನು ಈ ಬಾರಿಯ ದಸರಾ ಉದ್ಘಾಟನೆಗೆ ಆಹ್ವಾನಿಸಲು ತೀರ್ಮಾನಿಸಲಾಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. 8

ಒಳಪುಟದಲ್ಲಿ

ಅಡುಗೆ ಎಣ್ಣೆ ದರ ಹೆಚ್ಚಳ: ವಿವರಣೆ ಕೇಳಿದ ಕೇಂದ್ರ 12

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಲಘು ಮಾತು: ‘ಸುಪ್ರೀಂ’ ಕಿಡಿ

ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಯ ‘ಅನಪೇಕ್ಷಿತ ಹೇಳಿಕೆ’ಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಹೈಕೋರ್ಟ್‌ನಲ್ಲಿ ಪ್ರಕರಣಗಳ ವಿಚಾರಣೆ ಸಂದರ್ಭದಲ್ಲಿ ನ್ಯಾಯಮೂರ್ತಿ ವೇದವ್ಯಾಸಾಚಾರ್ ಶ್ರೀಶಾನಂದ ನೀಡಿರುವ ‘ಆಕ್ಷೇಪಾರ್ಹ ಹೇಳಿಕೆ’ಗಳನ್ನು ಸುಪ್ರೀಂ ಕೋರ್ಟ್ ಗಂಭೀರವಾಗಿ ಪರಿಗಣಿಸಿ ಸ್ವಯಂಪ್ರೇರಿತ ವಿಚಾರಣೆ ಕೈಗೆತ್ತಿಕೊಂಡಿದೆ. ಈ ಸಂಬಂಧ ಎರಡು ದಿನಗಳಲ್ಲಿ ವಿಸ್ತೃತ ವರದಿ ಸಲ್ಲಿಸುವಂತೆ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ನಿರ್ದೇಶನ ನೀಡಿದೆ.

7ನೇ ಪುಟ ನೋಡಿ

ಮುಖ್ಯಾಂಶಗಳು

- ಹೈಕೋರ್ಟ್ ರಿಜಿಸ್ಟ್ರಾರ್‌ರಿಂದ ವರದಿ ಕೇಳಿದ ಸುಪ್ರೀಂ ಕೋರ್ಟ್
- ವರದಿ ಸಲ್ಲಿಕೆಗೆ ಎರಡು ದಿನಗಳ ಅವಕಾಶ
- ನ್ಯಾಯಾಲಯಕ್ಕೆ ನೆರವು ನೀಡಲು ಅಟಾರ್ನಿ ಜನರಲ್ ತುಷಾರ್ ಮೆಹ್ತಾಗೆ ಸೂಚನೆ

ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರ ಅನಪೇಕ್ಷಿತ ಹೇಳಿಕೆಯ ವಿಡಿಯೊ ಗಮನಕ್ಕೆ ಬಂದಿದೆ. ಹಾಗಾಗಿ ಐವರು ನ್ಯಾಯಮೂರ್ತಿಗಳು ಜತೆಯಾಗಿ ಬಂದಿದ್ದೇವೆ
ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠ

ನ್ಯಾ. ಶ್ರೀಶಾನಂದ ಹೇಳಿದ್ದೇನು?

ವೇದವ್ಯಾಸಾಚಾರ್ ಶ್ರೀಶಾನಂದ

• ‘ಗೋರಿಪಾಳ್ಯ ಮಿನಿ ಪಾಕಿಸ್ತಾನ’

ಬೆಂಗಳೂರು: ‘ಮುಸ್ಲಿಂ ಬಾಹುಳ್ಯ ಪ್ರದೇಶವಾದ ಗೋರಿ ಪಾಳ್ಯದ ಕ್ರಿಮಿನಲ್‌ಗಳ ವಿರುದ್ಧ ಕ್ರಮ ಕೈಗೊಳ್ಳಲು ಪೊಲೀಸರು ಹೆದರುತ್ತಾರೆ. ಅದೊಂದು ಮಿನಿ ಪಾಕಿಸ್ತಾನವಾಗಿ ಮಾರ್ಪಟ್ಟಿದೆ...’ ಪ್ರಕರಣವೊಂದರ ವಿಚಾರಣೆ ವೇಳೆ ಹೈಕೋರ್ಟ್ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರು ಆಗಸ್ಟ್ 28ರಂದು ಮುಕ್ತ ನ್ಯಾಯಾಲಯದಲ್ಲಿ ಆಡಿದ ಮಾತು ಇದು. ಅವರ ಹೇಳಿಕೆಗಳು ಹೀಗಿದ್ದವು.

‘ಬೆಂಗಳೂರಿನ ಪಶ್ಚಿಮ ಭಾಗದ ಮೈಸೂರು ರಸ್ತೆಯ ಮೇಲ್ಸೇತುವೆಗೆ ಹೋಗಿ ನೋಡಿ. ಅಲ್ಲಿ ಸಂಚರಿಸುವ ಪ್ರತಿಯೊಂದು ಆಟೊ ರಿಕ್ಷಾದಲ್ಲೂ 10 ಜನರನ್ನು ತುಂಬಿಕೊಂಡಿರಲಾಗುತ್ತದೆ. ಮೈಸೂರು ರಸ್ತೆಯ ಮೇಲ್ಸೇತುವೆಯಿಂದ ಸಾಗುವಾಗ ಬದಿಯಲ್ಲಿನ ಗೋರಿಪಾಳ್ಯದಿಂದ ಹೂವಿನ ಮಾರುಕಟ್ಟೆಯ ತನಕದ ಪ್ರದೇಶ ಭಾರತದಲ್ಲಿ ಇಲ್ಲ. ಅದೊಂದು ಮಿನಿ ಪಾಕಿಸ್ತಾನ. ಇದು ವಾಸ್ತವ... ಇದು ವಾಸ್ತವ... ಎಂತಹುದೇ ಕಟ್ಟುನಿಟ್ಟಿನ, ದಕ್ಷ ಪೊಲೀಸ್ ಅಧಿಕಾರಿಯನ್ನು ಅಲ್ಲಿಗೆ ಕರ್ತವ್ಯಕ್ಕೆ ನಿಯೋಜನೆ ಮಾಡಿದರೂ ಅವರನ್ನು ತದಕಲಾಗುತ್ತದೆ. ಆಟೊದಲ್ಲಿ ಕೂತು ಎಷ್ಟು ಜನರು ಪ್ರಯಾಣಿಸಬೇಕು ಎಂಬ ಕಾನೂನೇ ಇಲ್ಲಿ ಅನ್ವಯವಾಗುವುದಿಲ್ಲ...’

• ಮುಜುಗರದ ಪದ ಬಳಕೆ

‘ನಿಮ್ಮ ಅರ್ಜಿದಾರರು ತೆರಿಗೆ ಪಾವತಿದಾರರೇ’ ಎಂದು ನ್ಯಾ. ಶ್ರೀಶಾನಂದ ಅವರು ಮತ್ತೊಂದು ಪ್ರಕರಣದಲ್ಲಿ ಪ್ರತಿವಾದಿ ಪರ ವಕೀಲರೊಬ್ಬರನ್ನು, ಪ್ರಶ್ನಿಸುತ್ತಾರೆ. ಆಗ ಪ್ರತಿವಾದಿ ಪರ ವಕೀಲರು ಉತ್ತರಿಸಲು ಮುಂದಾಗುತ್ತಿದ್ದಂತೆಯೇ, ಅರ್ಜಿದಾರರ ಪರ ಹಾಜರಿದ್ದ ಯುವ ವಕೀಲೆ, ‘ಹೌದು, ಅವರು ತೆರಿಗೆ ಪಾವತಿದಾರರು’ ಎಂದು ಸ್ಪಷ್ಟನೆ ನೀಡುತ್ತಾರೆ. ಕೂಡಲೇ ಈ ಮಾತಿಗೆ ತಡೆ ಒಡ್ಡುವ ನ್ಯಾಯಮೂರ್ತಿಯವರು ‘ತಾಳಮ್ಮಾ, ನಿನಗೆ ಅವರದ್ದೆಲ್ಲಾ ಪೂರ್ತಿ ಗೊತ್ತಿದೆ. ನಾಳೆ ಬೆಳಿಗ್ಗೆ ಕೇಳಿದರೆ ಇನ್ನೇನಾದರೂ ಹೇಳ್ತೀರಿ. ಅವರು ಯಾವ ಬಣ್ಣದ ಒಳಉಡುಪು ಧರಿಸುತ್ತಾರೆ ಎಂಬುದನ್ನೂ ಹೇಳಿಬಿಡುತ್ತೀರಿ’ ಎನ್ನುತ್ತಾರೆ.

ಅಸಾಂವಿಧಾನಿಕ ಎಂದ ಬಾಂಬೆ ಹೈಕೋರ್ಟ್

ಫ್ಯಾಕ್ಟ್ ಚೆಕ್ ಘಟಕ ಸ್ಥಾಪನೆ ತಿದ್ದುಪಡಿ ನಿಯಮ ರದ್ದು

ಮುಂಬೈ (ಪಿಟಿಐ): ಸರ್ಕಾರದ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುವ ಸುಳ್ಳು ಸುದ್ದಿಗಳ ಪತ್ತೆಗಾಗಿ ಫ್ಯಾಕ್ಟ್ ಚೆಕ್ ಘಟಕ ಸ್ಥಾಪನೆಗೆ ಅನುವು ಮಾಡಿಕೊಡುವ ಮಾಹಿತಿ ತಂತ್ರಜ್ಞಾನ (ಐಟಿ) ತಿದ್ದುಪಡಿ ನಿಯಮಗಳನ್ನು ಬಾಂಬೆ ಹೈಕೋರ್ಟ್ ಶುಕ್ರವಾರ ರದ್ದು ಮಾಡಿದೆ. ಈ ನಿಯಮಗಳು ಅಸಾಂವಿಧಾನಿಕ ಎಂದು ಹೈಕೋರ್ಟ್ ಹೇಳಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಚಂದೂರ್‌ಕರ್ ಅವರು, ಈ ನಿಯಮಗಳು ಸಂವಿಧಾನದ 14ನೇ ವಿಧಿ (ಸಮಾನತೆಯ ಹಕ್ಕು), 19ನೇ ವಿಧಿ (ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು) ಮತ್ತು 19(1)ನೇ ವಿಧಿಯನ್ನು (ವೃತ್ತಿ ಮತ್ತು ಸ್ವಾತಂತ್ರ್ಯ ಹಕ್ಕು) ಉಲ್ಲಂಘಿಸುತ್ತವೆ ಎಂದು ಹೇಳಿದರು.

ಐಟಿ ತಿದ್ದುಪಡಿ ನಿಯಮ–2023ಕ್ಕೆ ಅದರಲ್ಲೂ ವಿಶೇಷವಾಗಿ ನಿಯಮ–3ಕ್ಕೆ ತೀವ್ರ ಟೀಕೆ ವ್ಯಕ್ತವಾಗಿತ್ತು. ‘ಸುಳ್ಳು ಮತ್ತು ದಾರಿ ತಪ್ಪಿಸುವ ಸುದ್ದಿ’ಗಳ ಪತ್ತೆಗಾಗಿ ಫ್ಯಾಕ್ಟ್‌ಚೆಕ್ ಘಟಕ ಸ್ಥಾಪನೆಗೆ ನಿಯಮ–3 ಅನುವು ಮಾಡಿಕೊಡುತ್ತದೆ.

ಇದನ್ನು ಪ್ರಶ್ನಿಸಿ ಸ್ಟ್ಯಾಂಡ್‌ಅಪ್ ಕಾಮಿಡಿಯನ್ ಕುನಾಲ್ ಕಾಮ್ರಾ ಮತ್ತು ಇತರರು ಬಾಂಬೆ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ಬಗ್ಗೆ ವಿಭಾಗೀಯ ಪೀಠವು ಜನವರಿಯಲ್ಲಿ ಭಿನ್ನಮತದ ತೀರ್ಪು ಪ್ರಕಟಿಸಿತ್ತು. ನಂತರ ಅರ್ಜಿ ವಿಚಾರಣೆಯ ಹೊಣೆ ನ್ಯಾಯಮೂರ್ತಿ ಎ.ಎಸ್.ಚಂದೂರ್‌ಕರ್ ಅವರ ಹೆಗಲಿಗೇರಿತ್ತು.

‘ಸುಪ್ರೀಂ’ ಯೂಟ್ಯೂಬ್ ಚಾನೆಲ್ ಹ್ಯಾಕ್

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಯೂಟ್ಯೂಬ್ ಚಾನೆಲ್ ಅನ್ನು ಶುಕ್ರವಾರ ಹ್ಯಾಕ್ ಮಾಡಲಾಗಿದೆ. ಅಮೆರಿಕದ ರಿಪ್ಪಲ್ ಲ್ಯಾಬ್ಸ್ ಎಂಬ ಕಂಪನಿ ಅಭಿವೃದ್ಧಿಪಡಿಸಿದ ಕ್ರಿಪ್ಟೊಕರೆನ್ಸಿಯ ವಿಡಿಯೊಗಳು ಸುಪ್ರೀಂ ಕೋರ್ಟ್ ಯೂಟ್ಯೂಬ್ ಚಾನೆಲ್‌ನಲ್ಲಿ ಪ್ರಸಾರವಾಗಿದ್ದವು.

‘ಕ್ರಿಪ್ಟೊಕರೆನ್ಸಿಯ ದರ ಕುರಿತು ನೇರ ಪ್ರಸಾರ ಮಾಡಲಾಗುತ್ತಿದೆ’ ಎಂಬ ಬರಹದೊಂದಿಗೆ ವಿಡಿಯೊ ಪ್ರಸಾರಗೊಂಡಿತ್ತು. ‘ಸುಪ್ರೀಂ ಕೋರ್ಟ್ ಯೂಟ್ಯೂಬ್ ಚಾನೆಲ್ ಅನ್ನು ಹ್ಯಾಕ್ ಮಾಡಲಾಗಿದೆ. ಶೀಘ್ರವೇ ಚಾನೆಲ್ ಸೇವೆಯನ್ನು ಆರಂಭಿಸಲಾಗುತ್ತದೆ’ ಎಂದು ಸುಪ್ರೀಂ ಕೋರ್ಟ್ ತನ್ನ ‘ಎಕ್ಸ್’ ಖಾತೆಯಲ್ಲಿ ಬರೆದುಕೊಂಡಿತ್ತು. ಸಂವಿಧಾನ ಪೀಠಗಳ ಮುಂದಿರುವ ಹಾಗೂ ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಯ ನೇರ ಪ್ರಸಾರಕ್ಕಾಗಿ ಸುಪ್ರೀಂ ಕೋರ್ಟ್ ಯೂಟ್ಯೂಬ್ ಚಾನೆಲ್ ಬಳಸುತ್ತಿದೆ.

ಲಾಡು: ವರದಿ ಕೇಳಿದ ಕೇಂದ್ರ

ತಿರುಪತಿ ಪ್ರಸಾದದಲ್ಲಿ ಪ್ರಾಣಿ ಕೊಬ್ಬಿನ ಅಂಶ ಪತ್ತೆ ಪ್ರಕರಣ

ನವದೆಹಲಿ/ತಿರುಪತಿ (ಪಿಟಿಐ): ತಿರುಪತಿ ದೇವಸ್ಥಾನದ ಪ್ರಸಾದವಾದ ಲಾಡುಗಳಿಗೆ ಬಳಸುವ ತುಪ್ಪದಲ್ಲಿ ಪ್ರಾಣಿಗಳ ಕೊಬ್ಬಿನ ಅಂಶ ಪತ್ತೆಯಾಗಿದೆ ಎಂಬುದರ ಕುರಿತು ವರದಿ ನೀಡುವಂತೆ ಕೇಂದ್ರ ಸರ್ಕಾರವು ಆಂಧ್ರಪ್ರದೇಶ ಸರ್ಕಾರಕ್ಕೆ ಸೂಚಿಸಿದೆ.

‘ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರ ಜತೆ ಮಾತನಾಡಿದ್ದು, ವರದಿ ಕೇಳಿದ್ದೇನೆ. ಅಲ್ಲದೆ ಸಂಬಂಧಿಸಿದ ಅಧಿಕಾರಿಗಳಿಗೂ ವರದಿ ನೀಡುವಂತೆ ಸೂಚಿಸಿದ್ದೇನೆ’ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ತುಪ್ಪದಲ್ಲಿ ಹಂದಿ ಕೊಬ್ಬು– ಟಿಟಿಡಿ ಇ.ಒ

ಲಾಡುಗಳಿಗೆ ಬಳಸುವ ತುಪ್ಪದಲ್ಲಿ ಹಂದಿ ಕೊಬ್ಬು ಸೇರಿದಂತೆ ಇತರ ಪ್ರಾಣಿಗಳ ಕೊಬ್ಬಿನ ಅಂಶ ಇರುವುದನ್ನು ಪ್ರಯೋಗಾಲಯದ ಪರೀಕ್ಷೆಗಳು ಬಹಿರಂಗಪಡಿಸಿವೆ ಎಂದು ತಿರುಮಲ ತಿರುಪತಿ ದೇವಸ್ಥಾನಂನ (ಟಿಟಿಡಿ) ಕಾರ್ಯನಿರ್ವಹಣಾ ಅಧಿಕಾರಿ ಜೆ. ಶ್ಯಾಮಲ ರಾವ್ ಶುಕ್ರವಾರ ಹೇಳಿದರು.

ದೇವಸ್ಥಾನದಲ್ಲಿ ಕಲಬೆರಕೆ ಪರೀಕ್ಷೆ ಮಾಡಲು ಸೌಲಭ್ಯಗಳು ಇಲ್ಲ ಎಂಬ ಕೊರತೆಯ ಲಾಭವನ್ನು ತುಪ್ಪ ಪೂರೈಕೆದಾರರು ಪಡೆದುಕೊಂಡಿದ್ದರಿಂದ ಈ ಲೋಪ ಆಗಿದೆ ಎಂದು ಅವರು ತಿಳಿಸಿದರು.

ಕೇಂದ್ರ ಸರ್ಕಾರದ ಅಡಿಯಲ್ಲಿರುವ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಈ ವರದಿಯನ್ನು ಪರಿಶೀಲಿಸಿ ಕೇಂದ್ರಕ್ಕೆ ಮಾಹಿತಿ ನೀಡಲಿದೆ. ಬಳಿಕ ಕಾನೂನು ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಇನ್ನಷ್ಟು ಸುದ್ದಿಗಳು 8

ಜೈಲಿನಿಂದ ಬಿಡುಗಡೆಯಾಗುತ್ತಿದ್ದಂತೆ ಬಂಧನ • ಪ್ರಕರಣ ವರ್ಗಾವಣೆ ಸಾಧ್ಯತೆ

ಅತ್ಯಾಚಾರ ಆರೋಪ: ಮುನಿರತ್ನ ಸೆರೆ

ಪ್ರಜಾವಾಣಿ ವಾರ್ತೆ

ರಾಮನಗರ: ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿ, ಹನಿಟ್ರ್ಯಾಪ್‌ಗೆ ಬಳಸಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜರಾಜೇಶ್ವರಿ ನಗರದ ಬಿಜೆಪಿ ಶಾಸಕ ಮುನಿರತ್ನ ಅವರನ್ನು ಕಗ್ಗಲಿಪುರ ಠಾಣೆ ಪೊಲೀಸರು ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಬಳಿ ಶುಕ್ರವಾರ ಬೆಳಿಗ್ಗೆ ಬಂಧಿಸಿದ್ದಾರೆ.

ಜಾತಿನಿಂದನೆ ಮತ್ತು ಜೀವ ಬೆದರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಿಂದ ಅವರು ಗುರುವಾರ ಜಾಮೀನು ಪಡೆದಿದ್ದರು. ಜಾಮೀನು ಪ್ರಕ್ರಿಯೆ ಮುಗಿಸಿ ಹೊರಬರಲಿದ್ದ ಅವರನ್ನು ಬಂಧಿಸಲು ಕಗ್ಗಲಿಪುರ ಪೊಲೀಸರ ತಂಡ ಜೈಲಿನ ಬಳಿಯೇ ಬೀಡು ಬಿಟ್ಟಿತ್ತು. ಆದರೆ, ರಾತ್ರಿಯಾದರೂ ಪ್ರಕ್ರಿಯೆ ಪೂರ್ಣಗೊಳ್ಳದಿದ್ದುದರಿಂದ ಬಿಡುಗಡೆ ವಿಳಂಬವಾಗಿತ್ತು. ಇದರಿಂದಾಗಿ ಬರಿಗೈಲಿ ವಾಪಸಾಗಿದ್ದರು.

ಶುಕ್ರವಾರ ಬೆಳಿಗ್ಗೆಯೇ ಜೈಲಿಗೆ ತೆರಳಿದ್ದ ತಂಡ, ಅವರು ಹೊರಬರುವುದನ್ನೇ ಕಾಯುತ್ತಿದ್ದರು.

5ನೇ ಪುಟ ನೋಡಿ

ಮುನಿರತ್ನ ವಿರುದ್ಧದ ಅತ್ಯಾಚಾರ ಪ್ರಕರಣದ ತನಿಖೆಗೆ ಎಸ್ಐಟಿ ರಚಿಸುವ ಒತ್ತಡವಿದೆ. ಈ ಕುರಿತು ಸಿದ್ದರಾಮಯ್ಯ ಅವರು ಸೂಕ್ತ ನಿರ್ಧಾರ ಕೈಗೊಳ್ಳಲಿದ್ದಾರೆ
ರಾಮಲಿಂಗಾ ರೆಡ್ಡಿ, ಜಿಲ್ಲಾ ಉಸ್ತುವಾರಿ ಸಚಿವ

ಮುನಿರತ್ನ ಕೆಲಸ ಮಾನವ ಕುಲಕ್ಕೆ ಕಳಂಕ. ಅವರ ಪರವಾಗಿ ಎಚ್.ಡಿ.ಕುಮಾರಸ್ವಾಮಿ, ಆರ್.ಅಶೋಕ ಮಾತನಾಡುವುದು ನೋಡಿದರೆ, ಅವರೇ ಕುಮ್ಮಕ್ಕು ಕೊಟ್ಟಿರುವಂತಿದೆ
ಪುಟ್ಟಣ್ಣ, ವಿಧಾನ ಪರಿಷತ್ ಸದಸ್ಯ

ರಾಜಕೀಯ ಎದುರಾಳಿಗಳು ಹಾಗೂ ಮಾತು ಕೇಳದವರನ್ನು ಎಚ್‌ಐವಿ ಸೋಂಕಿತರ ಮೂಲಕ ಹನಿಟ್ರ್ಯಾಪ್ ಮಾಡಿಸಿರುವ ಮುನಿರತ್ನ ಸಮಾಜ ಪೀಡಕ. ಅವರ ಶಾಸಕ ಸ್ಥಾನ ಕೂಡಲೇ ರದ್ದುಪಡಿಸಬೇಕು
ಎಸ್. ರವಿ, ವಿಧಾನ ಪರಿಷತ್ ಸದಸ್ಯ

27ರಿಂದ ಮೆಮು ರೈಲು ಸಂಚಾರ

ಪ್ರಜಾವಾಣಿ ವಾರ್ತೆ

ತುಮಕೂರು: ತುಮಕೂರು–ಯಶವಂತಪುರ ನಡುವೆ ಹೊಸದಾಗಿ ಮೆಮು ರೈಲು ಸಂಚಾರ ಸೆ.27ರಿಂದ ಆರಂಭವಾಗಲಿದೆ.

ಪ್ರತಿದಿನ ತುಮಕೂ ರಿನಿಂದ ಬೆಳಿಗ್ಗೆ 8.45ಕ್ಕೆ ಹೊರಟು 10.25ಕ್ಕೆ ಯಶವಂತಪುರ ತಲು ಪಲಿದೆ. ಸಂಜೆ 5.40ಕ್ಕೆ ಯಶವಂತಪುರದಿಂದ ಹೊರಟು 7.05ಕ್ಕೆ ತುಮಕೂರು ತಲುಪಲಿದೆ. ಎಲ್ಲ ನಿಲ್ದಾಣದಲ್ಲೂ ನಿಲುಗಡೆ ಇರಲಿದೆ. ಭಾನುವಾರ ಈ ರೈಲು ಸಂಚಾರ ಇರುವುದಿಲ್ಲ.

ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಮೆಮು ರೈಲು ಸಂಚಾರಕ್ಕೆ ಸೆ.27ರಂದು ನಗರದಲ್ಲಿ ಚಾಲನೆ ನೀಡಲಿದ್ದಾರೆ.

ಪ್ರತಿ ಸೋಮವಾರ (ವಾರಕ್ಕೊಮ್ಮೆ) ಬಾಣಸವಾಡಿಯಿಂದ ಬೆಳಿಗ್ಗೆ 6.15ಕ್ಕೆ ಮತ್ತೊಂದು ಮೆಮು ರೈಲು ಸಂಚಾರ ಆರಂಭವಾಗಲಿದೆ. ಚಿಕ್ಕಬಾಣಾವರ ಮೂಲಕ (ಯಶವಂತಪುರದ ಮೂಲಕ ಅಲ್ಲ) ಸಂಚರಿಸಲಿದ್ದು, ಬೆಳಿಗ್ಗೆ 8.35ಕ್ಕೆ ತುಮಕೂರು ತಲುಪಲಿದೆ. ಪ್ರತಿ ಶನಿವಾರ (ವಾರಕ್ಕೊಮ್ಮೆ) ರಾತ್ರಿ 7.40ಕ್ಕೆ ತುಮಕೂರಿನಿಂದ ಹೊರಟು ರಾತ್ರಿ 10.05ಕ್ಕೆ ಬಾಣಸವಾಡಿ ತಲುಪಲಿದೆ.

ಮಯೂರ ಸುಧಾ ಓದಿರಿ

ನಿಧನ

ಲಕ್ಷ್ಮಮ್ಮ
ಲೇಟ್. ಬಿ.ಸಿ. ಗಂಗಣ್ಣನವರ ಧರ್ಮಪತ್ನಿ
ಜಯ ಎಂಜಿನಿಯರಿಂಗ್ ವರ್ಕ್ಸ್ ಬೆಂಗಳೂರು
ಇವರು ದಿನಾಂಕ 20.09.2024 ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ 21.09.2024ರಂದು ಶನಿವಾರ, ಮಧ್ಯಾಹ್ನ 12.30ಕ್ಕೆ ಚಾಮರಾಜಪೇಟೆಯ ಟಿ.ಆರ್. ಮಿಲ್‌ನಲ್ಲಿ ನಡೆಸಲಾಗುವುದು.
ದುಃಖತಪ್ತರು:
ಕುಟುಂಬದವರು & ಬಂಧು ಮಿತ್ರರು
ಮೊಬೈಲ್: 9845008824, 9845014449

ಆರ್.ಗಣೇಶ್‌ಗೆ ಪ್ರಶಸ್ತಿ

ಕಾರವಾರ: ಹೊನ್ನಾವರ ತಾಲ್ಲೂಕಿನ ಮಣ್ಣಿಗೆಯ ಶ್ರೀ ಗಜಾನನ ಕಲೆ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಟ್ರಸ್ಟ್ ಪ್ರಸಕ್ತ ವರ್ಷದಿಂದ ನೀಡುತ್ತಿರುವ ಚೊಚ್ಚಲ 'ಉತ್ತರ ಕನ್ನಡ ಜಿಲ್ಲಾ ಯಕ್ಷಶ್ರೀ' ಪ್ರಶಸ್ತಿಗೆ ಶತಾವಧಾನಿ ಆರ್. ಗಣೇಶ ಆಯ್ಕೆ ಆಗಿದ್ದಾರೆ. ಪ್ರಶಸ್ತಿಯು ₹ 1 ಲಕ್ಷ ನಗದು ಮತ್ತು ಫಲಕ ಒಳಗೊಂಡಿದೆ.

'ನ.12ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಟ್ರಸ್ಟ್ ಪ್ರಕಟಣೆಯಲ್ಲಿ ತಿಳಿಸಿದೆ.

SBI ಭಾರತೀಯ ಸ್ಟೇಟ್ ಬ್ಯಾಂಕ್
ಪ್ರಾದೇಶಿಕ ವ್ಯವಹಾರ ಕಛೇರಿ–4ಪೀಣ್ಯ, ಆಡಳಿತ ಕಛೇರಿ–2
ಮೂರನೇ ಮಹಡಿ, ಎಸ್‌ಬಿಐ ಕೆ.ಜಿ. ರಸ್ತೆ ಸಂಕೀರ್ಣ, ಬೆಂಗಳೂರು 560 009

ಭೋಗ್ಯಕ್ಕೆ ಆವರಣ ಬೇಕಾಗಿದೆ

ಭಾರತೀಯ ಸ್ಟೇಟ್ ಬ್ಯಾಂಕ್ ತಮ್ಮ ಎಸ್‌ಬಿಐ ಚಿಕ್ಕಗೊಲ್ಲರಹಟ್ಟಿ ಶಾಖೆಗಾಗಿ ಭೋಗ್ಯದ ಆಧಾರದ ಮೇಲೆ ಮಾಲೀಕರು/ಮೊಖ್ತಾರುನಾಮೆ ಧಾರಕರಿಂದ (POA Holders) ವಾಣಿಜ್ಯ / ಕಛೇರಿ ಉಪಯೋಗಕ್ಕಾಗಿ ಆವರಣದ ಪ್ರಸ್ತಾವಗಳನ್ನು ಸ್ವಾಗತಿಸುತ್ತದೆ. ಕಟ್ಟಿರುವ ವಿಸ್ತೀರ್ಣ ಸುಮಾರು 242 ಚದರ ಮೀಟರ್ (2600 ಚದರ ಅಡಿ +/– 25%) ಇದ್ದು, ನೆಲ ಅಂತಸ್ತಿನಲ್ಲಿ ಇದ್ದರೆ ಆದ್ಯತೆ ನೀಡಲಾಗುವುದು. ಮತ್ತು ಪ್ರಸ್ತುತ ಇರುವ ಶಾಖೆ ಆವರಣ, ಸೈಟ್ ನಂ.1, ಖಾತ 790/1, ಚಿಕ್ಕಗೊಲ್ಲರಹಟ್ಟಿ, ದಾಸನಪುರ ಹೋಬಳಿ, ಮಾಗಡಿ ರಸ್ತೆ, ಬೆಂಗಳೂರು 560 091 ಇಲ್ಲಿಂದ ಒಂದು ಕಿ.ಮೀ. ಒಳಗೆ ಇರಬೇಕು.

ವಿವರವಾದ ನಿಯತಾಂಕಗಳು, ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಬಿಡ್ ಬೆಲೆಗಳನ್ನು ಒಳಗೊಂಡ ತಾಂತ್ರಿಕ ಬಿಡ್ ಅನ್ನು ಸಲ್ಲಿಸಲು ನಮೂನೆಯನ್ನು 21.09.2024 ರಿಂದ 14.10.2024 ರ ವರೆಗೆ ಎಸ್‌ಬಿಐ ವೆಬ್ ಸೈಟ್ www.sbi.co.in ಇಂದ ಡೌನ್ ಲೋಡ್ ಮಾಡಬಹುದು. ತಾಂತ್ರಿಕೆ ಬಿಡ್ ಮತ್ತು ಬೆಲೆ ಬಿಡ್ ಗಳನ್ನು ಒಳಗೊಂಡ ಪ್ರಸ್ತಾವಗಳನ್ನು ಮುದ್ರಾಂಕಿತ ಎರಡು ಬೇರೆ ಬೇರೆ ಕವರ್ ಗಳಲ್ಲಿ ಪ್ರತ್ಯೇಕವಾಗಿ, ಎಸ್‌ಬಿಐ, ಪ್ರಾದೇಶಿಕ ವ್ಯವಹಾರ ಕಛೇರಿ–4, ಆಡಳಿತ ಕಛೇರಿ–2, ಮೂರನೇ ಮಹಡಿ, ಎಸ್‌ಬಿಐ ಕೆ.ಜಿ. ರಸ್ತೆ ಸಂಕೀರ್ಣ, ಬೆಂಗಳೂರು 560 009, ಇವರಿಗೆ 14.10.2024 ರಂದು ಮಧ್ಯಾಹ್ನ 3.00 ಗಂಟೆಗೆ ಅಥವಾ ಅದಕ್ಕಿಂದ ಮುಂಚಿತವಾಗಿ ಸಲ್ಲಿಸಬೇಕು. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

ಸ್ಥಳ: ಬೆಂಗಳೂರು
ದಿನಾಂಕ: 21.09.2024
ಸಹಿ/–
ಪ್ರಾದೇಶಿಕವ್ಯವಸ್ಥಾಪಕರು
ಪ್ರದೇಶ 4, ಆಡಳಿತ ಕಛೇರಿ 2

PM SHREE JAWAHAR NAVODAYA VIDYALAYA
PM SHRI
Bashettihali P.O., Doddaballapura Taluk,
Bengaluru Rural District, Karnataka - 562163
An Autonomous Organization under Ministry of Education
(Dept. of School Education & Literacy, Govt. of India)

WALK IN INTERVIEW

Date: 21.09.2024

Walk-in-Interview for the following posts will be conducted in the Office of the Jawahar Navodaya Vidyalaya, Doddaballapur, Bangalore Rural District against the vacancy for the session 2024-25 to appoint on contract basis on 30.09.2024 at 11.00 am.

1. PGT Economics 2. PGT History 3. PGTIT 4. Counsellor (Male) 5. Matron

The interested candidates may appear for the interview physically with original documents with 1 set of Xerox copies.

For further details, visit to the Vidyalaya website: https://www.navodaya.gov.in/nvs/nvs-school/BANGALORERURAL/en/ home. Contact numbers 8116438494 (Principal) /9449090970 (JSA)

Sd/- PRINCIPAL

ಕೆಂಪೇಗೌಡ ಬಡಾವಣೆಯಲ್ಲಿ ಮೂಲಸೌಕರ್ಯ ಕೊರತೆ, ಮನೆ ಕಟ್ಟಲು ಹರಸಾಹಸ

ವರ್ಷಗಳು ಕಳೆದರೂ ಈಡೇರದ ಬಿಡಿಎ ಭರವಸೆ

• ಆರ್. ಮಂಜುನಾಥ್

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ (ಎನ್‌ಪಿಕೆಎಲ್) ಮನೆ ನಿರ್ಮಾಣಕ್ಕೆ ಅನುಕೂಲವಾಗುವಂತಹ ವಾಹನ ಸಂಚಾರಯೋಗ್ಯ ರಸ್ತೆ ನಿರ್ಮಿಸಿಕೊಡುವುದಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನೀಡುತ್ತಿರುವ ಆಶ್ವಾಸನೆಗಳು ವರ್ಷಗಳು ಕಳೆದರೂ ಈಡೇರುತ್ತಿಲ್ಲ.

ಎನ್‌ಪಿಕೆಎಲ್‌ನಲ್ಲಿ ನಿವೇಶನ ಪಡೆದಿರುವವರು ಮನೆ ನಿರ್ಮಿಸಲು ಸಾಧ್ಯವಾಗುತ್ತಿಲ್ಲ. ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಸಾಗಿಸಲು ಅಗತ್ಯವಾದ 'ಮೋಟರಬಲ್ ರಸ್ತೆ' ಇಲ್ಲ. ವಸ್ತುಗಳನ್ನು ಸಾಗಿಸಲು ಹರಸಾಹಸ ಪಡುತ್ತಿರುವ ನಿವೇಶನದಾರರು, ಕಷ್ಟಪಟ್ಟು ಮನೆ ನಿರ್ಮಿಸಿದರೂ ನೀರು, ವಿದ್ಯುತ್, ಒಳಚರಂಡಿ ವ್ಯವಸ್ಥೆ ಇಲ್ಲದೆ ಪರದಾಡುವಂತಾಗಿದೆ.

ಉಪಮುಖ್ಯಮಂತ್ರಿ, ಬಿಡಿಎ ಅಧ್ಯಕ್ಷ, ಆಯುಕ್ತರು ಸೇರಿದಂತೆ ಎಲ್ಲ ಹಂತಗಳ ಎಂಜಿನಿಯರ್‌ಗಳಿಗೆ ನಿವೇಶನದಾರರು ಹಾಗೂ ಬಡಾವಣೆಯ ಸಂಘದ ಪದಾಧಿಕಾರಿಗಳು ವರ್ಷಗಳಿಂದ ಹಲವು ಪತ್ರ ಬರೆದಿದ್ದಾರೆ, ಖುದ್ದು ಮನವಿಯನ್ನೂ ಸಲ್ಲಿಸಿದ್ದಾರೆ. 'ಇನ್ನೊಂದು ತಿಂಗಳು, ಇನ್ನು ಹತ್ತು ದಿನಗಳಲ್ಲಿ ರಸ್ತೆಯಾಗುತ್ತದೆ' ಎಂಬ ಭರವಸೆಗಳು ದೊರೆತು ಮೂರು ತಿಂಗಳು, ಆರು ತಿಂಗಳು, ವರ್ಷಗಳಾದರೂ ವಾಸ್ತವದಲ್ಲಿ ಯಾವ ಪ್ರಗತಿಯೂ ಆಗುತ್ತಿಲ್ಲ.

ನಾಡಪ್ರಭು ಕೆಂಪೇಗೌಡ ಬಡಾವಣೆಯ 6ನೇ ಬ್ಲಾಕ್ ರಸ್ತೆಯ ಸ್ಥಿತಿ

ಬಿಡಿಎ ಬಡಾವಣೆಗಳಲ್ಲಿ ಪ್ರಥಮ ಬಾರಿಗೆ ಸಾಯಿಲ್ ಸ್ಟೆಬಿಲೈಸೇಷನ್ ಟೆಕ್ನಾಲಜಿಯಿಂದ (ಎಸ್‌ಎಸ್‌ಟಿ- ಮಣ್ಣು ಸ್ಥಿರೀಕರಣ ತಂತ್ರಜ್ಞಾನ) ರಸ್ತೆಗಳನ್ನು ಅಭಿವೃದ್ಧಿಪಡಿಸುತ್ತಿದೆ. ಆದರೂ ನಿವೇಶನದಾರರಿಗೆ ಅಗತ್ಯವಾದ ರಸ್ತೆಗಳು ಇನ್ನೂ ನಿರ್ಮಾಣವಾಗಿಲ್ಲ.

'ಎನ್‌ಪಿಕೆಎಲ್‌ನಲ್ಲಿ ಶೇ 80ರಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ಎಂದು ಬಿಡಿಎ ಅಧಿಕಾರಿಗಳು ಹೇಳುತ್ತಾರೆ. ಆದರೆ, ವಾಸ್ತವವಾಗಿ ಇಲ್ಲಿ ಮನೆ ಕಟ್ಟಲು ಸವಲತ್ತುಗಳೇ ಇಲ್ಲ' ಎಂದು ನಿವೇಶನದಾರರು ದೂರಿದರು.

'5ನೇ ಬ್ಲಾಕ್‌ನಲ್ಲಿ ಕೆಲವು ಮನೆಗಳು ನಿರ್ಮಾಣವಾಗಿವೆ. ಆ ಮನೆಯವರು ಸಂಚರಿಸಲು, ಹೊಸಬರು ಕಟ್ಟಡ ನಿರ್ಮಿಸಲು ವಾಹನ ಸಂಚಾರ ಯೋಗ್ಯ ರಸ್ತೆಗಳನ್ನು ನಿರ್ಮಿಸುವಂತೆ ಹಲವು ಬಾರಿ ಮನವಿ ಮಾಡಲಾಗಿದೆ. 6ನೇ ಬ್ಲಾಕ್‌ನಲ್ಲೂ ರಸ್ತೆ ಪ್ರಗತಿಯಾಗಿಲ್ಲ. 7ನೇ ಬ್ಲಾಕ್‌ನಲ್ಲಿ ಒಂದಷ್ಟು ಕಡೆ ಡಾಂಬರೀಕರಣ ನಡೆದಿದೆ. ಕೆಲವು ಪ್ರದೇಶಗಳಲ್ಲಿ ಮಣ್ಣಿನ ಸ್ಥಿರೀಕರಣ ಕಾಮಗಾರಿಯಾಗಿ ವೆಟ್ ಮಿಕ್ಸ್ ಹಾಕಬೇಕಾಗಿದೆ' ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆಯ ಅಧ್ಯಕ್ಷ ಇ. ಚನ್ನಬಸವರಾಜ ತಿಳಿಸಿದರು.

'ಎನ್‌ಪಿಕೆಎಲ್‌ನ 5, 6, 7ನೇ ಬ್ಲಾಕ್‌ನಲ್ಲಿ ಎಸ್‌ಎಸ್‌ಟಿ ರಸ್ತೆಗಳನ್ನು ನಿರ್ಮಿಸಲು ಪ್ರತ್ಯೇಕ ಗುತ್ತಿಗೆದಾರರಿಗೆ ಮಾರ್ಚ್‌ನಲ್ಲಿ ಕಾರ್ಯಾದೇಶ ನೀಡಲಾಗಿದೆ. 7ನೇ ಬ್ಲಾಕ್‌ನಲ್ಲಿ ಕಾಮಗಾರಿ ನಡೆಯುತ್ತಿದೆ. 5 ಮತ್ತು 6ನೇ ಬ್ಲಾಕ್‌ನಲ್ಲಿ ಇನ್ನೂ ಕಾಮಗಾರಿ ಪ್ರಾರಂಭದ ಹಂತದಲ್ಲೇ ಇದೆ. ಬಡಾವಣೆಯ 1,2,3,4,8,9ನೇ ಬ್ಲಾಕ್‌ನಲ್ಲಿ ರಸ್ತೆಗಳನ್ನು ನಿರ್ಮಿಸಲು ಇನ್ನೂ ಟೆಂಡರ್ ಕರೆದಿಲ್ಲ' ಎಂದು ವೇದಿಕೆಯ ಜಂಟಿ ಕಾರ್ಯದರ್ಶಿ ಸೂರ್ಯಕಿರಣ್ ದೂರಿದರು.

'ವಿದ್ಯುತ್ ಸಂಪರ್ಕವಿಲ್ಲ, ಒಳಚರಂಡಿ ವ್ಯವಸ್ಥೆ ಇಲ್ಲ'

ನಾಡಪ್ರಭು ಕೆಂಪೇಗೌಡ ಬಡಾವಣೆಯ 5, 6 ಮತ್ತು 7ನೇ ಬ್ಲಾಕ್‌ನಲ್ಲಿ ಒಳಚರಂಡಿಯ ಸಂಪರ್ಕ ವ್ಯವಸ್ಥೆ ಪೂರ್ಣಗೊಳ್ಳದ ಕಾರಣ ನೀರು ಹರಿಯುತ್ತಿಲ್ಲ

'ಎನ್‌ಪಿಕೆಎಲ್ 5ನೇ ಬ್ಲಾಕ್‌ನಲ್ಲಿ ಮನೆ ನಿರ್ಮಿಸಿಕೊಂಡವರಿಗೆ ಶಾಶ್ವತ ವಿದ್ಯುತ್ ಸಂಪರ್ಕ ನೀಡಲಾಗಿಲ್ಲ. ಪಕ್ಕದಲ್ಲಿರುವ ಹಳ್ಳಿಗಳಿಂದ ತಾತ್ಕಾಲಿಕ ಸಂಪರ್ಕ ನೀಡಲಾಗುತ್ತಿದೆ. ಒಳಚರಂಡಿ ವ್ಯವಸ್ಥೆ ಇದೆ ಎಂದು ಹೇಳಲಾಗುತ್ತಿದ್ದರೂ, ರಸ್ತೆಗಳು ಸೇರಿರುವ ಪ್ರದೇಶದಲ್ಲಿ ಒಳಚರಂಡಿ ನೀರು ಹೊರಭಾಗದಲ್ಲೇ ನಿವೇಶನಗಳಿಗೆ ಹರಿಯುತ್ತಿದೆ. ಒಳಚರಂಡಿ ನೀರು ನೇರವಾಗಿ ತ್ಯಾಜ್ಯ ಸಂಸ್ಕರಣೆ ಘಟಕಕ್ಕೆ (ಎಸ್‌ಟಿಪಿ) ಹೋಗುತ್ತದೆ ಎಂದು ಹೇಳಲಾಗುತ್ತದೆ. ಆದರೆ ವಾಸ್ತವ ಚಿತ್ರಣವೇ ಬೇರೆ ಇದೆ. ಬೀದಿದೀಪಗಳಂತೂ ಇಲ್ಲವೇ ಇಲ್ಲ. ವಿದ್ಯುತ್ ಕಂಬಗಳಿಗೆ ಬಳ್ಳಿಗಳು ಸುತ್ತಿಕೊಂಡಿವೆ' ಎಂದು 5ನೇ ಬ್ಲಾಕ್ ನಿವಾಸಿ ಮಧುಸೂಧನ್ ಹೇಳಿದರು.

'ಬಿಡಿಎ ಅಧ್ಯಕ್ಷರು ಆಗಸ್ಟ್ 14ರಂದು ಪರಿಶೀಲನೆಗೆ ಬಂದಾಗ 10 ದಿನಗಳಲ್ಲಿ ಎಲ್ಲ ರಸ್ತೆಗಳಿಗೂ ವೆಟ್‌ಮಿಕ್ಸ್ ಹಾಕಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು ಎಂದಿದ್ದರು. ಆದರೆ, ಈವರೆಗೆ ಒಂದು ರಸ್ತೆಯೂ ಸುಧಾರಿಸಿಲ್ಲ' ಎಂದು ಸೂರ್ಯಕಿರಣ್ ದೂರಿದರು.

ಕೆಲಸ ಮಾಡುತ್ತಾರೆ: ಹ್ಯಾರಿಸ್

'ಎನ್‌ಪಿಕೆಎಲ್ ನಿವೇಶನದಾರರು ದೂರು ಕೊಟ್ಟಿದ್ದಾರೆ, ಕೆಲಸ ಮಾಡಲಾಗುತ್ತದೆ. ಒಂದೇ ಬಾರಿಗೆ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ. ಮಳೆ ಕಾರಣದಿಂದ ಕಾಮಗಾರಿ ನಿಂತಿದ್ದು, ಈಗ ಮುಂದುವರಿಸಲಾಗುತ್ತದೆ' ಎಂದು ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ತಾಂತ್ರಿಕ ಸಮಸ್ಯೆ: 'ಎನ್‌ಪಿಕೆಎಲ್‌ನ 7ನೇ ಬ್ಲಾಕ್‌ನಲ್ಲಿ ಎಸ್‌ಎಸ್‌ಟಿ ರಸ್ತೆಗಳ ನಿರ್ಮಾಣ ಬಹುತೇಕ ಪೂರ್ಣಗೊಳ್ಳುತ್ತಿದೆ. 5 ಮತ್ತು 6ನೇ ಬ್ಲಾಕ್‌ನಲ್ಲಿ ಕೆಲವು ಭಾಗದಲ್ಲಿ ಕೆಲಸ ನಡೆಯುತ್ತಿದೆ. ಹಲವು ಭಾಗದಲ್ಲಿ ತಾಂತ್ರಿಕ ಸಮಸ್ಯೆಗಳಿದ್ದು, ಅವುಗಳನ್ನು ನಿವಾರಿಸಿಕೊಂಡು ರಸ್ತೆ ಕಾಮಗಾರಿ ಆರಂಭಿಸಲಾಗುತ್ತದೆ' ಎಂದು ಬಿಡಿಎ ಎಂಜಿನಿಯರ್‌ಗಳು ತಿಳಿಸಿದರು.

'ಬಿಲ್ ಪಾವತಿಸಿಲ್ಲ': 'ಎನ್‌ಪಿಕೆಎಲ್‌ನ 5ನೇ ಬ್ಲಾಕ್‌ನಲ್ಲಿ ಒಳಚರಂಡಿ, ನೀರಿನ ವ್ಯವಸ್ಥೆ ಕಲ್ಪಿಸುವ ಕಾಮಗಾರಿ ನಡೆಸುತ್ತಿರುವ ಗುತ್ತಿಗೆದಾರರಿಗೆ ಒಂದು ವರ್ಷದಿಂದ ಬಿಲ್ ಪಾವತಿಸಿಲ್ಲ. ಹೀಗಾಗಿ, ಅವರು ಕಾಮಗಾರಿಯನ್ನು ಸ್ಥಗಿತಗೊಳಿಸಿದ್ದಾರೆ. ಆದ್ದರಿಂದ ಎಸ್‌ಎಸ್‌ಟಿ ರಸ್ತೆಗಳನ್ನು ನಿರ್ಮಿಸಲು ಸಾಧ್ಯವಾಗುತ್ತಿಲ್ಲ ಎಂದು ಸ್ಥಳೀಯ ಎಂಜಿನಿಯರ್‌ಗಳು ತಿಳಿಸಿದ್ದಾರೆ' ಎಂದು ಸೂರ್ಯಕಿರಣ್ ಹೇಳಿದರು.

ಸುದ್ದಿ 2 ನಿಮಿಷ

₹700 ಕೋಟಿ ಮೌಲ್ಯದ ಅರಣ್ಯ ಭೂಮಿ ವಶಕ್ಕೆ ಸೂಚನೆ

ಬೆಂಗಳೂರು: ನಗರದ ಕೆ.ಆರ್. ಪುರ ಹೋಬಳಿಯ ಕೊತ್ತನೂರಿನಲ್ಲಿ ಅರಣ್ಯ ಇಲಾಖೆಗೆ ಸೇರಿದ, ಸುಮಾರು ₹700 ಕೋಟಿ ಮೌಲ್ಯದ 22 ಎಕರೆ 8 ಗುಂಟೆ ಜಮೀನಿನ ಒತ್ತುವರಿಯನ್ನು ತೆರವು ಮಾಡಿ, ವಶಕ್ಕೆ ಪಡೆದುಕೊಳ್ಳಲು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸೂಚಿಸಿದ್ದಾರೆ.

ನೆಡುತೋಪು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಗ್ರಾಮದ ಸರ್ವೆ ನಂ:48ರ 22 ಎಕರೆ 8 ಗುಂಟೆ ಜಾಗವನ್ನು 1999–2000ರಲ್ಲಿ ಅರಣ್ಯ ಇಲಾಖೆಗೆ ವಹಿಸಲಾಗಿತ್ತು. ಆದರೆ ಆ ಜಮೀನಿನಲ್ಲಿ ಅರಣ್ಯ ಇಲಾಖೆ ಯಾವುದೇ ಅಭಿವೃದ್ಧಿ ಕಾರ್ಯ ಮಾಡಿಲ್ಲ, ನೆಡುತೋಪನ್ನೂ ಅಭಿವೃದ್ಧಿಪಡಿಸಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಇಲಾಖೆಗೆ ಸೇರಿದ ಜಮೀನನ್ನು ಕಾಪಾಡುವಲ್ಲಿ ಮತ್ತು ಅಲ್ಲಿ ನೆಡುತೋಪು ಅಭಿವೃದ್ಧಿಪಡಿಸುವಲ್ಲಿ ಇಲಾಖೆಯ ಹಿಂದಿನ ಅಧಿಕಾರಿಗಳು ವಿಫಲರಾಗಿದ್ದಾರೆ. ಇದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ. ಈ ಜಮೀನಿನ ಒತ್ತುವರಿ ತೆರವಿಗೆ ಅರಣ್ಯ ಸಂರಕ್ಷಣಾ ಕಾಯ್ದೆಯ 64(ಎ) ಸೆಕ್ಷನ್ ಅಡಿ ಕೂಡಲೇ ಪ್ರಕ್ರಿಯೆ ಆರಂಭಿಸಿ' ಎಂದು ಸೂಚಿಸಿದ್ದಾರೆ.

'2000ರಲ್ಲಿ ಈ ಜಮೀನಿಗೆ ಸಂಬಂಧಿಸಿದಂತೆ ಪಹಣಿ ಮಾಡಿದ್ದು, ಅದರಲ್ಲಿ 13 ಎಕರೆಯನ್ನಷ್ಟೇ ತೋರಿಸಲಾಗಿದೆ. ಜಮೀನಿನ ನಕ್ಷೆ ತರಿಸಿಕೊಂಡು, ಉಳಿದ 9 ಎಕರೆ 8 ಗುಂಟೆ ಯನ್ನು ಗುರುತಿಸಿ ಮತ್ತು ದಾಖಲೆಗಳನ್ನು ಪಡೆದುಕೊಳ್ಳಿ. ಈ ಜಮೀನಿನ ಮರುವಶಕ್ಕೆ ಈವರೆಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಎರಡು ದಿನಗಳ ಒಳಗೆ ವರದಿ ನೀಡಿ' ಎಂದು ಸಚಿವ ಖಂಡ್ರೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ನಿವೃತ್ತರಿಗೆ ಆರ್ಥಿಕ ಸೌಲಭ್ಯ 2022ರಿಂದಲೇ ನೀಡಲು ಒತ್ತಾಯ

ಬೆಂಗಳೂರು: ಏಳನೇ ವೇತನ ಆಯೋಗದ ಶಿಫಾರಸಿನಂತೆ ಪರಿಷ್ಕೃತ ವೇತನದ ಆರ್ಥಿಕ ಸೌಲಭ್ಯಗಳನ್ನು 2022ರ ಜುಲೈನಿಂದಲೇ ನೀಡಬೇಕು ಎಂದು ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘ ಒತ್ತಾಯಿಸಿದೆ.

ಪರಿಷ್ಕೃತ ವೇತನ ಆ.1ರಿಂದ ಜಾರಿಯಾಗಿದೆ. 2022 ಜುಲೈ 1ರಿಂದಲೇ ಪೂರ್ವಾನ್ವಯವಾಗುತ್ತದೆ. ಅಲ್ಲಿಂದಲೇ ನಿವೃತ್ತರಿಗೂ ವೇತನ ನಿಗದಿ ಮಾಡಲಾಗುತ್ತದೆ ಎಂದು ಸರ್ಕಾರ ಹೇಳಿತ್ತು. ಹಾಗಾಗಿ, ಜುಲೈ 31, 2024ರವರೆಗೂ ನಿವೃತ್ತರಾದ ನೌಕರರಿಗೆ ಎಲ್ಲ ಆರ್ಥಿಕ ಸೌಲಭ್ಯ ಒದಗಿಸಬೇಕು ಎಂದು ಸಂಘದ ಅಧ್ಯಕ್ಷ ಎಲ್. ಭೈರಪ್ಪ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ ಹಾಗೂ ಆರ್ಥಿಕ ಇಲಾಖೆಗೆ ಈ ಕುರಿತು ಹಲವು ಬಾರಿ ಮನವಿ ಮಾಡಿದರೂ, ಇದುವರೆಗೂ ಆರ್ಥಿಕ ಸೌಲಭ್ಯ ನೀಡಲು ಕ್ರಮಕೈಗೊಂಡಿಲ್ಲ ಎಂದು ಅವರು ದೂರಿದ್ದಾರೆ.

ಪರಿಶಿಷ್ಟ ಅಭ್ಯರ್ಥಿಗಳಿಗೆ ಉಚಿತ ತರಬೇತಿ

ಬೆಂಗಳೂರು: ಬ್ಯಾಂಕಿಂಗ್, ರೈಲ್ವೆ ಮತ್ತು ಇತರೆ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳಿಗೆ ವಿಜಯನಗರದ ಜ್ಞಾನಗಂಗೋತ್ರಿ ಕಾಂಪಿಟೀಟಿವ್ ಎಕ್ಸಾಮ್ ಕೋಚಿಂಗ್ ಸೆಂಟರ್‌ನಲ್ಲಿ ಮೂರು ತಿಂಗಳು ಉಚಿತ ತರಬೇತಿಯನ್ನು ಆಯೋಜಿಸಲಾಗಿದೆ.

ಸೆ.23ರಿಂದ ನಡೆಯಲಿರುವ ಈ ತರಬೇತಿಯಲ್ಲಿ ಭಾಗವಹಿಸಲು ಆಸಕ್ತಿ ಇರುವವರು ಜ್ಞಾನಗಂಗೋತ್ರಿ ಕಾಂಪಿಟೀಟಿವ್ ಎಕ್ಸಾಮ್ ಕೋಚಿಂಗ್ ಸೆಂಟರ್, 30- ಹಾಸ್ಪಿಟೆಕ್ ಹೌಸ್, 17ನೇ ಅಡ್ಡರಸ್ತೆ, ಮೆಟ್ರೊ ಸ್ಟೇಷನ್ ಬಳಿ, ವಿಜಯನಗರ,-560040 (ಮೊಬೈಲ್: 9620030679) ಇಲ್ಲಿಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ದಿ ಭಾರತ್ ಕೋ– ಆಪರೇಟಿವ್ ಬ್ಯಾಂಕ್ ಲಿ.
ಸ್ಥಾಪನೆ:–1975
ಕೇಂದ್ರ ಕಛೇರಿ: ನಂ.30, 15ನೇ ಅಡ್ಡರಸ್ತೆ. 3ನೇ ಬ್ಲಾಕ್. ಜಯನಗರ. ಬೆಂಗಳೂರು–11



"ಸಹಕಾರ ರತ್ನ"
ಶ್ರೀ ಬಿ.ಎಲ್. ಲಕ್ಕೇಗೌಡ
ಸಂಸ್ಥಾಪಕರು
ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿ. ಮತ್ತು ಭಾರತ್ ಸಮೂಹ ಸಂಸ್ಥೆಗಳು
ಪುತ್ಥಳಿ ಅನಾವರಣ ಸಮಾರಂಭ
ದಿನಾಂಕ: 22–09–2024, ಭಾನುವಾರ, ಬೆಳಿಗ್ಗೆ 8:30 ಗಂಟೆಗೆ
ಸ್ಥಳ: ಕೇಂದ್ರ ಕಛೇರಿ ಆವರಣ, ಜಯನಗರ, ಬೆಂಗಳೂರು
ಪುತ್ಥಳಿ ಅನಾವರಣ
ಶ್ರೀ ಎಸ್.ಟಿ. ಸೋಮಶೇಖರ್
ಮಾಜಿ ಸಹಕಾರ ಸಚಿವರು ಹಾಗೂ ಹಾಲಿ ವಿಧಾನಸಭಾ ಸದಸ್ಯರು, ಯಶವಂತಪುರ ಕ್ಷೇತ್ರ
ಮುಖ್ಯ ಅತಿಥಿಗಳು
ಶ್ರೀ ಎ.ಜೆ. ಸದಾಶಿವ
ವಿಶ್ರಾಂತ ನ್ಯಾಯಮೂರ್ತಿಗಳು, ಉಚ್ಚನ್ಯಾಯಾಲಯ, ಕರ್ನಾಟಕ
ಅಧ್ಯಕ್ಷತೆ
ಶ್ರೀ ಕೆ.ಎಸ್. ಸುಧಾಕರ್
ಅಧ್ಯಕ್ಷರು, ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿ.
ಮಾನ್ಯ ಸದಸ್ಯರು ಹಾಗೂ ಗ್ರಾಹಕರಿಗೆ ಆದರದ ಸ್ವಾಗತ

ಆಡಳಿತ ಮಂಡಳಿ
ಶ್ರೀ ಕೆ.ಎಸ್.ಸುಧಾಕರ್ – ಅಧ್ಯಕ್ಷರು ಶ್ರೀ ಬಿ.ಎನ್.ಲೋಕೇಶ್ – ಉಪಾಧ್ಯಕ್ಷರು
ನಿರ್ದೇಶಕರುಗಳು
ಶ್ರೀ ಜೆ.ಎಂ.ಜಯಪ್ರಕಾಶ್(ಜೆ.ಪಿ.) ಶ್ರೀ ಜಿ.ಎನ್.ಆರ್.ಮೋಹನ ಶ್ರೀ ಹೆಚ್.ಪಿಳ್ಳಾಂಜನಪ್ಪ ಶ್ರೀ ಟಿ.ರವಿಶಂಕರ್
ಡಾ: ಎಂ.ವೀರಪ್ಪ ಶ್ರೀ ಎಸ್.ಬಸವರಾಜಪ್ಪ ಶ್ರೀ ವಿ.ಶ್ರೀನಿವಾಸಯ್ಯ ಡಾ|| ಮಹೇಶ್ ಅರವಿಂದ್
ಶ್ರೀಮತಿ ಬಿ.ಎಲ್.ನಂದಿನಿ ಶ್ರೀಮತಿ ಎಂ.ಹೆಚ್.ಅನಿತ ಶ್ರೀ ಆರ್.ಸತೀಶ್ ಶ್ರೀ ಜಯದೇವ ಹಾಳೇಗೌಡ
ಶ್ರೀ ವಿ.ಎಲ್.ಗಂಗಾಧರ್ ಶ್ರೀ ಬಿ.ಎಲ್.ಸಂಜೀವ್ ಶ್ರೀ ಜಿ.ವೆಂಕಟೇಶ್ – ಪ್ರಭಾರ ಕಾರ್ಯದರ್ಶಿ

ಬೆಸ್ಕಾಂ ಬಿಲ್‌ನಲ್ಲಿ ಪಿಐಡಿ: ತುಷಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಆಸ್ತಿಗಳ ಗುರುತಿನ ಸಂಖ್ಯೆಯನ್ನು (ಪಿಐಡಿ) ಬೆಸ್ಕಾಂನ ವಿದ್ಯುತ್ ಬಿಲ್‌ನಲ್ಲಿ ನಮೂದಿಸಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಜಿಪಿಎಸ್ ಮಾಹಿತಿಯನ್ನು ಪ್ರತಿಯೊಂದು ಆಸ್ತಿಗೂ ಸೆರೆಹಿಡಿಯುವ ಅಭಿಯಾನವನ್ನು ಆರಂಭಿ ಸಲಾಗಿದ್ದು, ಇ-ಖಾತಾ ನೀಡಲು ಇದು ಕಡ್ಡಾಯವಾಗಿದೆ. ಇದಕ್ಕಾಗಿ ಬಿಬಿಎಂಪಿ ಆಸ್ತಿಗಳಿಗೆ ಭೇಟಿ ನೀಡಲಿದ್ದು, ಮಾಲೀಕರು ಅವರಿಗೆ ಸಹಕಾರ ನೀಡಬೇಕು ಎಂದು ಸುದ್ದಿಗಾರರಿಗೆ ಶುಕ್ರವಾರ ತಿಳಿಸಿದರು.

ಮೊಬೈಲ್ ಅಪ್ಲಿಕೇಶನ್ ಮೂಲಕ ವಾರ್ಡ್‌ಗಳಲ್ಲಿರುವ ಎಲ್ಲ ಸ್ವತ್ತುಗಳನ್ನು ಈಗಾಗಲೇ ಪಟ್ಟಿ ಮಾಡಲಾಗಿದೆ. ಅದೇ ಅಪ್ಲಿಕೇಷನ್‌ನಲ್ಲಿ ಪ್ರತಿಯೊಂದು ಆಸ್ತಿಯ ಜಿಪಿಎಸ್ ಮಾಹಿತಿಯನ್ನು ಬಿಬಿಎಂಪಿ ಸಿಬ್ಬಂದಿ ದಾಖಲಿಸುತ್ತಾರೆ ಎಂದರು.

ಇ-ಖಾತಾ ಪ್ರತಿಯೊಂದು ಆಸ್ತಿಗೆ ಭೂ-ಆಧಾರ್‌ನಂತಿದ್ದು, ಅಧಿಕೃತ ದಾಖಲೆಯಾಗಲಿದೆ. ಇದರ ಮುಂದುವರಿದ ಭಾಗವಾಗಿ ಬೆಸ್ಕಾಂ ಬಿಲ್‌ಗಳಲ್ಲೂ ಆಸ್ತಿಗಳ ಪಿಐಡಿ ನಮೂದಿಸುವುದರಿಂದ ಸ್ವತ್ತಿನ ಸ್ಪಷ್ಟತೆ ಲಭ್ಯವಾಗುತ್ತದೆ. ಈ ಬಗ್ಗೆ ಬೆಸ್ಕಾಂನೊಂದಿಗೆ ಮಾತುಕತೆ ನಡೆಸಲಾಗಿದ್ದು, ಅವರು ಒಪ್ಪಿದ್ದಾರೆ ಎಂದು ಮಾಹಿತಿ ನೀಡಿದರು.

ನಾಗರಿಕರೇ ತಮ್ಮ ಸ್ವತ್ತುಗಳ ಜಿಪಿಎಸ್ ಸೆರೆಹಿಡಿದು, ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವ 'ಸಿಟಿಜನ್ ಮಾಡ್ಯೂಲ್' ಅನ್ನೂ ಮುಂದಿನ ದಿನಗಳಲ್ಲಿ ಆರಂಭಿಸಲಾಗುತ್ತದೆ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ಉಪ ಮುಖ್ಯಮಂತ್ರಿಯವರ ಸೂಚನೆಯಂತೆ ರಸ್ತೆ ಗುಂಡಿಗಳನ್ನು ಬಹುತೇಕ ಮುಚ್ಚಲಾಗಿದೆ. ಹೊಸದಾಗಿ ದಾಖಲಾಗುತ್ತಿರುವ ಗುಂಡಿಗಳನ್ನು ದುರಸ್ತಿ ಮಾಡಲಾಗುತ್ತಿದೆ. ಹಲವು ಕಡೆ ರಸ್ತೆ ಮೇಲ್ಮೈ ಹಾಳಾಗಿರುವುದರಿಂದ ಅದಕ್ಕೆ ಡಾಂಬರೀಕರಣ ಮಾಡಲಾಗುತ್ತಿದೆ ಎಂದರು.

ಕಸ್ತೂರಿ ರಂಗನ್ ವರದಿ: ಸಂಪುಟ ಸಮಿತಿ ಸಭೆಯಲ್ಲಿ ಚರ್ಚೆ

ಕೇಂದ್ರದ ಬಳಿಗೆ ಸರ್ವಪಕ್ಷ ನಿಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮಘಟ್ಟ ಪರಿಸರ ಸೂಕ್ಷ್ಮವಲಯ ಪ್ರದೇಶದ ಗ್ರಾಮಗಳ ಜನರ ಅಹವಾಲು ಆಲಿಸಲು ಹೊಸ ಸಮಿತಿ ಕಳುಹಿಸಿಕೊಡುವಂತೆ ಕೋರಲು ಕೇಂದ್ರದ ಬಳಿಗೆ ಸರ್ವಪಕ್ಷಗಳ ನಿಯೋಗ ಕರೆದುಕೊಂಡು ಹೋಗಲು ಶುಕ್ರವಾರ ನಡೆದ ಸಂಪುಟ ಉಪ ಸಮಿತಿ ಸಭೆ ನಿರ್ಧರಿಸಿದೆ.

ಅರಣ್ಯ ಸಚಿವ ಈಶ್ವರ ಖಂಡ್ರೆ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಸ್ತೂರಿ ರಂಗನ್ ವರದಿ ಅನುಷ್ಠಾನ ಕುರಿತು ಚರ್ಚೆ ನಡೆಸಲಾಗಿದೆ. ವರದಿ ತಿರಸ್ಕರಿಸುವುದೂ ಸೇರಿ ಮೂರು ಸಾಧ್ಯತೆಗಳನ್ನು ಒಳಗೊಂಡ ವರದಿ ಸಿದ್ಧಪಡಿಸಿ ಸಂಪುಟ ಸಭೆಯ ಮುಂದಿಡಲು ತೀರ್ಮಾನ ತೆಗೆದುಕೊಳ್ಳಲಾಗಿದೆ. ಸಂಪುಟದ ನಿರ್ಣಯ ಆಧರಿಸಿ ಸೆ. 27ರಂದು ಕೇಂದ್ರಕ್ಕೆ ರಾಜ್ಯ ಸರ್ಕಾರ ತನ್ನ ಅಭಿಪ್ರಾಯ ಸಲ್ಲಿಸಲಿದೆ.

ಕಸ್ತೂರಿ ರಂಗನ್ ವರದಿಯ ಅನುಷ್ಠಾನ ಸಾಧ್ಯತೆಗಳ ಕುರಿತು ಪಶ್ಚಿಮ ಘಟ್ಟ ವ್ಯಾಪ್ತಿಯ 11 ಜಿಲ್ಲೆಗಳ ಜನಪ್ರತಿನಿಧಿಗಳ ಜತೆ ಸರ್ಕಾರ ಗುರುವಾರ ಚರ್ಚೆ ನಡೆಸಿತ್ತು. ಸಭೆಯಲ್ಲಿ ಭಾಗವಹಿಸಿದ್ದ ಬಹುತೇಕರು ವರದಿ ತಿರಸ್ಕರಿಸುವಂತೆ ಸಲಹೆ ನೀಡಿದ್ದರು. ಆದರೆ, ಏಳನೇ ಬಾರಿಯೂ ಇದೇ ಕ್ರಮ ಅನುಸರಿಸಿದರೆ ಸುಪ್ರೀಂಕೋರ್ಟ್‌ನಲ್ಲಿ ಹಿನ್ನಡೆಯಾಗಬಹುದು ಎಂಬ ಕಾರಣಕ್ಕೆ ಅರಣ್ಯ ಇಲಾಖೆ ಕೆಲ ಆಯ್ಕೆಗಳನ್ನು ಮುಂದಿಟ್ಟಿತ್ತು.

ಸಂಪುಟ ಉಪ ಸಮಿತಿ ಸಭೆಯಲ್ಲೂ ಆಯ್ಕೆಗಳ ಕುರಿತು ಚರ್ಚೆ ನಡೆಸಲಾಗಿದೆ. ಪರಿಸರಸೂಕ್ಷ್ಮ ಪ್ರದೇಶದ ವ್ಯಾಪ್ತಿಗೆ ಬರುವ 1,433 ಗ್ರಾಮಗಳ ಜನರ ಅಹವಾಲು ಆಲಿಸಲು ನೇಮಿಸಲಾಗಿದ್ದ ಸಂಜಯ್ ಕುಮಾರ್ ನೇತೃತ್ವದ ಸಮಿತಿ ಇದುವರೆಗೂ ರಾಜ್ಯಕ್ಕೆ ಭೇಟಿ ನೀಡಿ, ಜನರ ಅಹವಾಲು ನೇರವಾಗಿ ಆಲಿಸಿಲ್ಲ. ಹಾಗಾಗಿ, ಬೇರೆ ಸಮಿತಿ ಕಳುಹಿಸಬೇಕು. ಅಲ್ಲಿಯವರೆಗೂ ನಿರ್ಧಾರ ತೆಗೆದುಕೊಳ್ಳಲು ಕಾಲಾವಕಾಶ ನೀಡಬೇಕು ಎಂದು ನಿಯೋಗ ಕೇಂದ್ರವನ್ನು ಕೋರಲಿದೆ.

ಮತ್ತೊಂದು ಆಯ್ಕೆಯಲ್ಲಿ ವನ್ಯಜೀವಿ ಸಂರಕ್ಷಿತ ಅರಣ್ಯ ಒಳಗೊಂಡ 16,114 ಚದರ ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮದ ವ್ಯಾಪ್ತಿಗೆ ತರಲು ಒಪ್ಪಿಗೆ ನೀಡುವುದು, ವ್ಯಾಪ್ತಿಗೆ ಬರುವ ಗ್ರಾಮಗಳಲ್ಲಿ ಕೆಲವನ್ನು ಮತ್ತೆ ಕೈಬಿಡುವ ಅಥವಾ ವಿಶೇಷ ಪ್ಯಾಕೇಜ್ ಘೋಷಿಸುವ ವಿಚಾರಗಳನ್ನು ಸಂಪುಟ ಸಭೆಯಲ್ಲಿ ಚರ್ಚಿಸಲಾಗುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚಿಸಿದ ನಂತರ ಸಂಪುಟದ ಮುಂದೆ ತರಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಸಭೆಯಲ್ಲಿ ಸಚಿವರಾದ ಕೆ.ಜೆ. ಜಾರ್ಜ್, ದಿನೇಶ್ ಗುಂಡೂರಾವ್, ಮಧು ಬಂಗಾರಪ್ಪ, ಮಂಕಾಳ ವೈದ್ಯ ಭಾಗಿಯಾಗಿದ್ದರು.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಬೆಂ.ಮ.ಪ್ರಾ.
ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052. ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/55/2024-25 ದಿನಾಂಕ: 19.09.2024

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69ರ ತಿದ್ದುಪಡಿ ಕಾಯ್ದೆಯಂತೆ)

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 36 ಬಿಎಂಆರ್ 2016, ದಿನಾಂಕ: 24.06.2016 ರನ್ವಯ ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಪೆಮ್ಮನಹಳ್ಳಿ ಗ್ರಾಮವು "ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶ" ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/194/ಬಿಎಂಆರ್/2016ರ ದಿನಾಂಕ: 20.05.2017ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 4(ಎ)(4)ರನ್ವಯ ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶದಲ್ಲಿ ಹಿಂದಿನ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಸರ್ಕಾರದಿಂದ ಅನುಮೋದನೆಯಾಗಿ ಜಾರಿಯಲ್ಲಿರುವ ಮಹಾಯೋಜನೆಯನ್ನು ಅಳವಡಿಸಿಕೊಳ್ಳಲಾಗಿರುತ್ತದೆ. ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/150/ಬಿಎಂಆರ್/2013 ದಿನಾಂಕ: 01.06.2015ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(2)ರನ್ವಯ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(4)ರನ್ವಯ ಈ ಕೆಳಕಂಡಂತೆ ವಸತಿ ಭೂಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(4)ರ ಅಡಿಯಲ್ಲಿ ಈ ಕೆಳಕಂಡಂತೆ ಹೊಸದಾಗಿ ಭೂಉಪಯೋಗ ನಿಗಧಿಪಡಿಸುವ ಸಂಬಂಧ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಹೊಸದಾಗಿ ನಿಗಧಿ ಪಡಿಸಲು ಕೋರಿರುವ ಭೂಉಪಯೋಗ
1	ಶ್ರೀ ನಾಗರಾಜು ಬಿ. ಬಿನ್ ಲೇಟ್ ಎಂ.ವಿ. ಬೆಟ್ಟಯ್ಯ ನಂ. 747, ಎಂ.ವಿ.ಬಿ. ಹೌಸ್, 14ನೇ ಮುಖ್ಯರಸ್ತೆ, ಎಂ.ಇ.ಐ. ಬಡಾವಣೆ, ಬಾಲಗುಂಟೆ, ಬೆಂಗಳೂರು–73.	ನೆಲಮಂಗಲ	ಸೋಂಪುರ	ಪೆಮ್ಮನಹಳ್ಳಿ	32/6 32/7 33/8 33/11 33/12	0–32½ 0–32½ 1–19½ 0–04 1–19	ಸಾರ್ವಜನಿಕ ಉಪಯುಕ್ತತೆ (Public Utility)	ವಸತಿ

ಸಹಿ/– ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ವಾಪ್ರ/ಎಎಎ/2101/2024–25

ಧನಸಹಾಯ: ಎರಡನೆ ಕಂತು ಬಿಡುಗಡೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಗೆ 2023–24ನೇ ಸಾಲಿನ ಧನಸಹಾಯದ ಎರಡನೇ ಕಂತು ಬಿಡುಗಡೆ ಮಾಡಿ ಆದೇಶ ಹೊರಡಿಸಿದೆ.

ಕಳೆದ ಮಾರ್ಚ್‌ನಲ್ಲಿ ಮೊದಲ ಕಂತು ಬಿಡುಗಡೆ ಮಾಡಿದ್ದ ಇಲಾಖೆ, ಸಾಮಾನ್ಯ ವರ್ಗದಲ್ಲಿ ಆಯ್ಕೆಯಾದ ಸಂಘ–ಸಂಸ್ಥೆಗಳಿಗೆ ಜಿಲ್ಲಾ ಸಮಿತಿ ಶಿಫಾರಸು ಮಾಡಿದ ಅನುದಾನದಲ್ಲಿ ಶೇ 40ರಷ್ಟು ಅನುದಾನ ಒದಗಿಸಿತ್ತು ಎರಡನೇ ಕಂತಿಗಾಗಿ ಕಲಾವಿದರು ಹಾಗೂ ಸಂಘ–ಸಂಸ್ಥೆಗಳ ಮುಖ್ಯಸ್ಥರು ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಪ್ರತಿಭಟನೆಯನ್ನೂ ನಡೆಸಿದ್ದರು. ಬಾಕಿ ಉಳಿಸಿಕೊಂಡಿದ್ದ ಶೇ60ರಷ್ಟು ಅನುದಾನದಲ್ಲಿ ಎರಡನೇ ಕಂತಾಗಿ ಶೇ 47ರಷ್ಟು ಅನುದಾನ (₹4.14 ಕೋಟಿ) ಬಿಡುಗಡೆ ಮಾಡಿದೆ.

ಇನ್ನೂ ಶೇ 13ರಷ್ಟು ಅನುದಾನ ಬಾಕಿ ಉಳಿಸಿಕೊಂಡಿದೆ.

ಸಂಕ್ಷಿಪ್ತ ಸುದ್ದಿ

ನಿಫಾ: 41 ಮಂದಿ ಮೇಲೆ ನಿಗಾ

ಬೆಂಗಳೂರು: ನಗರದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಯು ಕೇರಳದಲ್ಲಿ ನಿಫಾ ಸೋಂಕಿನಿಂದ ಮೃತಪಟ್ಟಿದ್ದರು. ಅವರ ಸಂಪರ್ಕಿತರಲ್ಲಿ 41 ಮಂದಿಯನ್ನು ಇಲ್ಲಿ ನಿಗಾ ವ್ಯವಸ್ಥೆಗೆ ಒಳಪಡಿಸಲಾಗಿದ್ದು, ಅವರಲ್ಲಿ ಒಬ್ಬರಿಗೆ ಈ ಸೋಂಕಿನ ಲಕ್ಷಣ ಇದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಈವರೆಗೆ ಯಾವುದೇ ನಿಫಾ ಪ್ರಕರಣ ವರದಿಯಾಗಿಲ್ಲ. ಒಬ್ಬರನ್ನು ಹೊರತುಪಡಿಸಿದರೆ ಉಳಿದ ಎಲ್ಲ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರಲ್ಲಿ ರೋಗದ ಯಾವುದೇ ಲಕ್ಷಣವಿಲ್ಲ. ರಾಜ್ಯದಿಂದ ಕೇರಳಕ್ಕೆ ಪ್ರವಾಸ ಕೈಗೊಳ್ಳುವವರು ಎಚ್ಚರ ವಹಿಸಬೇಕು. ತೀರಾ ಅಗತ್ಯವಾಗಿದ್ದರೆ ಮಾತ್ರ ಕೇರಳ ಪ್ರವಾಸ ಕೈಗೊಳ್ಳಬೇಕು. ನಿಫಾ ಬಗ್ಗೆ ಎಚ್ಚರಿಕೆ ವಹಿಸುವ ಅಗತ್ಯ ಇದೆ ಎಂದು ಹೇಳಿದೆ.

ಕೇರಳದಿಂದ ಇಲ್ಲಿಗೆ ಬರುವವರು ಜ್ವರ, ಅಸ್ವಸ್ಥತೆ, ತಲೆನೋವು, ಉಸಿರಾಟದ ಸಮಸ್ಯೆ, ಕೆಮ್ಮು ಸೇರಿದಂತೆ ವಿವಿಧ ಲಕ್ಷಣಗಳನ್ನು ಹೊಂದಿದ್ದಾರೆಯೇ ಎನ್ನುವುದನ್ನು ಪರಿಶೀಲಿಸಿ, ಶಂಕಿತರನ್ನು ಗುರುತಿಸಲಾಗುತ್ತಿದೆ ಎಂದು ಹೇಳಿದೆ.

ಪುರುಷರಿಗೆ ಜಿಆರ್‌ಟಿಯಿಂದ ಹೊಸ ಆಭರಣ

ಬೆಂಗಳೂರು: ಜಿಆರ್‌ಟಿ ಜ್ಯುವೆಲರ್ಸ್ ಪುರುಷರಿಗಾಗಿ ಬ್ರೇಸ್ ಲೈಟ್, ಉಂಗುರ ಮತ್ತು ಕಂಠಹಾರದ ಹೊಸ ಸಂಗ್ರಹವನ್ನು ಪರಿಚಯಿಸಿದೆ.

ಈ ಸಂಗ್ರಹವು ಗುಣ ಮಟ್ಟದಿಂದ ಕೂಡಿದ್ದು ಉತ್ತಮ ಶೈಲಿಯನ್ನು ಒಳಗೊಂಡಿದೆ. ಕ್ರಿಕೆಟಿಗ ರವಿಚಂದ್ರನ್ ಅಶ್ವಿನ್ ಅವರು, ಪುರುಷರ ಕಲೆಕ್ಷನ್ಸ್‌ನ ಪ್ರಚಾರದ ರಾಯಭಾರಿಯಾಗಿದ್ದಾರೆ.

'ಪುರುಷರ ಸಂಗ್ರಹವು ಸೊಗಸಾದ ಬ್ರೇಸ್ ಲೈಟ್‌ಗಳು, ಕಂಠಹಾರಗಳು, ದಪ್ಪ ಕಡಗಗಳು ಮತ್ತು ಉಂಗುರವನ್ನು ಒಳಗೊಂಡಿದೆ' ಎಂದು ಜಿಆರ್‌ಟಿ ಜ್ಯುವೆಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ಅನಂತ ಪದ್ಮನಾಭನ್ ಹೇಳಿದ್ದಾರೆ.

ಔಪಚಾರಿಕ, ಸಾಂಪ್ರದಾಯಕ ಹೀಗೆ ಎಲ್ಲಾ ಸಂದರ್ಭಕ್ಕೂ ಅನ್ವಯ ಆಗುವಂತಹ ಸೂಕ್ತ ಆಭರಣಗಳು ನಮ್ಮ ಮಳಿಗೆಗಳಲ್ಲಿ ಲಭ್ಯವಿವೆ ಎಂದು ಜ್ಯುವೆಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ರಾಧಾಕೃಷ್ಣನ್ ಹೇಳಿದ್ದಾರೆ.

ಜೋಯಾಲುಕ್ಕಾಸ್ 'ಚೈನ್ ಫೆಸ್ಟ್' ಕೊಡುಗೆ

ಬೆಂಗಳೂರು: ದೇಶದ ಪ್ರಸಿದ್ಧ ಆಭರಣಗಳ ಬ್ರ್ಯಾಂಡ್ ಜೋಯಾಲುಕ್ಕಾಸ್ 'ಚೈನ್ ಫೆಸ್ಟ್' ಕೊಡುಗೆ ಆರಂಭಿಸಿದೆ.

ಈ ಕೊಡುಗೆಯ ಭಾಗವಾಗಿ ವಿವಿಧ ರೀತಿಯ ಸರಗಳಿಗೆ ಶೇ 4.99ರಷ್ಟು ಮಜೂರಿ ಆಫರ್ ನೀಡಿದೆ.

ಸೆಪ್ಟೆಂಬರ್ 20ರಿಂದ ಈ ಕೊಡುಗೆ ಆರಂಭವಾಗಿದ್ದು, ಅಕ್ಟೋಬರ್ 6ರ ವರೆಗೆ ಇರಲಿದೆ. ಗ್ರಾಹಕರು ಹತ್ತಿರದ ಮಳಿಗೆಗೆ ಭೇಟಿ ನೀಡಿ ಈ ಸೌಲಭ್ಯ ಪಡೆದುಕೊಳ್ಳಬಹುದು ಎಂದು ಜೋಯಾಲುಕ್ಕಾಸ್ ತಿಳಿಸಿದೆ.

'ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದೆ ಉತ್ತಮ ಆಭರಣಗಳನ್ನು ಒದಗಿಸುವುದೇ ನಮ್ಮ ಗುರಿಯಾಗಿದೆ. ಆಭರಣ ಪ್ರಿಯರಿಗಾಗಿ ಸರಗಳನ್ನು ವಿನ್ಯಾಸಗೊಳಿಸಲಾಗಿದೆ' ಎಂದು ಜೋಯಾಲುಕ್ಕಾಸ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಜೋಯ್ ಆಲುಕ್ಕಾಸ್ ತಿಳಿಸಿದ್ದಾರೆ.

ವಾಷಿಂಗ್ಟನ್: ಭಾರತ ರಾಯಭಾರ ಕಚೇರಿ ಅಧಿಕಾರಿ ಸಾವು

ವಾಷಿಂಗ್ಟನ್ (ಪಿಟಿಐ): ಇಲ್ಲಿನ ಭಾರತೀಯ ರಾಯಭಾರ ಕಚೇರಿಯ ಅಧಿಕಾರಿಯೊಬ್ಬರು ನಿಗೂಢವಾಗಿ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಯಭಾರ ಕಚೇರಿಯ ಆವರಣದಲ್ಲಿ ಎರಡು ದಿನಗಳ ಹಿಂದೆ ನಡೆದಿರುವ ಘಟನೆ ಬಗ್ಗೆ ಸ್ಥಳೀಯ ಪೊಲೀಸರು ಮತ್ತು ಸೀಕ್ರೆಟ್ ಸರ್ವಿಸ್ ಏಜೆನ್ಸಿ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಆತ್ಮಹತ್ಯೆಯ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ ಎಂದು ಮೂಲಗಳು ಹೇಳಿವೆ. 'ರಾಯಭಾರ ಕಚೇರಿಯ ಅಧಿಕಾರಿಯೊಬ್ಬರು ಸೆಪ್ಟೆಂಬರ್ 18ರಂದು ಸಂಜೆ ಮೃತಪಟ್ಟಿದ್ದಾರೆ. ಮೃತದೇಹವನ್ನು ಭಾರತಕ್ಕೆ ಕಳುಹಿಸಲು ಕುಟುಂಬದ ಸದಸ್ಯರು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಜತೆ ಸಂಪರ್ಕದಲ್ಲಿದ್ದೇವೆ' ಎಂದು ರಾಯಭಾರ ಕಚೇರಿ ಶುಕ್ರವಾರ ಪ್ರಕಟಣೆಯಲ್ಲಿ ತಿಳಿಸಿದೆ.

'ನಿಮಗೆ ಇದೆಲ್ಲಾ ಯಾಕೆ ಬೇಕು? ಮನೆಯಲ್ಲಿ ಅರ್ಧ ಪಾಕಿಸ್ತಾನ ಇದೆ ಎಂದರೆ ಏನರ್ಥ?'

ಯತ್ನಾಳ್ ಹೇಳಿಕೆಗೆ ಹೈಕೋರ್ಟ್ ಕಿಡಿ

ಬೆಂಗಳೂರು: 'ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮನೆಯಲ್ಲಿ ಅರ್ಧ ಪಾಕಿಸ್ತಾನವಿದೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನೀಡಿದ್ದ ಹೇಳಿಕೆಗೆ ಹೈಕೋರ್ಟ್ ತೀವ್ರ ಅತೃಪ್ತಿ ವ್ಯಕ್ತಪಡಿಸಿದೆ.

'ನನ್ನ ವಿರುದ್ಧ ಸಚಿವ ದಿನೇಶ್ ಗುಂಡೂರಾವ್ ಪತ್ನಿ ತಬಸ್ಸುಮ್ ದಿನೇಶ್ ರಾವ್ ದಾಖಲಿಸಿರುವ ಮಾನಹಾನಿ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ 'ನಿರ್ದಿಷ್ಟ ಸಮುದಾಯವನ್ನು ಈ ರೀತಿ ವ್ಯಾಖ್ಯಾನಿಸಲಾಗದು. ಈ ರೀತಿ ಮಾಡುವುದರಿಂದ ನಿಮಗೇನು ಸಿಗುತ್ತದೆ' ಎಂದು ಯತ್ನಾಳ್ ಅವರನ್ನು ಖಾರವಾಗಿ ಪ್ರಶ್ನಿಸಿದೆ.

ವಿಚಾರಣೆ ವೇಳೆ ನ್ಯಾಯಪೀಠ, 'ನಿಮಗೆ (ಯತ್ನಾಳ್) ಇದೆಲ್ಲಾ ಯಾಕೆ ಬೇಕು? ನಿಮ್ಮ ತಲೆಗೆ ತೋಚಿದ್ದನ್ನೆಲ್ಲಾ ಮಾತನಾಡುತ್ತೀರಲ್ಲ. ಅರ್ಧ ಪಾಕಿಸ್ತಾನ ಎಂದರೆ ಏನರ್ಥ? ನೀವೇಕೆ ಈ ರೀತಿ ಹೇಳಿದ್ದೀರಿ? ಪ್ರತಿ ಬಾರಿಯೂ ಪ್ರತಿ ಪ್ರಕರಣದಲ್ಲೂ ನಾನು ಹೇಳುತ್ತಲೇ ಇದ್ದೇನೆ. ಈ ರೀತಿ ಪರಸ್ಪರ ಕೆಸರು ಎರಚುವುದು ನಿಲ್ಲಬೇಕು' ಎಂದು ಯತ್ನಾಳ್ ಪರ ವಕೀಲ ವೆಂಕಟೇಶ್ ಪಿ.ದಳವಾಯಿ ಅವರಿಗೆ ತಾಕೀತು ಮಾಡಿತು.

'ಯಾರದೋ ಪತ್ನಿ ಮುಸ್ಲಿಂ ಎಂದ ಮಾತ್ರಕ್ಕೆ ಅದನ್ನು ಅರ್ಧ ಪಾಕಿಸ್ತಾನ ಎನ್ನಬಹುದೇ? ಇದು ಮಾತನಾಡುವ ರೀತಿಯಲ್ಲ. ಯಾಕೆ ನೀವು ಇಂತಹ ವೈಯಕ್ತಿಕ ಹೇಳಿಕೆ ನೀಡುತ್ತೀರಿ? ನಾನು ಈ ಪ್ರಕರಣಕ್ಕೆ ತಡೆ ನೀಡುವುದಿಲ್ಲ' ಎಂದು ನ್ಯಾಯಪೀಠ ತೀಕ್ಷ್ಣವಾಗಿ ಪ್ರತಿಕ್ರಿಯಿಸಿತು.

ತಬಸ್ಸುಮ್ ದಿನೇಶ್ ರಾವ್ ಪರ ಹಾಜರಿದ್ದ ವಕೀಲರಾದ ಎಸ್.ಎ. ಅಹಮದ್ ಹಾಗೂ ಸೂರ್ಯ ಮುಕುಂದರಾಜ್ ಅವರು, 'ನಮ್ಮ ಕಕ್ಷಿದಾರರು ರಾಜಕೀಯದಲ್ಲಿ ಇಲ್ಲ. ಆದರೂ, ಈ ರೀತಿಯ ಹೇಳಿಕೆ ನೀಡಲಾಗಿದೆ' ಎಂದು ಆಕ್ಷೇಪಿಸಿದರು.

ಇದಕ್ಕೆ ವೆಂಕಟೇಶ್ ಪಿ.ದಳವಾಯಿ, 'ದಿನೇಶ್ ಗುಂಡೂರಾವ್ ಅವರ ಹೇಳಿಕೆಗೆ ಯತ್ನಾಳ್ ಪ್ರತಿಕ್ರಿಯಿಸಿದ್ದಾರೆ ಅಷ್ಟೇ. ಮರುದಿನವೇ ಇದಕ್ಕೆ ಸ್ಪಷ್ಟನೆಯನ್ನೂ ನೀಡಿದ್ದಾರೆ. ಅವರು ಉದ್ದೇಶಪೂರ್ವಕವಾಗಿ ಅಂತಹ ಹೇಳಿಕೆ ನೀಡಿಲ್ಲ. ಹಾಗಾಗಿ, ವಿಚಾರಣಾ ನ್ಯಾಯಾಲಯದ ಪ್ರಕ್ರಿಯೆಗೆ ತಡೆ ನೀಡಬೇಕು' ಎಂದು ಕೋರಿದರು.

ಇದಕ್ಕೆ ನ್ಯಾಯಪೀಠ, 'ಪ್ರಕರಣಕ್ಕೆ ತಡೆ ನೀಡುವುದಿಲ್ಲ. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ-2023ರ ಕಲಂ 200ರ ಅಡಿ ಯಾವುದೇ ಆರೋಪ ಪರಿಗಣನಾರ್ಹ ಅಪರಾಧ ಎಂಬ ತೀರ್ಮಾನಕ್ಕೆ ಬರುವ ಮುನ್ನ ಆರೋಪಿಯ ಹೇಳಿಕೆಯನ್ನೂ ಕೇಳಬೇಕು. ಈ ಕಾನೂನು ಅಂಶದ ಪ್ರಕ್ರಿಯಾ ಲೋಪ ಇಲ್ಲಿ ಕಾಣುತ್ತಿದೆ. ಆದ್ದರಿಂದ, ಪ್ರಕರಣವನ್ನು ವಿಚಾರಣಾ ನ್ಯಾಯಾಲಯಕ್ಕೇ ಮರಳಿಸಲಾಗುವುದು' ಎಂದು ಸೂಚಿಸಿ ವಿಚಾರಣೆ ಮುಂದೂಡಿತು. ಇದೇ ವೇಳೆ, ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ಅಹ್ಮದ್ ಅವರಿಗೆ ನಿರ್ದೇಶಿಸಿತು.

ಭವಾನಿ ರೇವಣ್ಣ ಪ್ರಕರಣ: ಪ್ರಮಾಣಪತ್ರ ಸಲ್ಲಿಕೆಗೆ ಸೂಚನೆ

ನವದೆಹಲಿ: ಅತ್ಯಾಚಾರ ಸಂತ್ರಸ್ತೆಯ ಅಪಹರಣ ಪ್ರಕರಣದಲ್ಲಿ ಭವಾನಿ ರೇವಣ್ಣ ಅವರಿಗೆ ನೀಡಿರುವ ನಿರೀಕ್ಷಣಾ ಜಾಮೀನು ಪ್ರಶ್ನಿಸಿ ಕರ್ನಾಟಕ ಸರ್ಕಾರ ಸಲ್ಲಿಸಿರುವ ಮೇಲ್ಮನವಿ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಎರಡು ವಾರಗಳ ಕಾಲ ಮುಂದೂಡಿದೆ.

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ಪ್ರಕರಣದಲ್ಲಿ ಸಂತ್ರಸ್ತೆಯ ಅಪಹರಣ ಮಾಡಿರುವ ಆರೋಪ ಭವಾನಿ ಮೇಲಿದೆ. ಅವರಿಗೆ ಹೈಕೋರ್ಟ್ ನಿರೀಕ್ಷಣಾ ಜಾಮೀನು ನೀಡಿತ್ತು. ನಿರೀಕ್ಷಣಾ ಜಾಮೀನನ್ನು ರದ್ದುಗೊಳಿಸಲು ಸುಪ್ರೀಂ ಕೋರ್ಟ್ ಜುಲೈ 10ರಂದು ನಿರಾಕರಿಸಿತ್ತು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ಜಲ್ ಭುಯಾನ್ ಅವರಿದ್ದ ಪೀಠವು ಪ್ರಕರಣದ ಸ್ಥಿತಿಗತಿಯ ವಿವರಗಳಿರುವ ಪ್ರಮಾಣಪತ್ರವನ್ನು ಸಲ್ಲಿಸುವಂತೆ ಭವಾನಿ ಪರ ವಕೀಲ ಬಾಲಾಜಿ ಶ್ರೀನಿವಾಸನ್ ಅವರಿಗೆ ಸೂಚಿಸಿತು.

ಪ್ರಕರಣದಲ್ಲಿ ಆರೋಪಪಟ್ಟಿ ಸಲ್ಲಿಕೆಯಾಗಿದೆ. ಇತರ ಆರೋಪಿಗಳಿಗೆ ಜಾಮೀನು ಮಂಜೂರಾಗಿದೆ ಮತ್ತು ಭವಾನಿ ರೇವಣ್ಣ ತನಿಖೆಗೆ ಸಹಕರಿಸಿದ್ದಾರೆ ಎಂದು ಶ್ರೀನಿವಾಸನ್ ಅವರು ನ್ಯಾಯಪೀಠದ ಗಮನಕ್ಕೆ ತಂದರು.

ಜೆಡಿಎಸ್‌ನ 13 ಸದಸ್ಯರು ಕಾಂಗ್ರೆಸ್‌ನಲ್ಲಿ ವಿಲೀನ

ಪ್ರಜಾವಾಣಿ ವಾರ್ತೆ

ರಾಮನಗರ: ಜೆಡಿಎಸ್ ಹಿಡಿತದಲ್ಲಿದ್ದ ಚನ್ನಪಟ್ಟಣ ನಗರಸಭೆಯನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ನಿಟ್ಟಿನಲ್ಲಿ ಕಾಂಗ್ರೆಸ್ ಹೂಡಿದ್ದ ತಂತ್ರ ಫಲಿಸಿದೆ. ಲೋಕಸಭೆ ಚುನಾವಣೆಗೆ ಮುಂಚೆ ಜೆಡಿಎಸ್ ತೊರೆದು 'ಕೈ' ಹಿಡಿದಿದ್ದ 9 ಸದಸ್ಯರ ಜತೆಗೆ ಇನ್ನೂ ನಾಲ್ವರು ಜೆಡಿಎಸ್ ತೊರೆದಿದ್ದಾರೆ. ಇದರೊಂದಿಗೆ 13 ಸದಸ್ಯರನ್ನು ತನ್ನತ್ತ ಸೆಳೆದಿರುವ ಕಾಂಗ್ರೆಸ್, ತನ್ನ ಬಲವನ್ನು 20ಕ್ಕೆ ಏರಿಸಿಕೊಂಡಿದೆ.

31 ಸದಸ್ಯರ ಬಲದ ನಗರಸಭೆಯಲ್ಲಿ ಜೆಡಿಎಸ್‌ನ 16, ಕಾಂಗ್ರೆಸ್ ಮತ್ತು ಬಿಜೆಪಿ ತಲಾ 7 ಹಾಗೂ ಒಬ್ಬರು ಪಕ್ಷೇತರ ಸದಸ್ಯರಿದ್ದರು. ಇದೀಗ ಜೆಡಿಎಸ್‌ನ ಒಟ್ಟು ಬಲದ ಪೈಕಿ 2/3ರಷ್ಟು ಅಂದರೆ, 13 ಮಂದಿ ಪಕ್ಷ ತೊರೆದಿದ್ದಾರೆ. ಅವರೊಂದಿಗೆ ಪಕ್ಷೇತರ ಸದಸ್ಯೆ ಉಮಾ ಅವರನ್ನು ಕಾಂಗ್ರೆಸ್‌ನಲ್ಲಿ ವಿಲೀನ ಮಾಡಿ ಪಕ್ಷದ ಸದಸ್ಯರು ಎಂದು ಪರಿಗಣಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿಗೆ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರು ಕೋರಿದ್ದರು.

ಅದರಂತೆ ಕರ್ನಾಟಕ ಸ್ಥಳೀಯ ಸಂಸ್ಥೆಗಳು (ಪಕ್ಷಾಂತರ ನಿಷೇಧ) ಅಧಿನಿಯಮ-1987ರ ಕಲಂ 3(ಬಿ)(2ಎ) ಅಡಿ, ಜೆಡಿಎಸ್ ಮೂಲಕ ಹಾಗೂ ಪಕ್ಷೇತರರಾಗಿ ಚನ್ನಪಟ್ಟಣ ನಗರಸಭೆಗೆ ಆಯ್ಕೆಯಾಗಿರುವ 2/3ರಷ್ಟು ಮೀರಿದ ಸದಸ್ಯರು ಕಾಂಗ್ರೆಸ್ ಸೇರ್ಪಡೆಯಾಗಿದ್ದಾರೆ. ಆ ಮೇರೆಗೆ, ಪಕ್ಷಕ್ಕೆ ವಿಲೀನತೆ ಎಂದು ಪರಿಗಣಿಸಲಾಗಿದೆ ಎಂದು ಚುನಾವಣಾಧಿಕಾರಿ ತನ್ನ ಆದೇಶದಲ್ಲಿ ತಿಳಿಸಿದ್ದಾರೆ.

ನೀರು ಪೂರೈಕೆಯಲ್ಲಿ ವ್ಯತ್ಯಯ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ 5ನೇ ಹಂತದ ಚಾಲನೆಯ ಪೂರ್ವಭಾವಿ ಚಟುವಟಿಕೆಗಳ ಭಾಗವಾಗಿ, ಹೆಗ್ಗನಹಳ್ಳಿಯ ಜಿಎಲ್‌ಆರ್ ಆವರಣದಲ್ಲಿ ಪ್ರಮುಖ ಕೊಳವೆಗಳ ಜೋಡಣೆ ಕಾಮಗಾರಿ ನಡೆಯುತ್ತಿದೆ.

ಈ ಹಿನ್ನೆಲೆಯಲ್ಲಿ 'ಫೇಸ್-2' ಕೊಳವೆ ಮಾರ್ಗದಲ್ಲಿ ನಿರಂತರವಾಗಿ ದಿನವಿಡೀ(24x7) ನೀರು ಪೂರೈಕೆಯಾಗುವುದರಿಂದ, ಶನಿವಾರ(ಸೆ.21) ಮಧ್ಯಾಹ್ನ 1 ರಿಂದ ರಾತ್ರಿ 10 ಗಂಟೆಯವರೆಗೆ ನಗರದ ಕೆಲವು ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಾಸವಾಗಲಿದೆ.

ವ್ಯತ್ಯಯವಾಗಲಿರುವ ಪ್ರದೇಶಗಳು: ಪೀಣ್ಯ- ದಾಸರಹಳ್ಳಿ ವಲಯ, ಸುಬ್ರಹ್ಮಣ್ಯನಗರ, ಗಾಯತ್ರಿ ನಗರ, ಪ್ರಕಾಶನಗರ, ನಂದಿನಿ ಲೇಔಟ್, ಗೊರಗುಂಟೆಪಾಳ್ಯ, ಮಹಾಲಕ್ಷ್ಮಿ ಲೇಔಟ್, ಸರಸ್ವತಿ ನಗರ ರಾಜಾಜಿನಗರ ಮೊದಲನೇ ಹಂತ ದಿಂದ 6 ನೇ ಹಂತದವರೆಗೆ. ರಾಜಗೋಪಾಲನಗರ, ಜಿಕೆಡಬ್ಲ್ಯೂ ಲೇಔಟ್, ಪೀಣ್ಯ ಕೈಗಾರಿಕಾ ಪ್ರದೇಶ, ಚೊಕ್ಕಸಂದ್ರ, ಹೆಚ್‌ಎಂಟಿ ಲೇಔಟ್, ಪೀಣ್ಯ ಮೊದಲನೇ ಹಂತ, ಪೀಣ್ಯ ವಿಲೇಜ್. ಎಂಇಐ ಲೇಔಟ್, ಬಾಗಲಗುಂಟೆ, ಮಲ್ಲಸಂದ್ರ, ದಾಸರಹಳ್ಳಿ, ರಾಮಯ್ಯ ಲೇಔಟ್, ಪ್ರಶಾಂತ ನಗರ, ಕಮ್ಮಗೊಂಡನಹಳ್ಳಿ, ಭುವನೇಶ್ವರಿ ನಗರ, ಚಿಕ್ಕಸಂದ್ರ, ಕಿರ್ಲೋಸ್ಕರ್ ಲೇಔಟ್, ಸೌಂದರ್ಯ ಲೇಔಟ್, ಸಿದ್ದೇಶ್ವರ ಲೇಔಟ್, ಹೆಗ್ಗನಹಳ್ಳಿ, ಹೇರೋಹಳ್ಳಿ, ಸುಂಕದಕಟ್ಟೆ, ಪೈಪ್‌ಲೈನ್ ರಸ್ತೆ, ಶ್ರೀನಿವಾಸ ನಗರ, ಹೊಯ್ಸಳ ನಗರ, ಸಂಜೀವಿನಿ ನಗರ, ಲಕ್ಷ್ಮಣ ನಗರ, ಶ್ರೀಗಂಧ ನಗರ, ಮಯೂರ ನಗರ, ಶಿವಾನಂದ ನಗರ, ಫ್ರೆಂಡ್ಸ್ ಸರ್ಕಲ್. ಎಜಿಬಿ ಲೇಔಟ್ ಸುತ್ತಮುತ್ತಲಿನ ಪ್ರದೇಶ.

ಅಗ್ರಹಾರ ದಾಸರಹಳ್ಳಿ, ವೆಸ್ಟ್ ಆಫ್‌ಕಾರ್ಡ್ ರೋಡ್, ಕೆಎಚ್‌ಬಿ ಕಾಲೊನಿ, ಶಿವನಹಳ್ಳಿ ಸುತ್ತಮುತ್ತ, ಕೆ.ಪಿ ಅಗ್ರಹಾರ, ಮಂಜುನಾಥ ನಗರ, ಮಾರೇನಹಳ್ಳಿ 20ನೇ ಮೇನ್, ಹೌಸಿಂಗ್ ಬೋರ್ಡ್, ಎಂ.ಸಿ ಲೇಔಟ್, ಮೂಡಲಪಾಳ್ಯ ಸುತ್ತಮುತ್ತ.

ನೆಲಗದರನಹಳ್ಳಿ, ಐಪಿನಗರ, ದೊಡ್ಡಣ್ಣ ಇಂಡಸ್ಟ್ರಿಯಲ್ ಏರಿಯಾ, ರಾಮಯ್ಯ ಲೇಔಟ್, ನಂದಿನಿ ಲೇಔಟ್ ಸುತ್ತ, ಸಂಜಯಗಾಂಧಿ ನಗರ, ಲಕ್ಷ್ಮಿದೇವಿ ನಗರ, ಮಲ್ಲಸಂದ್ರ, ರವೀಂದ್ರ ನಗರ, ಸಂತೋಷ್ ನಗರ, ಬಿಎಚ್‌ಇಎಲ್ ಕಾಲೊನಿ, ಬಾಬಣ್ಣ ಲೇಔಟ್, ಕಲ್ಯಾಣ ನಗರ, ಪ್ರಶಾಂತ ನಗರ, ಶನಿಮಹಾತ್ಮ ದೇವಸ್ಥಾನ , ಭುವನೇಶ್ವರಿ ನಗರ, ಹಾವನೂರು ಲೇಔಟ್, ಡಿಫೆನ್ಸ್ ಕಾಲೊನಿ.

ಶಂಕ್ರಪ್ಪ ಗಾರ್ಡನ್ 1 ನೇ ಕ್ರಾಸ್ ನಿಂದ 6 ನೇ ಕ್ರಾಸ್, ಬಿಡಿಎ ಲೇಔಟ್, ರಾಜೀವ್ ಗಾಂಧಿ ಕೊಳಚೆ ಪ್ರದೇಶ, ಮುನೇಶ್ವರ ನಗರ, ಮೂಡಲಪಾಳ್ಯ, ಎಂಟಿ ಲೇಔಟ್, ವಿನಾಯಕ ಲೇಔಟ್, ಮಾರುತಿ ಮಂದಿರ, ಶಿವಾನಂದ ನಗರ, ಕೋಮಲನಗರ, ಸಂಜಯಗಾಂಧಿ ನಗರ, ವಿಶ್ವಭಾರತಿ ನಗರ, ಸಣ್ಣಕ್ಕಿ ಬಯಲು, ಕಾಮಾಕ್ಷಿಪಾಳ್ಯ, ಶಕ್ತಿ ಗಣಪತಿ ನಗರ.

ಆರ್ ಆರ್ ನಗರ, ಬಿಎಚ್‌ಇಎಲ್ ಲೇಔಟ್, ಐಡಿಐಎಲ್ ಹೋಮ್ ಟೌನ್‌ಶಿಪ್, ಬಿಇಎಂಎಲ್ 3, 4 ಮತ್ತು 5ನೇ ಹಂತ, ಕೆಂಗೇರಿ, ಕೆಂಗೇರಿ ಸ್ಯಾಟಲೈಟ್ ಟೌನ್, ಬಂಡೇಮಠ, ಕೆಂಗೇರಿ ಫೋರ್ಟ್, ಸ್ವಾತಿ ಲೇಔಟ್, ಕೋಡಿಪಾಳ್ಯ, ವಿಜಯಶ್ರೀ ಲೇಔಟ್, ಭುವನೇಶ್ವರ ನಗರ, ಜ್ಞಾನಭಾರತಿ, ದುಬಾಸಿಪಾಳ್ಯ, ನಾಗದೇವನಹಳ್ಳಿ.

ಅನ್ನಪೂರ್ಣೇಶ್ವರಿ ನಗರ, ಜ್ಞಾನಗಂಗಾ ನಗರ, ರೈಲ್ವೇ ಲೇಔಟ್, ಎಂಪಿಎಂ ಲೇಔಟ್, ಮಲ್ಲತ್ತಹಳ್ಳಿ, ಪಾಪರೆಡ್ಡಿಪಾಳ್ಯ, ಐಪಿಎ ಲೇಔಟ್, ಡಿ ಗ್ರೂಪ್ ಬ್ಲಾಕ್, ನಾಗರಭಾವಿ, ಎನ್‌ಜಿಇಫ್ ಲೇಔಟ್, ಟೆಲಿಕಾಂ ಲೇಔಟ್ ಸುತ್ತಮುತ್ತ.

ಅರಣ್ಯ ವಿಭಾಗದಿಂದ ಕಾರ್ಯಾಚರಣೆ, ಬಿಬಿಎಂಪಿಯೊಂದಿಗೆ ಬೆಸ್ಕಾಂ ಸಹಯೋಗ

ಅಪಾಯ ಸ್ಥಿತಿಯಲ್ಲಿನ ಮರಗಳ ತೆರವಿಗೆ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಅಪಾಯ ಸ್ಥಿತಿಯಲ್ಲಿರುವ ಮರ, ಒಣಗಿದ ಮರ ಹಾಗೂ ಮರದ ರೆಂಬೆ, ಕೊಂಬೆಗಳು, ವಿದ್ಯುತ್ ಕಂಬಗಳನ್ನು ಆವರಿಸಿರುವ ಮರಗಳ ತೆರವು ಕಾರ್ಯಾಚರಣೆ ಅಭಿಯಾನವನ್ನು ಆರಂಭಿಸಲಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಜಯನಗರ 2ನೇ ಬ್ಲಾಕ್‌ನಲ್ಲಿ ಅಭಿಯಾನಕ್ಕೆ ಶುಕ್ರವಾರ ಚಾಲನೆ ನೀಡಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಅರಣ್ಯ ವಿಭಾಗದಿಂದ ನಿರಂತರವಾಗಿ ಅಪಾಯ ಸ್ಥಿತಿಯಲ್ಲಿರುವ ಮರ ಕಟಾವು ಮಾಡಲಾಗುತ್ತಿದೆ. ಮಳೆಗಾಲದಲ್ಲಿ ಬಿರುಗಾಳಿಯಿಂದಾಗಿ ಮರಗಳು ಬೀಳುತ್ತವೆ. ಅವುಗಳ ತೆರವಿಗೆ ಗುತ್ತಿಗೆ ಆಧಾರದ ಮೇಲೆ ಹೆಚ್ಚುವರಿಯಾಗಿ ತೆರವು ಕಾರ್ಯಾಚರಣೆ ತಂಡಗಳನ್ನು ನಿಯೋಜಿಸಲಾಗಿದೆ. ಸಾರ್ವಜನಿಕರ ಓಡಾಟ ಹಾಗೂ ವಾಹನ ದಟ್ಟಣೆ ಹೆಚ್ಚಿರುವಂತಹ ರಸ್ತೆಗಳಲ್ಲಿ ಮರದ ರೆಂಬೆ, ಕೊಂಬೆಗಳನ್ನು ರಾತ್ರಿ ವೇಳೆ ಕಟಾವು ಮಾಡಿ, ಕೂಡಲೇ ಡಂಪಿಂಗ್ ಯಾರ್ಡ್‌ಗೆ ವಿಲೇವಾರಿ ಮಾಡಲಾಗುವುದು ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ನಗರದಲ್ಲಿ ಅಪಾಯ ಸ್ಥಿತಿಯಲ್ಲಿರುವ ಮರ, ಕೊಂಬೆಗಳನ್ನು ತೆರವುಗೊಳಿಸುವ ಕಾರ್ಯಾಚರಣೆಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಜಯನಗರದಲ್ಲಿ ಶುಕ್ರವಾರ ಚಾಲನೆ ನೀಡಿದರು

ನಾಗರಿಕರು ದೂರು ನೀಡಬಹುದು

ನಾಗರಿಕರು ತಮ್ಮ ಸುತ್ತಮುತ್ತ ಪ್ರದೇಶಗಳಲ್ಲಿ ಒಣಗಿರುವ, ಅಪಾಯ ಸ್ಥಿತಿಯಲ್ಲಿರುವ ಮರ ಹಾಗೂ ಮರದ ರೆಂಬೆ, ಕೊಂಬೆಗಳು ಕಂಡುಬಂದಲ್ಲಿ, ಗಾಳಿ/ಮಳೆಗೆ ಬಿದ್ದಿರುವ ಮರಗಳನ್ನು ತೆರವುಗೊಳಿಸಲು ಬಿಬಿಎಂಪಿ ಸಹಾಯವಾಣಿ 1533 ಅಥವಾ 080-22221188 / 08022660000ಗೆ ಕರೆ ಮಾಡಿ, ದೂರು ನೀಡಬಹುದು.

ಮರದ ರೆಂಬೆ, ಕೊಂಬೆಗಳ ತೆರವು ಕಾರ್ಯಾಚರಣೆ ನಿರಂತರವಾಗಿರುತ್ತದೆ. ಪಾಲಿಕೆ ಹಾಗೂ ಬೆಸ್ಕಾಂ ಸೇರಿ ವಿದ್ಯುತ್ ತಂತಿಗಳಿಗೆ ತಗಲುವ ರೆಂಬೆಗಳನ್ನು ತೆರವು ಮಾಡುವ ಅಭಿಯಾನವನ್ನು ಶುಕ್ರವಾರದಿಂದ 10 ದಿನ ನಡೆಸಲಾಗುವುದು ಎಂದರು.

ಸಮೀಕ್ಷೆ: ಪ್ರಮುಖ ರಸ್ತೆಗಳಲ್ಲಿ ಸಮೀಕ್ಷೆ ಮಾಡಿ ನಂತರ ಅಪಾಯ ಸ್ಥಿತಿಯಲ್ಲಿರುವ ಮರಗಳ ತೆರವು ಕೆಲಸ ಮಾಡಲಾಗುತ್ತಿದೆ. ನಗರದಲ್ಲಿ ಜುಲೈನಿಂದ ಈವರೆಗೆ ಒಣಗಿದ/ ಅಪಾಯ ಸ್ಥಿತಿಯಲ್ಲಿರುವ 477 ಮರ ಹಾಗೂ 592 ಕೊಂಬೆಗಳನ್ನು ತೆರವುಗೊಳಿಸಲಾಗಿದೆ. ಅಲ್ಲದೆ ನಾಗರಿಕರಿಂದ ಬಂದಿರುವ ದೂರುಗಳನ್ನು ಆಧರಿಸಿ ಮಳೆ ಗಾಳಿಗೆ ಬಿದ್ದಂತಹ ಸುಮಾರು 1,371 ಮರಗಳು ಹಾಗೂ 3,700 ರೆಂಬೆ-ಕೊಂಬೆಗಳನ್ನು ತೆರವುಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪಾದಚಾರಿ ಮಾರ್ಗ ಒತ್ತುವರಿ ತೆರವಿಗೆ ಸೂಚನೆ

ಜಯನಗರದಲ್ಲಿ ಪಾದಚಾರಿ ಮಾರ್ಗದಲ್ಲಿ ಅನಧಿಕೃತ ಕೇಬಲ್‌ಗಳನ್ನು ತೆರವುಗೊಳಿಸಲು ಮುಖ್ಯ ಆಯುಕ್ತರು ಸೂಚಿಸಿದರು. ಭಾರತ್ ಟಿವಿಎಸ್ ಸಂಸ್ಥೆ ಸಂಪೂರ್ಣ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡಿದ್ದನ್ನು ಗಮನಿಸಿ, ಅವರಿಗೆ ದಂಡ ವಿಧಿಸಿ, ಉದ್ದಿಮೆ ಪರವಾನಗಿ ಅಮಾನತು ಮಾಡಲು ಹೇಳಿದರು.

ಯಡಿಯೂರು ವಾರ್ಡ್ 16ನೇ ಅಡ್ಡರಸ್ತೆಯಲ್ಲಿ ಬೆಸ್ಕಾಂ ಅಳವಡಿಸಿರುವ ಟ್ರಾನ್ಸ್‌ಫಾರ್ಮರ್‌ಗೆ ಸಂಪರ್ಕ ಹೊಂದಿರುವ ಕೇಬಲ್‌ಗಳು ಚರಂಡಿಗೆ ಅಡ್ಡವಾಗಿದ್ದನ್ನು ಗಮನಿಸಿ, ಅದನ್ನು ತೆರವುಗೊಳಿಸಲು ಸೂಚಿಸಿದರು.

ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ ಬಳಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆಯನ್ನು ನಡೆಸಬೇಕು. ಮತ್ತೆ-ಮತ್ತೆ ಒತ್ತುವರಿಯಾಗದಂತೆ ನಿತ್ಯ ಪರಿಶೀಲನೆ ನಡೆಸಬೇಕು ಎಂದು ಅಧಿಕಾರಿಗಳಿಗೆ ಹೇಳಿದರು.ರಸ್ತೆ ಹಾಗೂ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡು ವ್ಯಾಪಾರ ಮಾಡುವುದು ಕಾನೂನುಬಾಹಿರವಾಗಿದ್ದು, ಅದನ್ನು ತೆರವುಗೊಳಿಸಲಾಗುತ್ತದೆ ಎಂದರು.

ಅ.1ಕ್ಕೆ ಶೂದ್ರ, ದಲಿತರ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಶಾಸಕ ಮುನಿರತ್ನ ಅವರು ಒಕ್ಕಲಿಗ ಮತ್ತು ಹೊಲೆಯ ಸಮುದಾಯಗಳನ್ನು ಹೀನಾಯವಾಗಿ ನಿಂದಿಸಿರುವುದನ್ನು ಖಂಡಿಸಿ ಅ.1ರಂದು ಶೂದ್ರ, ದಲಿತರ ಬೃಹತ್ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಮಾವೇಶ ಕುರಿತು ಶುಕ್ರವಾರ ಸಭೆ ನಡೆಸಿದ ಸಮುದಾಯಗಳ ಮುಖಂಡರು, ಸಾಹಿತಿಗಳು, ಚಿಂತಕರು, ಹೋರಾಟಗಾರರು ಮತ್ತು ವಿದ್ಯಾರ್ಥಿ ಮುಖಂಡರು ಈ ತೀರ್ಮಾನ ಮಾಡಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಂದ ಆಯ್ಕೆಯಾದ ಜನಪ್ರತಿನಿಧಿಯೊಬ್ಬರು ಈ ರೀತಿ ಜಾತಿ ವಿರೋಧಿ ಹೇಳಿಕೆಗಳನ್ನು ಕೊಡುವುದು ಸಂವಿಧಾನ ವಿರೋಧಿ ಮತ್ತು ಕಾನೂನು ಬಾಹಿರವಾಗಿರುತ್ತದೆ. ಈ ಹೇಳಿಕೆಗಳಿಂದ ಒಕ್ಕಲಿಗ ಮತ್ತು ದಲಿತ ಸಮುದಾಯಗಳ ಭಾವನೆಗಳಿಗೆ ಘಾಸಿಯುಂಟಾಗಿದೆ. ಇದನ್ನು ಖಂಡಿಸಿ ಸಮಾವೇಶ ನಡೆಸಲಾಗುವುದು ಎಂದು ಮುಖಂಡರು ತಿಳಿಸಿದ್ದಾರೆ.

ಸಭೆಯಲ್ಲಿ ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ನಟ ಶ್ರೀನಗರ ಕಿಟ್ಟಿ, ಬಿ. ಗೋಪಾಲ್, ಬಸವರಾಜ್ ಕೌತಾಳ್, ಹೆಣ್ಣೂರ್ ಶ್ರೀನಿವಾಸ್, ಒಕ್ಕಲಿಗ ಸಂಘದ ಹನುಮಂತರಾಯಪ್ಪ, ಚಂದ್ರು ಪೆರಿಯಾರ್ ಭಾಗವಹಿಸಿದ್ದರು.

ದಸರಾ: 34 ರೈಲುಗಳಿಗೆ ಹೆಚ್ಚುವರಿ ಬೋಗಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ದಸರಾ ಹಬ್ಬದ ಸಮಯದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಳವಾಗಲಿದ್ದು, ದಟ್ಟಣೆ ಕಡಿಮೆಗೊಳಿಸಲು ಅ.1ರಿಂದ 15ರವರೆಗೆ ನೈರುತ್ಯ ರೈಲ್ವೆಯು 34 ರೈಲುಗಳಿಗೆ ತಾತ್ಕಾಲಿಕವಾಗಿ ಹೆಚ್ಚುವರಿ ಬೋಗಿಗಳನ್ನು ಜೋಡಿಸಲು ನಿರ್ಧರಿಸಿದೆ.

ಮೈಸೂರು-ಬೆಳಗಾವಿ-ಮೈಸೂರು ಎಕ್ಸ್‌ಪ್ರೆಸ್, ಮೈಸೂರು-ಚಾಮರಾಜನಗರ- ಮೈಸೂರು ಎಕ್ಸ್‌ಪ್ರೆಸ್, ಮೈಸೂರು ಬಾಗಲಕೋಟೆ-ಮೈಸೂರು ಬಸವ ಎಕ್ಸ್‌ಪ್ರೆಸ್, ಹುಬ್ಬಳ್ಳಿ -ಮೈಸೂರು- ಹುಬ್ಬಳ್ಳಿ ಹಂಪಿ ಎಕ್ಸ್‌ಪ್ರೆಸ್, ಮೈಸೂರು-ಪಂಡರಪುರ-ಮೈಸೂರು ಗೋಲಗುಂಬಜ್ ಎಕ್ಸ್‌ಪ್ರೆಸ್ ರೈಲುಗಳಿಗೆ ತಲಾ 1 ಸ್ಲೀಪರ್ ಕ್ಲಾಸ್ ಬೋಗಿಗಳನ್ನು ಜೋಡಿಸಲಾಗುತ್ತಿದೆ.

ಮೈಸೂರು-ತಾಳಗುಪ್ಪ- ಮೈಸೂರು ಎಕ್ಸ್‌ಪ್ರೆಸ್ ರೈಲುಗಳಿಗೆ ತಲಾ ಎರಡು ಸ್ಲೀಪರ್ ಕ್ಲಾಸ್ ಬೋಗಿಗಳನ್ನು ಜೋಡಿಸಲಾಗುತ್ತಿದೆ.

ಮೈಸೂರು- ಚಾಮರಾಜನಗರ-ಮೈಸೂರು ಪ್ಯಾಸೆಂಜರ್ ಸ್ಪೆಷಲ್, ತಾಳಗುಪ್ಪ-ಮೈಸೂರು-ತಾಳಗುಪ್ಪ ಕುವೆಂಪು ಎಕ್ಸ್‌ಪ್ರೆಸ್, ಕೆಎಸ್‌ಆರ್ ಬೆಂಗಳೂರು-ಅರಸೀಕೆರೆ-ಕೆಎಸ್‌ಆರ್ ಬೆಂಗಳೂರು ಪ್ಯಾಸೆಂಜರ್, ಕೆಎಸ್‌ಆರ್ ಬೆಂಗಳೂರು- ಚನ್ನಪಟ್ಟಣ- ಕೆಎಸ್‌ಆರ್ ಬೆಂಗಳೂರು ಪ್ಯಾಸೆಂಜರ್, ಅರಸೀಕೆರೆ- ಮೈಸೂರು- ಅರಸೀಕೆರೆ ಪ್ಯಾಸೆಂಜರ್, ಮೈಸೂರು- ಶಿವಮೊಗ್ಗ- ಮೈಸೂರು ಎಕ್ಸ್‌ಪ್ರೆಸ್, ಶಿವಮೊಗ್ಗ- ಚಿಕ್ಕಮಗಳೂರು- ಶಿವಮೊಗ್ಗ ಪ್ಯಾಸೆಂಜರ್, ಚಿಕ್ಕಮಗಳೂರು- ಯಶವಂತಪುರ- ಚಿಕ್ಕಮಗಳೂರು ಎಕ್ಸ್‌ಪ್ರೆಸ್, ಅರಸೀಕೆರೆ- ಮೈಸೂರು- ಅರಸೀಕೆರೆ ಪ್ಯಾಸೆಂಜರ್, ಮೈಸೂರು-ಎಸ್‌ಎಂವಿಟಿ ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್, ಎಸ್‌ಎಂವಿಟಿ ಬೆಂಗಳೂರು-ಕರೈಕಲ್-ಎಸ್‌ಎಂವಿಟಿ ಬೆಂಗಳೂರು ಎಕ್ಸ್‌ಪ್ರೆಸ್ ರೈಲುಗಳಿಗೆ ತಲಾ ಒಂದು ಸಾಮಾನ್ಯ ದ್ವಿತೀಯ ದರ್ಜೆ ಬೋಗಿಗಳನ್ನು ಜೋಡಿಸಲಾಗುತ್ತಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಚಿತ್ರಾವಳಿ

ಮೈಸೂರಿನ ವಿಜಯನಗರದ 'ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ಸ್'ನಲ್ಲಿ ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನವು ಶುಕ್ರವಾರ ಆಯೋಜಿಸಿದ್ದ ಜನ್ಮಶತಮಾನೋತ್ಸವದಲ್ಲಿ ಕಲಾವಿದರಾದ ಡಿ.ಎ.ಉಪಾಧ್ಯ, ವಿ.ಟಿ.ಕಾಳೆ, ಕೆ.ವಿ.ಸುಬ್ರಹ್ಮಣ್ಯಂ, ಜೆ.ಎಸ್. ಖಂಡೇರಾವ್, ಎಂ.ಜೆ.ಕಮಲಾಕ್ಷಿ, ಪಿ.ಪರಶುರಾಮ್ ಅವರಿಗೆ 'ಪಿಆರ್‌ಟಿ ಕಲಾಪ್ರಶಸ್ತಿ'ಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡಿದರು. ರಾಜಶೇಖರ ಕದಂಬ, ಡಾ.ಎಚ್.ಸಿ.ಮಹದೇವಪ್ಪ, ಎಚ್.ಎಂ.ರೇವಣ್ಣ, ಪ್ರೊ. ಪುರುಷೋತ್ತಮ ಬಿಳಿಮಲೆ, ಕೆ.ಮರೀಗೌಡ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ 2024–25ನೇ ಸಾಲಿನ ಶೈಕ್ಷಣಿಕ ಅಧಿವೇಶನದಲ್ಲಿ ಕಾಗ್ನಿಜೆಂಟ್‌ನ ಉಪಾಧ್ಯಕ್ಷ ವಿನಯ್ ಸ್ವರೂಪ್, ಮೈಂಡ್‌ಟ್ರೀಯ ಎಐ– ಜಾಗತಿಕ ಮುಖ್ಯಸ್ಥ ರಮೇಶ್ ರೇವೂರು, ಇಸ್ರೊದ ಹಿರಿಯ ವಿಜ್ಞಾನಿ ಲಿಟ್ಟಿ ಜೋಸ್ ಅವರನ್ನು ಸನ್ಮಾನಿಸಲಾಯಿತು. ಗಣಿತ ವಿಭಾಗದ ಮುಖ್ಯಸ್ಥೆ ರಾಧಾ ಗುಪ್ತಾ, ಭೌತವಿಜ್ಞಾನದ ಮುಖ್ಯಸ್ಥ ಜೋಸೆಫ್, ದಯಾನಂದ ಸಾಗರ್ ಇನ್‌ಸ್ಟಿಟ್ಯೂಟ್‌ನ ಜಂಟಿ ಕಾರ್ಯದರ್ಶಿ ನಿಶಾನ್ ಸಾಗರ್, ಉಪಾಧ್ಯಕ್ಷ ಹೇಮಚಂದ್ರ ಸಾಗರ್, ಕಾಲೇಜಿನ ಉಪ ಪ್ರಾಂಶುಪಾಲ ರಾಮರಾಜು, ಕಾರ್ಯದರ್ಶಿ ಗಾಳಿಸ್ವಾಮಿ, ಸಿಎಸ್‌ಡಿ ಮುಖ್ಯಸ್ಥೆ ಸುಮಾ ಉಪಸ್ಥಿತರಿದ್ದರು

ನಗರದಲ್ಲಿ ಇಂದು

'ಬಿ-ಶಿಪ್' ಎಕ್ಸ್‌ಪೊ: ಸಾನ್ನಿಧ್ಯ: ಸಚ್ಚಿದಾನಂದ ಸ್ವಾಮೀಜಿ: ಮುಖ್ಯ ಅತಿಥಿಗಳು: ಶೋಭಾ ಕರಂದ್ಲಾಜೆ, ತೇಜಸ್ವಿಸೂರ್ಯ, ಆರ್.ಪಿ. ರವಿಶಂಕರ್, ಸತೀಶ್ ರೆಡ್ಡಿ, ಆಯೋಜನೆ: ಆರ್ಯವೈಶ್ಯ ಗ್ರೂಪ್, ಸ್ಥಳ: ಶುಭ್ ಕನ್ವೆನ್ಷನ್ ಸೆಂಟರ್, ಜೆ.ಪಿ ನಗರ 7ನೇ ಹಂತ, ಬೆಳಿಗ್ಗೆ 10

ದಲಿತ ಉದ್ದಿಮೆದಾರರ ಸಮಾವೇಶ: ಉದ್ಘಾಟನೆ: ಶೋಭಾ ಕರಂದ್ಲಾಜೆ, ಮುಖ್ಯ ಅತಿಥಿಗಳು: ಸತೀಶ್ ಜಾರಕಿಹೊಳಿ, ಎಚ್.ಸಿ. ಮಹದೇವಪ್ಪ, ಎಂ.ಬಿ. ಪಾಟೀಲ, ಶರಣಬಸಪ್ಪ ದರ್ಶನಾಪುರ, ಜಿ. ಕುಮಾರ್ ನಾಯ್ಕ್, ಎಂ. ಮಲ್ಲೇಶ್ ಬಾಬು, ಅಧ್ಯಕ್ಷತೆ: ಎಲ್. ಹನುಮಂತಯ್ಯ, ಆಯೋಜನೆ: ಕರ್ನಾಟಕ ದಲಿತ ಉದ್ದಿಮೆದಾರರ ಸಂಘ, ಸ್ಥಳ: ತಾಜ್ ವೆಸ್ಟ್ ಎಂಡ್, ರೇಸ್ ಕೋರ್ಸ್ ರಸ್ತೆ, ಬೆಳಿಗ್ಗೆ 10.30

ಸೌಂದರ್ಯ ಸುಧೆ: ವಿಷಯ: 'ರಾಗಿ ಔತಣಕೂಟ', ಮುಖ್ಯ ಅತಿಥಿ: ಚ.ಹ. ರಘುನಾಥ, ಆಯೋಜನೆ ಹಾಗೂ ಸ್ಥಳ: ಸೌಂದರ್ಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಬೆಳಿಗ್ಗೆ 11

'ಜೀನ್ ಥೆರಪಿ ಮತ್ತು ಪ್ರೆಸಿಷನ್ ಮೆಡಿಸಿನ್' ಸಮ್ಮೇಳನ: ಮುಖ್ಯ ಅತಿಥಿಗಳು: ನ್ಯಾ.ಡಿ.ವೈ. ಚಂದ್ರಚೂಡ್, ಕಲ್ಪನಾ ದಾಸ್, ದಿನೇಶ್ ಗುಂಡೂರಾವ್, ಶಾಲಿನಿ ರಜನೀಶ್, ಆಯೋಜನೆ: ನಾರಾಯಣ ನೇತ್ರಾಲಯ ಫೌಂಡೇಶನ್, ಸ್ಥಳ: ಶೆರಟನ್ ಗ್ರ್ಯಾಂಡ್, ಬ್ರಿಗೇಡ್ ಗೇಟ್‌ವೆ, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಳಿಗ್ಗೆ 11

2024ನೇ ಸ್ನಾತಕೋತ್ತರ ಪದವಿ ಬ್ಯಾಚ್ ಉದ್ಘಾಟನೆ: ತೇಜಸ್ವಿಸೂರ್ಯ, ಅಧ್ಯಕ್ಷತೆ: ಎ.ವಿ.ಎಸ್. ಮೂರ್ತಿ, ಆಯೋಜನೆ: ಆರ್.ವಿ.ವಿಶ್ವವಿದ್ಯಾಲಯ, ಸ್ಥಳ: ಮಾತಾ ಹಾಲ್, ಪೂರ್ಣಿಮಾ ಪ್ಯಾಲೇಸ್, ಪಟ್ಟಣಗೆರೆ ಮುಖ್ಯ ರಸ್ತೆ, ಬೆಳಿಗ್ಗೆ 11

ತಿಂಗಳ ನಾಟಕ ಸಂಭ್ರಮ

ಮಾಲತಿಶ್ರೀ ಮೈಸೂರು

ಅತಿಥಿ: ಮಾಲತಿಶ್ರೀ ಮೈಸೂರು, 'ಕಾಲಚಕ್ರ' ನಾಟಕ ಪ್ರದರ್ಶನ: ನಿರ್ದೇಶನ: ಹುಲಗಪ್ಪ ಕಟ್ಟಿಮನಿ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30



ಶೋಭಾ ಕರಂದ್ಲಾಜೆ ಜತೆಗೆ ಸಂವಾದ: ಅಧ್ಯಕ್ಷತೆ: ಎಂ.ಜಿ. ರಾಜಗೋಪಾಲ್, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ), ವಿಜಯನಗರ, ಸಂಜೆ 4

ರೇಷ್ಮೆ ಕೃಷಿ-ಪಾಲುದಾರರ ಸಭೆ, ಸಿಎಸ್‌ಬಿ- ಅಮೃತ ಮಹೋತ್ಸವ ಆಚರಣೆ: ಮುಖ್ಯ ಅತಿಥಿ: ಗಿರಿರಾಜ್ ಸಿಂಗ್, ಉಪಸ್ಥಿತಿ: ಶೋಭಾ ಕರಂದ್ಲಾಜೆ, ವಿ. ಸೋಮಣ್ಣ, ಕೆ. ವೆಂಕಟೇಶ್, ಪಿ.ಸಿ. ಮೋಹನ್, ತೇಜಸ್ವಿಸೂರ್ಯ, ಆಯೋಜನೆ: ಕೇಂದ್ರ ರೇಷ್ಮೆ ಮಂಡಳಿ, ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ ಆವರಣ, ಮಧ್ಯಾಹ್ನ 2.30

ಕರ್ನಾಟಕ ಜಾನಪದ ಪರಿಷತ್ ಮಹಾಲಕ್ಷ್ಮೀ ಲೇಔಟ್ ವಿಧಾನಸಭೆ ಕ್ಷೇತ್ರ ಘಟಕ ಉದ್ಘಾಟನೆ, ಪದಗ್ರಹಣ ಹಾಗೂ ವಿಶ್ವ ಜಾನಪದ ದಿನಾಚರಣೆ ಸಮಾರಂಭ: ಉದ್ಘಾಟನೆ: ಜಾನಪದ ಎಸ್. ಬಾಲಾಜಿ, ಅಧ್ಯಕ್ಷತೆ: ರಿಯಾಜ್ ಪಾಷ, ಪ್ರಾಸ್ತಾವಿಕ ನುಡಿ: ವಿಜಯಲಕ್ಷ್ಮಿ ಸತ್ಯಮೂರ್ತಿ, ಮುಖ್ಯ ಅತಿಥಿಗಳು: ಎಸ್. ಷಡಕ್ಷರಿ, ಎಸ್.ಎ. ಚಿನ್ನೇಗೌಡ, ಸ್ಥಳ: ಬಿಬಿಎಂಪಿ ಯೋಗ ಕೇಂದ್ರ, ಇಂಡಿಯನ್ ನ್ಯಾಷನಲ್ ಸ್ಕೂಲ್ ಎದುರು, ನಂದಿನಿ ಬಡಾವಣೆ, ಸಂಜೆ 4

ಸುಬ್ಬು ಹೊಲೆಯಾರ್ ಅವರ 'ದುಃಖ ಆರದ ನೆಲದಲ್ಲಿ' ಪುಸ್ತಕ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಎನ್. ವೆಂಕಟೇಶ್, ಮುಖ್ಯ ಅತಿಥಿಗಳು: ನೆಲ್ಲುಕುಂಟೆ ವೆಂಕಟೇಶ್, ಕೆ.ಪಿ. ಅಶ್ವಿನಿ, ಆಯೋಜನೆ: ಕೌದಿ ಪ್ರಕಾಶನ, ತಮಟೆ ಮೀಡಿಯಾ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5

ಲೇಖಕರ ಜತೆಗೆ ಸೆಲ್ಫಿ ಮತ್ತು ಹಸ್ತಾಕ್ಷರ: ಹರ್ಷ ರಘುರಾಮ್, ಆಯೋಜನೆ ಮತ್ತು ಸ್ಥಳ: ಸಪ್ನ ಬುಕ್ ಹೌಸ್, ಜಯನಗರ 4ನೇ ಬ್ಲಾಕ್, ಸಂಜೆ 6

ವಜ್ರ ಮಹೋತ್ಸವ ಸಂಭ್ರಮ: ಗಾಯನ: ಎಸ್.ಆರ್. ಮಾರುತಿ ಪ್ರಸಾದ್, ಪಿಟೀಲು: ಜಿ. ವೆಂಕಟೇಶ ಜೋಯಿಸರ್, ಮೃದಂಗ: ಎಚ್.ಎಸ್. ಕೃಷ್ಣಮೂರ್ತಿ, ಮೋರ್ಸಿಂಗ್: ಲಿಖಿತ್ ಕೆ.ಎಂ., ಆಯೋಜನೆ: ನಾದ್ಯಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6

ಕಾವೇರಿ ಆರತಿ ಅಧ್ಯಯನ ಸಮಿತಿ ಅಧ್ಯಕ್ಷ ಎನ್. ಚಲುವರಾಯಸ್ವಾಮಿ ಹೇಳಿಕೆ

ದಸರಾ ವೇಳೆಗೆ 'ಕಾವೇರಿ ಆರತಿ': ಚಿಂತನೆ

● ಕೆ.ಎಸ್.ಸುನಿಲ್

ಹರಿದ್ವಾರ: ಗಂಗಾ ನದಿಗೆ ಮಾಡುವ 'ಗಂಗಾ ಆರತಿ' ಮಾದರಿಯಲ್ಲಿ ಕಾವೇರಿ ನದಿಗೆ 'ಕಾವೇರಿ ಆರತಿ'ಯನ್ನು ದಸರಾ ಆರಂಭಕ್ಕೂ ಮುನ್ನವೇ ನಡೆಸಲು ಯೋಚಿಸಲಾಗಿದೆ ಎಂದು ಕೃಷಿ ಸಚಿವ ಹಾಗೂ ಕಾವೇರಿ ಆರತಿ ಅಧ್ಯಯನ ಸಮಿತಿ ಅಧ್ಯಕ್ಷ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಹಳೇ ಮೈಸೂರು ಭಾಗದ ಶಾಸಕರ ನಿಯೋಗದೊಂದಿಗೆ ಹರಿದ್ವಾರದಲ್ಲಿ ಶುಕ್ರವಾರ ಸಂಜೆ ಗಂಗಾ ಆರತಿ ವೀಕ್ಷಣೆ ಜತೆಗೆ ಪೂಜೆಯಲ್ಲಿ ಭಾಗಿಯಾದ ಬಳಿಕ ಅವರು ಮಾತನಾಡಿದರು.

'ಕಾವೇರಿ ಆರತಿಗೆ ಎರಡು, ಮೂರು ಸ್ಥಳಗಳನ್ನು ಗುರುತಿಸಲಾಗಿದೆ. ಅಂತಿಮಗೊಂಡ ಸ್ಥಳದಲ್ಲಿ ಆರತಿಗಾಗಿ ಸೋಪಾನಕಟ್ಟೆ ನಿರ್ಮಿಸಲಾಗುವುದು. ಹರಿದ್ವಾರದಲ್ಲಿ ನಿತ್ಯ ಗಂಗಾ ಆರತಿ ನಡೆಯುತ್ತಿದೆ. ರಾಜ್ಯದಲ್ಲಿ ವಾರದಲ್ಲಿ ಎರಡು ಅಥವಾ ಮೂರು ದಿನ ಆರತಿ ಮಾಡಬೇಕೇ? ನಿತ್ಯ ಆರತಿ ನಡೆಸಬೇಕೇ ಎಂಬುದರ ಬಗ್ಗೆ ಸಮಿತಿ ಜತೆ ಚರ್ಚಿಸಿ ನಿರ್ಧರಿಸಲಾಗುವುದು' ಎಂದರು.

ಆರಂಭದಲ್ಲಿ ಹರಿದ್ವಾರ ಮತ್ತು ವಾರಾಣಸಿಯ ಸಾಧು, ಸಂತರನ್ನು ಆಹ್ವಾನಿಸಿ ಅವರಿಂದ ಕಾವೇರಿ ಆರತಿ ನಡೆಸಲಾಗುತ್ತದೆ. ಬಳಿಕ ಅವರಿಂದಲೇ ಸ್ಥಳೀಯ ವೈದಿಕರಿಗೆ ತರಬೇತಿ ಕೊಡಿಸಿ ಕಾವೇರಿ ಆರತಿ ಮುಂದುವರಿಸಲಾಗುವುದು ಎಂದರು.

ಹರಿದ್ವಾರದಲ್ಲಿ ಗಂಗಾ ನದಿಗೆ ಗಂಗಾ ಆರತಿ ಮಾಡಲಾಯಿತು

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಶಾಸಕರು ಗಂಗಾ ಆರತಿ ಪೂಜೆಯಲ್ಲಿ ಭಾಗವಹಿಸಿದ್ದರು

ಹರಿದ್ವಾರದ ಗಂಗಾ ಮಹಾಸಭಾದ ಸಮಿತಿಯ ಪದಾಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಲಾಗಿದೆ. ಗಂಗಾ ಆರತಿ ಇತಿಹಾಸದ ಬಗ್ಗೆ ಮಾಹಿತಿ ನೀಡಿದ್ದಾರೆ. ಕೆಲವು ಸಲಹೆಗಳನ್ನು ನೀಡಿದ್ದಾರೆ ಎಂದು ಹೇಳಿದರು.

ಶನಿವಾರ ವಾರಾಣಸಿಗೆ ತೆರಳಿ ದಶಾಶ್ವಮೇಧ ಘಾಟ್‌ನಲ್ಲಿ ಗಂಗಾ ಆರತಿ ವೀಕ್ಷಿಸಲಾಗುವುದು. ಭಾನುವಾರ ವಿಶ್ವನಾಥ ದೇವಸ್ಥಾನಕ್ಕೆ ಭೇಟಿ ನೀಡುವುದರ ಜೊತೆಗೆ ಘಾಟ್‌ನಲ್ಲಿ ಸಂಚರಿಸಿ, ಅಲ್ಲಿನ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗುವುದು ಎಂದರು.

ಹರಿ ಕಿ ಪೌಡಿಯ ಗಂಗಾ ಮಹಾಸಭಾ ಅಧ್ಯಕ್ಷ ನಿತಿನ್ ಗೌತಮ್, ಮಹಾಮಂತ್ರಿ ತನ್ಮಯ್ ವಶಿಷ್ಠ, ಸ್ವಾಗತ ಮಂತ್ರಿ ಡಾ.ಸಿದ್ಧಾರ್ಥ್ ಚಕ್ರಪಾಣಿ, ಗಂಗಾ ಸೇವಾ ಸಚಿವ ಉಜ್ವಲ್ ಪಂಡಿತ್ ಅವರನ್ನು ಒಳಗೊಂಡ ತಂಡವು ಕರ್ನಾಟಕದ ನಿಯೋಗವನ್ನು ಬರಮಾಡಿಕೊಂಡು ಪೂಜಾ ಕಾರ್ಯ ನೆರವೇರಿಸಿತು.

ಮಂಡ್ಯದ ಬೂದನೂರು ಉತ್ಸವ ಸಂದರ್ಭದಲ್ಲಿ ಶಾಸಕ ರವಿ ಗಣಿಗ ಅವರು ಗಂಗಾ ಆರತಿ ಮಾದರಿಯಲ್ಲಿ ವಾರಾಣಸಿಯಿಂದ ವೈದಿಕರ ತಂಡವನ್ನು ಕರೆಸಿ ಬೂದನೂರು ಗ್ರಾಮದ ಕಾಶಿ ವಿಶ್ವನಾಥ ದೇವರಿಗೆ ಆರತಿ ನೆರವೇರಿಸಿ ಗಮನ ಸೆಳೆದಿದ್ದರು. ಇದರ ಬೆನ್ನಲ್ಲೇ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಕೂಡ ಗಂಗಾ ಆರತಿ ಮಾದರಿಯಲ್ಲೇ ಮಂಡ್ಯ ಜಿಲ್ಲೆಯಲ್ಲೂ ಕಾವೇರಿ ಆರತಿ ಕಾರ್ಯಕ್ರಮ ನಡೆಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿ ಒತ್ತಾಯ ಮಾಡಿದ್ದರು.

ಶಾಸಕರಾದ ಪಿ.ಎಂ. ನರೇಂದ್ರಸ್ವಾಮಿ, ರಮೇಶ್ ಬಂಡಿಸಿದ್ದೇಗೌಡ, ರವಿಕುಮಾರ್, ಕೆ.ಎಂ.ಉದಯ್, ದಿನೇಶ್ ಗೂಳಿಗೌಡ, ಎನ್.ಸಿ.ಬಾಲಕೃಷ್ಣ, ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ಕೆ.ಎಂ. ಶಿವಲಿಂಗೇಗೌಡ, ಎ.ಆರ್. ಕೃಷ್ಣಮೂರ್ತಿ ಮತ್ತಿತರರು ಭಾಗವಹಿಸಿದ್ದರು.

ಬೈದ್ಯನಾಥ್
ನಾಗಪುರ
ಅಸಲಿ ಆಯುರ್ವೇದ
ಪೈಲ್ಸ್?
ಅನಾನುಕೂಲತೆ ಮತ್ತು ನೋವಿನಿಂದ ಸಾಕಾಗಿದೆಯೆ?
ಸಿಡ್‌ಪೈಲ್ಸ್
ಟ್ಯಾಬ್ಲೆಟ್
ರಕ್ತಸ್ರಾವ ಮತ್ತು ರಕ್ತಸ್ರಾವರಹಿತ ಮೂಲವ್ಯಾಧಿ, ಫಿಸ್ತೂಲಾ & ಫಿಶ್ಯೂರ್. ಗುದದ್ವಾರದಲ್ಲಿ ಮಲಬದ್ಧತೆ ಊತ, ಉರಿಯೂತ, ನೋವು, ತುರಿಕೆ ಮತ್ತು ಕೆರೆತಗಳಂತಹ ಮೂಲ ವ್ಯಾಧಿ ಸಮಸ್ಯೆಗಳನ್ನು ನಿವಾರಿಸಲು ಸಹಕಾರಿಯಾಗಿದೆ.

ಅಭಯಾಮೃತ
ದೀರ್ಘಕಾಲೀನ ಮಲಬದ್ಧತೆ ಹಾಗೂ ಜೀರ್ಣಕ್ರಿಯೆ ಸುಧಾರಣೆಗೆ ನೆರವಾಗುತ್ತದೆ

Customer Care : +91 844 844 4935
www.baidyanath.co

ಕಾರಾಗೃಹದ ಸಿಬ್ಬಂದಿ ನೆರವು • ಜೈಲಿನಲ್ಲಿ ನಟ ದರ್ಶನ್‌ಗೆ ವಿಶೇಷ ಆತಿಥ್ಯ ನೀಡಿದ್ದ ಪ್ರಕರಣದ ತನಿಖೆ

ಜೈಲೊಳಗೆ ಮೊಬೈಲ್ ಅಂಗಡಿ: ಕೈದಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಜೈಲಿನಲ್ಲಿ ನಟ ದರ್ಶನ್ ಅವರಿಗೆ ವಿಶೇಷ ಆತಿಥ್ಯ ಕಲ್ಪಿಸಿದ್ದ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಆಗ್ನೇಯ ವಿಭಾಗದ ಪೊಲೀಸರು, ಮತ್ತೊಬ್ಬ ವಿಚಾರಣಾಧೀನ ಕೈದಿಯನ್ನು ತಮ್ಮ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿರುವ ಕೋಲಾರ ಜಿಲ್ಲೆಯ ಕೆಜಿಎಫ್‌ನ ವಿಜಯ್‌ನನ್ನು ಹುಳಿಮಾವು ಇನ್‌ಸ್ಪೆಕ್ಟರ್ ನೇತೃತ್ವದ ತಂಡವು ಕಸ್ಟಡಿಗೆ ಪಡೆದುಕೊಂಡಿದ್ದು, ವಿಚಾರಣೆ ನಡೆಸುತ್ತಿದೆ. ಇನ್ನು ಪೊಲೀಸ್ ಕಸ್ಟಡಿಯಲ್ಲಿರುವ ವಿಲ್ಸನ್ ಗಾರ್ಡನ್ ನಾಗ ಅಲಿಯಾಸ್ ನಾಗರಾಜ್ ಹಾಗೂ ವೇಲು ಅವರ ವಿಚಾರಣೆ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

'ಜೈಲಿನೊಳಗೆ ಇತರೆ ಕೈದಿಗಳಿಗೆ ವಿಜಯ್ ಮೊಬೈಲ್ ಫೋನ್ ವ್ಯವಸ್ಥೆ ಮಾಡುತ್ತಿದ್ದ. ಇದಕ್ಕೆ ಪೂರಕ ಸಾಕ್ಷ್ಯಾಧಾರಗಳು ಸಿಕ್ಕಿವೆ. ಹೀಗಾಗಿ, ಆತನನ್ನು ಕಸ್ಟಡಿಗೆ ಪಡೆದುಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಜೈಲಿನ ಒಳಗೆ ವಿಜಯ್ ಮೊಬೈಲ್ ಫೋನ್‌ಗಳ ಅಂಗಡಿಯನ್ನೇ ತೆರೆದಿದ್ದ. ಜೈಲು ಸಿಬ್ಬಂದಿಯ ನೆರವು ಪಡೆದು ಸ್ಮಾರ್ಟ್‌ಫೋನ್‌ಗಳನ್ನು ಹೊರಗಿನಿಂದ ಖರೀದಿಸಿ, ತರಿಸುತ್ತಿದ್ದ. ಅದನ್ನು ಒಳಗಿದ್ದ ಕೈದಿಗಳಿಗೆ ಮಾರಾಟ ಮಾಡುತ್ತಿದ್ದ. ಇದೇ ಕಾರಣದಿಂದ ಕೈದಿಗಳಿಗೆ ಮೊಬೈಲ್‌ಗಳು ಸುಲಭವಾಗಿ ಸಿಗುತ್ತಿದ್ದವು' ಎಂದು ತನಿಖಾ ಮೂಲಗಳು ತಿಳಿಸಿವೆ.

'ಸೆ.15ರಂದು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ಸಿಸಿಬಿ ದಾಳಿ ನಡೆಸಿದಾಗ 26 ಮೊಬೈಲ್ ಫೋನ್‌ಗಳು ಪತ್ತೆಯಾಗಿದ್ದವು. ಅದರ ಜಾಡು ಹಿಡಿದು ತನಿಖೆ ನಡೆಸಿದಾಗ ವಿಜಯ್ ಮೊಬೈಲ್ ಫೋನ್ ಪೂರೈಸುತ್ತಿದ್ದ ಎಂಬುದು ಗೊತ್ತಾಗಿದೆ. ವಿಲ್ಸನ್ ಗಾರ್ಡನ್ ನಾಗ ಹಾಗೂ ವೇಲು ಬಳಿಯೂ ಮೊಬೈಲ್ ಫೋನ್‌ಗಳು ಸಿಕ್ಕಿವೆ' ಎಂದು ಮೂಲಗಳು ಹೇಳಿವೆ.

'ಇದುವರೆಗೂ ಮೂವರನ್ನು ಕಸ್ಟಡಿಗೆ ಪಡೆದುಕೊಳ್ಳಲಾಗಿದ್ದು, ಇವರು ನೀಡಿದ ಹೇಳಿಕೆ ಆಧರಿಸಿ ಇನ್ನಷ್ಟು ರೌಡಿಶೀಟರ್ ಕೈದಿಗಳನ್ನು ಕಸ್ಟಡಿಗೆ ಪಡೆದುಕೊಳ್ಳಲಾಗುವುದು' ಎಂದು ಮೂಲಗಳು ತಿಳಿಸಿವೆ.

'ಜೈಲಿಗೆ ಯಾರು ಮೊಬೈಲ್ ಫೋನ್ ತಂದುಕೊಡುತ್ತಿದ್ದರು. ಎಲೆಕ್ಟ್ರಿಕ್ ಸ್ಟೌಗಳನ್ನು ಯಾವ ಉದ್ದೇಶಕ್ಕೆ ಬ್ಯಾರಕ್‌ನಲ್ಲಿ ಇಟ್ಟುಕೊಳ್ಳಲಾಗಿತ್ತು ಎಂಬ ಪ್ರಶ್ನೆಗಳನ್ನು ನಾಗ ಹಾಗೂ ವೇಲುಗೆ ಕೇಳಿ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಸಿಎನ್‌ಜಿ ಚಾಲಿತ ಕಾರು ಬೆಂಕಿಗೆ ಆಹುತಿ

ಬೆಂಗಳೂರು: ರಸ್ತೆಬದಿಯಲ್ಲಿ ನಿಲುಗಡೆ ಮಾಡಿದ್ದ ಸಿಎನ್‌ಜಿ ಚಾಲಿತ ಕಾರು ಬೆಂಕಿಗೆ ಆಹುತಿಯಾಗಿದ್ದು, ಈ ಸಂಬಂಧ ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಲಸ ಮುಗಿಸಿಕೊಂಡು ಬಂದಿದ್ದ ಕ್ಯಾಬ್ ಚಾಲಕ ಗುರುವಾರ ತಡರಾತ್ರಿ ರಸ್ತೆಬದಿಯಲ್ಲಿ ಕಾರು ನಿಲ್ಲಿಸಿದ್ದರು. ಅದೇ ಕಾರಿನಲ್ಲಿ ಚಾಲಕ ನಿದ್ರಿಸುತ್ತಿದ್ದರು. ಕಾರಿನ ಕಿಟಕಿ ತೆರೆದುಕೊಂಡಿದ್ದರು. ರಾತ್ರಿ 2 ಗಂಟೆ ಸುಮಾರಿಗೆ ಇದ್ದಕ್ಕಿದ್ದ ಹಾಗೆ ಕಾರಿನ ಹಿಂಭಾಗದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಮಲಗಿದ್ದ ಚಾಲಕ ಕೂಡಲೇ ಕಾರಿನಿಂದ ಕೆಳಕ್ಕೆ ಇಳಿದು ಅಗ್ನಿಶಾಮಕ ಠಾಣೆಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ತಕ್ಷಣ ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಅಷ್ಟರಲ್ಲಿ ಕಾರು ಭಾಗಶಃ ಬೆಂಕಿಗೆ ಆಹುತಿ ಆಗಿತ್ತು' ಎಂದು ಮೂಲಗಳು ತಿಳಿಸಿವೆ.

'ಕಾರಿಗೆ ಕಿಡಿಗೇಡಿಗಳು ಉದ್ದೇಶ ಪೂರ್ವಕವಾಗಿ ಬೆಂಕಿ ಹಚ್ಚಿರುವ ಸಾಧ್ಯತೆಯಿದೆ ಎಂದು ಆರೋಪಿಸಿ ದೂರು ನೀಡಿದ್ದಾರೆ. ದೂರು ಆಧರಿಸಿ, ಕಾರು ನಿಂತಿದ್ದ ಜಾಗದ ಅಕ್ಕಪಕ್ಕ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿ ಪರಿಶೀಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಎಎಸ್‌ಐ ಸಮಯಪ್ರಜ್ಞೆ : ಚಾಲಕ, ಪ್ರಯಾಣಿಕರು ಪಾರು

ಬೆಂಗಳೂರು: ಶಾಂತಿನಗರದ ಬಳಿ ಬಿಎಂಟಿಸಿ ಬಸ್ ಚಲಾಯಿಸುತ್ತಿದ್ದ ವೇಳೆ ಚಾಲಕನಿಗೆ ಎದೆನೋವು ಕಾಣಿಸಿಕೊಂಡಿದ್ದನ್ನು ಗಮನಿಸಿದ ಸಂಚಾರ ವಿಭಾಗದ ಎಎಸ್‌ಐ, ಬಸ್‌ನ ಒಳಕ್ಕೆ ಹೋಗಿ ಹ್ಯಾಂಡ್ ಬ್ರೇಕ್ ಹಾಕಿ ಸಂಭವಿಸಬಹುದಾಗಿದ್ದ ಅನಾಹುತ ತಪ್ಪಿಸಿದ್ದಾರೆ. ಎಎಸ್‌ಐ ಅವರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

ಹಲಸೂರು ಗೇಟ್ ಸಂಚಾರ ಠಾಣೆಯ ಎಎಸ್‌ಐ ರಘುಕುಮಾರ್ ಅನಾಹುತ ತಪ್ಪಿಸಿದವರು.

ಶಾಂತಿನಗರದ ಜೋಡಿರಸ್ತೆಯಲ್ಲಿ ಚಾಲಕ ವೀರೇಶ್ ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಚಲಾಯಿಸಿಕೊಂಡು ಹೋಗುತ್ತಿದ್ದರು. ಮಾರ್ಗಮಧ್ಯೆ ಅವರಿಗೆ ಎದೆನೋವು ಕಾಣಿಸಿಕೊಂಡಿತ್ತು. ವೀರೇಶ್ ಚಾಲಕನ ಸೀಟಿನಲ್ಲೇ ಒಂದು ಕಡೆ ವಾಲಿದ್ದರು. ಹೀಗಾಗಿ, ಬಸ್ ನಿಧಾನವಾಗಿ ಚಲಿಸುತ್ತಿತ್ತು. ಆ ವೇಳೆ ಶಾಂತಿನಗರ ಜಂಕ್ಷನ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ರಘುಕುಮಾರ್ ಅವರು ಅದನ್ನು ಗಮನಿಸಿದ್ದರು. ತಕ್ಷಣವೇ ಅವರು ಡ್ರೈವರ್ ಸೀಟು ಭಾಗದಲ್ಲಿರುವ ಬಾಗಿಲು ತೆರೆದು ಸಿನಿಮೀಯ ಶೈಲಿಯಲ್ಲಿ ಒಳಕ್ಕೆ ಹೋಗಿ ಚಾಲಕನ ಸೀಟಿನ ಪಕ್ಕದಲ್ಲಿದ್ದ ಹ್ಯಾಂಡ್ ಬ್ರೇಕ್ ಹಾಕಿ ಬಸ್ ಅನ್ನು ನಿಲ್ಲಿಸಿದ್ದರು. ಬಸ್‌ನ ನಿರ್ವಾಹಕನ ಸಹಾಯದಿಂದ ವೀರೇಶ್ ಅವರನ್ನು ಬಸ್ಸಿನಿಂದ ಕೆಳಕ್ಕೆ ಇಳಿಸಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದರು. ಅವರು ಅಪಾಯದಿಂದ ಪಾರಾಗಿದ್ದಾರೆ.

ಬಸ್‌ನಲ್ಲಿ ಸುಮಾರು 30ಕ್ಕೂ ಹೆಚ್ಚು ಪ್ರಯಾಣಿಕರಿದ್ದರು. ರಘುಕುಮಾರ್ ಅವರು ಹ್ಯಾಂಡ್ ಬ್ರೇಕ್ ಹಾಕದಿದ್ದರೆ ಬಸ್ ಇತರೆ ವಾಹನಗಳಿಗೆ ಡಿಕ್ಕಿ ಹೊಡೆಯುವ ಸಂಭವವಿತ್ತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಸಂಚಾರ ಪೊಲೀಸ್ ಸಿಬ್ಬಂದಿಯ ಸಮಯ ಪ್ರಜ್ಞೆಯಿಂದ ಪ್ರಯಾಣಿಕರು ಮತ್ತು ಚಾಲಕ ವೀರೇಶ್ ಅವರ ಪ್ರಾಣ ಉಳಿದಿದೆ ಎಂದು ಬಸ್‌ನಲ್ಲಿದ್ದವರು ತಿಳಿಸಿದರು.

ಸುದ್ದಿ 2 ನಿಮಿಷ

ಭಗವಾಧ್ವಜಕ್ಕೆ ಹಾನಿ ಇಬ್ಬರ ವಿರುದ್ಧ ಪ್ರಕರಣ

ತುಮಕೂರು: ನಗರದಲ್ಲಿ ಗಣಪತಿ ವಿಸರ್ಜನೆ ಕುರಿತು ಪ್ರಚಾರ ಮಾಡುತ್ತಿದ್ದ ಆಟೊ ತಡೆದು, ಪ್ರಚಾರಕ್ಕೆ ಅಡ್ಡಿಪಡಿಸಿ ಭಗವಾಧ್ವಜಕ್ಕೆ ಹಾನಿ ಮಾಡಿದ ಆರೋಪದ ಮೇಲೆ ನಗರದ ಇರ್ಷಾದ್, ಇಲಿಯಾಸ್ ಎಂಬುವರ ವಿರುದ್ಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಗುಬ್ಬಿ ಗೇಟ್ ಸಮೀಪ ಆಟೊ ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಆಟೊಗೆ ಕಟ್ಟಿದ್ದ ಭಗವಾಧ್ವಜ ಮುರಿದು ಪ್ರಚಾರ ನಿಲ್ಲಿಸು, ಇಲ್ಲದಿದ್ದರೆ ಇಲ್ಲಿಯೇ ಮುಗಿಸಿಬಿಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿದರು. ದ್ವೇಷ ಭಾವನೆಯಿಂದ ಇಂತಹ ಕೆಲಸ ಮಾಡಿದ್ದಾರೆ' ಎಂದು ಆಟೊ ಚಾಲಕ ಸಿದ್ದಲಿಂಗ ಆರಾಧ್ಯ ಎಂಬುವರು ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಪ್ಯಾಲೆಸ್ಟೀನ್ ಧ್ವಜ ಹಾರಾಟ

ಚಿಕ್ಕೋಡಿ: ಪಟ್ಟಣದಲ್ಲಿ ಶುಕ್ರವಾರ ಸಂಜೆ ನಡೆದ ಈದ್ ಮಿಲಾದ್ ಮೆರವಣಿಗೆಯಲ್ಲಿ ಪ್ಯಾಲೆಸ್ಟೀನ್ ಧ್ವಜ ಹಾರಿಸಿ ನೃತ್ಯ ಮಾಡಲಾಗಿದೆ. ಧ್ವಜ ವಶಕ್ಕೆ ಪಡೆದ ಪೊಲೀಸರು, ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ನಾಲ್ವರನ್ನು ವಶಕ್ಕೆ ಪಡೆದಿದ್ದಾರೆ.

ಪಟ್ಟಣದ ಮುಖ್ಯರಸ್ತೆಯಲ್ಲಿ ಮೆರವಣಿಗೆ ಸಾಗುವಾಗ, ಯುವಕರು ಪ್ಯಾಲೆಸ್ಟೀನ್ ಧ್ವಜವನ್ನು ಪೈಪಿಗೆ ಕಟ್ಟಿ ಬೀಸುತ್ತ ಸಾಗಿದರು. ಅದರ ಹಿಂದೆ ಭಾರತದ ಧ್ವಜವೂ ಇತ್ತು. ಯುವಕರು ನೃತ್ಯ ಮಾಡಿದರು. ಇದರ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು. ತಕ್ಷಣವೇ ಚಿಕ್ಕೋಡಿ ಠಾಣೆ ಪೊಲೀಸರು ಸ್ಥಳಕ್ಕೆ ಬಂದು, ಧ್ವಜ ವಶಕ್ಕೆ ಪಡೆದರು. ನಂತರ ಮೆರವಣಿಗೆ ಸಾಂಗವಾಗಿ ನಡೆಯಿತು.

ಚಿನ್ನದ ಸರ ಕಸಿದು ಪರಾರಿ: ಕಳ್ಳನ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃದ್ಧೆಯರನ್ನೇ ಗುರಿಯಾಗಿಸಿ ಸರಗಳ್ಳತನ ಮಾಡುತ್ತಿದ್ದ ಕಳ್ಳನನ್ನು ರಾಜರಾಜೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸುರೇಶ್ ಅಲಿಯಾಸ್ ಸೂರ್ಯ (28) ಬಂಧಿತ.

ಬಂಧಿತನಿಂದ ₹3.12 ಲಕ್ಷ ಮೌಲ್ಯದ 50 ಗ್ರಾಂ ಚಿನ್ನದ ಸರ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಯು ಸ್ಕೂಟರ್‌ನಲ್ಲಿ ಸಂಚರಿಸುತ್ತಾ ಒಂಟಿಯಾಗಿ ಓಡಾಡುತ್ತಿದ್ದ ವೃದ್ಧೆಯರನ್ನೇ ಗುರಿಯಾಗಿಸಿ ಮಾಂಗಲ್ಯ ಸೇರಿದಂತೆ ಚಿನ್ನದ ಸರಗಳನ್ನು ಕಸಿದುಕೊಂಡು ಪರಾರಿಯಾಗುತ್ತಿದ್ದ. ಇತ್ತೀಚೆಗೆ ಆರ್.ಆರ್. ನಗರದ ಕುವೆಂಪು ವೃತ್ತದಲ್ಲಿ ವೃದ್ಧೆಯೊಬ್ಬರು ನಡೆದುಕೊಂಡು ಹೋಗುತ್ತಿದ್ದಾಗ ಚಿನ್ನದ ಸರ ಕಸಿದುಕೊಂಡು ಪರಾರಿಯಾಗಿದ್ದ. ಆರೋಪಿ ವಿರುದ್ಧ ಆರ್.ಆರ್. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ ಪೊಲೀಸರು ಆರೋಪಿಯನ್ನು ಪತ್ತೆ ಹಚ್ಚಿ ಬಂಧಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ

ಮೆಟ್ರೊ ತಡೆಗೋಡೆಗೆ ಲಾರಿ ಡಿಕ್ಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಲಕನ ನಿಯಂತ್ರಣ ತಪ್ಪಿ, 10 ಚಕ್ರದ ಲಾರಿಯೊಂದು ಶುಕ್ರವಾರ ಬೆಳಿಗ್ಗೆ ನಾಗವಾರ–ಹೆಬ್ಬಾಳ ಮಾರ್ಗದ ಕೆಂಪಾಪುರ ಬಳಿ ನಿರ್ಮಾಣ ಹಂತದ ಮೆಟ್ರೊ ತಡೆಗೋಡೆಗೆ ಡಿಕ್ಕಿ ಹೊಡೆದ ಪರಿಣಾಮ ಈ ಭಾಗದಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು.

ಬೆಳಿಗ್ಗೆ 7ರ ಸುಮಾರಿಗೆ ಕೆಂಪಾಪುರದ ವೆಂಕಟ್ ಕೆಫೆ ಬಳಿ ಅಪಘಾತ ಸಂಭವಿಸಿತ್ತು. ಚಾಲಕನ ನಿಯಂತ್ರಣ ತಪ್ಪಿ ನಿರ್ಮಾಣ ಹಂತದ ತಡೆಗೋಡೆಗೆ ಡಿಕ್ಕಿಯಾಗಿದೆ. ಬಳಿಕ ಲಾರಿ ರಸ್ತೆಗೆ ಅಡ್ಡಲಾಗಿ ನಿಂತಿದ್ದರಿಂದ ಸಂಚಾರ ದಟ್ಟಣೆ ಉಂಟಾಗಿತ್ತು. ಬೆಳಿಗ್ಗೆ ಕೆಲಸಕ್ಕೆ ತೆರಳುವವರು ಹಾಗೂ ಆಸ್ಪತ್ರೆಗೆ ತೆರಳುತ್ತಿದ್ದ ರೋಗಿಗಳು ಪರದಾಡುವಂತಾಯಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಹೆಬ್ಬಾಳದಿಂದ ರಾಮಮೂರ್ತಿ ನಗರದವರೆಗೆ ಒಂದು ತಾಸು ಸಂಚಾರ ವ್ಯತ್ಯಯ ಉಂಟಾಗಿತ್ತು. ವಾಹನಗಳು ನಿಂತಲ್ಲೇ ನಿಂತಿದ್ದವು. ನಂತರ, ಜೆಸಿಬಿ ಹಾಗೂ ಕ್ರೇನ್ ತರಿಸಿ ಲಾರಿ ತೆರವು ಮಾಡಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಯಿತು. ಬಿಎಂಆರ್‌ಸಿಎಲ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಬಳ್ಳಾರಿಯತ್ತ ಲಾರಿ ತೆರಳುತ್ತಿದ್ದ ವೇಳೆ ಅಪಘಾತ ಸಂಭವಿಸಿದೆ.

ಲಾರಿ ಚಾಲಕನಿಗೆ ಸಣ್ಣಪುಟ್ಟ ಗಾಯವಾಗಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಯಿತು ಎಂದು ಸಂಚಾರ ಪೊಲೀಸರು ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

Sri Paripoorna Sanathana Charitable Trust
SRI PARIPOORNA SANATHANA AYURVEDA MEDICAL COLLEGE HOSPITAL AND RESEARCH CENTRE
Office / Site Regd. : No. 91, Arjunabetta Halli, Kasaba-Hobli, Gollahalli Grama Panchayat, Nelamangala Taluk, Bangaluru Rural. Mobile : 98860 13785 / 96113 96091,
E-mail : paripoornasanathana@rediffmail.com, Website : www.paripoornasanathana.org

PUBLIC NOTICE

This notice serves to inform concerned parties regarding the conduct of Dr Jayanth S. son of Sreenivasamurthy G, president resident of 30, Grantha Krupa, Vinayaka Layout, Kadabagere, Bangalore - 562130 and Aadhar number 6351 6310 3191, and address as per Aadhar card #05,7th Cross, 6th Main, Vinayaka Nagar, Mysore, Karnataka -570012, who was employed with SRI PARIPOORNA SANATHANA AYURVEDA MEDICAL COLLEGE, HOSPITAL & RESEARCH CENTRE, Nelamangala Taluk, Bangalore Rural, from 15th December 2016 to 20th October 2020. During his tenure, he received his full salary without any deductions of ESI & PF, and the institution paid additional amount of applicable ESI & PF contributions.
However, Dr Jayanth S. has maliciously accused our institution of withholding salary and ESI & PF contributions during the pandemic. In response to these unfounded allegations, we have provided all necessary bank statements and ledger accounts to the relevant statutory bodies. A defamation case with comprehensive evidence has also been filed against him in the Nelamangala Court for adjudication.
The court has issued a notice to Dr Jayanth S. to appear before it. Despite this, he continues to defame the institution on social media platforms.
We, as a result of this, caution all colleges, universities, and individuals who may consider engaging with Dr. Jayanth S., either in financial matters or academic appointments, to proceed at their own risk.

Dr Prashant Goenka, Director
SRI PARIPOORNA SANATHANA AYURVEDA MEDICAL COLLEGE, HOSPITAL & RESEARCH CENTRE
NELAMANGALA TALUK BANGALORE RURAL-562123.
Date : 20/09/2024

PUBLIC NOTICE
IN THE HON'BLE COURT OF DEPUTY COMMISSIONER BEERASANDRA
RP 9/2024
Petitioner: Sri, B.H. Raju,
V/S
Respondents:
Asst Commissioner, another,
R2. **Smt, Rangamma,** W/o late H.V. Kempanna, 73 years, R/o Therinabeedi, Thymagondlu Town & Hobli, Nelamangala Taluk, Bangalore Rural District.
NOTICE UNDER ORDER 5 RULE 20 (A) OF C.P.C
WHEREAS, the petitioner filed an appeal against you in respect of suit property bearing old sy.no.11, new sy.no.11/3 measuring 11 quntas located at Thymagondlu village & Hobli, Nelamangala Taluk, Bangalore Rural District. The Hon'ble Deputy commissioner court has posted the above case on 11.10.2024 at 3.00 PM for your appearance personally or through your counsel. Hence you are notice to appear before court on said date of hearing personally or through pleader, otherwise Hon'ble court will be deciding the matter in your absence by placing you ex-parte.
Given under my hand and seal of this court on the 18.09.2024.
Petitioner counsel
Sri, A. Siddaiah, Advocate, Nelamangala.

JOB OPPORTUNITIES

General

PRIDEMAN Facility Services Pvt Ltd
REQUIRED
Area Manager, Marketing Manager, House Keeping Boys. for Bangalore
Call: 9786433233 9993334571
Email: pridemanfacility@gmail.com

Accounts & Finance

URGENT REQUIRED
ACCOUNT -
Male -1,
Female -1
Sri Vinayak Timbers
Bychaguppe, Tavarekere, Magadi Main Road, Bengaluru
Contact:
99729 88397

HEALTH SPECIAL

ಒಡೆದ ಅಥವ ಒಣಗಿದ ತುಟಿಗಳೆ?

ಕಳೆದುಹೋದ ತೇವಾಂಶವನ್ನು ಪುನಃ ಸ್ಥಾಪಿಸುತ್ತದೆ. ನಿಮ್ಮ ತುಟಿಗಳನ್ನು ಸುಂದರ ಮತ್ತು ಮೃದುವಾಗಿಸುತ್ತದೆ
ಟ್ಯೂಬ್ ಮತ್ತು ಡಬ್ಬಿಗಳಲ್ಲಿ ದೊರೆಯುತ್ತದೆ.
Representatives & Managers Required
For more Information Call / Whatsapp
7353760620 / 9845570506

DH Classifieds More value, more impact
NAME CHANGE ಪ್ರಜಾವಾಣಿ
@50/-* PER WORDS
Book your Name Change Ad in DH All Karnataka + Prajavani Bengaluru City All Days
www.dhclassifieds.com
BOOK NOW
For more details contact:
+91 7795158424 | +91 9901641752
+91 9731810277 | +91 9900428036
*Conditions apply

PERSONAL

Lost

LOST DOCUMENTS
I, VIGNESH M, R/a # 1587, 2nd Cross, Vijinapura, Dooravaninagar, Bengaluru, have lost my Sale deed document no. BNG (U) BYP3667/2019-20 of new site no. 394. (BBMP Katha No. 74/1/406/394). Located at Kuvempunagar, Ward No. 11, while in transit. If you found please contact : +91 8494997779

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

MORE Classifieds IN SUPPLEMENT

'ನ್ಯಾಯಮೂರ್ತಿ ಹೇಳಿಕೆ ಆಘಾತಕಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಕರಣವೊಂದರ ವಿಚಾರಣೆಯ ಸಂದರ್ಭದಲ್ಲಿ ನಗರದ ಮುಸ್ಲಿಂ ಸಮುದಾಯ ಹೆಚ್ಚಾಗಿ ಇರುವ ಸ್ಥಳವನ್ನು ಭಾರತವಲ್ಲ ಪಾಕಿಸ್ತಾನ ಎಂದು ಹೈಕೋರ್ಟ್ ನ್ಯಾಯಮೂರ್ತಿಯವರು ಹೇಳಿದ್ದಾರೆ ಎಂದು ವರದಿಯಾಗಿರುವುದು ಆಘಾತ ಉಂಟುಮಾಡಿದೆ' ಎಂದು 'ಜಾಗೃತ ನಾಗರಿಕರು ಕರ್ನಾಟಕ' ಹೇಳಿದೆ.

ಜಾಗೃತ ನಾಗರಿಕರು ಕರ್ನಾಟಕದ ಕೆ. ಮರುಳ ಸಿದ್ಧಪ್ಪ, ಜಿ. ರಾಮಕೃಷ್ಣ, ಎಸ್. ಜಿ. ಸಿದ್ದರಾಮಯ್ಯ, ರುದ್ರಪ್ಪ ಹನಗವಾಡಿ, ಬಿ. ಶ್ರೀಪಾದ ಭಟ್, ಮೀನಾಕ್ಷಿ ಬಾಳಿ, ಕೆ. ಎಸ್. ವಿಮಲ, ಎನ್.ಗಾಯತ್ರಿ, ಟಿ. ಸುರೇಂದ್ರ ರಾವ್, ವಸಂತ್ ರಾಜ್ ಎನ್.ಕೆ., ವಾಸುದೇವ ಉಚ್ಚಿಲ, ಬಂಜಗೆರೆ ಜಯಪ್ರಕಾಶ್, ವಸುಂಧರಾ ಭೂಪತಿ, ಇಂದಿರಾ ಕೃಷ್ಣಪ್ಪ ಈ ಬಗ್ಗೆ ಹೇಳಿಕೆ ನೀಡಿದ್ದಾರೆ.

'ಸರ್ವ ಧರ್ಮ ಸಮಭಾವದ ಸಂವಿಧಾನವನ್ನು ಒಪ್ಪಿಕೊಂಡಿರುವ ದೇಶ ನಮ್ಮದು. ಈಗಾಗಲೇ ವಿವಿಧ ರೀತಿಯಲ್ಲಿ ಧಾರ್ಮಿಕ ಅಲ್ಪ ಸಂಖ್ಯಾತ ಮುಸ್ಲಿಂ ಸಮುದಾಯವನ್ನೇ ಗುರಿಯಾಗಿಸಿ ನಡೆಸುವ ಹಲವು ದೌರ್ಜನ್ಯಗಳಿಗೆ ದೇಶ ಸಾಕ್ಷಿಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ನ್ಯಾಯಪೀಠದಿಂದ ಬರುವ ಇಂತಹ ಅಭಿಪ್ರಾಯಗಳು ಜನರ ಮಧ್ಯೆ ಸಾಮರಸ್ಯವನ್ನು ಹದಗೆಡಿಸಲು ಕಾರಣವಾಗಬಹುದು' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ವೈಯಕ್ತಿಕ ನೆಲೆಯಲ್ಲಿ ನಡೆಯ ಬೇಕಾದ ಪೂಜೆ, ಹಬ್ಬಗಳು ಸಾರ್ವಜನಿಕ ಪ್ರಚಾರ ಸಾಧನ ವಾಗುವುದು ಮತ್ತು ನ್ಯಾಯಾಂಗ ದಲ್ಲಿರುವವರು ರಾಜಕೀಯ ವ್ಯಕ್ತಿಗಳಿಂದ ದೂರ ಇರಬೇಕು ಎಂಬ ಸದಾಶಯಗಳ ಗಡಿ ಮೀರಿ ಪ್ರಧಾನ ಮಂತ್ರಿಯವರು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಯವರ ಮನೆಯ ಗಣೇಶ ಪೂಜೆಯಲ್ಲಿ ಪಾಲ್ಗೊಂಡ ವಿಡಿಯೊ ಹಂಚಿಕೆ ಆಗಿದೆ. ಇವೆಲ್ಲವೂ ಬಹುತ್ವ ಭಾರತದ ಅಡಿಗಲ್ಲು ಸಡಿಲ ವಾಗುತ್ತಿದೆಯೇನೋ ಎಂಬ ಆತಂಕ ಹುಟ್ಟಿಸಿವೆ. ಇಂತಹ ಸ್ಥಿತಿ ಮರುಕಳಿಸದಂತೆ ಗಮನ ಹರಿಸುವುದು ಅಗತ್ಯವಿದೆ' ಎಂದು ಅವರೆಲ್ಲ ತಿಳಿಸಿದ್ದಾರೆ.

ಲೋಕ ಅದಾಲತ್: 35 ಲಕ್ಷ ಪ್ರಕರಣ ಇತ್ಯರ್ಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಇದೇ 14ರಂದು ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಬಾಕಿಯಿರುವ ಹಾಗೂ ವ್ಯಾಜ್ಯಪೂರ್ವ ಪ್ರಕರಣಗಳೂ ಸೇರಿದಂತೆ ಒಟ್ಟು 35 ಲಕ್ಷಕ್ಕೂ ಹೆಚ್ಚು ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ.

ಈ ವಿಷಯವನ್ನು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಹಕ ಅಧ್ಯಕ್ಷರೂ ಆದ ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ಮತ್ತು ಹೈಕೋರ್ಟ್‌ನ ಸಮಿತಿ ಅಧ್ಯಕ್ಷರಾದ ನ್ಯಾಯಮೂರ್ತಿ ಶ್ರೀನಿವಾಸ ಹರೀಶ್ ಕುಮಾರ್ ಶುಕ್ರವಾರ ಮಾಧ್ಯಮ ಗೋಷ್ಠಿಯಲ್ಲಿ ವಿವರಿಸಿದರು.

'ಹೈಕೋರ್ಟ್‌ನ ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಪೀಠಗಳು, ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ಸ್ಥಾಪಿಸಲಾಗಿದ್ದ 1,008 ಪೀಠಗಳಲ್ಲಿ ಒಟ್ಟು 781 ಹಾಗೂ ಜಿಲ್ಲಾ ನ್ಯಾಯಾಲಯಗಳಲ್ಲಿ ಬಾಕಿ ಇರುವ 2,00,083 ಮತ್ತು ವ್ಯಾಜ್ಯಪೂರ್ವದ 33,84,347 ಪ್ರಕರಣಗಳೂ ಸೇರಿದಂತೆ ಒಟ್ಟು 35,84,430 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಇವುಗಳಲ್ಲಿ ₹2,402 ಕೋಟಿ ಪರಿಹಾರ ಕೊಡಿಸಲಾಗಿದೆ. ವಿಶೇಷವಾಗಿ 1,669 ವೈವಾಹಿಕ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. 248 ದಂಪತಿಗಳು ರಾಜಿ ಸಂಧಾನದ ಮೂಲಕ ಪುನಃ ಒಂದಾಗಿದ್ದಾರೆ' ಎಂದು ತಿಳಿಸಿದರು.

ನ್ಯಾಯಮೂರ್ತಿಗಳಾದ ಶ್ರೀನಿವಾಸ ಹರೀಶ್ ಕುಮಾರ್ ಮತ್ತು ವಿ.ಕಾಮೇಶ್ವರ ರಾವ್

'2,696 ವಿಭಾಗ ದಾವೆಗಳು, 3,621 ಮೋಟಾರು ವಾಹನ ಅಪರಾಧ ಪರಿಹಾರ, 8,517 ಚೆಕ್ ಬೌನ್ಸ್, 389 ಎಲ್‌ಎಸಿ ಅಮಲ್ಜಾರಿ, 623 ಎಂವಿಸಿ ಅಮಲ್ಜಾರಿ ಹಾಗೂ ಇತರೆ 2,598 ಅಮಲ್ಜಾರಿ ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿದೆ. ಇವುಗಳಲ್ಲಿ ₹108 ಕೋಟಿ ಮೊತ್ತದ ಪರಿಹಾರ ನೀಡಲಾಗಿದೆ. 73 ಗ್ರಾಹಕರ ವ್ಯಾಜ್ಯಗಳನ್ನು ಇತ್ಯರ್ಥಪಡಿಸಲಾಗಿದ್ದು, ₹3.24 ಲಕ್ಷವನ್ನು ಇತ್ಯರ್ಥದ ಮೊತ್ತವಾಗಿ ನೀಡಲಾಗಿದೆ' ಎಂದರು.

ಆಸ್ತಿ ತೆರಿಗೆ ರಿಯಾಯಿತಿ: 'ಕರ್ನಾಟಕ ಪುರಸಭೆ ಕಾಯ್ದೆಯ ಕಲಂ 103ರ ಅಡಿಯಲ್ಲಿ ಲೋಕ ಅದಾಲತ್‌ನಲ್ಲಿ ರಿಯಾಯಿತಿ ವಿಸ್ತರಣೆ ಮಾಡಿದ ಹಿನ್ನೆಲೆಯಲ್ಲಿ 5,95,892 ಪ್ರಕರಣಗಳಲ್ಲಿ ತೆರಿಗೆ ಪಾವತಿಯಾಗಿದ್ದು ₹653 ಕೋಟಿಯಷ್ಟು ಬೃಹತ್ ಮೊತ್ತ ಸರ್ಕಾರದ ಖಜಾನೆಗೆ ಜಮೆಯಾಗಿದೆ' ಎಂದು ವಿವರಿಸಿದರು.

ಡಿಸೆಂಬರ್ 14ಕ್ಕೆ ಮುಂದಿನ ಅದಾಲತ್

'ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ 2024ನೇ ಸಾಲಿನ ನಾಲ್ಕನೇ ಹಾಗೂ ಈ ವರ್ಷದ ಕೊನೆಯ ಲೋಕ ಅದಾಲತ್ ಅನ್ನು ಡಿಸೆಂಬರ್ 14ರಂದು ಹಮ್ಮಿಕೊಳ್ಳಲಾಗಿದ್ದು, ಈ ಸಂಬಂಧ ಸಾರ್ವಜನಿಕರು ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಬಹುದಾಗಿದೆ' ಎಂದು ನ್ಯಾಯಮೂರ್ತಿಗಳು ತಿಳಿಸಿದರು.

ವಿಶೇಷ ಪ್ರಕರಣಗಳು

- ರಿಲಯನ್ಸ್ ಹೋಮ್ ಫೈನಾನ್ಸ್ ವಿರುದ್ಧ ಸೈಕಾನ್ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ ಕಂಪನಿ ಪ್ರಕರಣ ₹20 ಕೋಟಿ ಪರಿಹಾರದೊಂದಿಗೆ ಇತ್ಯರ್ಥ.
- ಅಪರ್ಣಾ ರಾಮಕೃಷ್ಣ ವಿರುದ್ಧದ ರಾಯಲ್ ಸುಂದರಂ ವಿಮಾ ಕಂಪನಿ ಪ್ರಕರಣ ₹3.75 ಕೋಟಿ ಮೊತ್ತಕ್ಕೆ ಇತ್ಯರ್ಥ.
- ನಗರದ ಎಸಿಎಂಎಂ ನ್ಯಾಯಾಲಯದಲ್ಲಿ 26 ವರ್ಷಗಳಿಂದ ಬಾಕಿ ಇದ್ದ ನಂಜಪ್ಪ ವಿರುದ್ಧದ ಅಕ್ರಂ ಪ್ರಕರಣ ಇತ್ಯರ್ಥ.
- 1,365 ಪ್ರಕರಣಗಳಲ್ಲಿ ಹಿರಿಯ ನಾಗರಿಕರು ತಮ್ಮ ವ್ಯಾಜ್ಯಗಳನ್ನು ಇತ್ಯರ್ಥಪಡಿಸಿಕೊಂಡಿದ್ದಾರೆ.
- ಐದು ವರ್ಷಗಳಿಗೂ ಹೆಚ್ಚು ಹಳೆಯದಾದ 1,022, 10 ವರ್ಷಗಳಿಗೂ ಹಳೆಯದಾದ 277 ಮತ್ತು 15 ವರ್ಷಗಳಿಗೂ ಹಳೆಯದಾದ 144 ಪ್ರಕರಣಗಳು ಸೇರಿದಂತೆ 1,443 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ.

ಚಾಕು ತೋರಿಸಿ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊದಲ್ಲಿ ಪ್ರಯಾಣಿಸುವರಿಗೆ ಚಾಕು ತೋರಿಸಿ ಹಣ ಹಾಗೂ ಮೊಬೈಲ್ ಸುಲಿಗೆ ಮಾಡುತ್ತಿದ್ದ ಆಟೊ ಚಾಲಕ ಸೇರಿದಂತೆ ಇಬ್ಬರು ಆರೋಪಿಗಳನ್ನು ಗೋವಿಂದರಾಜನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಂದಿನಿ ಲೇಔಟ್‌ನ ಜೈಮಾರುತಿ ನಗರದ ನಿವಾಸಿ ಶಿವಕುಮಾರ್(32) ಹಾಗೂ ಶ್ರೀನಿವಾಸ ನಗರದ ಗಣೇಶ ದೇವಸ್ಥಾನ ಬಳಿಯ ನಿವಾಸಿ ಮಂಟೆಪ್ಪ(52) ಬಂಧಿತರು.

ಪ್ರಯಾಣಿಕರಿಂದ ಸುಲಿಗೆ ಮಾಡಿದ್ದ ಮೊಬೈಲ್‌ಗಳನ್ನು ಪೊಲೀಸರು ಜಪ್ತಿ ಮಾಡಿಕೊಂಡಿದ್ದಾರೆ.

ವೆಸ್ಟ್ ಆಫ್ ಕಾರ್ಡ್ ರಸ್ತೆಯ ಶಿವನಹಳ್ಳಿಯ ನಿವಾಸಿ ರಾಮಕೃಷ್ಣಯ್ಯ ಅವರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

'ರಾಮಕೃಷ್ಣಯ್ಯ ಅವರು ಇತ್ತೀಚೆಗೆ ರಾತ್ರಿ 11 ಗಂಟೆ ಸುಮಾರಿಗೆ ನವರಂಗ ಚಿತ್ರಮಂದಿರ ಬಳಿ ಆಟೊ ಹತ್ತಿದ್ದರು. ಸ್ವಲ್ಪ ದೂರ ಪ್ರಯಾಣಿಸಿದ ಬಳಿಕ ಚಾಲಕ ಹಾಗೂ ಆತನ ಜತೆಯಲ್ಲಿದ್ದ ವ್ಯಕ್ತಿ ರಾಮಕೃಷ್ಣಯ್ಯ ಅವರಿಗೆ ಬೆದರಿಸಿದ್ದರು. ಬಳಿಕ ಚಾಕು ತೋರಿಸಿ ಮೊಬೈಲ್ ಫೋನ್ ಹಾಗೂ ನಗದು ಸುಲಿಗೆ ಮಾಡಿದ್ದರು. ನಂತರ, ವಿವಿಧೆಡೆ ಸುತ್ತಾಡಿಸಿ ಮಧ್ಯರಾತ್ರಿ 1.30ರ ಸುಮಾರಿಗೆ ಗೋವಿಂದರಾಜ ನಗರದ ಎಂಸಿ ಲೇಔಟ್‌ನ ಕ್ಯುಟಿಸ್ ಆಸ್ಪತ್ರೆಯ ಬಳಿ ಬಿಟ್ಟು ಹೋಗಿದ್ದರು' ಎಂದು ಪೊಲೀಸರು ಹೇಳಿದರು.

ಕೊಲೆ ಬೆದರಿಕೆ: 'ಪೊಲೀಸರಿಗೆ ದೂರು ನೀಡಿದರೆ ಜೈಲಿನಿಂದ ಬಿಡುಗಡೆಯಾದ ಬಳಿಕ ಕೊಲೆ ಮಾಡುವುದಾಗಿಯೂ ಬೆದರಿಕೆ ಹಾಕಿದ್ದರು. ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಆಧರಿಸಿ ಆಟೊ ನೋಂದಣಿ ಸಂಖ್ಯೆ ಪತ್ತೆ ಹಚ್ಚಲಾಯಿತು. ಬಳಿಕ, ನಂದಿನಿ ಲೇಔಟ್‌ನ ಮಾರುತಿ ನಗರದ ರಸ್ತೆಯಲ್ಲಿ ಆಟೊ ಪತ್ತೆ ಹಚ್ಚಿ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಚಲಿಸುವ ಕಾರಿನಲ್ಲಿ ದಲಿತ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ

ಮಥುರಾ (ಉತ್ತರಪ್ರದೇಶ) (ಪಿಟಿಐ): ಚಲಿಸುವ ಕಾರಿನಲ್ಲೇ ದಲಿತ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿ, ಬಳಿಕ ಕಾರಿನಿಂದ ಹೊರಗೆ ಎಸೆದಿದ್ದಾರೆ ಎಂದು ಆರೋಪಿಸಲಾಗಿದೆ.

ಮೂವರು ಕಿಡಿಗೇಡಿಗಳು 13 ವರ್ಷದ ಬಾಲಕಿಯನ್ನು ಅಪಹರಿಸಿ ಈ ಕೃತ್ಯ ಎಸಗಿದ್ದಾರೆ ಎಂಬ ಆರೋಪವಿದೆ. ಈ ಬಗ್ಗೆ ಬಾಲಕಿಯ ತಂದೆ ನೀಡಿರುವ ದೂರಿನ ಮೇರೆಗೆ ಎಫ್‌ಐಆರ್ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಬಳಿಕ ಆಕೆ ಅಸ್ವಸ್ಥಗೊಂಡಿದ್ದರಿಂದ ವೈದ್ಯರ ಬಳಿ ಪೋಷಕರು ಕರೆದುಕೊಂಡು ಹೋದಾಗ ಅತ್ಯಾಚಾರ ನಡೆದಿರುವುದು ದೃಢಪಟ್ಟಿದೆ. ಆಕೆಯ ಪೋಷಕರು ದೂರು ದಾಖಲಿಸಿದ್ದಾರೆ. ಆರೋಪಿಗಳ ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿ ತ್ರಿಗುಣ್ ಬೈಸೆನ್ ತಿಳಿಸಿದ್ದಾರೆ.

ಬಾಲಕಿಯು ಗುರುವಾರ ಉಪಾಹಾರಕ್ಕಾಗಿ ಸಾಮಾನು ತರಲು ಹತ್ತಿರದ ಅಂಗಡಿಗೆ ತೆರಳಿದ್ದಾಗ ಅಲ್ಲಿದ್ದ ನೀರಜ್ ಎಂಬಾತ ಬಾಲಕಿಗೆ ನಿದ್ರೆ ಬರುವ ಪದಾರ್ಥ ಬೆರೆಸಿದ್ದ ನೀರನ್ನು ನೀಡಿದ್ದಾನೆ. ಅದನ್ನು ಕುಡಿದ ಬಳಿಕ ಆಕೆಗೆ ತಲೆ ತಿರುಗಿದಂತಾಗಿದೆ. ಆ ವೇಳೆ ನೀರಜ್, ಆತನ ಸ್ನೇಹಿತ ಶೈಲೇಂದ್ರ ಹಾಗೂ ಮತ್ತೊಬ್ಬ ಸಹಚರ ಸೇರಿ ಕಾರಿನಲ್ಲಿ ಆಕೆಯನ್ನು ಕೊಂಡೊಯ್ದಿದ್ದಾರೆ. ಬಳಿಕ ಚಲಿಸುವ ಕಾರಿನಲ್ಲೇ ಅರೆಪ್ರಜ್ಞಾವಸ್ಥೆಯಲ್ಲಿದ್ದ ಆಕೆಯ ಮೇಲೆ ಅತ್ಯಾಚಾರವೆಸಗಿ ಬರ್ಸಾನ ರಸ್ತೆಯ ಮೇಲ್ಸೇತುವೆ ಅಡಿ ಬಿಸಾಡಿ ಪರಾರಿಯಾಗಿದ್ದಾರೆ. ಪ್ರಜ್ಞೆ ಬಂದ ಬಳಿಕ ಆಕೆ ಮನೆಗೆ ತಲುಪಿ ನಡೆದ ಘಟನೆ ವಿವರಿಸಿದ್ದಾಳೆ ಎಂದು ಆಕೆಯ ತಂದೆ ದೂರಿನಲ್ಲಿ ಉಲ್ಲೇಖಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಕಮರಿಗೆ ಉರುಳಿದ ಬಸ್: 4 ಯೋಧರ ಸಾವು

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಬಡಗಾಮ್ ಜಿಲ್ಲೆಯಲ್ಲಿ ಶುಕ್ರವಾರ ಚುನಾವಣಾ ಕರ್ತವ್ಯಕ್ಕಾಗಿ ಭದ್ರತಾ ಸಿಬ್ಬಂದಿಯನ್ನು ಕರೆದೊಯ್ಯುತ್ತಿದ್ದ ಬಸ್, ಕಮರಿಗೆ ಬಿದ್ದು ನಾಲ್ವರು ಬಿಎಸ್‌ಎಫ್ ಯೋಧರು ಮೃತಪಟ್ಟಿದ್ದಾರೆ. ಘಟನೆಯಲ್ಲಿ 30ಕ್ಕೂ ಅಧಿಕ ಯೋಧರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೆಪ್ಟೆಂಬರ್ 25ರಂದು ನಡೆಯಲಿರುವ ವಿಧಾನಸಭಾ ಚುನಾವಣೆಯ ಎರಡನೇ ಹಂತದ ಮತದಾನದ ವೇಳೆ ಭದ್ರತೆಗೆ ನಿಯೋಜನೆಗೊಂಡಿರುವ ಬಿಎಸ್‌ಎಫ್ ಯೋಧರು ಬಸ್‌ನಲ್ಲಿದ್ದರು.

'ಅಪಘಾತದಲ್ಲಿ ಗಾಯಗೊಂಡ ಯೋಧರಿಗೆ ಬಡಗಾಮ್ ಮತ್ತು ಶ್ರೀನಗರದ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗಿದೆ. ಆರು ಮಂದಿಯ ಸ್ಥಿತಿ ಗಂಭೀರವಾಗಿದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಶ್ರೀ ಭಾಗ್ಯಲಕ್ಷ್ಮಿ ಕಮರ್ಷಿಯಲ್ ಕಾರ್ಪೋರೇಷನ್

#321/A, Opp.BHEL, Mysore Road, Bangalore - 560039
Ph No : 080-2674 7474 | E-mail : sbcc@sblfoods.com | www.sblfoods.com

SRI BHAGYALAKSHMI® 50 YEARS SINCE 1972
TESTED • TASTED • TRUSTED

ಹಾರ್ದಿಕ ಅಭಿನಂದನೆಗಳು

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಯವರು ನೀಡುವ ಪ್ರತಿಷ್ಠಿತ
"ಭಾರತ ರತ್ನ ಸರ್ ಎಂ ವಿಶ್ವೇಶರಯ್ಯ ಸ್ಮಾರಕ ಪ್ರಶಸ್ತಿ" ಗೆ ಭಾಜನರಾದ
ಶ್ರೀ ಭಾಗ್ಯಲಕ್ಷ್ಮಿ ಕಮರ್ಷಿಯಲ್ ಕಾರ್ಪೋರೇಷನ್ ಮಾಲೀಕರಾದ

ಶ್ರೀ ಬಿ.ಎ.ಶ್ರೀನಿವಾಸ ಗುಪ್ತ ರವರಿಗೆ

ಹಾರ್ದಿಕ ಶುಭಾಷಯಗಳು

ಶುಭ ಕೋರುವವರು

ಶ್ರೀ ಧೋಂತಿ ಮದನ್ ಗೋಪಾಲ್ ಮತ್ತು ಕುಟುಂಬ
ಶ್ರೀ ಎನ್.ಆರ್.ಗೋವಿಂದರಾಜು ಮತ್ತು ಕುಟುಂಬ
ಶ್ರೀ ಸಿ.ಆರ್.ವಿಜಯ್ ಕುಮಾರ್ ಮತ್ತು ಕುಟುಂಬ
ಶ್ರೀ ನಲ್ಲಪೇಟ ಸುಬ್ರಮಣ್ಯಮ್ ಮತ್ತು ಕುಟುಂಬ
ಶ್ರೀ ಶೀಬು ಜಾಕೊಬ್ ಮತ್ತು ಕುಟುಂಬ
ಶ್ರೀ ಕೃಷ್ಣ ಕಿಶೋರ್ ಚನ್ನೈ ಮತ್ತು ಕುಟುಂಬ
ಶ್ರೀ ಜಿ.ಕೆ.ಎಲ್. ಉಮಾಶಂಕರ್ ಮತ್ತು ಕುಟುಂಬ
ಶ್ರೀ ರಿಶಿಕೇಶ್ ಜೆ ವಾರು ಮತ್ತು ಕುಟುಂಬ
ಶ್ರೀ ಬೈಸಾನಿ ಆದಿನಾರಾಯಣ ಗುಪ್ತ ಮತ್ತು ಕುಟುಂಬ

ಹಾಗೂ

ಶ್ರೀ ಭಾಗ್ಯಲಕ್ಷ್ಮಿ ಸಂಸ್ಥೆಗಳ ಎಲ್ಲಾ ಸಿಬ್ಬಂದಿವರ್ಗ

ಪ್ರಜಾವಾಣಿ ಶನಿವಾರ, 21 ಸೆಪ್ಟೆಂಬರ್ 2024

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಅಮೆರಿಕ ಹೆಣ್ಣಿನಿಯಲ್ಲಿ ಕೇಳಿ ಕ್ರಿಕೆಟ್ ಬನಿ

ಅಮೆರಿಕದಲ್ಲಿ ಕ್ರಿಕೆಟ್ ಬೆಳೆಯಲು ಭಾರತೀಯರ ಕಾಣಿಕೆ ಪ್ರಮುಖವಾಗಿದೆ. ಇದರಲ್ಲಿ ಮಹಿಳೆಯರ ಪಾತ್ರವೂ ಮುಖ್ಯವಾಗಿದೆ. ಭಾರತದ ಶಿಬಾನಿ ಭಾಸ್ಕರ್ ಅವರು ಆಟಗಾರ್ತಿಯಾಗಿ ಮತ್ತು ಇಂಗ್ಲಿಷ್ ಕಾಮೆಂಟೇಟರ್ ಆಗಿ ಅಮೆರಿಕದ ಕ್ರಿಕೆಟ್‌ನಲ್ಲಿ ತಮ್ಮದೇ ಆದ ಛಾಪು ಮೂಡಿಸುತ್ತಿದ್ದಾರೆ.

ಗಿರೀಶ ದೊಡ್ಡಮನಿ

ಬೇಸ್‌ಬಾಲ್, ಬ್ಯಾಸ್ಕೆಟ್‌ಬಾಲ್, ಫುಟ್‌ಬಾಲ್ ಮತ್ತಿತರ ಕ್ರೀಡೆಗಳಲ್ಲಿ ಅಗ್ರಮಾನ್ಯ ಸಾಧನೆ ಮಾಡಿರುವ ಅಮೆರಿಕದಲ್ಲಿ ಈಗ ಕ್ರಿಕೆಟ್ ಸದ್ದು ಮಾಡುತ್ತಿದೆ. ಅದಕ್ಕೆ ಕಾರಣ ಭಾರತೀಯರು. ಅಮೆರಿಕದಲ್ಲಿ ಕ್ರಿಕೆಟ್‌ಗಾಗಿ ಹೊಸ ಮಾರುಕಟ್ಟೆಯೊಂದು ಸೃಷ್ಟಿಯಾಗಿದೆ. ಪುರುಷರಷ್ಟೇ ಅಲ್ಲ. ಮಹಿಳೆಯರ ಕ್ರಿಕೆಟ್ ಕೂಡ ಪ್ರವರ್ಧಮಾನಕ್ಕೆ ಬರುತ್ತಿದೆ.

ಅಮೆರಿಕದ ಕ್ರಿಕೆಟ್‌ನಲ್ಲಿ ಒಂದು ವೈಶಿಷ್ಟ್ಯವಿದೆ. ಸಾಂಪ್ರದಾಯಿಕ ಎದುರಾಳಿಗಳೆಂದೇ ಅಭಿಮಾನಿಗಳ ವಲಯದಲ್ಲಿ ಬಿಂಬಿತವಾಗಿರುವ ಭಾರತ ಮತ್ತು ಪಾಕಿಸ್ತಾನ ದೇಶಗಳು ಅಮೆರಿಕದಲ್ಲಿ ಒಂದು ತಂಡವಾಗಿ ಆಡುವುದೇ ಆ ವಿಶೇಷ. ಅದು ಪುರುಷ ಮತ್ತು ಮಹಿಳಾ ವಿಭಾಗದ ಕ್ರಿಕೆಟ್‌ನಲ್ಲಿ ಸಾಮಾನ್ಯವಾಗಿದೆ. ಇಂತಹ ವೈವಿಧ್ಯತೆ ಮತ್ತು ಸ್ವಾರಸ್ಯಗಳ ಬಗ್ಗೆ 29 ವರ್ಷದ ಶಿಬಾನಿ ಭಾಸ್ಕರ್ ಅವರು ಇಲ್ಲಿ ಮಾತನಾಡಿದ್ದಾರೆ. ಈಚೆಗೆ ಬೆಂಗಳೂರಿನಲ್ಲಿ ನಡೆದ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ 'ಸ್ಟಾರ್ ಸ್ಪೋರ್ಟ್ಸ್' ಇಂಗ್ಲಿಷ್ ವಾಹಿನಿಯಲ್ಲಿ ಕಾಮೆಂಟೇಟರ್ ಆಗಿ ಕಾರ್ಯನಿರ್ವಹಿಸಿದರು. ಅಮೆರಿಕ ಮಹಿಳಾ ತಂಡದಲ್ಲಿ ಸುಮಾರು ಹತ್ತು ವರ್ಷ ಆಡಿರುವ ಶಿಬಾನಿ ವಿಶ್ವದ ಪ್ರಮುಖ ಕ್ರಿಕೆಟ್ ರಾಷ್ಟ್ರಗಳ ಕೆಲವು ಕ್ಲಬ್‌ಗಳಲ್ಲಿ ಆಡಿದ್ದಾರೆ. ಅಮೆರಿಕ ತಂಡದ ನಾಯಕಿಯಾಗಿಯೂ ಅವರು ಆಡಿದ್ದಾರೆ. ವಿಕೆಟ್‌ಕೀಪರ್ –ಬ್ಯಾಟರ್ ಶಿಬಾನಿ ಅವರು 14 ಟಿ20 ಪಂದ್ಯಗಳಲ್ಲಿ ಆಡಿದ್ದಾರೆ. ಕೆಲವು ವರ್ಷಗಳ ಹಿಂದೆ ಗಾಯಗೊಂಡಿದ್ದರಿಂದ ಆಟದಿಂದ ದೂರವುಳಿದಿದ್ದರು. ಆದರೆ ಈಗ ಮತ್ತೆ ಅಮೆರಿಕ ತಂಡಕ್ಕೆ ಮರಳುವ ಸಿದ್ಧತೆಯಲ್ಲಿದ್ದಾರೆ.

ಮಹಾರಾಜ ಟ್ರೋಫಿ ಕ್ರಿಕೆಟ್ ವೀಕ್ಷಕ ವಿವರಣೆಗಾರ್ತಿ ಶಿಬಾನಿ ಭಾಸ್ಕರ್ ಸಂದರ್ಶನ

ಶಿಬಾನಿ ಭಾಸ್ಕರ್

- **ಈಚೆಗೆ ಪುರುಷರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಿದ್ದ ಆತಿಥೇಯ ಅಮೆರಿಕ ತಂಡದಲ್ಲಿ ಭಾರತ ಮತ್ತು ಪಾಕ್ ತಂಡಗಳ ಆಟಗಾರರಿದ್ದರು. ಮಹಿಳಾ ತಂಡದಲ್ಲಿಯೂ ಇದೇ ರೀತಿ ಇದೆಯೇ? ಎರಡು ದೇಶಗಳ ನಡುವಣ ವೈರತ್ವ ಇಲ್ಲಿ ಪರಿಣಾಮ ಬೀರುವುದಿಲ್ಲವೇ?**

–ಅಮೆರಿಕ ತಂಡದಲ್ಲಿ ಭಾರತ, ಪಾಕಿಸ್ತಾನ, ವೆಸ್ಟ್ ಇಂಡೀಸ್ ಹಾಗೂ ಶ್ರೀಲಂಕಾ ದೇಶಗಳ ಆಟಗಾರರೊಂದಿಗೆ ಸೇರಿ ಆಡುತ್ತೇವೆ. ಈ ವೈವಿಧ್ಯತೆ ಮತ್ತು ಸೌಹಾರ್ದತೆಯೇ ಅಮೆರಿಕ ತಂಡವನ್ನು ಬಲಾಢ್ಯವನ್ನಾಗಿಸಿದೆ. ಮಹಿಳಾ ತಂಡದಲ್ಲಿಯೂ ಭಾರತದ ಆಟಗಾರ್ತಿಯರು ಹೆಚ್ಚು ಸಂಖ್ಯೆಯಲ್ಲಿದ್ದೇವೆ. ಜೊತೆಗೆ ಪಾಕ್, ಶ್ರೀಲಂಕಾ ಮತ್ತು ವೆಸ್ಟ್ ಇಂಡೀಸ್ ಮೂಲದವರೂ ಇದ್ದಾರೆ. ವೈವಿಧ್ಯತೆ ಇದೆ. ಆದರೆ ವೈಮನಸ್ಸು ಇಲ್ಲ. ನಮ್ಮೆಲ್ಲರ ದೇಶ, ಭಾಷೆಗಳು ವಿಭಿನ್ನವಾದರೂ ಒಂದಾಗಿ ಅಮೆರಿಕ ತಂಡಕ್ಕೆ ಆಡುತ್ತೇವೆ. ಆಟದಲ್ಲಿ ಮತ್ತು ಆಟದಾಚೆ ಸೌಹಾರ್ದತೆಯಿಂದಲೇ ಇದ್ದೇವೆ.

- **ನಿಮ್ಮ ಕ್ರಿಕೆಟ್ ಪಯಣದ ಕುರಿತು ಹೇಳಿ.**

–ನಾನು ಅಮೆರಿಕದಲ್ಲಿ ಜನಿಸಿದೆ. ನನ್ನ ಅಪ್ಪ ಅಮೆರಿಕದ ರಾಯಭಾರಿಯಾಗಿದ್ದಾರೆ. ಫಾರಿನ್ ಸರ್ವಿಸ್ ಅಧಿಕಾರಿಯಾಗಿರುವ ಅವರು ಭಾರತವೂ ಸೇರಿದಂತೆ ಬೇರೆ ಬೇರೆ ದೇಶಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ನನಗೆ ಕ್ರಿಕೆಟ್‌ನಲ್ಲಿ ಆಸಕ್ತಿ ಮೂಡಿತು. ಕೆಲವು ವರ್ಷಗಳ ಕಾಲ ಭಾರತದಲ್ಲಿದ್ದಾಗ ವಯೋಮಿತಿಯ ಕ್ರಿಕೆಟ್‌ನಲ್ಲಿ ಬಂಗಾಳ, ತಮಿಳುನಾಡು ತಂಡಗಳಲ್ಲಿ ಆಡಿದ್ದೆ. ಮುಂಬೈನಲ್ಲಿಯೂ ಆಡಿದ್ದೆ. ಇಂಗ್ಲೆಂಡ್, ನ್ಯೂಜಿಲೆಂಡ್, ವೆಸ್ಟ್ ಇಂಡೀಸ್ ಮತ್ತು ಆಸ್ಟ್ರೇಲಿಯಾದ ದೇಶಿ ಕ್ಲಬ್‌ಗಳಲ್ಲಿ ಆಡಿದ್ದೇನೆ. 17ನೇ ವಯಸ್ಸಿನಲ್ಲಿ ಅಮೆರಿಕ ಮಹಿಳಾ ತಂಡದಲ್ಲಿ ಪದಾರ್ಪಣೆ ಮಾಡಿದೆ. ವಿಶ್ವಕಪ್ ಕ್ವಾಲಿಫೈಯರ್‌ನಲ್ಲಿ ಆಡಿದೆ. ನಂತರ ಅಮೆರಿಕ ತಂಡವನ್ನು ಮುನ್ನಡೆಸುವ ಅವಕಾಶವೂ ಸಿಕ್ಕಿತ್ತು.

- **ಅಮೆರಿಕದಲ್ಲಿ ಈಚೆಗೆ ನಡೆದ ಪುರುಷರ ಟಿ20 ವಿಶ್ವಕಪ್ ಟೂರ್ನಿ ಯಾವ ರೀತಿ ಪ್ರಭಾವ ಬೀರಿದೆ?**

– ಲಾಸ್ ಏಂಜಲೀಸ್‌ನಲ್ಲಿ 2028ರಲ್ಲಿ ನಡೆಯುವ ಒಲಿಂಪಿಕ್ ಕೂಟದಲ್ಲಿ ಕ್ರಿಕೆಟ್ ಸೇರ್ಪಡೆಯಾಗಿದೆ. ಇದು ಅಮೆರಿಕದಲ್ಲಿ ಕ್ರಿಕೆಟ್‌ನತ್ತ ಜನರು ಒಲವು ತೋರಲು ಕಾರಣವಾಗಿದೆ. ಕ್ರಿಕೆಟ್‌ಗೆ ಸಂಬಂಧಿಸಿದ ಸೌಲಭ್ಯಗಳ ಅಭಿವೃದ್ಧಿಗಾಗಿ ಬಹಳಷ್ಟು ಸಂಪನ್ಮೂಲ ಹೂಡಿಕೆಯಾಗುತ್ತಿದೆ. ಅಲ್ಲಿ ಚಳಿಯ ವಾತಾವರಣ ಹೆಚ್ಚು ಇರುವುದರಿಂದ ಒಳಾಂಗಣ ಕ್ರಿಕೆಟ್ ಕ್ರೀಡಾಂಗಣಗಳು ಇವೆ. ಈಗಾಗಲೇ ಫ್ಲಾರಿಡಾದಲ್ಲಿ ಉತ್ತಮ ಸೌಲಭ್ಯಗಳು ಇವೆ. ನ್ಯೂಯಾರ್ಕ್‌ನಲ್ಲಿಯೂ ಕ್ರಿಕೆಟ್ ಕ್ರೀಡಾಂಗಣವಿದೆ. ಮುಂದಿನ ಒಲಿಂಪಿಕ್ಸ್ ನಂತರ ಅಮೆರಿಕದಲ್ಲಿ ಕ್ರಿಕೆಟ್ ಬಹಳಷ್ಟು ಜನಪ್ರಿಯವಾಗುವ ನಿರೀಕ್ಷೆ ಇದೆ. ಅಲ್ಲಿಯ ಬೇಸ್‌ಬಾಲ್ ಕ್ರೀಡೆಯಷ್ಟೇ ಮಹತ್ವ ಪಡೆಯಬಹುದು.

- **ಭಾರತದಲ್ಲಿ ಆಡುವ ಆಸೆ ಇದೆಯೇ?**

– ನಾನು ಅಮೆರಿಕದಲ್ಲಿ ಹುಟ್ಟಿ ಬೆಳೆದಿದ್ದು ಭಾರತ ತಂಡದಲ್ಲಿ ಆಡಲು ಆಗದು. ಆದರೆ ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆಡುವ ಗುರಿ ಇದೆ. ಅದರಲ್ಲಿ ಯಾವುದೇ ತಂಡವಾದರೂ ಸರಿ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಸಿಕ್ಕರಂತೂ ಬಹಳ ಖುಷಿ. ಅದಕ್ಕಿರುವ ನಿಷ್ಠಾವಂತ ಅಭಿಮಾನಿ ಬಳಗವು ಬೆರಗು ಮೂಡಿಸುತ್ತದೆ. ನಾನು ಬೆಂಗಳೂರಿಗೆ ಹಲವಾರು ಬಾರಿ ಬಂದಿರುವೆ. ಇಲ್ಲಿಯ ಹವಾಗುಣ ಮತ್ತು ಕ್ರಿಕೆಟ್ ಕುರಿತ ಜನರ ಪ್ರೀತಿಯನ್ನು ಮೆಚ್ಚಿಕೊಂಡಿರುವೆ.

- **ಕ್ರಿಕೆಟ್ ಆಡಲು ಬಯಸುವ ಮಕ್ಕಳಿಗೆ ತಮ್ಮ ಸಲಹೆ ಏನು?**

– ಕ್ರಿಕೆಟ್ ಆಟದ ಜೊತೆಗೆ ನಾವು ಉತ್ತಮ ಅಥ್ಲೀಟ್ ಆಗಿರುವುದು ಮುಖ್ಯ. ಆದ್ದರಿಂದ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಬೇರೆ ಬೇರೆ ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳಬೇಕು. ಓಟ, ಜಿಗಿತ, ಈಜು ಮತ್ತಿತರ ಕ್ರೀಡೆಗಳಲ್ಲಿ ಆಡುವುದರಿಂದ ಕ್ರಿಕೆಟ್‌ನಲ್ಲಿ ಉತ್ತಮ ಸಾಮರ್ಥ್ಯ ತೋರಲು ಸಾಧ್ಯವಿದೆ. ನಾನು ಕೂಡ ಬಾಲ್ಯದಲ್ಲಿ ಸ್ಕೇಟಿಂಗ್, ಅಥ್ಲೆಟಿಕ್ಸ್‌ನಲ್ಲಿ ಸಕ್ರಿಯವಾಗಿದ್ದೆ. ಈಗ ಕ್ರಿಕೆಟ್ ಅಲ್ಲದೇ ಗಾಲ್ಫ್ ಕೂಡ ಆಡುತ್ತೇನೆ.

ತಯಾರಿಸಿ ಕುರುಕುರು ತಿಂಡಿ

ವೇದಾವತಿ ಎಚ್.ಎಸ್.

ಸಂಜೆಯ ಕಾಫಿಯೊಂದಿಗೆ ಮನೆಯಲ್ಲೇ ತಯಾರಿಸಿ ಸವಿಯಿರಿ ಸ್ನಾಕ್ಸ್ ರೆಸಿಪಿ

ಆಲೂ ಬಾಲ್ಸ್

ಬೇಕಾಗುವ ಸಾಮಗ್ರಿಗಳು: ಆಲೂಗೆಡ್ಡೆ 4, ಈರುಳ್ಳಿ 1 ಚಿಕ್ಕದಾಗಿ ಹೆಚ್ಚಿಟ್ಟುಕೊಳ್ಳಿ, ಹಸಿಮೆಣಸಿನಕಾಯಿ 2 ಚಿಕ್ಕದಾಗಿ ಹೆಚ್ಚಿಟ್ಟುಕೊಳ್ಳಿ, ಶುಂಠಿಬೆಳ್ಳುಳ್ಳಿ ಪೇಸ್ಟ್ 1 ಟೀ ಚಮಚ, ಚಿಲ್ಲಿ ಪ್ಲಾಕ್ಸ್ 1 ಟೇಬಲ್ ಚಮಚ, ಮಿಕ್ಸೆಡ್ ಹರ್ಬ್ 1/2 ಟೀ ಚಮಚ, ಗರಂಮಸಾಲೆ 1/2 ಟೀ ಚಮಚ, ಜೀರಿಗೆಪುಡಿ 1 ಟೀ ಚಮಚ, ಧನಿಯಾಪುಡಿ 1 ಟೀ ಚಮಚ, ರುಚಿಗೆ ತಕ್ಕಷ್ಟು ಉಪ್ಪು, ಬ್ರೆಡ್ ಕ್ರಮ್ಸ್ 1/2 ಕಪ್, ಕೊತ್ತಂಬರಿ ಸೊಪ್ಪು 2 ಟೇಬಲ್ ಚಮಚ.

ಪೇಸ್ಟ್ ತಯಾರಿಸಿಲು: ಕಾರ್ನ್ ಫ್ಲೋರ್ 2 ಟೇಬಲ್ ಚಮಚ, ಮೈದಾಹಿಟ್ಟು 2 ಟೇಬಲ್ ಚಮಚ, 1 ಟೇಬಲ್ ಚಮಚ ಚಿಲ್ಲಿ ಪ್ಲಾಕ್ಸ್, 1/4 ಟೀ ಚಮಚ ಉಪ್ಪು, ಬ್ರೆಡ್ ಕ್ರಮ್ಸ್ ಸ್ವಲ್ಪ, ಕರಿಯಲು ಎಣ್ಣೆ.

ತಯಾರಿಸುವ ವಿಧಾನ: ಆಲೂಗೆಡ್ಡೆಯನ್ನು ಬೇಯಿಸಿ ನುಣ್ಣಗೆ ಪುಡಿ ಮಾಡಿಕೊಂಡು ಬಟ್ಟಲಿಗೆ ಹಾಕಿ. ಜೊತೆಗೆ ಮೇಲೆ ತಿಳಿಸಿರುವ ಎಲ್ಲಾ ಪದಾರ್ಥಗಳನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಈ ಮಿಶ್ರಣದಿಂದ ಚಿಕ್ಕ ಚಿಕ್ಕ ಉಂಡೆಗಳನ್ನು ತಯಾರಿಸಿಕೊಳ್ಳಿ. ಒಂದು ಚಿಕ್ಕ ಬಟ್ಟಲಿಗೆ ಕಾರ್ನ್ ಫ್ಲೋರ್, ಮೈದಾ ಹಿಟ್ಟು ಮತ್ತು ಚಿಲ್ಲಿಪ್ಲಾಕ್ಸ್ ಮತ್ತು ಉಪ್ಪನ್ನು ಹಾಕಿ ನೀರನ್ನು ಸೇರಿಸಿ ದೋಸೆ ಹಿಟ್ಟಿಗಿಂತ ಸ್ವಲ್ಪ ತೆಳ್ಳಗೆ ಕಲಸಿಕೊಳ್ಳಿ. ತಯಾರಿಸಿಕೊಂಡ ಉಂಡೆಗಳನ್ನು ಹಿಟ್ಟಿನಲ್ಲಿ ಅದ್ದಿ ಬಳಿಕ ಬ್ರೆಡ್ ಕ್ರಮ್ಸ್‌ನಲ್ಲಿ ಉರುಳಿಸಿ. ಎಲ್ಲವನ್ನೂ ಹಾಗೆ ಮಾಡಿಕೊಂಡು ತಟ್ಟೆಯಲ್ಲಿಟ್ಟುಕೊಳ್ಳಿ. ನಂತರ ಎಣ್ಣೆಯನ್ನು ಬಿಸಿ ಮಾಡಿಕೊಂಡು ತಯಾರಿಸಿದ ಆಲೂ ಬಾಲ್ಸ್ ಹಾಕಿ. ಎರಡೂ ಬದಿ ಕೆಂಬಣ್ಣ ಬಂದಾಗ ಎಣ್ಣೆಯಿಂದ ತೆಗೆಯಿರಿ.

ವೆಜಿಟೇಬಲ್ ಸ್ಯಾಂಡ್‌ವಿಚ್

ಬೇಕಾಗುವ ಸಾಮಗ್ರಿಗಳು: ಆಲೂಗೆಡ್ಡೆ 2, ಚಿಕ್ಕದಾಗಿ ಹೆಚ್ಚಿದ ಈರುಳ್ಳಿ 1, ಬೇಯಿಸಿದ ಬಟಾಣಿ 1/2 ಕಪ್, 1 ಕ್ಯಾರೆಟ್ ತುರಿ, ಚಿಕ್ಕದಾಗಿ ಕತ್ತರಿಸಿದ ಹಸಿಮೆಣಸಿನಕಾಯಿ 2, ಚಿಕ್ಕದಾಗಿ ಕತ್ತರಿಸಿದ ಕೊತ್ತಂಬರಿಸೊಪ್ಪು 2 ಟೇಬಲ್ ಚಮಚ, ಅಚ್ಚಖಾರದಪುಡಿ 1/2 ಟೀ ಚಮಚ, ಅಮ್‌ಚೂರ್ ಪುಡಿ 1/2 ಟೀ ಚಮಚ, ಚಾಟ್ ಮಸಾಲೆ 1/2 ಟೀ ಚಮಚ, ಕಾಳುಮೆಣಸಿನಪುಡಿ 1/2 ಟೀ ಚಮಚ, ಉಪ್ಪು 1/2 ಟೀ ಚಮಚ, ಬೇಯಿಸಿದ ಕಾರ್ನ್ 1/2 ಕಪ್, ಬ್ಲಾಕ್ ಸಾಲ್ಟ್ 1/2 ಟೀ ಚಮಚ.

ಬ್ರೆಡ್ ಸ್ಲೈಸ್, ಟೊಮೆಟೊ ಕೆಚಪ್, ಖಾರ ಚಟ್ನಿ, ಸ್ವಲ್ಪ ವೃತ್ತಾಕಾರವಾಗಿ ಕತ್ತರಿಸಿದ ಟೊಮೆಟೊ, ಚೀಸ್ ಸ್ಲೈಸ್, ಬೇಯಿಸಲು ಬೆಣ್ಣೆ, ಚಿಲ್ಲಿ ಪ್ಲೆಕ್ಸ್ ಸ್ವಲ್ಪ.

ತಯಾರಿಸುವ ವಿಧಾನ: ಆಲೂಗೆಡ್ಡೆಯನ್ನು ಪುಡಿ ಮಾಡಿಕೊಂಡು ಮೇಲೆ ತಿಳಿಸಿರುವ ಉಳಿದ ಪದಾರ್ಥಗಳನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಬಳಿಕ ಒಂದು ಬ್ರೆಡ್ ಸ್ಲೈಸ್ ಮೇಲೆ ಟೊಮೆಟೊ ಕಚಪ್ ಹರಡಿ, ಮತ್ತೊಂದು ಬ್ರೆಡ್ ಸ್ಲೈಸ್ ಮೇಲೆ ಖಾರ ಚಟ್ನಿ ಹರಡಿ. ನಂತರ ತಯಾರಿಸಿದ ಆಲೂಗೆಡ್ಡೆಯ ಮಸಾಲೆ ಮಿಶ್ರಣವನ್ನು ಸ್ವಲ್ಪ ಅದರ ಮೇಲೆ ಹರಡಿ. ಬಳಿಕ ಕತ್ತರಿಸಿದ ಎರಡು ಟೊಮೆಟೊ ಬಿಲ್ಲೆ ಮತ್ತು ಅದರ ಮೇಲೆ ಚಿಲ್ಲಿ ಪ್ಲೆಕ್ಸ್ ಸ್ವಲ್ಪ ಹಾಕಿ. ನಂತರ ಚೀಸ್ ಸ್ಲೈಸ್ ಅದರ ಮೇಲಿಟ್ಟು ಕಚಪ್ ಹಚ್ಚಿದ ಬ್ರೆಡ್ ಸ್ಲೈಸ್ ಅದರ ಮೇಲಿಡಿ. ತವವನ್ನು ಬಿಸಿ ಮಾಡಿಕೊಂಡು ಬೆಣ್ಣೆಯನ್ನು ಹಾಕಿ. ತಯಾರಿಸಿದ ಸ್ಯಾಂಡ್ವಿಚ್‌ನ್ನು ಅರ್ಲಲಿಟ್ಟು ಅದರ ಮೇಲ್ಭಾಗಕ್ಕೆ ಬೆಣ್ಣೆ ಹಾಕಿ ಮುಚ್ಚಳ ಮುಚ್ಚಿ. ಎರಡೂ ಬದಿಯೂ ಕೆಂಬಣ್ಣ ಬರುವವರೆಗೆ ಬೇಯಿಸಿ.

ಪನ್ನೀರ್ ಕಟ್ಲೆಟ್

ಬೇಕಾಗುವ ಸಾಮಗ್ರಿಗಳು: ಪನ್ನೀರ್ 400ಗ್ರಾಂ, ಈರುಳ್ಳಿ ಚಿಕ್ಕದಾಗಿ ಹೆಚ್ಚಿದ್ದು 1, ತುರಿದ ಕ್ಯಾರೆಟ್ 1, ಚಿಕ್ಕದಾಗಿ ಹೆಚ್ಚಿದ ಎಲೆಕೋಸು 1 ಕಪ್, ಚಿಕ್ಕದಾಗಿ ಹೆಚ್ಚಿದ ಕ್ಯಾಪ್ಸಿಕಂ 1/2, ಬೇಯಿಸಿ ನುಣ್ಣಗೆ ಪುಡಿ ಮಾಡಿದ ಆಲೂಗೆಡ್ಡೆ 2, ಚಿಕ್ಕದಾಗಿ ಕತ್ತರಿಸಿ ಹಸಿಮೆಣಸಿನಕಾಯಿ 2, ಚಿಕ್ಕದಾಗಿ ಕತ್ತರಿಸಿದ ಕೊತ್ತಂಬರಿ ಸೊಪ್ಪು 3 ರಿಂದ 4 ಟೇಬಲ್ ಚಮಚ, ಶುಂಠಿಬೆಳ್ಳುಳ್ಳಿ ಪೇಸ್ಟ್ 1 ಟೀ ಚಮಚ, ಚಾಟ್ ಮಸಾಲ 1 ಟೀ ಚಮಚ, ಗರಂಮಸಾಲ 1/2 ಟೀ ಚಮಚ, ಜೀರಿಗೆಪುಡಿ 1/2 ಟೀ ಚಮಚ, ಅಚ್ಚಖಾರದಪುಡಿ 1 ಟೀ ಚಮಚ, ಅಮ್ ಚೂರ್ ಪುಡಿ 1/2 ಟೀ ಚಮಚ, ರುಚಿಗೆ ತಕ್ಕಷ್ಟು ಉಪ್ಪು, ಅರಶಿನ 1/4 ಟೀ ಚಮಚ.

ಪೇಸ್ಟ್ ತಯಾರಿಸಿಕೊಳ್ಳಲು: ಕಾರ್ನ್ ಫ್ಲೋರ್ 4 ಟೇಬಲ್ ಚಮಚ, 1/2 ಟೀ ಚಮಚ ಚಿಲ್ಲಿ ಪ್ಲೆಕ್ಸ್, ಬ್ರೆಡ್ ಕ್ರಮ್ಸ್ ಸ್ವಲ್ಪ, ಕರಿಯಲು ಎಣ್ಣೆ.

ತಯಾರಿಸುವ ವಿಧಾನ: ಪನ್ನೀರ್‌ಅನ್ನು ಪುಡಿ ಮಾಡಿಕೊಂಡು ಅದರೊಂದಿಗೆ ತಿಳಿಸಿರುವ ಎಲ್ಲಾ ಪದಾರ್ಥಗಳನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಬಳಿಕ ತಯಾರಿಸಿಕೊಂಡ ಮಿಶ್ರಣದಿಂದ ದೊಡ್ಡ ದೊಡ್ಡ ಉಂಡೆಗಳನ್ನು ಮಾಡಿಕೊಂಡು ಅದನ್ನು ಸಮತಟ್ಟಾಗಿ ತಟ್ಟಿಕೊಳ್ಳಿ. ಒಂದು ಚಿಕ್ಕ ಬಟ್ಟಲಿಗೆ ಕಾರ್ನ್ ಫ್ಲೋರ್, ಚಿಲ್ಲಿ ಪ್ಲೆಕ್ಸ್ ಮತ್ತು ಸ್ವಲ್ಪ ನೀರನ್ನು ಹಾಕಿ ದೋಸೆ ಹಿಟ್ಟಿನ ಹದದಲ್ಲಿ ಕಲಸಿಕೊಳ್ಳಿ. ತಯಾರಿಸಿದ ಪನ್ನೀರ್ ಕಟ್ಲೆಟ್‌ಅನ್ನು ಹಿಟ್ಟಿನಲ್ಲಿ ಅದ್ದಿ ನಂತರ ಬ್ರೆಡ್ ಕ್ರಮ್ಸ್ ಅದರ ಮೇಲೆ ಮತ್ತು ಸುತ್ತಲೂ ಹರಡಿ. ಎಲ್ಲವನ್ನು ಹೀಗೆ ಮಾಡಿ ತಟ್ಟೆಯಲ್ಲಿಟ್ಟುಕೊಳ್ಳಿ. ನಂತರ ಎಣ್ಣೆಯನ್ನು ಬಿಸಿ ಮಾಡಿಕೊಂಡು ತಯಾರಿಸಿಕೊಂಡ ಕಟ್ಲೆಟ್‌ನ್ನು ಹಾಕಿ. ಮಧ್ಯಮ ಉರಿಯಲ್ಲಿ ಎರಡೂ ಬದಿಯನ್ನು ಕೆಂಬಣ್ಣಕ್ಕೆ ಬರುವವರೆಗೆ ಬೇಯಿಸಿ ಎಣ್ಣೆಯಿಂದ ತೆಗೆಯಿರಿ.

ರಸಾಸ್ವಾದ

ಬಾಳೆಕಾಯಿ ಬಜ್ಜಿ

ಬೇಕಾಗುವ ಸಾಮಗ್ರಿಗಳು: ಬಾಳೆಕಾಯಿ 250 ಗ್ರಾಂ, ಅಜವಾನ 1/2 ಟೀ ಚಮಚ, ಜೀರಿಗೆ 1/2 ಟೀ ಚಮಚ, ಧನಿಯಾ 1 ಟೀ ಚಮಚ, ಕಡಲೆಹಿಟ್ಟು 1 ಕಪ್, ರುಚಿಗೆ ತಕ್ಕಷ್ಟು ಉಪ್ಪು, ಅರಶಿನ 1/4 ಟೀ ಚಮಚ, ಅಚ್ಚಖಾರದ ಪುಡಿ 1/4 ಟೀ ಚಮಚ, ನೀರು 1/2 ಕಪ್, ಕರಿಯಲು ಎಣ್ಣೆ.

ತಯಾರಿಸುವ ವಿಧಾನ: ಬಾಳೆಕಾಯಿಯ ಸಿಪ್ಪೆಯನ್ನು ತೆಗೆದು ಒಂದೇ ರೀತಿಯಲ್ಲಿ ತೆಳುವಾಗಿ ಕತ್ತರಿಸಿ ಐದಾರು ನಿಮಿಷಗಳ ಕಾಲ ನೀರಿನಲ್ಲಿ ನೆನೆಸಿಡಿ. ನಂತರ ಬಾಣಲೆಯಲ್ಲಿ ಅಜವಾನ, ಜೀರಿಗೆ ಮತ್ತು ಧನಿಯಾವನ್ನು ಕೆಂಬಣ್ಣ ಬರುವವರೆಗೆ ಹುರಿದು ಕೊಳ್ಳಿ. ಈ ಹುರಿದ ಪದಾರ್ಥಗಳನ್ನು ತರಿ ತರಿಯಾಗಿ ಕುಟ್ಟಿ ಪುಡಿಮಾಡಿ ಕೊಳ್ಳಿ. ಒಂದು ಬೌಲಿನಲ್ಲಿ ಕಡಲೆಹಿಟ್ಟು ಹಾಕಿ. ಜೊತೆಗೆ ಅರಶಿನ, ಅಚ್ಚಖಾರದ ಪುಡಿ, ಉಪ್ಪು ಮತ್ತು ತಯಾರಿಸಿದ ಮಸಾಲೆ ಪುಡಿಯನ್ನು ಸೇರಿಸಿ ಮಿಶ್ರಣ ಮಾಡಿ. ಈ ಮಿಶ್ರಣಕ್ಕೆ ನೀರನ್ನು ಸೇರಿಸಿ ಕಲಸಿ ಕೊಳ್ಳಿ. ನೀರಿನಲ್ಲಿ ನೆನೆಸಿ ಕೊಂಡ ಬಾಳೆಕಾಯಿಯನ್ನು ನೀರಿನಿಂದ ತೆಗೆದು ಒಂದು ತಟ್ಟೆಯಲ್ಲಿ ಇಟ್ಟುಕೊಳ್ಳಿ. ಈಗ ಕತ್ತರಿಸಿದ ಬಾಳೆಕಾಯಿಯನ್ನು ಹಿಟ್ಟಿನಲ್ಲಿ ಅದ್ದಿ ಬಿಸಿ ಎಣ್ಣೆಗೆ ಬಿಡಿ. ಎಣ್ಣೆಯಲ್ಲಿ ಎರಡೂ ಬದಿಯು ಕೆಂಬಣ್ಣ ಬರುವವರೆಗೆ ಮಧ್ಯಮ ಉರಿಯಲ್ಲಿ ಬೇಯಿಸಿ. ಬೆಂದ ಬಾಳೆಕಾಯಿ ಬಜ್ಜಿಯನ್ನು ಎಣ್ಣೆಯಿಂದ ತೆಗೆದು ಸರ್ವ್ ಮಾಡಿ. ಬಾಳೆಕಾಯಿ ಬಜ್ಜಿಯೊಂದಿಗೆ ತೆಂಗಿನಕಾಯಿ ಚಟ್ನಿ ಅಥವಾ ಟೊಮೆಟೊ ಕೆಚಪ್ ಹಾಕಿಕೊಂಡು ತಿನ್ನಬಹುದು.

ಬಾಲೆಯರ ಲಂಗಗಳ ಲೋಕದಲ್ಲಿ

ಫ್ಯಾಷನ್

ಪವಿತ್ರಾ ಭಟ್

ಹಬ್ಬಗಳೆಂದರೆ ಹಾಗೆ... ಸಡಗರ– ಸಂಭ್ರಮ. ಹೆಣ್ಣುಮಕ್ಕಳಿಗಂತೂ ಚೆಂದದ ಹೊಸ ಬಟ್ಟೆ ತೊಟ್ಟು ಮನೆಯೆಲ್ಲಾ ಓಡಾಡುವ ಹುರುಪು. ಹಬ್ಬಗಳಲ್ಲಿ ಸಾಂಪ್ರದಾಯಿಕ ಉಡುಗೆಗಳಿಗೇ ಹೆಚ್ಚು ಪ್ರಾಶಸ್ತ್ಯ. ಇತ್ತೀಚಿನ ದಿನಗಳಲ್ಲಿ ಫ್ಯಾಶನ್ ಆಗಿ ಇರಬೇಕೆಂದೇ ಎಲ್ಲರೂ ಬಯಸುತ್ತಾರೆ. ಸಾಂಪ್ರದಾಯಿಕವಾಗಿಯೂ ಕಾಣುವಂತೆ ಟ್ರೆಂಡ್ ಉಡುಪನ್ನು ಧರಿಸಬಹುದು. ಅದಕ್ಕೆ ಸ್ಕರ್ಟ್ ಅಥವಾ ಲಂಗಗಳು ಉತ್ತಮ ಆಯ್ಕೆ. ಎಲ್ಲಾ ಕಾಲದಲ್ಲೂ ಹೆಂಗಳೆಯರ ನೆಚ್ಚಿನ ಉಡುಪು ಲಂಗ. ಅದಕ್ಕೀಗ ಫ್ಯಾಷನ್ ಟಚ್ ನೀಡಿ ಇನ್ನಷ್ಟು ಆಕರ್ಷಕವಾಗಿ ಮಾಡಲಾಗಿದೆ. ಹಬ್ಬಗಳಲ್ಲಿ, ಸಮಾರಂಭಗಳಲ್ಲಿ ಸಾಂಪ್ರದಾಯಿಕವಾಗಿ ಕಾಣಲು ಸ್ಕರ್ಟ್‌ಗಳು ಬೆಸ್ಟ್.

ಲಾಂಗ್ ಸ್ಕರ್ಟ್‌ಗಳು: ಬಣ್ಣದ ಬಣ್ಣದ ಲಾಂಗ್ ಸ್ಕರ್ಟ್‌ಗಳು ಹಬ್ಬಗಳ ಸಂದರ್ಭದಲ್ಲಿ ಹೇಳಿ ಮಾಡಿಸಿದ ಉಡುಗೆಯಾಗಿದೆ. ಅದರಲ್ಲೂ ಡಿಸೈನ್ ಇರದ ಕೆಂಪು, ಗೋಲ್ಡ್, ಗಾಢ ಗುಲಾಬಿ, ಗಾಢ ನೀಲಿ ಬಣ್ಣದ ಲಾಂಗ್ ಸ್ಕರ್ಟ್‌ಗಳು ರಿಚ್ ಲುಕ್ ನೀಡುತ್ತವೆ. ಈ ರೀತಿಯ ಸ್ಕರ್ಟ್‌ಗಳಿಗೆ ಶಾರ್ಟ್ ಟಾಪ್‌ಗಳು ಒಪ್ಪುತ್ತವೆ.

ರಾಜಸ್ಥಾನಿ ಲಾಂಗ್ ಸ್ಕರ್ಟ್: ಹೆಚ್ಚಾಗಿ ಕಾಟನ್ ಬಟ್ಟೆಗಳಿಂದ ತಯಾರಾಗುವ ರಾಜಸ್ಥಾನಿ ಲಾಂಗ್ ಸ್ಕರ್ಟ್‌ಗಳು ಧರಿಸಲು ಹಿತವಾಗಿರುತ್ತವೆ. ಒಂದೇ ಸ್ಕರ್ಟ್‌ನಲ್ಲಿ ವಿವಿಧ ಬಣ್ಣಗಳು, ಚೆಂದದ ಡಿಸೈನ್‌ಗಳನ್ನು ಕಾಣಬಹುದು. ಕಲಂಕಾರಿ, ಟೆಂಪಲ್. ಆನೆ–ರಥಗಳಿರುವ ಆರ್ಟ್‌ಗಳು ಈ ರಾಜಸ್ಥಾನಿ ಸ್ಕರ್ಟ್‌ಗಳ ವಿಶೇಷತೆಯಾಗಿದೆ.

ಕುರ್ತಾದೊಂದಿಗೆ ಸ್ಕರ್ಟ್‌ಗಳು: ಕುರ್ತಾಗಳಿಗೆ ವಿವಿಧ ರೀತಿಯ ಪ್ಯಾಂಟ್‌ಗಳನ್ನು ಧರಿಸುವುದು ಈಗ ಹಳೆಯ ಫ್ಯಾಶನ್. ಏನಿದ್ದರೂ ಆರಾಮದಾಯಕ ಎನಿಸುವ ಸ್ಕರ್ಟ್‌ಗಳು ಕುರ್ತಾಗಳಿಗೆ ಧರಿಸಿದರೆ ವಿಭಿನ್ನ ಲುಕ್ ನೀಡುತ್ತದೆ. ಸ್ಕರ್ಟ್ ಅನ್ನು ಕಾಂಟ್ರಾಸ್ಟ್ ಕುರ್ತಾದೊಂದಿಗೆ ಧರಿಸಿ. ಅದಕ್ಕೆ ಹೊಂದಿಕೆಯಾಗುವ ದುಪಟ್ಟಾವನ್ನು ಧರಿಸಲು ಮರೆಯದಿರಿ.

ಫ್ಲೇರ್ಡ್ ಸ್ಕರ್ಟ್‌ಗಳು: ಒಂದೊಂದು ಬಟ್ಟೆಯ ತುಂಡನ್ನು ಸೇರಿಸಿ ವಿಭಿನ್ನವಾಗಿ ವಿನ್ಯಾಸಗೊಳಿಸಿರುವ ಫ್ಲೇರ್ಡ್ ಸ್ಕರ್ಟ್‌ಗಳು ಸಾಂಪ್ರದಾಯಿಕ ಲುಕ್ ನೀಡಬಲ್ಲದು. ಅದರಲ್ಲೂ ಕಾಂಟ್ರಾಸ್ಟ್ ಕಲರ್ ಬಟ್ಟೆಗಳನ್ನು ಜೋಡಿಸಿದ ಸ್ಕರ್ಟ್‌ಗಳು ಹೆಚ್ಚು ಆಕರ್ಷಕವಾಗಿರುತ್ತವೆ. ಈ ಸ್ಕರ್ಟ್‌ಗಳ ಮೇಲೆ, ಹೂವು, ಬಳ್ಳಿಗಳ ಚಿತ್ರ, ಪೇಂಟಿಂಗ್‌ಗಳು, ಬಣ್ಣದ ವಿನ್ಯಾಸವನ್ನು ಕಾಣಬಹುದು.

ನೆರಿಗೆಯುಳ್ಳ ಸ್ಕರ್ಟ್

ನೆರಿಗೆ ಇರುವ ಸ್ಕರ್ಟ್‌ಗಳು ವಿಭಿನ್ನ ಲುಕ್ ನೀಡುವಲ್ಲಿ ಎರಡು ಮಾತಿಲ್ಲ. ಉದ್ದನೆಯ ನೆರಿಗೆಯುಳ್ಳ ಸ್ಕರ್ಟ್‌ಗಳನ್ನು ಹಬ್ಬ, ಪಾರ್ಟಿ, ಕಚೇರಿ, ಡಿನ್ನರ್ ಎಲ್ಲಾ ಸಂದರ್ಭದಲ್ಲೂ ಧರಿಸಲು ಸೂಕ್ತವಾಗಿರುತ್ತದೆ. ನೆರಿಗೆ ಇರುವ ಟ್ರೆಂಡಿ ಸ್ಕರ್ಟ್‌ನೊಂದಿಗೆ ಸ್ಲೀವ್‌ಲೆಸ್ ಟಾಪ್ ಧರಿಸಬಹುದು.

ಲೇಯರ್ಡ್ ಸ್ಕರ್ಟ್

ಒಂದರ ಮೇಲೊಂದು ಪದರ. ಗೆಜ್ಜೆಯಂತೆ ಕಾಣಿಸುವ ಲೇಯರ್ಡ್ ಸ್ಕರ್ಟ್‌ಗಳು ಪುಟ್ಟ ಮಕ್ಕಳಿಗಂತೂ ಅಚ್ಚುಮೆಚ್ಚು. ಒಂದೊಂದು ಲೇಯರ್ ತುದಿಗೂ ಸಣ್ಣಗೆ ಮಿಂಚುವ ಲೇಸ್‌ಗಳು, ಥೇಟ್ ಶರಾರ ಪ್ಯಾಂಟ್‌ನಂತೆ ಕಾಣಿಸುವ ಸ್ಕರ್ಟ್‌ಗಳನ್ನು ಹಬ್ಬಗಳಲ್ಲಿ ಧರಿಸಿದರೆ ಮೆರುಗು ನೀಡುತ್ತದೆ.

ಆಹಾ... ರುಚಿ, ಮಂಡಕ್ಕಿ, ಮಿರ್ಚಿ

ರಶ್ಮಿ ಎಸ್

ತಣ್ಣನೆಯ ಮಳೆ, ಗಾಳಿಯ ಸುಖ ಅನುಭವಿಸಲು ತಟ್ಟೆಯಲ್ಲಿ ಬಿಸಿಬಿಸಿ ಮಂಡಕ್ಕಿ, ಮಿರ್ಚಿ, ಜೊತೆಗೊಂದಿಷ್ಟು ಚಹಾ ಇದ್ದರೆ ಸ್ವರ್ಗಕ್ಕೆ ಕಿಚ್ಚು ಹಚ್ಚೆನ್ನುವಂಥ ಜೀವನ ನಮ್ಮದಾಗುತ್ತದೆ. ಎಂದೂ ಮರೆಯಲಾಗದ ಸಂಜೆಯ ಕುರಿತು ಇಲ್ಲೊಂದಿಷ್ಟು...

ಒಂದ್ಕಡೆ ನುಣ್ಣನೆಯ ಹೊಂಬಣ್ಣದ ಕಡಲೆ ಹಿಟ್ಟು ಜರಡಿಯಿಂದ ಸೋಸಿ ಪಾತ್ರೆಗೆ ಬೀಳುತ್ತಿರುತ್ತದೆ. ಥೇಟ್ ಇದಕ್ಕೆ ಜುಗಲ್ಬಂದಿಯಂತೆ ಆಕಾಶಕ್ಕೆ ತೂತು ಬಿದ್ದಂತೆ ಹಿಟ್ಟು ಸೋಸಿದಂಥ ಸೋನೆಮಳೆ ಹೊರಗೆ ಸುಳಿಯುತ್ತಿರುತ್ತದೆ.

ಇದ್ದಕ್ಕಿದ್ದಂತೆ ಮೈಮನಗಳಿಗೆ ಬಿಸುಪು ಬೇಕೆನಿಸುವಾಗ ಹಸಿಮೆಣಸಿನಕಾಯಿಯನ್ನು ಸವರುತ್ತೇವೆ. ಉದ್ದುದ್ದ ಸೀಳಿ, ಉಪ್ಪು, ಜೀರಿಗೆಪುಡಿಯುಣಿಸಿ, ಪಕ್ಕದಲ್ಲಿಟ್ಟು ಕಡಲೆ ಹಿಟ್ಟಿಗೆ ನೀರು, ಓಂಕಾಳು, ಜೀರಿಗೆ ಹಾಕಿ, ಗರಗರಗರ ತಿರುಗಣಿಯಂತೆ ತಿರುಗಿಸಿ, ನುಣ್ಣಗಾಗಿ ಕಾಯುತ್ತದೆ. ಅಗತ್ಯವಿದ್ದವರು ಸೋಡಾ ಹಾಕಿದರೆ, ಬೇಡವಾದವರು ನಿಂಬೆರಸ ಹಿಂಡಿ, ಸಕ್ಕರೆ ಹಾಕಿ ಕಲಿಸಿಡುತ್ತಾರೆ.

ಇಷ್ಟಾಗುವಾಗ ಸಿಮೆಂಟು ಚೀಲದಂಥ ಚೀಲದಿಂದ ಮಂಡಕ್ಕಿ ಒಂದು ಮೊರಕ್ಕೆ ಸುರಿದಾಗ ಸ್ವರ್ಗಲೋಕದ ಅಕ್ಕಿಕಾಳಂತೆ ಕಾಣುತ್ತವೆ. ಅವನ್ನು ಗಾಳಿಗೆ ಬೀರಿ, ನೀರಿಗೆ ಹಾಕಿದಾಗ ಅವೆಲ್ಲವೂ ಏಕ್ದಮ್ ಮಾತಿಗಿಳಿದಂತೆ ವರವರ, ಚೊರಚೊರ ಸದ್ದು.

ನೆನಪುಗಳಲ್ಲೆ ನೆನೆದು ತಣಿದು ಬದುಕು ನಮಗೆ ಹಿಂಡಿ ಹಿಪ್ಪೆ ಮಾಡುವಂತೆಯೇ ಇಡೀ ಚುರುಮುರಿಯನ್ನು ಅಂಗೈಯಲ್ಲಿ ಒತ್ತಿ, ನೆನೆಸಿ, ಹಿಂಡಿ ಹಿಪ್ಪೆ ಮಾಡಿ, ಘರಾತಕ್ಕೆ ಹಾಕಬೇಕು. ಹಂಗೆ ಪ್ರತಿ ಸಲ ಚುರುಮುರಿ ತೆಗೆದಾಗಲೂ, ಕಂಡೂ ಕಾಣದಂತಿದ್ದ ದೂಳು ನೀರಿನ ಬಣ್ಣವನ್ನು ರಾಡಿಯಾಗಿಸಿರುತ್ತದೆ. ಶುಭ್ರ ಶ್ವೇತ ಬಣ್ಣದ ಚುರುಮುರಿಯಲ್ಲಿ ಎಲ್ಲಡಗಿತ್ತು ಈ ರಾಡಿ ಎಂದು ದ್ವೈತಾದ್ವೈತಗಳ ತರ್ಕದಲ್ಲಿರುವಾಗಲೇ.. ಚುರುಮರಿ ಮಾಡುವ ಜಬಾಬ್ದಾರಿ ಹೊತ್ತವರು ಕಣ್ಣೀರಾಗಿರುತ್ತಾರೆ. ಈರುಳ್ಳಿ ಹೆಚ್ಚುವ ಕೆಲಸವಿದೆಯಲ್ಲ, ಎಲ್ಲ ಗೊತ್ತಿದ್ದೂ ಬಯಲಾಗುವ ಪ್ರಕ್ರಿಯೆ ಅದು. ಚಕಚಕನೆ ಕಟ್ ಮಾಡಿ, ಮಳೆಯಲ್ಲಿ ನೆನೆಯುವುದೆಂದರೆ ಇಷ್ಟ ನನಗೆ. ಕಣ್ಣೀರು ಹರಿಸಿದ್ದೂ ಗೊತ್ತಾಗದು ಎಂದು ಹೇಳಿದ ಚಾರ್ಲಿಚಾಪ್ಲಿನ್ ಮಾತನ್ನು ನೆನಪಿಸಿಕೊಳ್ಳುತ್ತ ಮತ್ತೆ ಕಣ್ಣೀರಾಗುತ್ತೇವೆ. ಆದರೆ ಈ ಕಣ್ಣೀರಿನ ನಂತರ ಸುಖದಾನುಭವ ಕಾಯುತ್ತಿರುತ್ತದೆ. ಅದೇ ಹೊತ್ತಿಗೆ ಒಲೆಯ ಮೇಲಿನ ಬಾಣಲೆಯೂ ಕಾದಿರುತ್ತದೆ. ಚುರುಮುರಿಯಿದ್ದಷ್ಟು, ಎಣ್ಣೆ ಹಾಕಿ, ಮೊದಲು ಕಡಲೆಬೀಜ ಹಾಕಿ, ಅವು ಮೈ ಕೆಂಪಗಾಗಿಸುವಾಗಲೇ ಹಸಿಮೆಣಸು ಹಾಕಿ, ಹಸಿರೆಲ್ಲ ಬೆಂದು ಬಿಳಿಯಾಗುವಾಗ, ಈರುಳ್ಳಿ ಹಾಕಿ ಚೊರ್ ಅನಿಸಬೇಕು. ಈರುಳ್ಳಿ ತನ್ನ ಹಟ ಬಿಟ್ಟು ಮಿದುವಾಗುವಾಗ ಹುಣಸೆಹಣ್ಣಿನ ರಸ ಬೆರೆಸಿದರೆ ರಾಯಚೂರು, ಕೊಪ್ಪಳ, ಕರ್ನೂಲು ಜಿಲ್ಲೆಗಳ ಒಗ್ಗರಣೆ ಅಥವಾ ಒಗ್ಗಾಣಿಯ ಒಬಗ್ಗರಣೆ ಅದು. ಒಗ್ಗರಣೆಗೆ ಖಾರದ ಪುಡಿಹಾಕಿದರೆ ಯಾದಗಿರಿಯ ಸುಸುಲಾ. ಕಲಬುರ್ಗಿಯಲ್ಲಿ ಹಳದಿಬಣ್ಣದ ಈ ಒಗ್ಗರಣೆಗೆ ಸುಶಲಾ, ಶುಸ್ಲಾ, ಸುಶಲಾ ಅಂತಲೂ ಕರೆಯುತ್ತಾರೆ. ಇದರಲ್ಲಿ ಹಸಿಮೆಣಸು, ಕರಿಬೇವು ಕೊತ್ತಂಬರಿಯದ್ದೇ ಕಾರುಬಾರು ಜೋರು. ಇಲ್ಲಿ ಒಗ್ಗರಣೆ ಹುಳಿಯೊಂದಿಗೆ ಬೇಯುವಾಗ, ಹಿಂಡಿಹಿಪ್ಪೆ ಮಾಡಿ ಗುಡ್ಡೆ ಹಾಕಿದ ಚುರುಮುರಿಯ ಮೇಲೆ ಹುರಿಗಡಲೆ ಪುಡಿ, ಸಕ್ಕರೆ ಹುಡಿ ಉದುರಿಸಿ ಆಮೇಲೆ ಅದನ್ನು ಒಗ್ಗರಣೆಯೊಂದಿಗೆ ಕಲಿಸಲಾಗುತ್ತದೆ. ಹೀಗೆ ಕಲಿಸುವಾಗ ಮಂದವಾದ ರುಚಿಬೇಕೆನಿಸಿದರೆ ಚೂರು ಹಾಲನ್ನೂ ಹಾಕುತ್ತಾರೆ. ರಾಯಚೂರು, ಮಾನವಿ, ಮಸ್ಕಿಗಳಲ್ಲಿಯಂತೂ ಹೀರೆಕಾಯಿ, ತುಪ್ಪದ ಹೀರೆಕಾಯಿಯನ್ನು ಒಗ್ಗರಣೆಗೆ ಬೆರೆಸುತ್ತಾರೆ. ಪ್ರತಿಸಲವೂ ವಿಶಿಷ್ಟ ರುಚಿಯೊಂದಿಗೆ ಈ ಒಗ್ಗರಣೆ ತಯಾರು ಆಗುತ್ತದೆ. ಬಿಸಿ ಬಿಸಿ ಕಲಿಸುವಾಗಲೇ ಇನ್ನೊಂದೆಡೆ ಎಣ್ಣೆ ಕಾಯುತ್ತಿರುತ್ತದೆ. ಕಾದಿರುವ ಎಣ್ಣೆಗೆ ಹೊಂಬಣ್ಣದ ಹಿಟ್ಟಿನಲ್ಲಿ ಹಸಿರು ಮೆಣಸಿನಕಾಯಿಯನ್ನು ಒಂದು ಮೈ ತಿರುಗಿಸಿ, ಹಿಟ್ಟೆಲ್ಲ ಸವರಿದಂತಾದ ಮೇಲೆ ಅದನ್ನು ಎಣ್ಣೆಗೆ ಬಿಡಲಾಗುತ್ತದೆ. ಎಳೆ ಯುವಕರ ಕೆನ್ನೆಯ ಮೇಲಿನ ಮೊಡವೆಗಳಂತೆ ಎಣ್ಣೆಯೊಳು ಬಿಟ್ಟ ಬಜ್ಜಿ ಸುತ್ತ ಎಣ್ಣೆಗುಳ್ಳೆಗಳೇಳುತ್ತವೆ. ಇವು ಶಾಂತವಾಗುವಾಗ, ಸುಂದರ ಯುವತಿಯ ಕೆನ್ನೆಯಂತೆ ನುಣುಪಿನ, ಹೊಳಪಿನ ಭಜಿಗಳು ಸಕಲಸುದಲ್ಲಿ ತೇಲುವಾಗ ಎಣ್ಣೆಯಿಂದಿತ್ತಿ, ಬಿಸಿ ಒಗ್ಗರಣೆಯ ಬದಿಗೆ ಅಲಂಕರಿಸಲಾಗುತ್ತದೆ.

ಆಹಾ... ಇಷ್ಟೆಲ್ಲ ಆದಮೇಲೆ ಮಳೆಗಾಲದ ಮಜಾ ಸವಿಯಬಹುದು. ಬಾಯ್ತುಂಬ ಉಪ್ಪು, ಖಾರ, ಹುಳಿಯ ರುಚಿಯ ಈ ಒಗ್ಗರಣೆ ಹಲ್ಲುಗಳ ಸಾಲಿನಲ್ಲಿ ಸವಿಯುವಾಗಲೇ ಮಿರ್ಚಿಯನ್ನು ಕಡಿಯಬೇಕು. ಆ ಖಾರ, ಈ ಬಿಸುಪು ಎರಡೂ ಸೇರಿ, ಮನದೊಳಗೆ ರಿಮ್‌ಝಿಮ್ ಗಿರೆ ಸಾವನ್.. ಹಾಡು ಗುನುಗು ವಂತಾಗುತ್ತದೆ.

‘ಕೈಕಟ್ಟಿ ನಿಲ್ಲುವ ಪರಿಸ್ಥಿತಿ ಬಂದರೆ ರಾಜಕಾರಣದಲ್ಲಿ ಇರುವುದಿಲ್ಲ’

ರಕ್ಷಿಸಲು ಗೋಗರೆಯಲ್ಲ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಮೈಸೂರು: ‘ಎಲ್ಲಿಗೂ ಕದ್ದು ಓಡಿ ಹೋಗುವುದಿಲ್ಲ, ರಕ್ಷಿಸುವಂತೆ ಯಾರಲ್ಲೂ ಗೋಗರೆಯಲ್ಲ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

‘ಕುಮಾರಸ್ವಾಮಿಯದ್ದು ಯಾವಾಗಲೂ ಹಿಟ್ ಅಂಡ್ ರನ್ ಕೇಸ್’ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಇಲ್ಲಿ ಶುಕ್ರವಾರ ತಿರುಗೇಟು ನೀಡಿ, ‘ನನ್ನನ್ನು ಉಳಿಸಿ ಎಂದು ಕೈಕಟ್ಟಿ ನಿಲ್ಲಬೇಕಾಗಿ ಬಂದರೆ ರಾಜಕಾರಣದಲ್ಲಿ ಐದು ಸೆಕೆಂಡ್ ಕೂಡ ಇರುವುದಿಲ್ಲ’ ಎಂದರು.

‘ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಗಂಗೇನಹಳ್ಳಿಯಲ್ಲಿ ಬಹುಕೋಟಿ ಮೌಲ್ಯದ 1 ಎಕರೆ 11 ಗುಂಟೆ ಜಮೀನು ಡಿನೋಟಿಫಿಕೇಷನ್ ನಡೆದಿದೆ. ಇದೊಂದು ವ್ಯವಸ್ಥಿತ ದರೋಡೆ’ ಎಂಬ ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿಕೆಗೆ ಪ್ರತಿಕ್ರಿಯಿಸಿ, ‘ಮಿಸ್ಟರ್ ಕೃಷ್ಣ ಬೈರೇಗೌಡ ಯಾರನ್ನೋ ಮೆಚ್ಚಿಸಲು ಏನೇನೋ ಮಾತನಾಡಬೇಡ. ನೀನೇನು ಸತ್ಯಹರಿಶ್ಚಂದ್ರನಾ, ನಿನ್ನ ಇಲಾಖೆಯಲ್ಲಿ ಏನೇನು ಮಾಡಿದೀಯಾ ಗೊತ್ತಿದೆ. ನೀವು ಏನೇ ಮಾಡಿದರೂ ನನ್ನದು ಏನೂ ಸಿಗುವುದಿಲ್ಲ’ ಎಂದರು.

‘ಕೃಷ್ಣ ಬೈರೇಗೌಡ ವಿದೇಶದಲ್ಲಿ ಓದಿದವನು, ಬಹಳ ಜ್ಞಾನಿ ಎಂದುಕೊಂಡಿದ್ದೆ. ಹೆಬ್ಬೆಟ್ಟು ಎಂದುಕೊಂಡಿರಲಿಲ್ಲ. ಗುರುವಾರದ ಅವರ ಪತ್ರಿಕಾಗೋಷ್ಠಿಯು ಕಾಂಗ್ರೆಸ್‌ನ ಟೂಲ್‌ಕಿಟ್. ಯಾರೋ ಸರಿಯಾಗಿ ಸ್ಕ್ರಿಪ್ಟ್ ಕೂಡ ಬರೆದುಕೊಟ್ಟಿಲ್ಲ. ಅದರಲ್ಲೇ ಅವರು ಸಿಕ್ಕಿ ಬೀಳುತ್ತಾರೆ’ ಎಂದು ಹೇಳಿದರು.

‘ಡಿನೋಟಿಫಿಕೇಷನ್ ನಾನು ಮಾಡಿದ್ದೆನಾ? ಜಮೀನು ತೆಗೆದುಕೊಂಡಿರುವುದು ನನ್ನ ಪತ್ನಿಯ ಅತ್ತೆ. ನನಗೂ ಅವರಿಗೆ ಸಂಬಂಧವಿಲ್ಲವೆಂದು ಸಿದ್ದರಾಮಯ್ಯ ರೀತಿಯಲ್ಲಿ ಹೇಳುವುದಿಲ್ಲ. 2015ರಲ್ಲೇ ಕೇಸ್ ಆಗಿತ್ತು. ತನಿಖೆ ಮಾಡಿ ‘ಬಿ’ ವರದಿ ಹಾಕಿದ್ದಾರೆ. ಈಗ ಇವರು ಜೀವ ಕೊಡಲೆತ್ನಿಸುತ್ತಿದ್ದಾರೆ’ ಎಂದರು.

ಅಂಥದ್ದೆಲ್ಲ ಡಿಕೆಶಿಗೆ ಗೊತ್ತು: ‘ಸತ್ತವರ ಹೆಸರಿನಲ್ಲಿ ಹೆಬ್ಬೆಟ್ಟು ಪಡೆದು ಜಮೀನು ಹೊಡೆದಿದ್ದು ಯಾರು? ಅಂಥದ್ದೆಲ್ಲ ಡಿಸಿಎಂ ಡಿ.ಕೆ. ಶಿವಕುಮಾರ್‌ಗೆ ಗೊತ್ತಿದೆ. ಬೆನ್ನಿಗಾನಹಳ್ಳಿ ಜಮೀನು ವಿಚಾರದಲ್ಲಿ ಏನೇನಾಗಿದೆ ಎಂಬುದು ಮಾಜಿ ಸಂಸದ ಡಿ.ಕೆ. ಸುರೇಶ್ ಅವರಿಗೆ ಮರೆತಿದೆಯಾ? ನನಗೆ ಅಂತಹ ವ್ಯವಹಾರಗಳು ಗೊತ್ತಿಲ್ಲ’ ಎಂದರು.

‘ನಮ್ಮ ಸಮಾಜದ ಸ್ವಾಮೀಜಿಗೆ ಸಾಫ್ಟ್ ಆಗಿ ಇರುವಂತೆ ಹೇಳಿದ್ದೇನೆಂದು ಕೆಲವರು ಹೇಳಿದ್ದಾರೆ. ನಾನ್ಯಾಕೆ ಇಂಥದ್ದೆಲ್ಲ ಮಾಡಲಿ ಹೇಳಿ?’ ಎಂದರು.

‘ಮುನಿರತ್ನ ವಿರುದ್ಧದ ಪ್ರಕರಣವನ್ನು ಎಸ್‌ಐಟಿಗೆ ವಹಿಸಬೇಕು’ ಎಂಬ ಒತ್ತಾಯದ ಕುರಿತು ಪ್ರತಿಕ್ರಿಯಿಸಿ, ‘ಎಸ್‌ಐಟಿಯು ಸಿದ್ದರಾಮಯ್ಯ – ಶಿವಕುಮಾರ್ ತನಿಖಾ ಸಂಸ್ಥೆ ಇದ್ದಂತೆ. ಅದು ಮಾಡುವುದು ತನಿಖೆಯಲ್ಲ; ಇವರ ಗುಲಾಮಗಿರಿಯಷ್ಟೆ’ ಎಂದರು.

‘ಡಿನೋಟಿಫಿಕೇಶನ್ ಗಂಭೀರ ಪ್ರಕರಣ’

‘ಎಚ್.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಗಂಗೇನಹಳ್ಳಿಯಲ್ಲಿ ಬಹುಕೋಟಿ ಮೌಲ್ಯದ 1 ಎಕರೆ 11 ಗುಂಟೆ ಜಮೀನು ಡಿನೋಟಿಫಿಕೇಷನ್ ಆಗಿರುವುದು ಬಹಳ ಗಂಭೀರ ಪ್ರಕರಣ’ ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

‘ಜಮೀನನ್ನು ಈಗಾಗಲೇ ಸ್ವಾಧೀನಕ್ಕೆ ಪಡೆದುಕೊಳ್ಳಲಾಗಿದ್ದು, ಅವಕಾಶವಿಲ್ಲವೆಂದು ಅಧಿಕಾರಿಗಳು ಹೇಳಿದ್ದರೂ ಡಿನೋಟಿಫೈ ಮಾಡಿಸಿದ್ದಾರೆ. ಸತ್ತವರ ಹೆಸರಿಗೇ ಮಾಡಿಸಿದ್ದಾರೆ. ಜಮೀನು ಕುಮಾರಸ್ವಾಮಿ ಭಾಮೈದನಿಗೆ ನೋಂದಣಿಯಾಗಿದೆ. ಅವರ ಅತ್ತೆ ಜಿಪಿಎ ಪಡೆದುಕೊಂಡಿದ್ದಾರೆ. ದಾಖಲೆಗಳನ್ನು ನೋಡಿ, ಮಾಹಿತಿ ಪಡೆದು ಪ್ರತಿಕ್ರಿಯಿಸುವೆ’ ಎಂದರು.

‘ಕುಮಾರಸ್ವಾಮಿಯದ್ದು ಯಾವಾಗಲೂ ಹಿಟ್ ಅಂಡ್ ರನ್ ಕೇಸ್. ಅವರು ಯಾವತ್ತೂ ಯಾವುದನ್ನೂ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದಿಲ್ಲ. ಕೇಂದ್ರ ಸಚಿವರಾಗಿ ಸತ್ಯವೋ, ಇಲ್ಲವೋ ಎಂಬುದನ್ನು ತಿಳಿದುಕೊಂಡು ಮಾತನಾಡಬೇಕಲ್ಲವೇ?’ ಎಂದು ಕೇಳಿದರು.

ಈಗ ಕೆಲವರಿಗೆ ಒಕ್ಕಲಿಗರ ಮೇಲೆ ಪ್ರೀತಿ ಹುಟ್ಟುತ್ತಿದೆ. ಮೈಸೂರಿನಲ್ಲಿ ಎಚ್.ಡಿ. ದೇವೇಗೌಡರ ಫೋಟೊಗೆ ಚಪ್ಪಲಿ ಹಾರ ಹಾಕಿಸಿದ್ದವರು ಯಾರು? ಆಗ ಒಕ್ಕಲಿಗರ ಸ್ವಾಭಿಮಾನ ಎಲ್ಲಿತ್ತು?
ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಡಿನೋಟಿಫಿಕೇಷನ್ ಸ್ವಂತ ಲಾಭಕ್ಕೆ ಮಾಡಿದ್ದು ಹೌದಾ, ಅಲ್ಲವೇ ಎನ್ನುವ ಪ್ರಶ್ನೆಗೆ ಕುಮಾರಸ್ವಾಮಿ ಉತ್ತರಿಸಲಿ
ಕೃಷ್ಣಬೈರೇಗೌಡ, ಕಂದಾಯ ಸಚಿವ

ಮೆರವಣಿಗೆ ಕೊಪ್ಪಳದಲ್ಲಿ ಗುರುವಾರ ಮಧ್ಯರಾತ್ರಿ ನಡೆದ ಹಿಂದೂ ಮಹಾಮಂಡಳಿಯ ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆಯಲ್ಲಿ ಯುವತಿಯರು, ಮಹಿಳೆಯರು ಕುಣಿದು ಸಂಭ್ರಮಿಸಿದರು
ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

‘ಪೆನ್‌ಡ್ರೈವ್ ಹಂಚಿದ್ದರೆ ದೊಡ್ಡ ಪಾಪ’

ಬೆಂಗಳೂರು: ‘ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಲೈಂಗಿಕ ಹಗರಣಕ್ಕೆ ಸಂಬಂಧಿಸಿದ ಅಶ್ಲೀಲ ವಿಡಿಯೊಗಳನ್ನು ಒಳಗೊಂಡ ಪೆನ್ ಡ್ರೈವ್ ಹಂಚಿಕೆ ಮಾಡಿಸಿದ್ದರೆ ಅದೊಂದು ದೊಡ್ಡ ಪಾಪ. ಈ ಕೃತ್ಯ ಸಂತ್ರಸ್ತೆಯರನ್ನು ಇನ್ನಿಲ್ಲದ ಅವಮಾನಕ್ಕೆ ನೂಕಿರುವ ಸಂಗತಿ’ ಎಂದು ಹೈಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದೆ.

‘ಪ್ರಜ್ವಲ್ ರೇವಣ್ಣ ಅವರ ಲೈಂಗಿಕ ಹಗರಣದಲ್ಲಿ ಪೆನ್ ಡ್ರೈವ್ ಹಂಚಿದ ಆರೋಪಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಬೆಂಗಳೂರಿನ ಸೈಬರ್ ಅಪರಾಧ ಠಾಣೆಯಲ್ಲಿ ದಾಖಲಾಗಿರುವ ದೂರು ಮತ್ತು ಅದಕ್ಕೆ ಸಂಬಂಧಿಸಿದ ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು’ ಎಂದು ಕೋರಿ ಮಾಜಿ ಶಾಸಕ ಬಿಜೆಪಿಯ ಪ್ರೀತಂ ಗೌಡ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಪ್ರೀತಂ ಗೌಡ ಪರ ಹಿರಿಯ ವಕೀಲ ಸಿ.ವಿ.ನಾಗೇಶ್, ‘ಪೆನ್ ಡ್ರೈವ್ ಹಂಚಿದ್ದಾರೆ ಎಂದು ಜನ ಮಾತನಾಡಿಕೊಳ್ಳುತ್ತಿದ್ದರು ಎಂಬ ಆಧಾರದಲ್ಲಿ ಅರ್ಜಿದಾರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ವಿಶೇಷ ತನಿಖಾ ದಳ (ಎಸ್‌ಐಟಿ) ತನಿಖೆ ಮುಂದುವರಿಸಬಹುದು. ಇದಕ್ಕೆ ನಮ್ಮ ಆಕ್ಷೇಪವಿಲ್ಲ’ ಎಂದರು. ನ್ಯಾಯಪೀಠ ಅರ್ಜಿದಾರರನ್ನು ಬಂಧಿಸದಂತೆ ಈ ಹಿಂದೆ ನೀಡಿದ್ದ ಆದೇಶ ವಿಸ್ತರಿಸಿ ವಿಚಾರಣೆಯನ್ನು ಇದೇ 26ಕ್ಕೆ ಮುಂದೂಡಿತು.

ಮೋದಿ ಮೌನವೇಕೆ: ಪ್ರಿಯಾಂಕ್ ಖರ್ಗೆ

ನವದೆಹಲಿ: ‘ಕರ್ನಾಟಕದಲ್ಲಿ ಗಣಪತಿ ವಿಸರ್ಜನೆಯ ಸಣ್ಣ ಪ್ರಕರಣವನ್ನು ಮುಂದಿಟ್ಟುಕೊಂಡು ಹರಿಯಾಣದಲ್ಲಿ ರಾಜ್ಯದ ಜನರಿಗೆ ಅವಮಾನ ಮಾಡುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರು ಬಿಜೆಪಿಯ ಮುನಿರತ್ನ ಹಾಗೂ ‘ಮನಿ ರತ್ನ’ಗಳ ಬಗ್ಗೆ ಮೌನವಾಗಿರುವುದು ಏಕೆ’ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಖಾರವಾಗಿ ಪ್ರಶ್ನಿಸಿದರು.

ಮುನಿರತ್ನ ನೇತೃತ್ವದಲ್ಲಿ ಎಚ್‌ಐವಿ ಸೋಂಕು ಜಾಲ: ಡಿ.ಕೆ. ಸುರೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ಮುನಿರತ್ನ ಅವರ ನೇತೃತ್ವದಲ್ಲಿ ಎಚ್‌ಐವಿ ಸೋಂಕು ಹರಡಿಸುವ ಜಾಲವೇ ಸಕ್ರಿಯವಾಗಿದೆ. ಈ ಕುರಿತು ರಾಜ್ಯ ಸರ್ಕಾರ ವಿಶೇಷ ತನಿಖೆ ನಡೆಸಬೇಕು ಎಂದು ಮಾಜಿ ಸಂಸದ ಕಾಂಗ್ರೆಸ್‌ನ ಡಿ.ಕೆ. ಸುರೇಶ್ ಆಗ್ರಹಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು,‘ಇಂತಹ ಚಟುವಟಿಕೆಯಲ್ಲಿ ಯಾರನ್ನೆಲ್ಲ ಬಳಸಿಕೊಳ್ಳಲಾಗಿದೆ. ಈ ಜಾಲದ ಸದಸ್ಯರು ಯಾರು ಎನ್ನುವುದನ್ನು ತನಿಖೆಯ ಮೂಲಕ ಬಹಿರಂಗಗೊಳಿಸಬೇಕು’ ಎಂದರು.

ಅತ್ಯಾಚಾರ ಆರೋಪ: ಮುನಿರತ್ನ ಸೆರೆ

ಒಂದನೇ ಪುಟದಿಂದ...

ಬಿಡುಗಡೆ ಪ್ರಕ್ರಿಯೆ ಮುಗಿಸಿ 8.45ರ ಸುಮಾರಿಗೆ ಹೊರಬಂದ ಅವರನ್ನು ತನಿಖಾಧಿಕಾರಿ ಡಿವೈಎಸ್‌ಪಿ ದಿನಕರ ಶೆಟ್ಟಿ ನೇತೃತ್ವದ ತಂಡ ಬಂಧಿಸಿತು.

ವೈದ್ಯಕೀಯ ಪರೀಕ್ಷೆ: ಹಾರೋಹಳ್ಳಿ ಕನಕಪುರ ರಸ್ತೆಯಲ್ಲಿರುವ ದಯಾನಂದ ಸಾಗರ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಅವರನ್ನು ಬೆಳಿಗ್ಗೆ 11ಕ್ಕೆ ಪೊಲೀಸರು ಕರೆ ತಂದರು. ತಜ್ಞ ವೈದ್ಯರ ತಂಡ ಒಂದೂವರೆ ತಾಸು ವೈದ್ಯಕೀಯ ಪರೀಕ್ಷೆ ನಡೆಸಿತು. ಈ ವೇಳೆ, ವೀರ್ಯ ಕೊಡಲು ನಿರಾಕರಿಸಿದರು ಎಂದು ಮೂಲಗಳು ತಿಳಿಸಿವೆ.

ಮುನಿರತ್ನ ಬರುವ ವಿಷಯ ತಿಳಿಯುತ್ತಿದ್ದಂತೆಯೇ ಆಸ್ಪತ್ರೆ ಹೊರಭಾಗದಲ್ಲಿ ಜಮಾಯಿಸಿದ್ದ ಕಾಂಗ್ರೆಸ್ ಕಾರ್ಯಕರ್ತರು, ಧಿಕ್ಕಾರ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕೋರ್ಟ್‌ಗೆ ಹಾಜರು: ಪ್ರಕರಣದ ಮುಖ್ಯ ಆರೋಪಿಯಾಗಿರುವ ಅವರನ್ನು ತನಿಖಾ ತಂಡ ಶುಕ್ರವಾರ ರಾತ್ರಿ ಅಥವಾ ಶನಿವಾರ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸುವ ಸಾಧ್ಯತೆ ಇದೆ. ಆರೋಪಿಯನ್ನು ಮತ್ತಷ್ಟು ವಿಚಾರಣೆ ನಡೆಸುವ ಅಗತ್ಯವಿರುವುದರಿಂದ ವಶಕ್ಕೆ ನೀಡುವಂತೆ ಕೋರ್ಟ್‌ಗೆ ಮನವರಿಕೆ ಮಾಡಿಕೊಡಲು ಸಿದ್ಧತೆ ನಡೆದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರಾಜರಾಜೇಶ್ವರಿ ನಗರದಲ್ಲಿ ಸಮಾಜ ಸೇವಕಿಯಾಗಿ ಗುರುತಿಸಿಕೊಂಡು ಬಿಜೆಪಿಯಲ್ಲೂ ಸಕ್ರಿಯವಾಗಿರುವ 40 ವರ್ಷದ ಮಹಿಳೆ, ಸೆ.18ರಂದು ರಾತ್ರಿ, ಶಾಸಕ ಮುನಿರತ್ನ ಸೇರಿ ಏಳು ಮಂದಿ ವಿರುದ್ಧ ಅತ್ಯಾಚಾರ ಹಾಗೂ ಹನಿಟ್ರ್ಯಾಪ್‌ಗೆ ಬಳಸಿಕೊಂಡಿರುವ ಆರೋಪದ ಮೇಲೆ ಕಗ್ಗಲಿಪುರ ಠಾಣೆಗೆ ರಾತ್ರಿ ದೂರು ಕೊಟ್ಟಿದ್ದರು. ಅವರೊಂದಿಗೆ ಮತ್ತೊಬ್ಬ ಮಹಿಳೆ ಕೂಡ ಠಾಣೆಗೆ ಹಾಜರಾಗಿ, ಹನಿಟ್ರ್ಯಾಪ್‌ಗೆ ಬಳಸಿಕೊಳ್ಳಲಾಗಿದೆ ಎಂದು ಹೇಳಿಕೆ ನೀಡಿದ್ದರು. ಆ ಮೇರೆಗೆ ಪೊಲೀಸರು ಇಬ್ಬರನ್ನು ಸಂತ್ರಸ್ತೆಯರನ್ನಾಗಿ ಪರಿಗಣಿಸಿ ಎಫ್‌ಐಆರ್ ದಾಖಲಿಸಿಕೊಂಡಿದ್ದರು.

ನಿರಂತರ ವಿಚಾರಣೆ

ವೈದ್ಯಕೀಯ ಪರೀಕ್ಷೆ ಮುಗಿಸಿ ಮುನಿರತ್ನ ಅವರನ್ನು ಮಧ್ಯಾಹ್ನ ಠಾಣೆಗೆ ಕರೆದುಕೊಂಡು ಬಂದ ತನಿಖಾ ತಂಡ, ಸಂಜೆವರೆಗೆ ನಿರಂತರವಾಗಿ ವಿಚಾರಣೆ ನಡೆಸಿತು. ‘ನಾನು ಯಾರ ಮೇಲೂ ಅತ್ಯಾಚಾರ ಎಸಗಿಲ್ಲ. ಹನಿಟ್ರ್ಯಾಪ್ ಕೂಡ ಮಾಡಿಲ್ಲ. ಆರೋಪಗಳೆಲ್ಲವೂ ಸುಳ್ಳು. ರಾಜಕೀಯ ದ್ವೇಷದಿಂದ ಪ್ರಕರಣ ದಾಖಲಿಸಲಾಗಿದೆ’ ಎಂದು ಮುನಿರತ್ನ ಹೇಳುತ್ತಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಕರಣ ವರ್ಗಾವಣೆ?: ಸಂತ್ರಸ್ತೆ ತನ್ನ ಮೇಲೆ ವಿವಿಧೆಡೆ ಅತ್ಯಾಚಾರ ನಡೆದಿರುವುದಾಗಿ ಆರೋಪಿಸಿದ್ದಾರೆ. ಆ ಪೈಕಿ, ಕಗ್ಗಲಿಪುರ ಠಾಣೆ ವ್ಯಾಪ್ತಿಯ ಗುಹಾಂತರ ರೆಸಾರ್ಟ್ ಕೂಡ ಒಂದಾಗಿದ್ದು, ಬೆಂಗಳೂರಿನಲ್ಲೇ ಹೆಚ್ಚಾಗಿ ಕೃತ್ಯ ನಡೆದಿದೆ. ಹಾಗಾಗಿ, ಪ್ರಕರಣವನ್ನು ಸಂಬಂಧಿಸಿದ ಸ್ಥಳದ ವ್ಯಾಪ್ತಿಯ ಠಾಣೆಗೆ ವರ್ಗಾಯಿಸುವ ಕುರಿತು ಇಲಾಖೆ ಮೇಲಧಿಕಾರಿಗಳ ಮಟ್ಟದಲ್ಲಿ ಚರ್ಚೆ ನಡೆದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶಾಸಕ ಮುನಿರತ್ನ ಅವರನ್ನು ಶುಕ್ರವಾರ ಬಂಧಿಸಿದ ತನಿಖಾ ತಂಡ, ಕಗ್ಗಲಿಪುರ ಪೊಲೀಸ್ ಠಾಣೆಗೆ ಕರೆತಂದಿತು

ವಿಶೇಷ ತಂಡ ರಚನೆ

ಮುನಿರತ್ನ ಆಣತಿಯಂತೆ ಮಹಿಳೆಯರೊಂದಿಗೆ ಹನಿಟ್ರ್ಯಾಪ್‌ಗೆ ನೆರವಾಗುತ್ತಿದ್ದ ಪ್ರಕರಣದ ಉಳಿದ ಆರು ಮಂದಿ ಆರೋಪಿಗಳಾದ ಗನ್‌ಮ್ಯಾನ್ ವಿಜಯಕುಮಾರ್, ಸುಧಾಕರ, ಕಿರಣ್ ಕುಮಾರ್, ಲೋಹಿತ್ ಗೌಡ, ಮಂಜುನಾಥ ಹಾಗೂ ಲೋಕಿ ಬಂಧನಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ವಿಶೇಷ ತಂಡ ರಚಿಸಿದ್ದಾರೆ.

ಸಂತ್ರಸ್ತೆ ಕರೆದೊಯ್ದು ಮಹಜರು: ಕೃತ್ಯ ನಡೆದ ಸ್ಥಳಗಳಿಗೆ ಗುರುವಾರ ಮತ್ತು ಶುಕ್ರವಾರ ಸಂತ್ರಸ್ತೆಯನ್ನು ಕರೆದೊಯ್ದು ತನಿಖಾ ತಂಡ ಮಹಜರು ನಡೆಸಿದೆ. ಕಗ್ಗಲಿಪುರ ವ್ಯಾಪ್ತಿಯ ಗುಹಾಂತರ ರೆಸಾರ್ಟ್‌ಗೆ ಸಂತ್ರಸ್ತೆಯನ್ನು ಶುಕ್ರವಾರ ಕರೆತಂದು, ಅತ್ಯಾಚಾರ ನಡೆದಿದೆ ಎನ್ನಲಾದ ಸ್ಥಳಗಳಲ್ಲಿ ಮಹಜರು ಮಾಡಲಾಗಿದೆ. ಮಹತ್ವದ ಸಾಕ್ಷ್ಯಾಧಾರ ಸಿಕ್ಕಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಸ್‌ಐಟಿ ರಚನೆಗೆ ಮನವಿ

ಒಕ್ಕಲಿಗ ಸಮುದಾಯದ ಸಚಿವರು, ಶಾಸಕರ ನಿಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಕ್ಕಲಿಗ ಸಮುದಾಯದ ಸಚಿವರು, ಶಾಸಕರ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶುಕ್ರವಾರ ಭೇಟಿ ಮಾಡಿ, ಬಿಜೆಪಿ ಶಾಸಕ ಮುನಿರತ್ನ ವಿರುದ್ಧದ ಪ್ರಕರಣಗಳ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ ಮನವಿ ಸಲ್ಲಿಸಿತು.

ಕಂದಾಯ ಸಚಿವ ಕೃಷ್ಣ ಬೈರೇಗೌಡ, ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ನೇತೃತ್ವದಲ್ಲಿ ತೆರಳಿದ್ದ ನಿಯೋಗ, ಮುನಿರತ್ನ ವಿರುದ್ಧ ಕಮಿಷನ್ ದಂಧೆ, ಅತ್ಯಾಚಾರ, ಹನಿಟ್ರ್ಯಾಪ್, ಎಚ್‌ಐವಿ ಹರಡುವಿಕೆ ಸೇರಿದಂತೆ ವಿವಿಧ ಆರೋಪಗಳು ಇವೆ. ಹಾಗಾಗಿ, ಎಲ್ಲ ಪ್ರಕರಣಗಳ ತನಿಖೆಗೆ ಎಸ್‌ಐಟಿ ರಚಿಸಬೇಕು ಎಂದು ಕೋರಿದರು.

ಮುಖ್ಯಮಂತ್ರಿ ಭೇಟಿಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಕೃಷ್ಣ ಬೈರೇಗೌಡ, ‘ಮುನಿರತ್ನ ಒಕ್ಕಲಿಗರನ್ನು ಅವಹೇಳನ ಮಾಡಿದ್ದಾರೆ. ಸಮುದಾಯದ ಮೇಲೆ ದಾಳಿ ನಡೆದಾಗ ಎಲ್ಲರೂ ಎಚ್ಚೆತ್ತುಕೊಂಡು ಖಂಡಿಸಬೇಕು’ ಎಂದರು.

‘ನಿರ್ಮಲಾನಂದನಾಥ ಸ್ವಾಮೀಜಿ ಅವರಿಗೆ ಸಮುದಾಯ ಗೌರವ ಕೊಡುತ್ತದೆ. ಅವರ ನೇತೃತ್ವದಲ್ಲಿ ಖಂಡನಾ ನಿರ್ಣಯ ಸಭೆ ಆಗಬೇಕು ಎಂದು ಮುಖಂಡರು ಅಭಿಪ್ರಾಯಪಟ್ಟಿದ್ದಾರೆ. ಈ ಕುರಿತು ಸ್ವಾಮೀಜಿ ಅವರು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮ’ ಎಂದು ಹೇಳಿದರು.

ಮಹಿಳಾ ಆಯೋಗಕ್ಕೆ ಸಂತ್ರಸ್ತೆ ದೂರು

‘ಐಎಫ್‌ಎಸ್ ಅಧಿಕಾರಿಯೊಬ್ಬರು ನಡೆಸಿದ್ದ ಅತ್ಯಾಚಾರದ ಬಗ್ಗೆ ನೀಡಿದ್ದ ದೂರನ್ನು ಹಿಂಪಡೆಯುವಂತೆ ಮಾಡಲು ಶಾಸಕ ಮುನಿರತ್ನ ನನ್ನನ್ನೇ ಸುಳ್ಳಿನ ಜಾಲದಲ್ಲಿ ಸಿಲುಕಿಸಿದ್ದರು’ ಎಂದು ಸಂತ್ರಸ್ತೆಯೊಬ್ಬರು ರಾಜ್ಯ ಮಹಿಳಾ ಆಯೋಗಕ್ಕೆ ದೂರು ನೀಡಿದ್ದಾರೆ. ‘ಐಎಫ್‌ಎಸ್ ಅಧಿಕಾರಿಯೊಬ್ಬರು ಮದುವೆಯಾಗುವುದಾಗಿ ನಂಬಿಸಿ ಲೈಂಗಿಕ ಸಂಬಂಧ ಬೆಳೆಸಿ ವಂಚಿಸಿದ್ದರು. ಈ ಬಗ್ಗೆ ದೆಹಲಿಯ ಪೊಲೀಸರಿಗೆ ನಾನು ದೂರು ನೀಡಿದ್ದೆ. ಆ ಅಧಿಕಾರಿಯನ್ನು ಪ್ರಕರಣದಿಂದ ಹೊರತರಲು ಮುನಿರತ್ನ ಮತ್ತು ತಂಡ ಸಂಚು ರೂಪಿಸಿದ್ದರು. ಆ ತಂಡದ ಕೆಲವು ಯುವಕರು ನನ್ನನ್ನು ಪರಿಚಯ ಮಾಡಿಕೊಂಡಿದ್ದರು. ಬಳಿಕ ನನ್ನ ವಿರುದ್ಧವೇ ಹನಿಟ್ರ್ಯಾಪ್ ಪ್ರಕರಣ ದಾಖಲಿಸಿದ್ದರು’ ಎಂದು ಮಹಿಳೆ ದೂರಿನಲ್ಲಿ ವಿವರಿಸಿದ್ದಾರೆ.

ದುಷ್ಕೃತ್ಯಕ್ಕೆ ಎಚ್‌ಡಿಕೆ, ಅಶೋಕ ಕುಮ್ಮಕ್ಕು

ಚಿಕ್ಕಬಳ್ಳಾಪುರ: ‘ಶಾಸಕ ಮುನಿರತ್ನ ಅವರ ದುಷ್ಕೃತ್ಯ ಖಂಡಿಸದೆ ಪ್ರತಿಪಕ್ಷ ನಾಯಕ ಆರ್.ಅಶೋಕ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸುಮ್ಮನೆ ಇದ್ದಾರೆ. ಇವರ ಕುಮ್ಮಕ್ಕು ಇಲ್ಲದೆ ಇಷ್ಟೆಲ್ಲ ನಡೆಯುತ್ತದೆಯೇ’ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಪ್ರಶ್ನಿಸಿದರು. ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮುನಿರತ್ನ ಮಾಡಿದ್ದು ತಪ್ಪು ಎಂದು ಇವರು ಎಲ್ಲಿಯೂ ಮಾತನಾಡಿಲ್ಲ. ಮುನಿರತ್ನ ಭ್ರಷ್ಟಾಚಾರಿ, ಮನೆಯಲ್ಲಿಯೇ ಬಿಬಿಎಂಪಿ ಬಿಲ್ ಬರೆಯುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತಿತ್ತು. ಆದರೆ, ಈಗ ಹನಿಟ್ರ್ಯಾಪ್ ನಡೆಸುತ್ತಾರೆ ಎನ್ನುವ ಅಂಶ ತಿಳಿದು ಬಂದಿದೆ’ ಎಂದರು.

‘ಗಲಭೆ ಪೂರ್ವಯೋಜಿತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾಗಮಂಗಲದಲ್ಲಿ ಗಣೇಶಮೂರ್ತಿ ವಿಸರ್ಜನೆ ಸಂದರ್ಭ ನಡೆದ ದಾಳಿ ಪೂರ್ವಯೋಜಿತ. ಇದನ್ನು ತಡೆಯುವಲ್ಲಿ ಪೊಲೀಸರು ಸಂಪೂರ್ಣ ವಿಫಲರಾಗಿದ್ದಾರೆ’ ಎಂದು ಬಿಜೆಪಿ ಸತ್ಯ ಶೋಧನಾ ಸಮಿತಿ ತನ್ನ ವರದಿಯಲ್ಲಿ ಹೇಳಿದೆ.

ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ನೇತೃತ್ವದ ಸಮಿತಿ ಇತ್ತೀಚೆಗೆ ಗಲಭೆಪೀಡಿತ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿ ವರದಿ ಸಿದ್ಧಪಡಿಸಿದ್ದು, ಅದನ್ನು ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಸಲ್ಲಿಸಿತು.

‘ನಾಗಮಂಗಲದಲ್ಲಿ ಸೌಹಾರ್ದತೆ ಇತ್ತು. ರಾಜಕೀಯ ಹಸ್ತಕ್ಷೇಪ, ವಿಭಜನೆ ರಾಜಕಾರಣ, ತುಷ್ಟೀಕರಣದ ಕಾರಣದಿಂದ ಗಲಭೆ ನಡೆದಿದೆ. ಇದರ ಹಿಂದೆ ನಿಷೇಧಿತ ಪಿಎಫ್‌ಐ ಸಂಘಟನೆ ವ್ಯಕ್ತಿಗಳ ಕೈವಾಡವಿದೆ’ ಎಂದು ಸಮಿತಿಯ ಅಧ್ಯಕ್ಷ ಅಶ್ವತ್ಥನಾರಾಯಣ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಗಣಪತಿಮೂರ್ತಿಯ ವಿಸರ್ಜನೆ ಸಂದರ್ಭದಲ್ಲಿ 25ರಿಂದ 30 ಜನರು ಮಾತ್ರ ಮುಖ್ಯರಸ್ತೆಯಲ್ಲಿ ಮೆರವಣಿಗೆ ನಡೆಸುತ್ತಿದ್ದರು. ಆಗ ಗಲಭೆ ಆಗಿದೆ. ಕಳೆದ ವರ್ಷವೂ ಗಲಭೆ ಆಗಿತ್ತು. ಈ ವಿಷಯ ಗೊತ್ತಿದ್ದರೂ ಪೊಲೀಸರು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿರಲಿಲ್ಲ. ಆರೋಪಿಗಳು ಮಾಸ್ಕ್ ಧರಿಸಿದ್ದರು. ಪೆಟ್ರೋಲ್ ಬಾಂಬ್ ಸಿದ್ಧಪಡಿಸಿಟ್ಟುಕೊಂಡಿದ್ದರು. ಇವು ಪೂರ್ವ ನಿಯೋಜಿತ ಕೃತ್ಯಕ್ಕೆ ಸಾಕ್ಷಿ’ ಎಂದರು. ‘ಕೇರಳ ಮೂಲದ ವ್ಯಕ್ತಿಗಳು ಗಲಭೆಯಲ್ಲಿ ಭಾಗಿಯಾಗಿರುವ ವಿಚಾರವನ್ನು ಗೃಹ ಸಚಿವರೂ ಹೇಳಿದ್ದಾರೆ. ಬಾಂಗ್ಲಾದೇಶಿಯರೂ ಇರುವ ಬಗ್ಗೆ ತಿಳಿಸಿದ್ದಾರೆ. 800 ಎಕರೆ ಹೊಂದಿರುವ ಪ್ರಬಲ ವ್ಯಕ್ತಿಯ ಜಾಗದಲ್ಲಿ ಬಾಂಗ್ಲಾದೇಶಿಯರು ಕೆಲಸ ಮಾಡುತ್ತಿದ್ದಾರೆ. ನಿಷೇಧಿತ ಪಿಎಫ್‌ಐ ಚಟುವಟಿಕೆಗೆ ಅವಕಾಶ ಕೊಟ್ಟಿದ್ದಾರೆ. ಆದರೆ, ಸರ್ಕಾರ ಸುಮ್ಮನಿದ್ದು, ಪೊಲೀಸರು ಕಣ್ಮುಚ್ಚಿ ಕುಳಿತಿದ್ದಾರೆ’ ಎಂದರು.

ಶಾಸಕ ಡಾ. ಸಿ.ಎನ್‌.ಅಶ್ವತ್ಥನಾರಾಯಣ ನೇತೃತ್ವದ ಸತ್ಯಶೋಧನಾ ಸಮಿತಿ ವರದಿಯನ್ನು ಪಕ್ಷದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಸಲ್ಲಿಸಿತು. ಭಾಸ್ಕರ್ ರಾವ್, ಕೆ.ಸಿ.ನಾರಾಯಣಗೌಡ, ಲಕ್ಷ್ಮಿ ಅಶ್ವಿನ್‌ಗೌಡ ಜತೆಗಿದ್ದರು

ಕಾಂಗ್ರೆಸ್ ಸರ್ಕಾರ ದೇಶದ್ರೋಹಿಗಳ ವಿರುದ್ಧ ಮೃದುಧೋರಣೆ ತಳೆದಿರುವ ಕಾರಣ, ಶಾಂತಿ– ಸುವ್ಯವಸ್ಥೆ ಕದಡುವ ಕೆಲಸ ನಡೆದಿದೆ
ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಭಯೋತ್ಪಾದಕರಿಗೆ ಕಾಂಗ್ರೆಸ್ ಸರ್ಕಾರದ ಕುಮ್ಮಕ್ಕು: ಅಶೋಕ

ಪ್ರಜಾವಾಣಿ ವಾರ್ತೆ

ಆರ್. ಅಶೋಕ

ಮಂಡ್ಯ: ‘ಮೂವತ್ತು ವರ್ಷಗಳಲ್ಲಿ ಭಾರತವನ್ನು ಪಾಕಿಸ್ತಾನ ಮಾಡುತ್ತೇವೆಂದು ಭಯೋತ್ಪಾದಕರು ಕರಪತ್ರದಲ್ಲಿ ತಿಳಿಸಿದ್ದಾರೆ. ಕೋಮು ಬೀಜ ಬಿತ್ತುತ್ತಿರುವ ಕಾಂಗ್ರೆಸ್ ಸರ್ಕಾರವೇ ಮುಸ್ಲಿಂ ಭಯೋತ್ಪಾದಕರಿಗೆ ಕುಮ್ಮಕ್ಕು ಕೊಡುತ್ತಿದೆ. ಬಹುಸಂಖ್ಯಾತ ಹಿಂದೂಗಳ ಮೇಲೆ ದಬ್ಬಾಳಿಕೆ ಮಾಡುತ್ತಿದೆ’ ಎಂದು ವಿಧಾನಸಭೆಯ ವಿರೋಧಪಕ್ಷದ ನಾಯಕ ಆರ್. ಅಶೋಕ ಆರೋಪಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಮಂಡ್ಯದಲ್ಲಿ ಚುನಾಯಿತ ಪ್ರತಿನಿಧಿಗಳು ಹಿಂದೂ ವಿರೋಧಿ ಧೋರಣೆ ತಾಳುತ್ತಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ 95 ಪರ್ಸೆಂಟ್ ಇರುವ ಹಿಂದೂಗಳು ಎಚ್ಚೆತ್ತುಕೊಳ್ಳಬೇಕು’ ಎಂದು ಹೇಳಿದರು.

‘ಕರ್ನಾಟಕ ಸಾಂಸ್ಕೃತಿಕ ಮುನ್ನೋಟ; ಚಿಂತನಾ ಸಮಾವೇಶ’ದಲ್ಲಿ ಸಿ.ಎಂ

‘ಬಹುತ್ವದ ನಾಡು ಕಟ್ಟುವಲ್ಲಿ ರಾಜಿಯಿಲ್ಲ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಕರ್ನಾಟಕವು ಸರ್ವ ಜನಾಂಗದ ಶಾಂತಿಯ ತೋಟ. ಬಹುತ್ವದ ನಾಡು ಕಟ್ಟುವ, ಕನ್ನಡ ಭಾಷೆಯನ್ನು ಅಗ್ರಸ್ಥಾನಕ್ಕೇರಿಸಿ ಕನ್ನಡ ವಾತಾವರಣ ವಿಸ್ತರಿಸುವ ವಿಚಾರದಲ್ಲಿ ರಾಜಿ ಇಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ನಗರದಲ್ಲಿ ಶುಕ್ರವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸಹಯೋಗದಲ್ಲಿ ನಡೆದ ‘ಕರ್ನಾಟಕ ಸಾಂಸ್ಕೃತಿಕ ಮುನ್ನೋಟ: ಚಿಂತನಾ ಸಮಾವೇಶ’ ಉದ್ಘಾಟಿಸಿ ಮಾತನಾಡಿ, ‘ರಾಜ್ಯವು ಬಹುತ್ವದ ಬೀಡು. ಮನುಷ್ಯ ಪ್ರೀತಿಯ ಬಹುತ್ವ ಇಲ್ಲಿನದು. ಆದರೆ, ವಿದ್ಯಾವಂತರೇ ಬಹುತ್ವ, ಜಾತ್ಯತೀತತೆ ಬಿಟ್ಟು, ತಾರತಮ್ಯ , ಕಂದಾಚಾರ ಆಚರಿಸುತ್ತಿರುವುದು ದುರಂತ’ ಎಂದು ವಿಷಾದಿಸಿದರು.

‘ಬಸವಣ್ಣನ ಅವರ ಆಶಯ, ವಿಚಾರ, ವೈಚಾರಿಕತೆ ಯುವ ಪೀಳಿಗೆಗೆ ಹೆಚ್ಚೆಚ್ಚು ಗೊತ್ತಾಗಬೇಕು’ ಎಂದರು.

‘ಡಿ.ದೇವರಾಜ ಅರಸರು ಮೈಸೂರು ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣ ಮಾಡಿ 2023ಕ್ಕೆ 50 ವರ್ಷ ಆಗಿತ್ತು. ಬಿಜೆಪಿ ಸರ್ಕಾರವೇ ಸುವರ್ಣ ಸಂಭ್ರಮ ಆಚರಿಸಬೇಕಿತ್ತು. ಅವರು ಮಾಡಲಿಲ್ಲ. ಹೀಗಾಗಿ ಬಜೆಟ್‌ನಲ್ಲಿಯೇ ಸುವರ್ಣ ಸಂಭ್ರಮಾಚರಣೆಯನ್ನು ಘೋಷಿಸಿರುವೆ. ಅದನ್ನು ಕನ್ನಡ ಜನೋತ್ಸವವಾಗಿ ಆಚರಿಸಲಾಗುತ್ತಿದೆ’ ಎಂದರು.

‘ರಾಜ್ಯದಲ್ಲಿ ಬದುಕು ಕಟ್ಟಿಕೊಂಡಿರುವ ಇತರ ಭಾಷಿಕರು ಕನ್ನಡದಲ್ಲೇ ಮಾತನಾಡಬೇಕು. ತಮಿಳುನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರದಲ್ಲಿ ಜನ ಅವರದೇ ಭಾಷೆಗಳಲ್ಲಿ ವ್ಯವಹರಿಸುತ್ತಾರೆ. ಆದರೆ, ಅವರು ಇಲ್ಲಿ ಕನ್ನಡ ಬಿಟ್ಟು ಅವರ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ. ನಾವೂ ಅವರ ಭಾಷೆಯಲ್ಲಿ ವ್ಯವಹರಿಸುವುದು ಸರಿಯಲ್ಲ’ ಎಂದರು.

ಕರ್ನಾಟಕ ಸುವರ್ಣ ಸಂಭ್ರಮ ಪ್ರಯುಕ್ತ ಮೈಸೂರಿನಲ್ಲಿ ಶುಕ್ರವಾರ ‘ಕರ್ನಾಟಕ ಸಾಂಸ್ಕೃತಿಕ ಮುನ್ನೋಟ: ಚಿಂತನಾ ಸಮಾವೇಶ’ವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಧರಣಿದೇವಿ ಮಾಲಗತ್ತಿ, ಕಾ.ತ.ಚಿಕ್ಕಣ್ಣ, ಶರಣಪ್ಪ ವಿ.ಹಲಸೆ, ಶಿವರಾಜ್ ಎಸ್‌.ತಂಗಡಗಿ, ಡಾ.ಎಚ್‌.ಸಿ.ಮಹದೇವಪ್ಪ, ಪುಷ್ಪಾ ಅಮರನಾಥ್, ಡಾ.ಡಿ.ತಿಮ್ಮಯ್ಯ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ನಾನು ಕನ್ನಡ ಬಿಟ್ಟು ಇಂಗ್ಲಿಷ್‌ನಲ್ಲಿ ಸಹಿಮಾಡಿದ್ದೇನೆ ಎಂದು ರಾಜ್ಯಪಾಲರಿಗೆ ದೂರು ನೀಡಿದ್ದಾರೆ. ಅವರು ಮುಖ್ಯ ಕಾರ್ಯದರ್ಶಿಗೆ ನೋಟಿಸ್ ನೀಡಿದ್ದಾರೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

‘ಕೋಮು ಗಲಭೆಗೆ ಬಿಜೆಪಿ ಕಾರಣ’

ಮೈಸೂರು: ‘ಕೋಮು ಗಲಭೆಗಳಿಗೆ ಬಿಜೆಪಿಯವರೇ ಕಾರಣ. ಅವರ ಪ್ರಚೋದನೆಯಿಂದಲೇ ಗಲಾಟೆಗಳು ನಡೆಯುತ್ತಿವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ರಾಜ್ಯದಲ್ಲಿ 60ಸಾವಿರ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿತ್ತು. ಇದುವರೆಗೆ ಎರಡು ಕಡೆಯಷ್ಟೆ ಗಲಾಟೆ ನಡೆದಿದೆ. ದಾವಣಗೆರೆ ಹಾಗೂ ನಾಗಮಂಗಲ ಘಟನೆಗಳ ಬಗ್ಗೆ ಕ್ರಮ ಕೈಗೊಂಡು, ಮುಂಜಾಗ್ರತೆ ವಹಿಸುವಂತೆ ಸೂಚಿಸಿದ್ದೇನೆ’ ಎಂದರು.

ಕರ್ನಾಟಕ ಸರ್ಕಾರ

ಕಾರ್ಮಿಕ ಇಲಾಖೆ

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ, ಐಟಿಐ ಕಾಂಪೌಂಡ್, ಡೈರಿ ಸರ್ಕಲ್, ಬೆಂಗಳೂರು–560029.
ದೂರವಾಣಿ ಸಂಖ್ಯೆ: 080–29753354, 29653354, 29543646 ವೆಬ್‌ಸೈಟ್: https://karbwwb.karnataka.gov.in

ಸಾರ್ವಜನಿಕ ಪ್ರಕಟಣೆ

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996ರ ಅಡಿಯಲ್ಲಿ ರಚಿಸಲಾಗಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಸಂಪನ್ಮೂಲವನ್ನು ಕ್ರೋಢೀಕರಿಸುವ ಸಲುವಾಗಿ, ಕಟ್ಟಡ ಮತ್ತು ಇತರೆ ನಿರ್ಮಾಣಗಾರರು ಹಾಗೂ ನಿಯೋಜಕರಿಂದ ನಿರ್ಮಾಣ ವೆಚ್ಚದ ಮೇಲೆ ಶೇ.1ರಷ್ಟು ಸುಂಕ ಸಂಗ್ರಹ ಮಾಡಲು ಕೇಂದ್ರ ಸರ್ಕಾರವು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ, 1996ನ್ನು ಜಾರಿಗೆ ತಂದಿರುತ್ತದೆ. ಭೂಮಿಯ ಬೆಲೆ ಹಾಗೂ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ 1923 ರಡಿ ಕಾರ್ಮಿಕರು ಅಥವಾ ಅವರ ಅವಲಂಬಿತರಿಗೆ ನೀಡಲಾಗುವ ಪರಿಹಾರ ಮೊತ್ತವನ್ನು ಹೊರತುಪಡಿಸಿ, ಕಟ್ಟಡ ನಿರ್ಮಾಣಕ್ಕೆ ತಗಲುವ ವೆಚ್ಚದ ಮೇಲೆ ಶೇ.1ರಷ್ಟು ಸುಂಕವನ್ನು ಮಾಲೀಕರು/ಗುತ್ತಿಗೆದಾರರು ಪಾವತಿಸಬೇಕೆಂದು ಕೇಂದ್ರ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಸದರಿ ಅಧಿಸೂಚನೆಯನ್ವಯ ಕರ್ನಾಟಕದಲ್ಲಿ ಕೂಡ ಶೇ.1ರಷ್ಟು ಸುಂಕವನ್ನು ನಿರ್ಮಾಣ ವೆಚ್ಚದ ಮೇಲೆ ಪಾವತಿಸುವುದನ್ನು ಕಡ್ಡಾಯಗೊಳಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಕಾಯ್ದೆಯ ಅನ್ವಯಿಸುವಿಕೆ (ಮಂಡಳಿಗೆ ಸುಂಕ ಪಾವತಿಸಬೇಕಾದ ವ್ಯಕ್ತಿಗಳು /ಸಂಸ್ಥೆಗಳು)

ಹಿಂದಿನ 12 ತಿಂಗಳ ಅವಧಿಯಲ್ಲಿ 10 ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಯಗಳಲ್ಲಿ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡ ಸಂಸ್ಥೆಗಳು.

ಹಾಗೂ

ಎಲ್ಲಾ ಸರ್ಕಾರಿ ಇಲಾಖೆಗಳು, ಸಾರ್ವಜನಿಕ ವಲಯದ ಸಂಸ್ಥೆಗಳು ಮತ್ತು ಇತರೆ ಸರ್ಕಾರಿ ಸಂಸ್ಥೆಗಳು ಮುಖ್ಯ ಕಾಯಿದೆಯ ಸೆಕ್ಷನ್ 2(ಡಿ) ಅಡಿಯಲ್ಲಿ ಬರುವ ಯಾವುದೇ ಕಟ್ಟಡ ಅಥವಾ ಇತರೆ ನಿರ್ಮಾಣ ಕಾರ್ಯಗಳನ್ನು ಗುತ್ತಿಗೆದಾರರ ಮೂಲಕ ಕೈಗೊಂಡರೆ ಗುತ್ತಿಗೆದಾರರಿಗೆ ಮೊತ್ತವನ್ನು ಪಾವತಿ ಮಾಡುವ ಸಮಯದಲ್ಲಿ ಟೆಂಡರ್ ಅಧಿಸೂಚನೆಯ ಪ್ರಕಾರ ಅನುಮೋದಿಸಲಾದ ವೆಚ್ಚದ ಮೊತ್ತದಲ್ಲಿ ಶೇ.1ರಷ್ಟು ಮೊತ್ತವನ್ನು ಕಡಿತಗೊಳಿಸುವುದು.

ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಳು ಎಂದರೆ

ಕಟ್ಟಡ, ರಸ್ತೆಗಳು, ನೀರಾವರಿ, ಒಳಚರಂಡಿ, ವಿದ್ಯುತ್ ತಂತಿ, ಅಣೆಕಟ್ಟು, ಕಾಲುವೆಗಳು, ಜಲಾಶಯಗಳು ಇತ್ಯಾದಿಗಳ ಸಹಿತ ಎಲ್ಲಾ ನಿರ್ಮಾಣ, ಬದಲಾವಣೆ, ದುರಸ್ಥಿಕಾರ್ಯ ಕಾಮಗಾರಿಗಳು ಒಳಗೊಂಡಿರುತ್ತವೆ.

ಸುಂಕ ಪಾವತಿ

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ 1996 ಮತ್ತು ನಿಯಮಗಳು 1998 ರನ್ವಯ ಕಟ್ಟಡ ಮತ್ತು ಇತರೆ ನಿರ್ಮಾಣಗಾರರು ಹಾಗೂ ನಿಯೋಜಕರಿಂದ ನಿರ್ಮಾಣ ವೆಚ್ಚದ ಮೇಲೆ ಶೇ.1 ರಷ್ಟು ಸುಂಕ ಸಂಗ್ರಹ ಮಾಡಲು ಕೇಂದ್ರ ಸರ್ಕಾರವು ಈ ಕಾಯ್ದೆ / ನಿಯಮಗಳನ್ನು ಜಾರಿಗೆ ತಂದಿರುತ್ತದೆ. ಈ ಕಾಯ್ದೆಯಲ್ಲಿ ಭೂಮಿಯ ಬೆಲೆ ಹಾಗೂ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ 1923 ರಡಿ ಕಾರ್ಮಿಕರ ಅಥವಾ ಅವರ ಅವಲಂಬಿತರಿಗೆ ನೀಡಲಾಗುವ ಪರಿಹಾರ ಮೊತ್ತವನ್ನು ಹೊರತುಪಡಿಸಲಾಗಿರುತ್ತದೆ. ಮಾಲೀಕರು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸುಂಕ ನಿಯಮ 1998ರ ನಿಯಮ 6(1) ರನ್ವಯ ಕಾಮಗಾರಿ ಆರಂಭವಾಗಿರುವ ಅಥವಾ ಸುಂಕ ಮೊತ್ತವನ್ನು ಪಾವತಿ ಮಾಡಿರುವ ಬಗ್ಗೆ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಸುಂಕ ನಿರ್ಧರಣಾ ಅಧಿಕಾರಿಗಳಿಗೆ ನಿರ್ಮಾಣ ಕಾಮಗಾರಿಯ ವಿವರಗಳನ್ನು ಒಳಗೊಂಡ ನಮೂನೆ–1 ನ್ನು ಕಡ್ಡಾಯವಾಗಿ 30 ದಿನಗಳೊಳಗಾಗಿ ಸಲ್ಲಿಸಬೇಕಾಗಿರುತ್ತದೆ.

ಸುಂಕ ಪಾವತಿ ಮಾಡಬೇಕಾಗಿರುವ ಮಂಡಳಿಯ ಖಾತೆಯ ವಿವರ

- ಖಾತೆದಾರರ ಹೆಸರು : Karnataka Building & Other Construction Workers Welfare Board.
- ಖಾತೆದಾರರ ಬ್ಯಾಂಕಿನ ಹೆಸರು : ಕೆನರಾ ಬ್ಯಾಂಕ್, ಕಾರ್ಮಿಕರ ಕಲ್ಯಾಣ ಮಂಡಳಿ ಶಾಖೆ, ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ, ಐಟಿಐ ಕಾಂಪೌಂಡ್, ಡೈರಿ ಸರ್ಕಲ್, ಬೆಂಗಳೂರು–560029
- ಖಾತೆ ಸಂಖ್ಯೆ : 1371101079786
- ಬ್ಯಾಂಕ್ IFSC ಕೋಡ್ ಸಂಖ್ಯೆ : CNRB0007295

ಖಜಾನೆ ಇಲಾಖೆಯ ಕೆ–2 ತಂತ್ರಾಂಶದ ಮೂಲಕ ಮೊತ್ತವನ್ನು ವರ್ಗಾವಣೆ/ಸಂದಾಯ ಮಾಡುವ ಸಂಸ್ಥೆಗಳು ಮಂಡಳಿಯ ಶೇವಣಿ ಖಾತೆ ಸಂಖ್ಯೆ: 26572E181 ಗೆ ಸಂದಾಯ ಮಾಡತಕ್ಕದ್ದು,

ದಂಡಗಳು :

1) **ಸುಂಕ ಪಾವತಿ ವಿಳಂಬವಾದಲ್ಲಿ ಪಾವತಿಸಬೇಕಾದ ಬಡ್ಡಿ:** ಪಾವತಿಸಬೇಕಾದ ಮೊತ್ತದ ಮೇಲೆ ತಿಂಗಳಿಗೆ ಶೇ.2 ರಷ್ಟು.
2) **ಸೆಸ್ ಪಾವತಿಸದಿದ್ದಲ್ಲಿ ದಂಡ:** ಪಾವತಿಸಬೇಕಾದ ಸೆಸ್ ಮೊತ್ತವನ್ನು ಮೀರದಂತೆ ಪ್ರಾಧಿಕಾರವು ದಂಡವನ್ನು ವಿಧಿಸಬಹುದು.
3) **ಯಾವುದೇ ಉದ್ಯೋಗದಾತರು /ಗುತ್ತಿಗೆದಾರರು ಯಾವುದೇ ಸುಳ್ಳು ದಾಖಲೆಗಳನ್ನು ಒದಗಿಸಿದರೆ :** ಆರು ತಿಂಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ದಂಡ ಅಥವಾ ಎರಡನ್ನೂ ವಿಧಿಸಬಹುದು.
4) **ಉದ್ದೇಶಪೂರ್ವಕ ಸುಂಕ ವಂಚನೆ:** ಆರು ತಿಂಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ದಂಡ ಅಥವಾ ಎರಡನ್ನೂ ವಿಧಿಸಬಹುದು.
5) ಈ ಕಾಯಿದೆಯ ಅಡಿಯಲ್ಲಿ ಬಾಕಿ ಇರುವ ಯಾವುದೇ ಮೊತ್ತವನ್ನು [ಉದ್ಯೋಗದಾತರಿಂದ ಯಾವುದೇ ಬಡ್ಡಿ ಅಥವಾ ದಂಡವನ್ನು ಒಳಗೊಂಡಂತೆ] ಭೂಕಂದಾಯದ ಬಾಕಿ ಇರುವ ರೀತಿಯಲ್ಲಿಯೇ ವಸೂಲಿ ಮಾಡಲಾಗುವುದು.

ಸಹಿ/–
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು

DIPR/CP/2080/Zen/2024-25

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಕಾರ್ಮಿಕ ಸಹಾಯವಾಣಿ 155214, ಕಾರ್ಮಿಕ ಅಧಿಕಾರಿಗಳು ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಇಲಾಖೆ. ವೆಬ್‌ಸೈಟ್: https://karbwwb.karnataka.gov.in

ಘಟನೆ ಖಂಡಿಸಿ ಎಪಿಎಸ್ ಎಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು

ವಿದ್ಯಾರ್ಥಿನಿಯರ ಶೌಚಾಲಯದಲ್ಲಿ ವಿಡಿಯೊ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ರಾಮನಗರ: ಕಾಲೇಜಿನ ವಿದ್ಯಾರ್ಥಿನಿಯರ ಶೌಚಾಲಯದಲ್ಲಿ ತನ್ನ ಮೊಬೈಲ್‌ನಿಂದ ವಿಡಿಯೊ ಸೆರೆ ಹಿಡಿಯುತ್ತಿದ್ದ ವಿದ್ಯಾರ್ಥಿಯೊಬ್ಬನನ್ನು ಕುಂಬಳಗೋಡು ಠಾಣೆ ಪೊಲೀಸರು ಶುಕ್ರವಾರ ವಶಕ್ಕೆ ಪಡೆದಿದ್ದಾರೆ. ದೊಡ್ಡಬೆಲೆ ರಸ್ತೆಯಲ್ಲಿರುವ ಎಸಿಎಸ್ ಎಂಜಿನಿಯರ್ ಕಾಲೇಜಿನ ಕಂಪ್ಯೂಟರ್ ವಿಜ್ಞಾನ ವಿಭಾಗದ 7ನೇ ಸೆಮಿಸ್ಟರ್‌ನಲ್ಲಿ ಓದುತ್ತಿದ್ದ ಚಿಕ್ಕಗೊಲ್ಲರಹಟ್ಟಿ ಕುಶಾಲ್, ಪೊಲೀಸರು ವಶಕ್ಕೆ ಪಡೆದ ವಿದ್ಯಾರ್ಥಿ.

ಬೆಳಿಗ್ಗೆ 10ಗಂಟೆ ಸುಮಾರಿಗೆ ಶೌಚಾಲಯಕ್ಕೆ ಬಂದಿರುವ ಕುಶಾಲ್, ಕೊಠಡಿಯೊಂದರಲ್ಲಿ ಇದ್ದುಕೊಂಡು ವಿದ್ಯಾರ್ಥಿನಿಯರ ವಿಡಿಯೊವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿಯುತ್ತಿದ್ದ. ಇದನ್ನು ಗಮನಿಸಿದ ವಿದ್ಯಾರ್ಥಿನಿಯೊಬ್ಬರು ಕಿರುಚಿಕೊಂಡು ಶೌಚಾಲಯದಿಂದ ಹೊರ ಬಂದಿದ್ದಾರೆ.

ಸ್ಥಳದಲ್ಲಿ ಜಮಾಯಿಸಿದ ವಿದ್ಯಾರ್ಥಿಗಳು ಹಾಗೂ ಕಾಲೇಜಿನ ಸಿಬ್ಬಂದಿಗೆ ವಿದ್ಯಾರ್ಥಿನಿ ವಿಷಯ ತಿಳಿಸಿದ್ದಾರೆ. ಆಗ, ವಿದ್ಯಾರ್ಥಿಗಳು ಶೌಚಾಲಯದ ಒಳ ಹೋಗಿ ಕೊಠಡಿ ಪರಿಶೀಲಿಸಿದಾಗ ಕುಶಾಲ್ ಅಲ್ಲಿದ್ದ. ಕೂಡಲೇ ಹೊರಗೆ ಎಳೆದುಕೊಂಡು ಬಂದು ತರಾಟೆಗೆ ತೆಗೆದುಕೊಂಡಿದ್ದಾರೆ. ಕೆಲವರು ವಿದ್ಯಾರ್ಥಿ ಮೇಲೆ ಆಕ್ರೋಶ ವ್ಯಕ್ತಪಡಿಸುತ್ತಾ ಹಲ್ಲೆ ನಡೆಸಲು ಮುಂದಾದರು.

ಅಷ್ಟೊತ್ತಿಗಾಗಲೇ ಕಾಲೇಜು ಸಿಬ್ಬಂದಿ ನೀಡಿದ ಮಾಹಿತಿ ಮೇರೆಗೆ ಪೊಲೀಸರು ಸ್ಥಳಕ್ಕೆ ತೆರಳಿ ಕುಶಾಲ್‌ನನ್ನು ವಶಕ್ಕೆ ಪಡೆದು, ಪರಿಸ್ಥಿತಿ ತಿಳಿಗೊಳಿಸಿದರು. ಆರೋಪಿ ಮೊಬೈಲ್ ವಶಕ್ಕೆ ಪಡೆದು ಪರಿಶೀಲಿಸಿದಾಗ ಗ್ಯಾಲರಿಯಲ್ಲಿ ಬೆಳಿಗ್ಗೆ 10.30ರಿಂದ 10.45ರ ಅವಧಿಯಲ್ಲಿ ಎರಡು ವಿಡಿಯೊಗಳು ಪತ್ತೆಯಾಗಿವೆ. ಒಂದು 14ನಿಮಿಷವಿದ್ದು, ಮತ್ತೊಂದು 59 ಸೆಕೆಂಡ್ ಇದೆ.

ಆರೋಪಿ ಹಿಂದೆಯೂ ಇದೇ ರೀತಿ ವಿಡಿಯೊಗಳನ್ನು ತನ್ನ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾನೆಯೇ ? ಬೇರೆಯವರ ಬಳಿ ಹಂಚಿಕೊಂಡಿದ್ದಾನೆಯೇ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ.

ಸಂಕ್ಷಿಪ್ತ ಸುದ್ದಿ

ಶೈಕ್ಷಣಿಕ ಧನಸಹಾಯಕ್ಕೆ ಅರ್ಜಿ

ಬೆಂಗಳೂರು: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶೈಕ್ಷಣಿಕ ಧನಸಹಾಯ ಪಡೆಯಲು ನವೆಂಬರ್ 30ರವರೆಗೆ ಅರ್ಜಿ ಸಲ್ಲಿಸಬಹುದು.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಅರ್ಹರಿಗೆ ಶೈಕ್ಷಣಿಕ ಧನಸಹಾಯ ನೀಡಲಾಗುತ್ತದೆ. ಈ ಸಹಾಯ ಪಡೆಯಲು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ (ಎಸ್‌ಎಸ್‌ಪಿ) ಮೂಲಕ ಅರ್ಜಿ ಸಲ್ಲಿಸಬಹುದು. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಎಸ್‌ಎಸ್‌ಪಿ ಮೂಲಕ ಅರ್ಜಿ ಸಲ್ಲಿಸಿರುವವರು ಮತ್ತೆ ಸಲ್ಲಿಸುವ ಅಗತ್ಯ ಇರುವುದಿಲ್ಲ ಎಂದು ಮಂಡಳಿಯ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್‌ಎಸ್‌ಪಿ ತಂತ್ರಾಂಶದ ಮೂಲಕ ಶೈಕ್ಷಣಿಕ ಧನಸಹಾಯ ಪಡೆಯಲು https:kbocwwb.karnataka.gov.in/ ನಲ್ಲಿ ನೋಂದಣಿ ಸಂಖ್ಯೆ ನಮೂದಿಸಿ, ಆಧಾರ್ ಲಿಂಕ್ ಮಾಡಬೇಕು ಎಂದು ಹೇಳಿದ್ದಾರೆ.

ಹೊರನಾಡು ದೇವಸ್ಥಾನದಲ್ಲಿ ವಸ್ತ್ರ ಸಂಹಿತೆ ಜಾರಿ

ಕಳಸ (ಚಿಕ್ಕಮಗಳೂರು): ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಭಕ್ತರಿಗೆ ವಸ್ತ್ರ ಸಂಹಿತೆ ಜಾರಿಗೆ ತರಲಾಗಿದೆ.

ಪುರುಷರು ಸಾಂಪ್ರದಾಯಿಕ ಪಂಚೆ, ಶಲ್ಯ ಅಥವಾ ಪ್ಯಾಂಟ್ ಧರಿಸಿ ದೇವಿಯ ದರ್ಶನ ಪಡೆಯಬಹುದಾಗಿದೆ. ಮಹಿಳೆಯರು ಸೀರೆ ಅಥವಾ ಚೂಡಿದಾರ್ ಧರಿಸಿ ದೇಗುಲದ ಒಳಗೆ ಪ್ರವೇಶ ಪಡೆಯಬಹುದಾಗಿದೆ. ಈ ಬಟ್ಟೆಗಳನ್ನು ಹೊರತುಪಡಿಸಿ ಬೇರೆ ಬಗೆಯ ಬಟ್ಟೆ ಧರಿಸಿ ಬಂದವರಿಗೆ ದೇಗುಲದ ಒಳಗೆ ಪ್ರವೇಶ ನಿರಾಕರಿಸಲಾಗುತ್ತದೆ ಎಂದು ದೇವಸ್ಥಾನದ ಹೊರಗೆ ಫಲಕ ಹಾಕಲಾಗಿದೆ.

‘ಮಹಿಳೆಯರ ಶೋಷಣೆ: ಕೆಲಸ ಇದ್ದವರಾರೂ ಸಮಿತಿ ರಚಿಸಿ ಎನ್ನಲ್ಲ’

ಮಂಗಳೂರು: ‘ಮಹಿಳೆಯರ ಶೋಷಣೆ ಸಿನಿಮಾ ಕ್ಷೇತ್ರ ಮಾತ್ರವಲ್ಲ, ಕಾಲೇಜುಗಳು, ಕಚೇರಿ, ಉದ್ಯಮ ಎಲ್ಲ ಕಡೆಗಳಲ್ಲೂ ಹುಡುಕಿದರೆ ಸಿಗುತ್ತದೆ. ಕೇರಳ ಮಾದರಿಯಲ್ಲಿ ಸಮಿತಿ ಮಾಡಿ ಎಂಬ ಒತ್ತಾಯವನ್ನು ಕೆಲಸ ಇದ್ದವರು ಯಾರೂ ಮಾಡುವುದಿಲ್ಲ’ ಎಂದು ಸಂಗೀತ ನಿರ್ದೇಶಕ ಗುರುಕಿರಣ್ ಅಭಿಪ್ರಾಯಪಟ್ಟರು.

ಮಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಶುಕ್ರವಾರ ನಡೆದ ‘ಗೌರವ ಅತಿಥಿ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಿನಿಮಾ ಕ್ಷೇತ್ರದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ಅಧ್ಯಯನಕ್ಕೆ ಕೇರಳ ಮಾದರಿಯಲ್ಲಿ ಕರ್ನಾಟಕದಲ್ಲಿಯೂ ಸಮಿತಿ ರಚಿಸಬೇಕೆಂಬ ಆಗ್ರಹದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಇದು ಚಿತ್ರರಂಗದಲ್ಲಿ ಮಾತ್ರವಲ್ಲ ಬೇರೆ ಕ್ಷೇತ್ರಗಳಲ್ಲೂ ಇದೆ. ಚಿತ್ರರಂಗಕ್ಕೂ ಬೇರೆ ಕ್ಷೇತ್ರಕ್ಕೂ ವ್ಯತ್ಯಾಸವಿದೆ. ಬೇರೆ ಕಡೆಗಳಲ್ಲಿ ಸ್ಪರ್ಶಿಸುವ ಸಂದರ್ಭ ಬರುವುದಿಲ್ಲ. ಚಲನಚಿತ್ರದಲ್ಲಿ ಇದು ಅನಿವಾರ್ಯ. ಪ್ರತಿಯೊಂದಕ್ಕೂ ಸಮಿತಿ ಮಾಡುತ್ತ ಹೋದರೆ ಕೆಲಸ ಮಾಡಲು ಆಗದು. ಅಲ್ಲೂ ಭ್ರಷ್ಟಾಚಾರ ನಡೆಯುವ ಸಾಧ್ಯತೆ ಇರುತ್ತದೆ. ಎಷ್ಟು ನಕಲಿ ಪ್ರಕರಣಗಳು ನಡೆದಿಲ್ಲ? ಕೆಲಸ ಇದ್ದವರು ಯಾರೂ ಇಂತಹ ಒತ್ತಾಯ ಮಾಡಲ್ಲ. ಆರೋಪ ಮಾಡುವಾಗ ಅದಕ್ಕೆ ದಾಖಲೆ ಇರಬೇಕು. ನಮ್ಮಲ್ಲಿ ನ್ಯಾಯಾಲಯ ವ್ಯವಸ್ಥೆ ಇದೆ, ಕಾನೂನಿನ ಮೂಲಕ ನ್ಯಾಯ ಪಡೆದುಕೊಳ್ಳಬಹುದು’ ಎಂದರು.

ತುಂಗಭದ್ರಾ ಅಣೆಕಟ್ಟು: ಗೇಟ್ ಬದಲಿಸಲು ಸಲಹೆ

ಹೊಸಪೇಟೆ(ವಿಜಯನಗರ) ತುಂಗಭದ್ರಾ ಅಣೆಕಟ್ಟೆಯ 19ನೇ ಕ್ರಸ್ಟ್‌ಗೇಟ್ ಕೊಚ್ಚಿಹೋಗಲು ನೀರಿನ ಒತ್ತಡವೇ ಕಾರಣ ಎಂದು ಕೇಂದ್ರ ಜಲ ಆಯೋಗದ (ಸಿಡಬ್ಲ್ಯುಸಿ) ಮಾಜಿ ಅಧ್ಯಕ್ಷ ಎ.ಕೆ.ಬಜಾಜ್ ನೇತೃತ್ವದ ತಜ್ಞರ ತಂಡ ತಿಳಿಸಿದೆ. ಇದರ ಬಗ್ಗೆ ವರದಿ ಸಲ್ಲಿಸಿರುವ ತಂಡವು, ‘ಎಲ್ಲ 33 ಗೇಟ್‌ಗಳನ್ನೂ ಬದಲಿಸಿ, ಹೊಸ ಗೇಟ್ ಅಳವಡಿಸಿ’ ಎಂದಿದೆ.

‘ಎಲ್ಲಾ 33 ಗೇಟ್‌ಗಳನ್ನೂ ಬದಲಿಸುವ ಮುನ್ನ ಅಣೆಕಟ್ಟೆ ಸಾಮರ್ಥ್ಯ ಪರೀಕ್ಷಿಸಬೇಕು. ಅಣೆಕಟ್ಟೆ ದುರಂತಕ್ಕೆ ವರದಿಯು ಯಾರನ್ನೂ ದೂಷಿಸಿಲ್ಲ. 70 ವರ್ಷ ಹಳೆಯ ಗೇಟ್ ನೀರಿನ ಒತ್ತಡಕ್ಕೆ ಸಿಲುಕು ಕೊಚ್ಚಿ ಹೋಗಿರಬೇಕೆಂದು ತಜ್ಞರು ಅಂದಾಜಿಸಿದ್ದಾರೆ’ ಎಂದು ತುಂಗಭದ್ರಾ ಮಂಡಳಿಯ ಕಾರ್ಯದರ್ಶಿ ಒ.ಆರ್.ಕೆ.ರೆಡ್ಡಿ ತಿಳಿಸಿದ್ದಾರೆ.

ನಿಧನ ವಾರ್ತೆ

ಚಂದ್ರಶೇಖರ ಉಪಾಧ್ಯ

ಶಿವಮೊಗ್ಗ: ದಕ್ಷಿಣ ಕನ್ನಡ ಜಿಲ್ಲೆ ಸಾಲಿಗ್ರಾಮದ ಮಂಟಪ ಕುಟುಂಬದ ಹಿರಿಯರಾದ ಮಂಟಪ ಚಂದ್ರಶೇಖರ ಉಪಾಧ್ಯ (92) ಗುರುವಾರ ಶಿವಮೊಗ್ಗ-ದಲ್ಲಿ ನಿಧನರಾದರು.

ಕೃಷಿಕರಾಗಿದ್ದ ಅವರು ಯೋಗ ಸಾಧಕರೂ, ಯಕ್ಷಗಾನ ಕಲಾಸಾಧಕರೂ ಆಗಿದ್ದರು. ಉಡುಪಿಯ ಕಲಾರಂಗ ಯಕ್ಷಗಾನ ಸಂಸ್ಥೆಯಲ್ಲಿ ಸಕ್ರಿಯರಾಗಿದ್ದ-ರಲ್ಲದೆ, ಯಕ್ಷಗಾನ ಸಂಘಟಕರಾಗಿಯೂ ಗುರುತಿಸಿಕೊಂಡಿದ್ದರು. .

ಅವರಿಗೆ ಶಿವಮೊಗ್ಗದ ವೈದ್ಯ, ಯಕ್ಷಗಾನ ಸಂಘಟಕ ಡಾ.ರತ್ನಾಕರ ಉಪಾಧ್ಯ, ಯಕ್ಷಗಾನ ಕಲಾವಿದ, ಉದ್ಯಮಿ ಪ್ರಭಾಕರ ಉಪಾಧ್ಯ, ಮಣಿಪಾಲದ ಎಂಐಟಿ ಉಪನ್ಯಾಸಕ ನಾಗರಾಜ ಉಪಾಧ್ಯ, ಪಶು ವೈದ್ಯ ಡಾ.ಮನೋಹರ ಉಪಾಧ್ಯ, ಎಂಜಿನಿಯರ್ ನಟರಾಜ ಉಪಾಧ್ಯ ಸೇರಿ ಐವರು ಪುತ್ರರು ಹಾಗೂ ಪುತ್ರಿ ಗಾಯತ್ರಿ ಜಗದೀಶ್ ಇದ್ದಾರೆ. ಶುಕ್ರವಾರ ಶಿವಮೊಗ್ಗದದಲ್ಲಿ ಅಂತ್ಯಕ್ರಿಯೆ ನಡೆಯಿತು.

ಪ್ರಾದೇಶಿಕ ಆಯುಕ್ತರವರ ಕಚೇರಿ, ಕಂದಾಯ ಇಲಾಖೆ, ಬೆಂಗಳೂರು ವಿಭಾಗ ಮತ್ತು ನೋಡಲ್ ಅಧಿಕಾರಿ, ಪದನಿಮಿತ್ತ ಕಾರ್ಯದರ್ಶಿ (ಆರ್ಥಿಕ ಅಪರಾಧಗಳು), ಬೆಂಗಳೂರು

ಬಿಎಂಟಿಸಿ ಬಿಲ್ಡಿಂಗ್, 2ನೇ ಮಹಡಿ, ಶಾಂತಿನಗರ, ಕೆ.ಎಚ್ ರಸ್ತೆ, ಬೆಂಗಳೂರು–560027

ಸ್ಥಿರಾಸ್ತಿಯ ಇ-ಹರಾಜಿಗೆ ಆಹ್ವಾನ /ಸೂಚನೆ

Pursuant to attachment of Immovable properties by the Government under the provisions of the Karnataka Protection of Interest of Depositors in Financial Establishments Act. 2004(KPIDFE Act) and pursuant to the absolute attachment order by the Hon'ble Special Court the Competent Authority and Additional Regional Commissioner, Office of the Regional Commissioner, Bengaluru division is issuing notice for e-auction of the immovable property through e-auction on **'as is where is and whatever there is basis'.**
The intending bidders will be required to furnish Earnest Money Deposit (EMD) (as mentioned against each auction in the e-portal provided by the Service Provider/Karnataka Public Procurement Portal only).

ಸ್ಥಿರ ಆಸ್ತಿಯ ಸಂಕ್ಷಿಪ್ತ ವಿವರಣೆ

ಕ್ರ. ಸಂ.	ಸ್ವತ್ತಿನ ವಿವರ						ಕನಿಷ್ಠ ಬೆಲೆ (ರೂ.)	ಇಎಮ್‌ಡಿ (ರೂ)	ಬಿಡ್ ಹೆಚ್ಚಳ ಮೌಲ್ಯ(ರೂ)	Clear Title
	ಜಿಲ್ಲೆ	ತಾಲ್ಲೂಕು	ಹೋಬಳಿ	ಗ್ರಾಮ	ಸೈಟ್/ಖಾತಾ ಸಂಖ್ಯೆ	ಅಳತೆ(ಚ.ಅಡಿ)				
1	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	2/415	1410	1410000	28200	7100	ಖಾತಾ ಸರ್ಕಾರವು ನೇಮಿಸಿದ ಸಕ್ಷಮ ಪ್ರಾಧಿಕಾರ ಮತ್ತು ಹರಾಜು ಪ್ರಾಧಿಕಾರದ ಹೆಸರಿನಲ್ಲಿ ದಾಖಲಾಗಿರುತ್ತದೆ.
2	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	12/425	1600	1600000	32000	8000	
3	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	56/469	1697.47	1697470	34000	8500	
4	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	36/449	1200	1200000	24000	6000	
5	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	27/440	1200	1200000	24000	6000	
6	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	7/420	1200	1200000	24000	6000	
7	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	1/414	1469	1469000	29400	7500	
8	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	6/419	1410	1410000	28200	7100	
9	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	41/454	1200	1200000	24000	6000	
10	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	29/442	1200	1200000	24000	6000	
11	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	26/439	1200	1200000	24000	6000	
12	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	25/438	1200	1200000	24000	6000	
13	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	44/457	1200	1200000	24000	6000	
14	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	46/459	1200	1200000	24000	6000	
15	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	48/461	1200	1200000	24000	6000	
16	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	20/433	1200	1200000	24000	6000	
17	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	37/450	1200	1200000	24000	6000	
18	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	49/462	1200	1200000	24000	6000	
19	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	13/426	1200	1200000	24000	6000	
20	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	54/467	1200	1200000	24000	6000	
21	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	55/468	1646.40	1646400	33000	8500	
22	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	45/458	1920	1920000	38400	9600	
23	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	24/437	1200	1200000	24000	6000	
24	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	53/466	1687.46	1687460	34000	8500	
25	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	4/417	1410	1410000	28200	7100	
26	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	23/436	1200	1200000	24000	6000	
27	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	28/441	1200	1200000	24000	6000	
28	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	21/434	1200	1200000	24000	6000	
29	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	16/429	1200	1200000	24000	6000	
30	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	52/465	1920	1920000	38400	9600	
31	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	22/491	1200	1200000	24000	6000	
32	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	20/489	1200	1200000	24000	6000	
33	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	21/490	1200	1200000	24000	6000	
34	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	12/481	1200	1200000	24000	6000	
35	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	11/480	1200	1200000	24000	6000	
36	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	18/487	1200	1200000	24000	6000	
37	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	19/488	1200	1200000	24000	6000	
38	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	4/473	893.20	893200	17900	4500	
39	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	2/471	1053.20	1053000	21100	5300	
40	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	1/470	858.96	858960	17200	4300	
41	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	5/474	782.38	782380	15700	4000	
42	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	3/472	973.20	973200	19500	5000	
43	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	6/475	1879.72	1879720	37600	9500	
44	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	7/476	1063.70	1063700	21500	5500	
45	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	70/539	1500	1500000	30000	7500	
46	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	32/501	1290	1290000	25800	6500	
47	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	35/504	1290	1290000	25800	6500	
48	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	36/505	1290	1290000	25800	6500	
49	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	31/500	1591	1591000	32000	8000	
50	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	34/503	1290	1290000	25800	6500	
51	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	30/499	816.65	816650	16500	4500	
52	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	26/495	1200	1200000	24000	6000	
53	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	65/534	1500	1500000	30000	7500	
54	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	71/540	1200	1200000	24000	6000	
55	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	58/527	1200	1200000	24000	6000	
56	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	50/519	1200	1200000	24000	6000	
57	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	81/550	1600	1600000	32000	8000	
58	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	52/521	1200	1200000	24000	6000	
59	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	56/525	1108	1108000	22200	5600	
60	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	51/520	1200	1200000	24000	6000	
61	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	46/515	1110	1110000	22200	5600	
62	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	47/516	1200	1200000	24000	6000	
63	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	57/526	1105.20	1105200	22200	5600	
64	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	45/514	2016.69	2016690	40400	10100	
65	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	41/510	1290	1290000	25800	6500	
66	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	53/522	1200	1200000	24000	6000	
67	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	48/517	1323.20	1323200	26500	6700	
68	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	49/518	1325.20	1325200	27000	6700	
69	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	83/552	1200	1200000	24000	6000	
70	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	97/566	1500	1500000	30000	7500	
71	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	84/553	1200	1200000	24000	6000	
72	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	96/565	1500	1500000	30000	7500	
73	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	98/567	1500	1500000	30000	7500	
74	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	88/557	1500	1500000	30000	7500	
75	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	108/577	1200	1200000	24000	6000	
76	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	95/564	1200	1200000	24000	6000	
77	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	92/561	2120	2120000	42400	10600	
78	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	91/560	2250	2250000	45000	11500	
79	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	100/569	1290	1290000	25800	6500	
80	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	89/558	1500	1500000	30000	7500	
81	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	111/580	1392	1392000	27900	7000	
82	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	101/570	1200	1200000	24000	6000	
83	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	99/568	2650	2650000	53000	13500	
84	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	82/551	1525.17	1525170	30600	7700	
85	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	60/529	2145.50	2145500	43000	10800	
86	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	59/528	935.20	935200	18800	4700	
87	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	103/572	1440	1440000	28800	7200	
88	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	87/556	844	844000	16900	4300	
89	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	107/576	1200	1200000	24000	6000	
90	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	104/573	1392	1392000	27900	7000	
91	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	27/496	1200	1200000	24000	6000	
92	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	72/541	1200	1200000	24000	6000	
93	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	47/460	1200	1200000	24000	6000	

Continued.....

ಸಿವಿಲ್ ಸೇವೆ: ನೇಮಕಾತಿ: ವಯೋಮಿತಿ ಸಡಿಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸಿವಿಲ್ ಸೇವೆಗಳಲ್ಲಿನ ವಿವಿಧ ಇಲಾಖೆಗಳ ಗ್ರೂಪ್‌-ಸಿ ಮತ್ತು ಗ್ರೂಪ್‌-ಬಿ ಹುದ್ದೆಗಳ ನೇರ ನೇಮಕಾತಿಯಡಿ ಎಲ್ಲ ಪ್ರವರ್ಗಗಳ ಅಭ್ಯರ್ಥಿಗಳಿಗೆ ಒಂದು ಬಾರಿಗೆ ಅನ್ವಯವಾಗುವಂತೆ ಗರಿಷ್ಠ ವಯೋಮಿತಿಯಲ್ಲಿ ಮೂರು ವರ್ಷ ಸಡಿಲ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಭರ್ತಿ ಮಾಡಲು ಈಗಾಗಲೇ ಹೊರಡಿಸಿರುವ ಅಧಿಸೂಚನೆಗಳಿಗೆ ಹಾಗೂ ಮುಂದಿನ ಒಂದು ವರ್ಷದಲ್ಲಿ ಹೊರಡಿಸಲಿರುವ ಅಧಿಸೂಚನೆಗಳಿಗೆ ಈ ಆದೇಶ ಅನ್ವಯವಾಗಲಿದೆ.

ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ 3.10.2024 ಕ್ಕೆ ಆಯಾ ಮೀಸಲಾತಿಗಳ ಮುಂದೆ ನಮೂದಿಸಿರುವ ಕನಿಷ್ಠ ವಯೋಮಿತಿಯನ್ನು ಹೊಂದಿರಬೇಕು ಮತ್ತು ಗರಿಷ್ಠ ವಯೋಮಿತಿ ಮೀರಿರಬಾರದು. ಸಾಮಾನ್ಯ ವರ್ಗದವರಿಗೆ ಕನಿಷ್ಠ 18 ವರ್ಷ, ಗರಿಷ್ಠ 38 ವರ್ಷ, ಪ್ರವರ್ಗ 2ಎ,2ಬಿ,3ಎ ಮತ್ತು 3ಬಿ ಗರಿಷ್ಠ 41 ವರ್ಷ . ಪರಿಶಿಷ್ಟ ಜಾತಿ ಮತ್ತು ಪಂಗಡ, ಪ್ರವರ್ಗ1 ಗರಿಷ್ಠ 43 ವರ್ಷ .

ಅಲ್ಲದೇ, ಕೆಪಿಎಸ್‌ಸಿ 2023-24 ನೇ ಸಾಲಿನ ಗ್ರೂಪ್‌-ಸಿ ವೃಂದದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನೇಮಕ ಸಂಬಂಧ ಎಲ್ಲಾ ಪ್ರವರ್ಗಗಳ ಅಭ್ಯರ್ಥಿಗಳಿಗೆ ಒಂದು ಬಾರಿಗೆ ಅನ್ವಯವಾಗುವಂತೆ ಗರಿಷ್ಠ ವಯೋಮಿತಿಯನ್ನು ಮೂರು ವರ್ಷ ಸಡಿಲಿಸಿ ಆದೇಶ ಹೊರಡಿಸಲಾಗಿದೆ. ಅರ್ಹ ಅಭ್ಯರ್ಥಿಗಳು 18.09.2024 ರಿಂದ 3.10.24 ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಲಘು ಮಾತು: ‘ಸುಪ್ರೀಂ’ ಕಿಡಿ

ಒಂದನೇ ಪುಟದಿಂದ...

ಶ್ರೀಶಾನಂದ ಅವರ ಹೇಳಿಕೆಗಳಿಗೆ ವ್ಯಾಪಕ ಟೀಕೆಗಳು ವ್ಯಕ್ತವಾದ ಬೆನ್ನಲ್ಲೇ, ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಬಿ.ಆರ್. ಗವಾಯಿ, ಸೂರ್ಯಕಾಂತ್ ಮತ್ತು ಹೃಷಿಕೇಶ್ ರಾಯ್ ಅವರನ್ನೊಳಗೊಂಡ ಪೀಠವು, ‘ಸಾಮಾಜಿಕ ಮಾಧ್ಯಮಗಳ ಯುಗದಲ್ಲಿ ಕೆಲವೊಂದು ಮಾರ್ಗಸೂಚಿ ಅಳವಡಿಸಿಕೊಳ್ಳುವ ಅಗತ್ಯವಿದೆ’ ಎಂದು ಅಭಿಪ್ರಾಯಪಟ್ಟಿತು.

‘ನ್ಯಾಯಾಂಗದ ಪ್ರಕ್ರಿಯೆಗಳನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತದೆ ಹಾಗೂ ಅದಕ್ಕೆ ಅನುಗುಣವಾಗಿ ನಾವು ಕಾರ್ಯ ನಿರ್ವಹಿಸಬೇಕು’ ಎಂದು ಅಭಿಪ್ರಾಯಪಟ್ಟಿತು.

‘ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿಂದ ಬಂದಿರುವ ಕೆಲವು ಪ್ರತಿಕ್ರಿಯೆಗಳ ಬಗ್ಗೆ ಮಾಧ್ಯಮ ವರದಿಗಳ ಮೂಲಕ ನಮ್ಮ ಗಮನ ಸೆಳೆಯಲಾಗಿದೆ’ ಎಂದು ಪೀಠ ಹೇಳಿತು. ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ನೆರವು ನೀಡುವಂತೆ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಮತ್ತು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಪೀಠ ಸೂಚಿಸಿತು. ಈ ವೇಳೆ ಅವರಿಬ್ಬರು ನ್ಯಾಯಾಲಯದಲ್ಲಿ ಹಾಜರಿದ್ದರು.

ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜೊತೆಗೆ ಚರ್ಚಿಸಿ ರಿಜಿಸ್ಟ್ರಾರ್ ಜನರಲ್ ಎರಡು ದಿನದಲ್ಲಿ ವರದಿ ಸಲ್ಲಿಸಬೇಕು ಎಂದು ಪೀಠ ನಿರ್ದೇಶಿಸಿತು. ಬುಧವಾರಕ್ಕೆ (ಸೆ.25) ವಿಚಾರಣೆಯನ್ನು ಮುಂದೂಡಲಾಗಿದೆ.

ಹಿರಿಯ ವಕೀಲೆ ಇಂದಿರಾ ಜೈಸಿಂಗ್ ಅವರು ‘ಎಕ್ಸ್’ನಲ್ಲಿ ವಿಡಿಯೊ ಪೋಸ್ಟ್ ಮಾಡಿ, ‘ಈ ನ್ಯಾಯಮೂರ್ತಿಯವರ ವಿರುದ್ಧ ಸಿಜೆಐ ಅವರು ಸ್ವಯಂಪ್ರೇರಿತ ಕ್ರಮ ಕೈಗೊಳ್ಳಬೇಕು, ಲಿಂಗ ಸಂವೇದನೆ ತರಬೇತಿಗಾಗಿ ಅವರನ್ನು ಕಳುಹಿಸಬೇಕು’ ಎಂದು ಒತ್ತಾಯಿಸಿದ್ದರು.

‘ಗೋಪ್ಯ ಮಾಹಿತಿ ಸಿಕ್ಕಿದ್ದು ಹೇಗೆ?’

ಎಚ್‌ಡಿಕೆ, ನಿರಾಣಿ, ಜೊಲ್ಲೆ, ರೆಡ್ಡಿ ವಿರುದ್ಧದ ಲೋಕಾಯುಕ್ತ ಮನವಿ: ಸರ್ಕಾರಕ್ಕೆ ರಾಜ್ಯಪಾಲ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಚ್.ಡಿ.ಕುಮಾರಸ್ವಾಮಿ, ಮುರುಗೇಶ ನಿರಾಣಿ, ಶಶಿಕಲಾ ಜೊಲ್ಲೆ ಮತ್ತು ಜಿ. ಜನಾರ್ದನ ರೆಡ್ಡಿ ಅವರ ವಿರುದ್ಧ ತನಿಖೆ ಮತ್ತು ವಿಚಾರಣೆಗೆ ಅನುಮತಿ ಕೋರಿ ಲೋಕಾಯುಕ್ತವು ರಾಜ್ಯಪಾಲರಿಗೆ ಮನವಿ ಸಲ್ಲಿಸಿದೆ ಎಂಬ ಗೋಪ್ಯ ಮಾಹಿತಿ ರಾಜ್ಯ ಸರ್ಕಾರಕ್ಕೆ ಗೊತ್ತಾಗಿದ್ದಾದರೂ ಹೇಗೆ’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಜ್ಯ ಸರ್ಕಾರವನ್ನು ಪ್ರಶ್ನಿಸಿದ್ದಾರೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಆಗಸ್ಟ್ 28ರಂದು ಪತ್ರ ಬರೆದಿರುವ ಪತ್ರದ ಪ್ರತಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

ಮುಖ್ಯಮಂತ್ರಿ ವಿರುದ್ಧ ತನಿಖೆಗೆ ರಾಜ್ಯಪಾಲರು ಅನುಮತಿ ನೀಡಿದ್ದನ್ನು, ಸಂಪುಟ ಸಭೆ ಖಂಡಿಸಿತ್ತು. ಮೇಲೆ ಉಲ್ಲೇಖಿಸಲಾದ ನಾಲ್ವರ ವಿರುದ್ಧ ತನಿಖೆ-ವಿಚಾರಣೆಗೆ ಅನುಮತಿ ನೀಡಬೇಕು ಎಂದೂ ಒತ್ತಾಯಿಸಿತ್ತು.

ಮುಖ್ಯಾಂಶಗಳು

- ತ್ವರಿತ ಉತ್ತರ ನೀಡುವಂತೆ ಶಾಲಿನಿ ರಜನೀಶ್‌ಗೆ ಪತ್ರ
- ಸಿ.ಎಂ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್‌ಗೂ ಪ್ರತಿ
- ಡಿಸಿಎಂ ಆಪ್ತಸಹಾಯಕ ಶ್ರೀಧರ್‌ಗೂ ಪ್ರತಿ ರವಾನೆ

‘ಈ ನಾಲ್ವರ ಪ್ರಕರಣಗಳಿಗೆ ಸಂಬಂಧಿಸಿದಂತೆ ಲೋಕಾಯುಕ್ತದಿಂದ ರಾಜಭವನಕ್ಕೆ ಸಲ್ಲಿಕೆಯಾಗಿರುವ ಮನವಿಗಳು ಮತ್ತು ಅವುಗಳ ದಿನಾಂಕಗಳನ್ನು ಸಂಪುಟ ಸಭೆಯ ನಿರ್ಣಯಗಳಲ್ಲಿ ಉಲ್ಲೇಖಿಸಲಾಗಿದೆ. ಈ ರಹಸ್ಯ ಮಾಹಿತಿ ರಾಜ್ಯ ಸರ್ಕಾರಕ್ಕೆ ಗೊತ್ತಾಗಿದ್ದಾದರೂ ಹೇಗೆ’ ಎಂದು ರಾಜ್ಯಪಾಲರು ಪ್ರಶ್ನಿಸಿದ್ದಾರೆ.

‘ಈ ದಾಖಲೆಗಳ ಪ್ರತಿಗಳು ಮಾಧ್ಯಮಗಳಲ್ಲೂ ಹರಿದಾಡುತ್ತಿರುವುದನ್ನು ನೋಡಿದ್ದೇನೆ. ಅನುಮತಿ ಕೋರಿ ರಾಜ್ಯಪಾಲರಿಗೆ ಸಲ್ಲಿಸಿದ ಮನವಿಯ ಮಾಹಿತಿಯ ಗೋಪ್ಯವನ್ನು ಲೋಕಾಯುಕ್ತ ಸಂಸ್ಥೆ ಕಾಪಾಡಿಕೊಳ್ಳಬೇಕು. ಮಾಹಿತಿಗಳನ್ನು ಸಂಬಂಧವೇ ಇಲ್ಲದವರೊಂದಿಗೆ ಹಂಚಿಕೊಂಡದ್ದು ಹೇಗೆ’ ಎಂದೂ ಅವರು ಪ್ರಶ್ನಿಸಿದ್ದಾರೆ.

ಸಂಪುಟ ಸಭೆಯ ಟಿಪ್ಪಣಿ, ಸಂಬಂಧಿತ ದಾಖಲೆಗಳ ಜತೆಗೆ, ಆ ದಾಖಲೆಗಳು ಹೇಗೆ ದೊರೆತವು ಎಂಬುದರ ಬಗ್ಗೆ ಪ್ರಾಮಾಣಿಕ ಉತ್ತರವನ್ನು ನಿರೀಕ್ಷಿಸುತ್ತಿದ್ದೇನೆ

ಥಾವರಚಂದ್ ಗೆಹಲೋತ್, ರಾಜ್ಯಪಾಲ

‘ದಾಖಲೆ ನೋಡಲು ಉತ್ಸುಕ’

‘ಸಂಪುಟ ಸಭೆಯ ಟಿಪ್ಪಣಿ ಮತ್ತು ನಿರ್ಣಯಗಳ ಪ್ರತಿಗಳನ್ನು ರಾಜಭವನಕ್ಕೆ ಕಳುಹಿಸಿಲ್ಲ’ ಎಂದೂ ರಾಜ್ಯಪಾಲರು ಪತ್ರದಲ್ಲಿ ಹೇಳಿದ್ದಾರೆ. ‘ಆಗಸ್ಟ್ 26ರಂದು ಉಪ ಮುಖ್ಯಮಂತ್ರಿ ನೇತೃತ್ವದಲ್ಲಿ ನಡೆದ 17ನೇ ಸಂಪುಟ ಸಭೆಗೆ ಸಂಬಂಧಿಸಿದ ದಾಖಲೆಗಳನ್ನು ರಾಜಭವನಕ್ಕೆ ಕಳುಹಿಸಲಾಗಿತ್ತಾದರೂ, ಅದರಲ್ಲಿ 16ನೇ ಸಭೆಯ (ಆ.22) ಕಾರ್ಯಸೂಚಿಯಷ್ಟೇ ಇತ್ತು. ಸಚಿವ ಸಂಪುಟ ಶಾಖೆಗೆ ಕರೆ ಮಾಡಿದ ನಂತರವಷ್ಟೇ ಆಗಸ್ಟ್ 27ರಂದು ನಿರ್ಣಯದ ಪ್ರತಿ ರಾಜಭವನಕ್ಕೆ ಬಂದಿತು. 15ನೇ ಸಭೆಯ (ಆ.1) ನಿರ್ಣಯಗಳನ್ನು 16ನೇ ಸಭೆಯಲ್ಲಿ ಸ್ಥಿರೀಕರಿಸಿದ ಮಾಹಿತಿಯಷ್ಟೇ ಅದರಲ್ಲಿತ್ತು. 16ನೇ ಸಭೆಯಲ್ಲಿ ಇತರ ವಿಷಯಗಳ ಕುರಿತು ಆದ ಚರ್ಚೆಯ ಮಾಹಿತಿಗಳು ಇರಲಿಲ್ಲ’ ಎಂದಿದ್ದಾರೆ.

‘ಬಾಕಿ ಇರುವ ಮನವಿಗಳಿಗೆ ಸಂಬಂಧಿಸಿದಂತೆ, ರಾಜ್ಯಪಾಲರು ವಿಳಂಬ ಮಾಡದೆ ತನಿಖೆ-ವಿಚಾರಣೆಗೆ ಅನುಮತಿ ನೀಡಬೇಕು ಎಂದು ಸಚಿವ ಸಂಪುಟ ರಾಜ್ಯಪಾಲರಿಗೆ ಸಲಹೆ ನೀಡಿದೆ ಎಂದು ಆಗಸ್ಟ್ 23ರಂದು ಮಾಧ್ಯಮಗಳು ವರದಿ ಮಾಡಿದ್ದವು. ಆ ಸಭೆಯ ನಿರ್ಣಯಗಳನ್ನು ತರಿಸಿಕೊಂಡು ಪರಿಶೀಲಿಸಿದೆ. ಅದರಲ್ಲಿ ಆ ವಿಷಯವನ್ನು ಉಲ್ಲೇಖಿಸಲಾಗಿದೆಯೇ ಹೊರತು, ರಾಜ್ಯಪಾಲಗೆ ಯಾವುದೇ ಸಲಹೆ ನೀಡಿಲ್ಲ’ ಎಂದು ಅವರು ಉಲ್ಲೇಖಿಸಿದ್ದಾರೆ.

‘ನನಗೆ ಅಧಿಕೃತವಾಗಿ ತಿಳಿಸಲಾದ ನಿರ್ಣಯಕ್ಕೆ ಬರಲು ಆಧಾರವಾದ, ಸಂಪುಟ ಸಭೆ ಟಿಪ್ಪಣಿಗಳು ಮತ್ತು ದಾಖಲೆಗಳನ್ನು ನೋಡಲು ನಾನು ಉತ್ಸುಕನಾಗಿದ್ದೇನೆ’ ಎಂದೂ ಅವರು ಹೇಳಿದ್ದಾರೆ.

ಆನೆಕೊಂಡ, ಮಟ್ಟಿಕಲ್ಲು ಪ್ರದೇಶಗಳಿಗೆ ನುಗ್ಗಿ ದಾಂದಲೆ ನಡೆಸಿದ್ದ ಕಿಡಿಗೇಡಿಗಳು

ಕಲ್ಲು ತೂರಾಟ ಪ್ರಕರಣ; 30 ಜನರ ಬಂಧನ

ಪ್ರಜಾವಾಣಿ ವಾರ್ತೆ

ದಾವಣಗೆರೆ: ನಗರದಲ್ಲಿ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ವೇಳೆ ನಡೆದ ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಶುಕ್ರವಾರ ಬೆಳಗಿನ ಜಾವದವರೆಗೆ ಒಟ್ಟು 30 ಜನರನ್ನು ಬಂಧಿಸಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ನೇತೃತ್ವದಲ್ಲಿ ರಾತ್ರಿಯಿಡೀ ಕಾರ್ಯಾಚರಣೆ ನಡೆಸಿ, ಆರೋಪಿಗಳ ಮನೆಗೆ ತೆರಳಿ ಬಂಧಿಸಲಾಗಿದೆ.

ಇಲ್ಲಿನ ಬೇತೂರು ರಸ್ತೆಯ ವೆಂಕಟೇಶ್ವರ ವೃತ್ತದಲ್ಲಿ ಗುರುವಾರ ರಾತ್ರಿ ಕಲ್ಲು ತೂರಾಟ ನಡೆದ ಬಳಿಕ 40ರಿಂದ 50 ಮಂದಿಯಿದ್ದ ದುಷ್ಕರ್ಮಿಗಳ ಗುಂಪು ಸಮೀಪದ ಆನೆಕೊಂಡ ಹಾಗೂ ಮಟ್ಟಿಕಲ್ಲು ಪ್ರದೇಶದಲ್ಲಿನ ಕೆಲವು ಗಲ್ಲಿಗಳಿಗೆ ನುಗ್ಗಿ ದಾಂದಲೆ ನಡೆಸಿದೆ. ಮನೆಗಳ ಮೇಲೆ ಕಲ್ಲು ತೂರಾಟ ನಡೆಸಿದ್ದು, ಕಿಟಕಿಗಳ ಗಾಜು ಪುಡಿಯಾಗಿವೆ. ಬೈಕ್, ಕಾರ್ ಸೇರಿದಂತೆ ಹತ್ತಾರು ವಾಹನಗಳು ಜಖಂಗೊಂಡಿವೆ.

ಈ ಕುರಿತು ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ. ನಗರದಲ್ಲಿ ಭದ್ರತೆಗಾಗಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಸದ್ಯ ವಾತಾವರಣ ಸಹಜ ಸ್ಥಿತಿಗೆ ಬಂದಿದೆ. ವ್ಯಾಪಾರ- ವಹಿವಾಟು ಎಂದಿನಂತೆ ನಡೆಯಿತು. ಶಾಂತಿ ಸುವ್ಯವಸ್ಥೆಗಾಗಿ ಹಳೆ ದಾವಣಗೆರೆಯ ಸೂಕ್ಷ್ಮ ಪ್ರದೇಶದ ಪ್ರಮುಖ ಮಾರ್ಗಗಳಲ್ಲಿ ಪೊಲೀಸರು ಸಂಜೆ ಪಥ ಸಂಚಲನ ನಡೆಸಿದರು.

ರಾಜ್ಯ ಕಾನೂನು, ಸುವ್ಯವಸ್ಥೆ ಎಡಿಜಿಪಿ ಆರ್.ಹಿತೇಂದ್ರ ಅವರು ಇಲ್ಲಿನ ಆಜಾದ್ ನಗರ ಪೊಲೀಸ್ ಠಾಣೆಗೆ ಭೇಟಿ ನೀಡಿ, ಪೂರ್ವ ವಲಯ ಡಿಐಜಿ ರಮೇಶ್ ಬಾನೋತ್ ಹಾಗೂ ಎಸ್‌ಪಿ ಉಮಾ ಪ್ರಶಾಂತ್ ಅವರಿಂದ ಮಾಹಿತಿ ಪಡೆದರು.

ದಾವಣಗೆರೆಯಲ್ಲಿ ಗಣೇಶ ವಿಸರ್ಜನಾ ಮೆರವಣಿಗೆ ವೇಳೆ ಕಲ್ಲು ತೂರಾಟದ ಘಟನೆ ಬಳಿಕ ಅರಳಿಮರ ವೃತ್ತದಲ್ಲಿ ಶುಕ್ರವಾರ ಪೊಲೀಸ್ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದೆ ಪ್ರಜಾವಾಣಿ ಚಿತ್ರ: ಸತೀಶ್ ಬಡಿಗೇರ್

‘ತಲ್ವಾರ್, ಮಚ್ಚು ಬಳಸೋದು ಗೊತ್ತು’

‘ಹಿಂದೂಗಳ ವಿರುದ್ಧ ಬೇಕಾಬಿಟ್ಟಿ ಪ್ರಕರಣ ದಾಖಲಿಸಿ ಬಂಧಿಸುತ್ತಿರುವ ರಾಜ್ಯ ಸರ್ಕಾರವೇ ಈ ಘಟನೆಗೆ ಹೊಣೆ. ನಾವೇನು ಕೈಗೆ ಬಳೆ ತೊಟ್ಟುಕೊಂಡಿಲ್ಲ. ಹಿಂದೂಗಳನ್ನು ಬಂಧಿಸಿದರೆ ಹಳ್ಳಿಹಳ್ಳಿಗಳಿಂದ ಬರುತ್ತೇವೆ. ಸಂದರ್ಭ ಬಂದರೆ ತಲ್ವಾರ್, ಮಚ್ಚು ಬಳಸೋದೂ ನಮಗೆ ಗೊತ್ತು’ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಹೇಳಿದರು.

ದಾಂದಲೆ ನಡೆದ ಮಟ್ಟಿಕಲ್ಲು, ಆನೆಕೊಂಡ ಪ್ರದೇಶಕ್ಕೆ ಶುಕ್ರವಾರ ಭೇಟಿ ನೀಡಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಬೇರೆ ರಾಷ್ಟ್ರದ ಧ್ವಜ ಹಾರಿಸಿದವರನ್ನು ಗುಂಡಿಕ್ಕಿ ಕೊಲ್ಲಬೇಕು. ಹಿಂದೂ ದೇವರ ವಿರೋಧಿ ಕಾಂಗ್ರೆಸ್ ಸರ್ಕಾರ ಬಹಳ ದಿನ ಉಳಿಯುವುದಿಲ್ಲ. ಭಾರತ್ ಮಾತಾಕಿ ಜೈ ಎಂದರೆ ಗುಂಡು ಹೊಡೆಯುತ್ತೀರಿ. ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗಿದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲ್ಲ. ಇಂತಹ ವಿಚಾರಗಳಲ್ಲಿ ನಾವು ರಾಜಕೀಯ ಮಾಡುವುದಿಲ್ಲ. ಮುಂದೆಯೂ ಇಂಥ ಘಟನೆ ನಡೆದರೆ ಹಿಂದೂಗಳ ರಕ್ಷಣೆಗೆ ಬೀದಿಗೆ ಇಳಿಯಬೇಕಾಗುತ್ತದೆ. ಬುಲ್ಡೋಜರ್ ಸಂಸ್ಕೃತಿ ಬಂದರೆ ಎಲ್ಲರೂ ಸುಮ್ಮನಾಗುತ್ತಾರೆ’ ಎಂದರು.

‘ಪೊಲೀಸರ ಮೇಲೇ ಹಲ್ಲೆಯಾಗುತ್ತಿದ್ದರೂ ರಕ್ಷಣೆ ಮಾಡಿಕೊಳ್ಳಲು ಆಗಿಲ್ಲ. ಸರ್ಕಾರ ಹಿಂದೂಗಳ ಮೇಲೆ ದೌರ್ಜನ್ಯ ಎಸಗುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುತ್ತಿಲ್ಲ’ ಎಂದು ಹರಿಹರದ ಬಿಜೆಪಿ ಶಾಸಕ ಬಿ.ಪಿ.ಹರೀಶ್ ದೂರಿದರು.

‘ದಾವಣಗೆರೆಯಲ್ಲಿ ಹಿಂದೂ ಸಂಘಟನೆ ಬಲಿಷ್ಠವಾಗಿದ್ದು, ಕೆಣಕುವ ಕೆಲಸ ಮಾಡಬೇಡಿ. ಮುಖ್ಯಮಂತ್ರಿಯಾಗುವ ಕನಸಿನಲ್ಲಿ ಗೃಹ ಸಚಿವರಿದ್ದು, ಅವರಿಗೆ ಏನು ಮಾತನಾಡುತ್ತೇನೆ ಎಂಬ ಅರಿವಿಲ್ಲ’ ಎಂದರು.

ಭಾವನೆಗಳಿಗೆ ನೋವುಂಟಾಗಿದೆ: ವಕೀಲರ ಸಂಘ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನ್ಯಾಯಮೂರ್ತಿ ವಿ. ಶ್ರೀಶಾನಂದ ಅವರು ನ್ಯಾಯಾಲಯದ ತೆರೆದ ಕಲಾಪದಲ್ಲಿ ಕಿರಿಯ ವಕೀಲರನ್ನು ನಿರುತ್ಸಾಹಗೊಳಿಸುವ ಮತ್ತು ಮಹಿಳಾ ವಕೀಲರನ್ನು ಮುಜುಗರಕ್ಕೆ ಈಡು ಮಾಡಿದ ಪ್ರಸಂಗಗಳ ಬಗ್ಗೆ ದೂರುಗಳು ಬರುತ್ತಿವೆ’ ಎಂದು ಬೆಂಗಳೂರು ವಕೀಲರ ಸಂಘ ಆತಂಕ ವ್ಯಕ್ತಪಡಿಸಿದೆ.

ಈ ಕುರಿತಂತೆ ಮುಖ್ಯ ನ್ಯಾಯಮೂರ್ತಿ (ಸಿಜೆ) ಎನ್.ವಿ. ಅಂಜಾರಿಯಾ ಅವರಿಗೆ ಶುಕ್ರವಾರ ಪತ್ರ ಬರೆದಿರುವ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ ಮತ್ತು ಖಜಾಂಚಿ ಎಂ.ಟಿ. ಹರೀಶ್ ಅವರು, ‘ಕೆಲವು ದಿನಗಳವರೆಗೆ ಹೈಕೋರ್ಟ್ ಲೈವ್ ಸ್ಟ್ರೀಮಿಂಗ್ ಅನ್ನು ನಿರ್ಬಂಧಿಸಬೇಕು’ ಎಂದು ಕೋರಿದ್ದಾರೆ.

ನ್ಯಾಯಮೂರ್ತಿ ಶ್ರೀಶಾನಂದ ಅವರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಗಂಭೀರ ವಿವಾದ ಸೃಷ್ಟಿಸಿವೆ. ಅವರ ಹೇಳಿಕೆಗಳು ವೈರಲ್ ಆಗಿವೆ. ಇದರಿಂದ ವಕೀಲಿ ವೃತ್ತಿಯನ್ನು ಪರಿಶುದ್ಧ ಎಂದು ಪರಿಗಣಿಸಿರುವ ಎಲ್ಲ ವಕೀಲರ ಭಾವನೆಗಳಿಗೆ ನೋವುಂಟಾಗಿದೆ’ ಎಂಬ ಅಂಶವನ್ನು ಪತ್ರದಲ್ಲಿ ಕಾಣಿಸಲಾಗಿದೆ.

‘ನ್ಯಾಯಮೂರ್ತಿ ಶ್ರೀಶಾನಂದ ಅವರು ಕೆಲವು ಸಂದರ್ಭಗಳಲ್ಲಿ ಆ ಕ್ಷಣಕ್ಕೆ ವ್ಯಕ್ತಪಡಿಸಿರುವ ಅಭಿಪ್ರಾಯ ಮತ್ತು ಮೂದಲಿಕೆಗಳು ಅಪ್ರಸ್ತುತವಾಗಿವೆ. ಆದರೆ, ಅವರು ಪ್ರಾಮಾಣಿಕತೆಗೆ ಹೆಸರಾಗಿದ್ದಾರೆ. ಉತ್ತಮ ತೀರ್ಪುಗಳನ್ನು ನೀಡಿದ್ದಾರೆ. ಆಕ್ಷೇಪಾರ್ಹ ಹೇಳಿಕೆಗಳಿಂದ ಅವರು ಮಾಡಿರುವ ಉತ್ತಮ ಕೆಲಸಗಳಿಗೆ ಅಪಚಾರ ಉಂಟಾಗುತ್ತಿದೆ’ ಎಂದು ವಿವರಿಸಲಾಗಿದೆ.

‘ನ್ಯಾಯಾಲಯಗಳ ಲೈವ್ ಸ್ಟ್ರೀಮಿಂಗ್ ಅನ್ನು ಸಂಪೂರ್ಣ ನಿರ್ಬಂಧಿಸದೇ ಹೋದರೆ ಪರಿಸ್ಥಿತಿ ಕೈಮೀರಲಿದೆ. ಸಾರ್ವಜನಿಕರ ಮನಸ್ಸಿನಲ್ಲಿ ನ್ಯಾಯಾಲಯಗಳ ವರ್ಚಸ್ಸಿಗೆ ಧಕ್ಕೆಯಾಗಲಿದೆ. ಈ ಕುರಿತು ತಾವು ತುರ್ತು ಕ್ರಮ ಕೈಗೊಳ್ಳುತ್ತೀರಿ ಎಂಬ ಆಶಾಭಾವನೆ ಹೊಂದಿದ್ದೇವೆ’ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಸ್ವಾಗತ: ‘ಹೈಕೋರ್ಟ್ ಕಲಾಪಗಳ ನೇರ ಪ್ರಸಾರದಿಂದ ಆಗುತ್ತಿರುವ ಪರಿಣಾಮಗಳನ್ನು ಅರಿತು ಸುಪ್ರೀಂ ಕೋರ್ಟ್ ಈ ದಿಸೆಯಲ್ಲಿ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಲು ಮುಂದಾಗಿರುವುದು ಸ್ವಾಗತಾರ್ಹ’ ಎಂದು ಸಂಘವು ಹೇಳಿದೆ.

‘ಅನೇಕ ಯೂ-ಟ್ಯೂಬ್ ಚಾನಲ್‌ನವರು ಕಾನೂನು ವ್ಯಾಖ್ಯೆಗಳು, ವಕೀಲರು ಹಾಗೂ ನ್ಯಾಯಮೂರ್ತಿಗಳ ವಿವರಣೆಗಳನ್ನು ತಿರುಚಿ ಪ್ರಸಾರ ಮಾಡುತ್ತಿರುವುದರಿಂದ ವಕೀಲರು ಮತ್ತು ನ್ಯಾಯಮೂರ್ತಿಗಳ ಮಧ್ಯೆ ಗಂಭೀರ ಪರಿಣಾಮಕ್ಕೆ ಎಡೆ ಮಾಡಿದೆ. ಆದ್ದರಿಂದ, ವಕೀಲರಿಗಿಂತಲೂ ಹೆಚ್ಚಾಗಿ ನ್ಯಾಯಮೂರ್ತಿಗಳು ತಾವು ಏನು ಹೇಳುತ್ತಿದ್ದೇವೆ ಎಂಬುದರ ಬಗ್ಗೆ ಅತ್ಯಂತ ಜಾಗೃತರಾಗಿರಬೇಕಾಗಿದೆ’ ಎಂದು ಸಂಘವು ಹೇಳಿದೆ.

ವಿಡಿಯೊ ಹಂಚಿಕೆಗೆ ನಿರ್ಬಂಧ

ಹೈಕೋರ್ಟ್‌ನ ತೆರೆದ ಕಲಾಪದ ವಿಡಿಯೊಗಳು ವೈರಲ್ ಆಗಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್, ಪೂರ್ವಾನುಮತಿ ಪಡೆಯದೇ ವಿಡಿಯೊ ರೆಕಾರ್ಡಿಂಗ್, ಹಂಚಿಕೆ ಮಾಡದಂತೆ ಎಚ್ಚರಿಸಿ ವೀಕ್ಷಕರಿಗೆ ತಿಳಿವಳಿಕೆ ನೋಟಿಸ್ ಹೊರಡಿಸಿದೆ. ‘ಕರ್ನಾಟಕ ನ್ಯಾಯಾಲಯ ಕಲಾಪಗಳ ನೇರ ಪ್ರಸಾರ (ಲೈವ್ ಸ್ಟ್ರೀಮ್), ರೆಕಾರ್ಡಿಂಗ್ ನಿಯಮಗಳು-2021’ ಅನ್ನು ಜಾರಿಗೊಳಿಸಿದೆ. ಇದರ ಅನುಸಾರ, ಪೂರ್ವಾನುಮತಿ ಪಡೆಯದೆ ಲೈವ್ ಸ್ಟ್ರೀಮಿಂಗ್‌ನ ಮರು ಪ್ರಸಾರ, ವರ್ಗಾವಣೆ, ಅಪ್‌ಲೋಡ್ ಮಾಡುವುದು, ಪೋಸ್ಟ್ ಮಾಡುವುದು, ಮಾರ್ಪಾಡು ಮಾಡುವುದು, ಪ್ರಸಾರ ಅಥವಾ ಮರು ಪ್ರಸಾರ ಮಾಡುವಂತಿಲ್ಲ.

‘ಅನುಮತಿ ಪಡೆದಿರುವ ವ್ಯಕ್ತಿ ಅಥವಾ ಸಂಸ್ಥೆಯನ್ನು ಹೊರತುಪಡಿಸಿ ಬೇರಾವುದೇ ವ್ಯಕ್ತಿ ಅಥವಾ ಸಂಸ್ಥೆ (ಮುದ್ರಣ, ವಿದ್ಯುನ್ಮಾನ ಮತ್ತು ಸಾಮಾಜಿಕ ಜಾಲತಾಣಗಳು) ಮುಕ್ತ ಕಲಾಪದ ಲೈವ್ ಸ್ಟ್ರೀಮಿಂಗ್ ಅಥವಾ ಹೈಕೋರ್ಟ್ ಯೂ-ಟ್ಯೂಬ್ ಚಾನಲ್‌ನಲ್ಲಿನ ವಿಡಿಯೊಗಳನ್ನು ರೆಕಾರ್ಡ್ ಅಥವಾ ಹಂಚಿಕೆ ಮಾಡುವಂತಿಲ್ಲ. ಈ ನಿರ್ಬಂಧವು ಎಲ್ಲಾ ಸಂದೇಶ ಮತ್ತು ಅಪ್ಲಿಕೇಶನ್‌ಗಳಿಗೂ ಅನ್ವಯಿಸಲಿದೆ’ ಎಂದು ನೋಟಿಸ್‌ನಲ್ಲಿ ಸ್ಪಷ್ಟಪಡಿಸಲಾಗಿದೆ.

‘ನ್ಯಾಯಾಲಯದ ಕಲಾಪಗಳ ರೆಕಾರ್ಡಿಂಗ್ ಮತ್ತು ಸಂಗ್ರಹ (ಆರ್ಕೈವ್) ದತ್ತಾಂಶದ ಮೇಲೆ ನ್ಯಾಯಾಲಯಕ್ಕೆ ವಿಶೇಷ ಹಕ್ಕುಸ್ವಾಮ್ಯ ಇದೆ. ಒಂದು ವೇಳೆ ನಿಯಮ ಉಲ್ಲಂಘಿಸಿದರೆ ಅಂತಹ ವ್ಯಕ್ತಿ ಅಥವಾ ಸಂಸ್ಥೆಯ ವಿರುದ್ಧ ಕಾನೂನಿನಡಿ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಎಚ್ಚರಿಸಲಾಗಿದೆ.

ಕ್ರ. ಸಂ.	ಸ್ವತ್ತಿನ ವಿವರ						ಕನಿಷ್ಠ ಬೆಲೆ (ರೂ.)	ಇಎಮ್‌ಡಿ (ರೂ)	ಬಿಡ್ ಹೆಚ್ಚಳ ಮೌಲ್ಯ(ರೂ)	Clear Title
	ಜಿಲ್ಲೆ	ತಾಲ್ಲೂಕು	ಹೋಬಳಿ	ಗ್ರಾಮ	ಸೈಟ್/ಖಾತಾ ಸಂಖ್ಯೆ	ಅಳತೆ(ಚ.ಅಡಿ)				
94	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	110/579	1200	1200000	24000	6000	ಖಾತಾ ಸರ್ಕಾರವು ನೇಮಿಸಿದ ಸಕ್ಷಮ ಪ್ರಾಧಿಕಾರ ಮತ್ತು ಹರಾಜು ಪ್ರಾಧಿಕಾರದ ಹೆಸರಿನಲ್ಲಿ ದಾಖಲಾಗಿರುತ್ತದೆ.
95	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	17/486	1200	1200000	24000	6000	
96	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	28/497	1200	1200000	24000	6000	
97	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	43/456	1200	1200000	24000	6000	
98	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	85/554	1200	1200000	24000	6000	
99	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	42/455	1200	1200000	24000	6000	
100	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	8/421	1200	1200000	24000	6000	
101	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	40/453	1200	1200000	24000	6000	
102	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	33/446	1200	1200000	24000	6000	
103	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	93/562	1200	1200000	24000	6000	
104	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	73/542	1200	1200000	24000	6000	
105	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	86/555	1200	1200000	24000	6000	
106	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	33/502	1290	1290000	25800	6500	
107	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	22/435	1200	1200000	24000	6000	
108	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	76/545	1200	1200000	24000	6000	
109	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	29/498	1200	1200000	24000	6000	
110	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	94/563	1200	1200000	24000	6000	
111	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	69/538	1500	1500000	30000	7500	
112	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	109/578	1200	1200000	24000	6000	
113	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	102/571	1200	1200000	24000	6000	
114	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	8/477	1200	1200000	24000	6000	

ತಪಾಸಣೆಯ ದಿನಾಂಕ ಮತ್ತು ಸಮಯ.	ಪ್ರೀ-ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ.	ಬಿಡ್‌ಗಳ ಸಲ್ಲಿಕೆ ಮತ್ತು ಇಎಮ್‌ಡಿ ಸಲ್ಲಿಕೆಯ ಕೊನೆಯ ದಿನಾಂಕ	ಇ-ಹರಾಜಿನ ದಿನಾಂಕ ಮತ್ತು ಸಮಯ
25th September 2024 11:00am to 5:00pm	26th September 2024, 3 pm to 4 pm Place: Office of the Regional Commissioner, 2nd floor, BMTC Building, KH road, Shantinagar, Bengaluru-560027.	10th October 2024 Until 5pm	15th October 2024 11:00 am to 1:00 pm

ನೋಂದಣೆ ಮತ್ತು ಆನ್‌ಲೈನ್ ಹರಾಜಿಗಾಗಿ, https://kppp.karnataka.gov.in ಗೆ ಲಾಗಿನ್ ಮಾಡಬಹುದು. (ಹೆಲ್ಪ್‌ಡೆಸ್ಕ್ ಸಂಖ್ಯೆ: 080-46010000, 080-68948777) ಹರಾಜಿಗೆ ಸಂಬಂಧಿಸಿದ ಮಾಹಿತಿಯ ಅಗತ್ಯವಿರುವ ಆಸಕ್ತ ಬಿಡ್‌ದಾರರು ಅಪರ ಪ್ರಾದೇಶಿಕ ಆಯುಕ್ತರು, ಪ್ರಾದೇಶಿಕ ಆಯುಕ್ತರ ಕಛೇರಿಯನ್ನು ಸಂಪರ್ಕಿಸಬಹುದು., 2ನೇ ಮಹಡಿ, ಬಿಎಂಟಿಸಿ ಕಟ್ಟಡ, ಕೆಎಚ್ ರಸ್ತೆ, ಶಾಂತಿನಗರ, ಬೆಂಗಳೂರು-560027, ಇ-ಮೇಲ್ ಐಡಿ: arckauction@gmail.com ಅಥವಾ ಸಂಪರ್ಕ ಸಂಖ್ಯೆ: 7795256659(ಸ್ಥಳದ ಬಗ್ಗೆ ಮಾಹಿತಿಗಾಗಿ), 8310421191(KPPP portal ವಿಚಾರಣೆಗಾಗಿ).

ಸ್ಥಳ: ಬೆಂಗಳೂರು. ಸಹಿ/-

ದಿನಾಂಕ: 21-09-2024. DIPR/CP/2084/ZEN/2024-25 ಅಪರ ಪ್ರಾದೇಶಿಕ ಆಯುಕ್ತರು ಮತ್ತು ಸಕ್ಷಮ ಪ್ರಾಧಿಕಾರ ಪ್ರಾದೇಶಿಕ ಆಯುಕ್ತರ ಕಚೇರಿ, ಬೆಂಗಳೂರು ವಿಭಾಗ, ಬೆಂಗಳೂರು.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ

ದೂರವಾಣಿ / ಫ್ಯಾಕ್ಸ್ : 0831-2470342, 2470257.
ಇ-ಮೇಲ್ : belagavibuda@gmail.com

ನಂ.: ಬೆ.ನ.ಪ್ರಾ./ಲೋ.ಇ./ಇ-ಟೆಂಡರ್/2024-25/1844 ದಿನಾಂಕ : 19-09-2024

ತಿದ್ದುಪಡಿ ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ದಿನಾಂಕ : 17-09-2024 ರಂದು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿತ್ತು. (No BUDA/PWD/E-TENDER/2024-25/1833 Dtd 17-09-2024). ಸದರಿ ಪ್ರಕಟಣೆಯಲ್ಲಿ ಟೆಂಡರ್‌ಗೆ ಸಂಬಂಧ ಪಟ್ಟಂತೆ ನಮೂದಿಸಲಾದ ಇಂಡೆಂಟ್‌ಗಳನ್ನು ಈ ಕೆಳಕಂಡಂತೆ ಮಾರ್ಪಡಿಸಿ ತಿದ್ದುಪಡಿ ಮಾಡಲಾಗಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಕಾರ್ಯಕಾರಿ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ ಇವರಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ, (ದೂರವಾಣಿ ಸಂಖ್ಯೆ : 0831-2470342) ಮತ್ತು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ : http://www.kppp.karnataka.gov.in ರಲ್ಲಿ ಪಡೆಯಬಹುದು

1) ಪತ್ರಿಕಾ ಪ್ರಕಟಣೆಯಲ್ಲಿ ನಮೂದಿಸಿದ ಇಂಡೆಂಟ್ ನಂಬರ್ (No. : BUDA/PWD/E-TENDER/2024-25/1833, Dtd 17-09-2024) ಕಾಮಗಾರಿಯ ಹೆಸರು : ಬೆಳಗಾವಿ ಉತ್ತರ ಮತಕ್ಷೇತ್ರದಡಿ ಬರುವ ಹನುಮಾನ ನಗರದಲ್ಲಿಯ ಉದ್ಯಾನವನದಲ್ಲಿ ಫುಡ್ ಕಿಯೋಸ್ಕ್, ಗಜಿಬೋ, ಪರಗೋಲಾ ನಿರ್ಮಾಣ ಮಾಡುವುದು ಹಾಗೂ ಇತರೆ ಕಾಮಗಾರಿ. INDENTNO:BGMUDA/2024-25/OW/WORK_INDENT53, ತಿದ್ದುಪಡಿ ಮಾಡಿದ ಇಂಡೆಂಟ್ ನಂಬರ್ : BGMUDA/2024-25/OW/WORK_INDENT57.

ಗುತ್ತಿಗೆದಾರರ ಅರ್ಹತೆ / ಟೆಂಡರಿನ ನಿಯಮಗಳು / ಟೆಂಡರ ಪ್ರೋಸೆಸ್ಸಿಂಗ್ ಇತ್ಯಾದಿ ವಿವರಗಳಿಗೆ http://www.kppp.karnataka.gov.in ಮೂಲಕ ಮೇಲೆ ತೋರಿಸಿದ ಅವದಿಯಲ್ಲಿ ಮಾಹಿತಿ ಪಡೆಯಬಹುದು ಅಥವಾ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೆ ಕಾರಣ ನೀಡದೆಯಾವುದೆ ಟೆಂಡರನ್ನು ಅಥವಾ ಎಲ್ಲಾ ಟೆಂಡರಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.
ಸಹಿ/- ಆಯುಕ್ತರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/838/ಮಣಿಪಾಲ್/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಹಿರಿಯ ಸಹಾಯಕ ನಿರ್ದೇಶಕರು ತೋಟಗಾರಿಕೆ, (ದಕ್ಷಿಣ ವಲಯ),
9ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು -11.

ಸಂಖ್ಯೆ: ಹಿಸನಿತೋ(ದಕ್ಷಿಣ)/ಟೆಂಡರ್/14/2024-25 ದಿನಾಂಕ: 20.09.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ದ್ವಿಲಕೋಟೆ ಪದ್ಧತಿ) (ಎಸ್‌ಟಿಡಿ ಕೆಡಬ್ಲ್ಯೂ-4)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ (ದಕ್ಷಿಣ), ಇವರು (ಈ ದಾಖಲಾತಿ-ಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವವರು ಎಂದು ಓದಲಾಗಿದೆ) ಇವರು ಕೆಟಿಪಿಪಿ ಕಾಯಿದೆಗಳು 2000ರಂತೆ, ಅನುಷ್ಠಾನಗೊಳಿಸಲು ಉದ್ಯಾನವನಗಳನ್ನು ನಿರ್ವಹಣೆ ಮಾಡಲು ಕಾರ್ಮಿಕ ಇಲಾಖೆಯಡಿಯಲ್ಲಿ ನೋಂದಾಯಿತರಾಗಿರುವ ಅರ್ಹ ಮತ್ತು ನುರಿತ ವ್ಯಕ್ತಿಗಳು /ಏಜೆನ್ಸಿಗಳು/ಸಂಸ್ಥೆಗಳಿಂದ (ಈ ದಾಖಲೆಯಲ್ಲಿ ಗುತ್ತಿಗೆದಾರರೆಂದು ಓದಲಾಗಿದೆ) ಉದ್ಯಾನವನಗಳಿಗೆ ನಿರ್ವಹಣೆ ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1.	ಬಿಟಿಎಂ ಬಡಾವಣೆ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳಲ್ಲಿ ಸುಂದರೀಕರಣ, ಲ್ಯಾಂಡ್‌ಸ್ಕೇಪ್ ಅಭಿವೃದ್ಧಿ, ನೀರಿನ ಸೌಲಭ್ಯ ಮತ್ತು ಇತರೆ ಸಿವಿಲ್ ಕಾಮಗಾರಿಗಳನ್ನು ಮಾಡುವುದು. **ಟೆಂಡರಿಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ): ₹.1,29,87,523/- ಇಎಂಡಿ ಮೊತ್ತ: ₹.2,00,000/-**
2.	ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳಲ್ಲಿ ಸುಂದರೀಕರಣ, ಲ್ಯಾಂಡ್‌ಸ್ಕೇಪ್ ಅಭಿವೃದ್ಧಿ, ನೀರಿನ ಸೌಲಭ್ಯ ಮತ್ತು ಇತರೆ ಸಿವಿಲ್ ಕಾಮಗಾರಿಗಳನ್ನು ಮಾಡುವುದು. **ಟೆಂಡರಿಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ): ₹.1,16,41,514/- ಇಎಂಡಿ ಮೊತ್ತ: ₹.2,00,000/-**
3.	ಜಯನಗರ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳಲ್ಲಿ ಸುಂದರೀಕರಣ, ಲ್ಯಾಂಡ್‌ಸ್ಕೇಪ್ ಅಭಿವೃದ್ಧಿ, ನೀರಿನ ಸೌಲಭ್ಯ ಮತ್ತು ಇತರೆ ಸಿವಿಲ್ ಕಾಮಗಾರಿಗಳನ್ನು ಮಾಡುವುದು. **ಟೆಂಡರಿಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ): ₹.1,09,65,812/- ಇಎಂಡಿ ಮೊತ್ತ: ₹.2,00,000/-**

ಟೆಂಡರ್ ವೇಳಾಪಟ್ಟಿ: (1) ಪ್ರಕಟಣೆಯ ದಿನಾಂಕ 20.09.2024. (2) ಟೆಂಡರ್ ದಾಖಲೆಗಳನ್ನು ದಿನಾಂಕ 24.09.2024ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 27.09.2024ರ ಸಂಜೆ 4:00 ಗಂಟೆಗೆ ನಡೆಸಲಾಗುವುದು. (4) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 03.10.2024ರ ಸಂಜೆ 4:00 ಗಂಟೆಗೆ. (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 04.10.2024ರ ಸಂಜೆ 4:30 ಗಂಟೆಗೆ. (6) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು.

ಸಹಿ/- ಹಿರಿಯ ಸಹಾಯಕ ನಿರ್ದೇಶಕರು ತೋಟಗಾರಿಕೆ (ದಕ್ಷಿಣ ವಲಯ)

ಜಿಲ್ಲಾ ಪಂಚಾಯತ ಬಾಗಲಕೋಟೆ

ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ

ಕಾರ್ಯಪಾಲಕ ಅಭಿಯಂತರರ ಕಛೇರಿ,
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ,
ದೂರವಾಣಿ : 08354-235042, ಇ-ಮೇಲ್ : bgkeezpe@yahoo.com

ಸಂಖ್ಯೆ : ಕಾ.ನಿ.ಇಂ./ಪಂ.ರಾ.ಇಂ.ವಿ./ಬಿ.ಜಿ.ಕೆ./ಪಿಬಿ-2,3/ಟೆಂಡರ್/2024-25/2076
ದಿನಾಂಕ : 19-09-2024

ಅಲ್ಪಾವಧಿ ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

(ಏಕ-ಲಕೋಟೆ) ಕೆ.ಡಬ್ಲ್ಯೂ-1 & 2 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿನ ಈ ಕೆಳಕಂಡ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-1 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999 - 2000 ರ ಪ್ರಕಾರ ಆ್ಯಕ್ಟ್ 2000 ರ ನಿಯಮದಂತೆ ಏಕ-ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1) 2022-23 ನೇ ಸಾಲಿನ ವಿವೇಕ ಶಾಲಾ ಯೋಜನೆಯಡಿ ಆಯ್ಕೆಯಾದ ಸರಕಾರಿ ಪದವಿ ಪೂರ್ವ ಕಾಲೇಜುಗಳ ಬೋಧನಾ ಕೊಠಡಿಗಳ ನಿರ್ಮಾಣದ ರೂ. 100.20 ಲಕ್ಷ ಅನುದಾನದಡಿಯಲ್ಲಿ, 2) ಸನ್ 2022-23 ನೇ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶೌಚಾಲಯ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಲೆಕ್ಕಶಿರ್ಷಿಕೆ : 4202-01-201-1-07 (ಶೌಚಾಲಯ ನಿರ್ವಹಣೆ / ನಿರ್ಮಾಣ) ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಅನುದಾನದಡಿ, 3) 2023-24 ನೇ ಸಾಲಿನ ಅಟಲ್ ಭೂಜಲ ಯೋಜನೆಯ ಪ್ರೋತ್ಸಾಹಧನ ಘಟಕದಡಿ (Incentive Fund) ಚೆಕ್ ಡ್ಯಾಂ ಕಾಮಗಾರಿಗಳ ಅನುದಾನ 4) ಸನ್ 2017-18 ಹಾಗೂ 2018-19 ನೇ ಸಾಲಿನ ಮುಖ್ಯಮಂತ್ರಿ ಮಾದರಿ ಗ್ರಾಮ ಯೋಜನೆಯಡಿ ಮಂಜೂರಾದ ಅನುದಾನ ಸರ್ಕಾರದ ಆದೇಶ ಸಂಖ್ಯೆ : ಗ್ರಾ.ಅ.ಪ./65/ಸುಗ್ರಾಯೋ/2023, ದಿನಾಂಕ : 28-02-2024, 5) 2022-23 ನೇ ಸಾಲಿನ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಲೆಕ್ಕಶಿರ್ಷಿಕೆ : 4202-01-201-1-06-133 ರಡಿ ಪರಿಷ್ಕೃತ ಕ್ರಿಯಾ ಯೋಜನೆ ಅನುದಾನ ಅಡಿಯಲ್ಲಿ ಆಯ್ಕೆಯಾದ, 6) 2023-24 ನೇ ಸಾಲಿನಲ್ಲಿ ಆಯ್ಯವ್ಯಯ ಘೋಷಣೆಯಂತೆ ಸಾಮಾನ್ಯ ಯೋಜನೆಯಡಿ ಕೆ.ಪಿ.ಎಸ್. ಶಾಲೆಗಳಿಗೆ ಲೆಕ್ಕಶಿರ್ಷಿಕೆ : 4202-01-201-1-06 ರಡಿ ಮೂಲಭೂತರ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಅನುದಾನ ಅಡಿಯಲ್ಲಿ ಆಯ್ಕೆಯಾದ, 7) ಸ್ವಚ್ಛ ಭಾರತ್ ಮಿಷನ್ ಗ್ರಾಮೀಣ ಯೋಜನೆಯ ಅನುದಾನದಡಿ, 8) ಸನ್ 2020-21 ಮತ್ತು 2021-22 ನೇ ಸಾಲಿನ ಕೇಂದ್ರ ಯೋಜನಾ ಅನುಮೋದನಾ ಮಂಡಳಿಯಿಂದ (PAB) ವಾರ್ಷಿಕ ಕ್ರಿಯಾ ಯೋಜನೆಯಡಿ (AWP&B) ಯಲ್ಲಿ ಯೋಜನೆಯಡಿ ಅನುದಾನ ಅಡಿಯಲ್ಲಿ ಮಂಜೂರಾಗಿರುತ್ತವೆ.

ಬಾಗಲಕೋಟೆ ಜಿಲ್ಲೆ ಬೀಳಗಿ, ಜಮಖಂಡಿ ಬಾಗಲಕೋಟೆ, ಹುನಗುಂದ, ರಬಕವಿ ಬನಹಟ್ಟಿ ತಾಲೂಕು / ಉಪವಿಭಾಗ ವ್ಯಾಪ್ತಿಯಲ್ಲಿ ಇತರೆ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ. : 4756/ಕರೆ-2, 8849, 8983, 7722, 6758/ಕರೆ-2, 8779 ಮತ್ತು ಪರಿಶಿಷ್ಟ ಜಾತಿ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ. : 4754/ಕರೆ-2, 8022, ಪರಿಶಿಷ್ಟ ಪಂಗಡ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ. : 6040/ಕರೆ-2, ಇದ್ದು, ಟೆಂಡರ್ ಕಾಮಗಾರಿ ವಿವರ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್‌ಗಿಟ್ಟ ಮೊತ್ತ ರೂ. 7.225 ರಿಂದ 49.87 ಲಕ್ಷಗಳ ಮಿತಿಗೊಳಪಟ್ಟು) ಟೆಂಡರ್ ಅರ್ಜಿಯ ಬೆಲೆ, ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ-ಪೋರ್ಟಲ್‌ನಲ್ಲಿ ಇದ್ದಂತೆ.

1) ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್-ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 27-09-2024 ರ ಸಂಜೆ 5.30 ಗಂಟೆವರೆಗೆ, 2) ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ & ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : 30-09-2024 ರಂದು ಬೆಳಿಗ್ಗೆ 11.00 ಗಂಟೆಯ ನಂತರ.

ಸೂಚನೆ : ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ : https://kppp.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ, ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟೆ/239/ಮಣಿಪಾಲ್/2024-25

ಸಂಕ್ಷಿಪ್ತ ಸುದ್ದಿ

ದೇಗುಲಗಳಲ್ಲಿ ನಂದಿನಿ ತುಪ್ಪ ಬಳಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಸ್ಥಾನಗಳಲ್ಲಿ ನಂದಿನಿ ತುಪ್ಪವನ್ನು ಮಾತ್ರ ಬಳಸುವಂತೆ ಧಾರ್ಮಿಕ ದತ್ತಿ ಇಲಾಖೆ ಸುತ್ತೋಲೆ ಹೊರಡಿಸಿದೆ.

ದೇವಾಲಯಗಳಲ್ಲಿ ಎಲ್ಲ ಸೇವೆಗಳಿಗೆ, ದೀಪಗಳಿಗೆ, ಎಲ್ಲ ವಿಧದ ಪ್ರಸಾದ ತಯಾರಿಕೆಗೆ ಹಾಗೂ ದಾಸೋಹ ಭವನದಲ್ಲಿ ನಂದಿನಿ ತುಪ್ಪವನ್ನೇ ಬಳಸಬೇಕು. ದೇವಸ್ಥಾನಗಳಲ್ಲಿ ತಯಾರಿಸುವ ಪ್ರಸಾದಗಳಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕು ಎಂದು ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರು ತಿಳಿಸಿದ್ದಾರೆ. ರಾಜ್ಯದ ದೇವಸ್ಥಾನಗಳ ಪ್ರಸಾದದ ಪರೀಕ್ಷೆ ನಡೆಸಬೇಕು ಎಂದು ಬಿಜೆಪಿಯ ನಾಯಕರು ಒತ್ತಾಯಿಸಿದ್ದರು. ಇದರ ನಡುವೆ ಧಾರ್ಮಿಕ ದತ್ತಿ ಇಲಾಖೆಯು ಸುತ್ತೋಲೆ ಹೊರಡಿಸಿದೆ.

‘ಅನಪೇಕ್ಷಿತ ಹೇಳಿಕೆಗಳಿಂದ ಅನಗತ್ಯ ತಿಕ್ಕಾಟ’

ನವದೆಹಲಿ (ಪಿಟಿಐ): ‘ಅನಪೇಕ್ಷಿತ ಹೇಳಿಕೆ’ಗಳಿಂದ ಅನಗತ್ಯವಾದ ತಿಕ್ಕಾಟ ಉಂಟಾಗಲಿದೆ. ಆದ್ದರಿಂದ ಸಂವಿಧಾನದ ಮೂರೂ ಅಂಗಗಳು ತಮ್ಮ ಸಾಂವಿಧಾನಿಕ ಕಾರ್ಯನಿರ್ವಹಣೆಯಲ್ಲಿ ಪರಸ್ಪರ ಗೌರವ ತೋರಬೇಕೆಂದು ನಿರೀಕ್ಷಿಸಲಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ತೀರ್ಪುಗಳ ಬಗ್ಗೆ ನ್ಯಾಯಯುತ ಟೀಕೆಗೆ ಯಾವಾಗಲೂ ಸ್ವಾಗತವಿರಲಿದೆ. ಆದರೆ ನ್ಯಾಯಾಲಯಗಳ ತೀರ್ಪು, ಜಾರಿಗೊಳಿಸಿದ ಆದೇಶಗಳ ಬಗ್ಗೆ ಪ್ರತಿಕ್ರಿಯಿಸುವಾಗ ಸಾಕಷ್ಟು ಜಾಗರೂಕರಾಗಿರಬೇಕು. ‘ಮಿತಿಗಳನ್ನು ದಾಟದಿರಲಿ’ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಕೆ.ವಿ. ವಿಶ್ವನಾಥನ್ ಅವರನ್ನೊಳಗೊಂಡ ನ್ಯಾಯಪೀಠವು ತಿಳಿಸಿದೆ.

ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಭಾರತ್ ರಾಷ್ಟ್ರ ಸಮಿತಿಯ (ಬಿಆರ್‌ಎಸ್) ನಾಯಕಿ ಕೆ. ಕವಿತಾಗೆ ಜಾಮೀನು ಮಂಜೂರಾಗಿದ್ದಕ್ಕೆ, ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ ರೆಡ್ಡಿ ನೀಡಿದ ಹೇಳಿಕೆಯು ನ್ಯಾಯಾಲಯದ ಗಮನಕ್ಕೆ ಬಂದಿದೆ. ಇದಕ್ಕೆ ಸಂಬಂಧಿಸಿದಂತೆ ರೆಡ್ಡಿ ಕ್ಷಮೆಯಾಚಿಸಿದ್ದಾರೆ ಎಂಬುದನ್ನೂ ಪರಿಗಣಿಸಿದ ನ್ಯಾಯಪೀಠವು, ಈ ವಿಷಯದಲ್ಲಿ ಮತ್ತಷ್ಟು ಮುಂದುವರಿಯಲು ಬಯಸುವುದಿಲ್ಲ ಎಂದು ಹೇಳಿದೆ. ‘ನಾವು ಈ ವಿಷಯದಲ್ಲಿ ಮತ್ತಷ್ಟು ಮುಂದುವರಿಯಲು ಬಯಸದಿದ್ದರೂ, ತಮ್ಮ ಸಾಂವಿಧಾನಿಕ ಕರ್ತವ್ಯ ನಿರ್ವಹಿಸಲು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗವನ್ನು ಎಚ್ಚರಿಸಬಹುದು’ ಎಂದು ಪೀಠ ಹೇಳಿದೆ.

ಎಐಬಿಇ ಪರೀಕ್ಷೆಗೆ ಹಾಜರಾಗಲು ಅನುಮತಿ

ನವದೆಹಲಿ (ಪಿಟಿಐ): ಅಂತಿಮ ವರ್ಷದ ಕಾನೂನು ಪದವಿ ವಿದ್ಯಾರ್ಥಿಗಳನ್ನು ಈ ವರ್ಷದ ಅಖಿಲ ಭಾರತ ವಕೀಲರ ಪರೀಕ್ಷೆಗೆ (ಎಐಬಿಇ) ಹಾಜರಾಗಲು ಅವಕಾಶ ನೀಡುವಂತೆ ಬಾರ್ ಕೌನ್ಸಿಲ್ ಆಫ್ ಇಂಡಿಯಾಗೆ (ಬಿಸಿಐ) ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ಅಂತಿಮ ವರ್ಷದ ಎಲ್‌ಎಲ್‌ಬಿ ವಿದ್ಯಾರ್ಥಿಗಳಿಗೆ ಈ ವರ್ಷ ಎಐಬಿಇ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವಕಾಶ ನೀಡದಿದ್ದರೆ ಅವರ ಒಂದು ವರ್ಷವು ವ್ಯರ್ಥವಾಗುತ್ತದೆ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ಪೀಠವು ಹೇಳಿದೆ. ಕಾನೂನು ಪದವೀಧರರು ವಕೀಲರಾಗಿ ಅರ್ಹತೆ ಪಡೆಯಲು ಎಐಬಿಇ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕು.

ಸಿಜೆಐ ನೇತೃತ್ವದ ಪೀಠವು, ದೆಹಲಿ ವಿಶ್ವವಿದ್ಯಾಲಯದ ನಿಲಯ್ ರಾಯ್ ಸೇರಿದಂತೆ ಒಂಬತ್ತು ಎಲ್‌ಎಲ್‌ಬಿ ವಿದ್ಯಾರ್ಥಿಗಳ ಪರ ಹಾಜರಿದ್ದ ವಕೀಲರಾದ ಎ. ವೇಲನ್ ಮತ್ತು ನವಪ್ರೀತ್ ಕೌರ್ ಅವರ ವಾದವನ್ನು ಆಲಿಸಿದ ಬಳಿಕ ಈ ವರ್ಷ ನವೆಂಬರ್ 24ರಂದು ನಡೆಯುವ ಎಐಬಿಇ ಪರೀಕ್ಷೆಗೆ ಹಾಜರಾಗಲು ಅವಕಾಶ ಮಾಡಿಕೊಟ್ಟಿತು.

ತನ್ನ ಮಧ್ಯಂತರ ನಿರ್ದೇಶನವು ಈ ವರ್ಷದ (ನವೆಂಬರ್ 24ರ) ಪರೀಕ್ಷೆಗೆ ಮಾತ್ರ ಅನ್ವಯವಾಗಲಿದೆ ಎಂದು ಪೀಠವು ಇದೇ ವೇಳೆ ಸ್ಪಷ್ಟಪಡಿಸಿತು. ಇಂತಹ ನಿರ್ದೇಶನ ನೀಡದಿದ್ದರೆ, ಅಂತಿಮ ವರ್ಷದ ವಿದ್ಯಾರ್ಥಿಗಳು ಅನ್ಯಾಯ ಎದುರಿಸಬೇಕಾಗುತ್ತದೆ ಎಂದಿತು.

ಜನರ ದಿಕ್ಕು ತಪ್ಪಿಸುವ ಯತ್ನ– ಜಗನ್ • ದೇಶದಾದ್ಯಂತ ಸದ್ದು ಮಾಡುತ್ತಿರುವ ವಿವಾದ

‘ತುಪ್ಪದ ಕಲಬೆರಕೆ, ಪಾವಿತ್ರ್ಯಕ್ಕೆ ಧಕ್ಕೆ’

ಅಮರಾವತಿ/ ಹೈದರಾಬಾದ್ (ಪಿಟಿಐ): ತಿರುಪತಿಯ ಪ್ರಸಾದ ಲಾಡು ತಯಾರಿಕೆಯಲ್ಲಿ ಬಳಸುವ ತುಪ್ಪದಲ್ಲಿ ಪ್ರಾಣಿಗಳ ಕೊಬ್ಬಿನ ಅಂಶ ಬಳಸಲಾಗಿದೆ ಎಂಬ ವಿವಾದವು ಆಂಧ್ರ ಪ್ರದೇಶವಷ್ಟೇ ಅಲ್ಲದೇ ದೇಶದಾದ್ಯಂತ ಸದ್ದುಮಾಡಿದೆ.

ದೇವಸ್ಥಾನದ ಪಾವಿತ್ರ್ಯ, ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿದೆ ಎಂಬ ಆರೋಪ ವಿವಿಧೆಡೆ ಕೇಳಿಬಂದಿದೆ. ಆಂಧ್ರ ಮತ್ತು ದೇಶದ ವಿವಿಧೆಡೆ ರಾಜಕೀಯ ನಾಯಕರ ವಾಗ್ವಾದವೂ ಜೋರಾಗಿದೆ.

ನಾಯ್ಡು ಆರೋಪ: ರಾಜ್ಯದಲ್ಲಿ ಹಿಂದಿದ್ದ ವೈಎಸ್‌ಆರ್‌ಸಿಪಿ ಸರ್ಕಾರವು ತಿರುಪತಿಯ ಪ್ರಸಾದ ತಯಾರಿಕೆಗೆ ಅಗ್ಗದ ಬೆಲೆಯ ಕಲಬೆರಕೆ ತುಪ್ಪವನ್ನು ಖರೀದಿಸುವ ಮೂಲಕ ಟಿಟಿಡಿಯ ಪಾವಿತ್ರ್ಯಕ್ಕೆ ಧಕ್ಕೆ ತಂದಿದೆ ಎಂದು ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಆರೋಪಿಸಿದರು.

ಪ್ರಕಾಶಂ ಜಿಲ್ಲೆಯಲ್ಲಿ ಶುಕ್ರವಾರ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಈ ವಿಷಯದಲ್ಲಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

‘ಕ್ಷಮಿಸಲಾಗದ ತಪ್ಪು’ ಎಸಗಿದವರನ್ನು ಹಾಗೆಯೇ ಬಿಡಬೇಕೇ ಎಂದು ಅವರು ಇದೇ ವೇಳೆ ನೆರೆದಿದ್ದ ಜನರನ್ನು ಕೇಳಿದರು. ವೈ.ಎಸ್.ಜಗನ್‌ಮೋಹನ್ ರೆಡ್ಡಿ ನೇತೃತ್ವದ ಹಿಂದಿನ ಸರ್ಕಾರವು ಈ ಕ್ರಮ ಕೈಗೊಳ್ಳುವ ಮೂಲಕ ಜನರ ಭಾವನೆಗಳಿಗೆ ಧಕ್ಕೆ ತಂದಿದೆ ಎಂದು ಅವರು ದೂರಿದರು.

ಜಗನ್ ತಿರುಗೇಟು: ‘ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ರಾಜಕೀಯ ಲಾಭಕ್ಕಾಗಿ ದೇವರನ್ನೂ ಬಳಸಿಕೊಳ್ಳುವ ಮಟ್ಟಕ್ಕೆ ಇಳಿದಿದ್ದಾರೆ. ಆ ಮೂಲಕ ಅವರು ಕೋಟ್ಯಂತರ ಭಕ್ತರ ಭಾವನೆಗಳ ಜತೆ ಆಟವಾಡುತ್ತಿದ್ದಾರೆ. ಇದು ಸರಿಯಲ್ಲ’ ಎಂದು ವೈಎಸ್‌ಆರ್‌ಸಿಪಿ ಮುಖ್ಯಸ್ಥ ವೈ.ಎಸ್.ಜಗನ್‌ಮೋಹನ್ ರೆಡ್ಡಿ ತಿರುಗೇಟು ನೀಡಿದರು.

‘ನಾಯ್ಡು ಅವರ 100 ದಿನಗಳ ಆಡಳಿತಕ್ಕೆ ಸಂಬಂಧಿಸಿದಂತೆ ರಾಜ್ಯದ ಜನರು ಆಕ್ರೋಶಗೊಂಡಿದ್ದಾರೆ. ಹೀಗಾಗಿ ಜನರ ದಿಕ್ಕು ತಪ್ಪಿಸಲು ಕಲಬೆರಕೆ ವಿವಾದವನ್ನು ಸೃಷ್ಟಿಸಿದ್ದಾರೆ’ ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

‘ಕೋಟ್ಯಂತರ ಭಕ್ತರ ಭಾವನೆಗಳ ಜತೆ ಆಟವಾಡುವುದು ಸರಿಯಾ’ ಎಂದು ಪ್ರಶ್ನಿಸಿದ ಅವರು, ‘ಎಲ್ಲ ಮಾದರಿಗಳ ಪರೀಕ್ಷೆ ಮತ್ತು ಫಲಿತಾಂಶಗಳು ಎನ್‌ಡಿಎ ಸರ್ಕಾರದ ಅಡಿಯಲ್ಲಿರುವ ಪ್ರಯೋಗಾಲಯಗಳಿಂದಲೇ ಬಂದಿವೆ’ ಎಂದು ಹೇಳಿದರು.

> ತಿರುಪತಿ ಪ್ರಸಾದದಲ್ಲಿ ಪ್ರಾಣಿ ಕೊಬ್ಬನ್ನು ಸಹಿಸಲಾಗುವುದಿಲ್ಲ. ಸರ್ಕಾರವು ದೇಗುಲದ ನಿಯಂತ್ರಣ ಮತ್ತು ನಿರ್ವಹಣೆಯನ್ನು ಹಿಂದೂ ಸಮಾಜಕ್ಕೆ ಹಸ್ತಾಂತರಿಸಲಿ
> **ಬಜರಂಗ್ ಬಗ್ಗಾ,** ವಿಎಚ್‌ಪಿ ಪ್ರಧಾನ ಕಾರ್ಯದರ್ಶಿ

> ಇದು ಭಕ್ತರಿಗೆ ನೋವುಂಟು ಮಾಡುವ ವಿಷಯ. ದೇಶದಾದ್ಯಂತ ಧಾರ್ಮಿಕ ಸ್ಥಳಗಳ ಪಾವಿತ್ರ್ಯವನ್ನು ರಕ್ಷಿಸಲು ಸಂಬಂಧಿಸಿದವರು ಶ್ರಮಿಸಬೇಕು
> **ರಾಹುಲ್ ಗಾಂಧಿ,** ಲೋಕಸಭೆಯ ವಿರೋಧ ಪಕ್ಷದ ನಾಯಕ

> ಪ್ರಯೋಗಾಲಯದಿಂದ ಬಂದ ನಾಲ್ಕು ವರದಿಗಳಲ್ಲೂ ಒಂದೇ ರೀತಿಯ ಫಲಿತಾಂಶ ವ್ಯಕ್ತವಾಗಿದೆ. ಹೀಗಾಗಿ ಪೂರೈಕೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ
> **ಜೆ. ಶ್ಯಾಮಲ ರಾವ್,** ಟಿಟಿಡಿ ಅಧಿಕಾರಿ

ಲಾಡು ವಿವಾದ: 25ಕ್ಕೆ ಹೈಕೋರ್ಟ್ ವಿಚಾರಣೆ

ಅಮರಾವತಿ (ಪಿಟಿಐ): ತಿರುಪತಿ ಪ್ರಸಾದ ಲಾಡುಗಳ ತಯಾರಿಕೆಗೆ ಪ್ರಾಣಿಗಳ ಕೊಬ್ಬಿನ ಅಂಶವನ್ನು ಬಳಸಲಾಗಿದೆ ಎಂಬ ವಿವಾದದ ಕುರಿತು ತುರ್ತು ವಿಚಾರಣೆಗೆ ಕೋರಿ ವೈಎಸ್‌ಆರ್‌ಸಿಪಿ ನಾಯಕ ವೈ.ವಿ.ಸುಬ್ಬಾರೆಡ್ಡಿ ಅವರು ಆಂಧ್ರಪ್ರದೇಶದ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಅದರ ವಿಚಾರಣೆಗೆ ಒಪ್ಪಿಗೆ ಸೂಚಿಸಿರುವ ಹೈಕೋರ್ಟ್ ಇದೇ 25ರಂದು ವಿಚಾರಣೆ ನಡೆಸುವುದಾಗಿ ತಿಳಿಸಿದೆ. ಈ ವಿವಾದದ ಸತ್ಯಾಸತ್ಯತೆ ತಿಳಿಯಬೇಕಿದೆ ಎಂದು ಸುಬ್ಬಾರೆಡ್ಡಿ ಅರ್ಜಿಯಲ್ಲಿ ಕೋರಿದ್ದಾರೆ.

ಪ್ರಸಾದದಲ್ಲಿ ಪ್ರಾಣಿಗಳ ಕೊಬ್ಬಿನ ಅಂಶ ಇರುವ ಆರೋಪದ ಕುರಿತು ಹೈಕೋರ್ಟ್‌ನ ಹಾಲಿ ನ್ಯಾಯ ಮೂರ್ತಿಯಿಂದ ತನಿಖೆಯಾಬೇಕು. ಇಲ್ಲವೇ ತನಿಖೆಗಾಗಿ ಹೈಕೋರ್ಟ್ ಸಮಿತಿ ರಚಿಸಲಿ ಅಥವಾ ಸಿಬಿಐ ತನಿಖೆ ಮಾಡಲಿ ಎಂದು ಅವರು ಸುಬ್ಬಾರೆಡ್ಡಿ ಪರವ ವಕೀಲ ಸುಧಾಕರ ರೆಡ್ಡಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ನಂದಿನಿ ತುಪ್ಪ ಖರೀದಿ



‘ಕಲಬೆರಕೆ ತುಪ್ಪ ಪೂರೈಸುತ್ತಿದ್ದ ಪೂರೈಕೆದಾರನ್ನು ನಾವು ಬದಲಿಸಿದ್ದೇವೆ. ಕರ್ನಾಟಕದಿಂದ ನಂದಿನಿ ಬ್ರಾಂಡ್ ತುಪ್ಪ ಖರೀದಿಸಲು ಪ್ರಾರಂಭಿಸಿದ್ದೇವೆ’ ಎಂದು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ತಿಳಿಸಿದರು.

‘ಗುಣಮಟ್ಟ ಕುರಿತು ಪ್ರಮಾಣೀಕರಣವಿದೆ’

ಚೆನ್ನೈ (ಪಿಟಿಐ): ‘ತಮ್ಮ ಡೇರಿ ಉತ್ಪನ್ನ ಮಾದರಿಗಳ ಗುಣಮಟ್ಟ ಕುರಿತು, ಸಂಬಂಧಿಸಿದ ಪ್ರಾಧಿಕಾರಗಳು ಪ್ರಮಾಣೀಕರಣ ನೀಡಿವೆ’ ಎಂದು ತಿರುಪತಿ ದೇವಾಲಯಕ್ಕೆ ತುಪ್ಪ ಪೂರೈಸುವ ಎ.ಆರ್.ಡೇರಿ ಕಂಪನಿ ಶುಕ್ರವಾರ ತಿಳಿಸಿದೆ.

ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಮಾತ್ರ ತಿರುಮಲ ವೆಂಕಟೇಶ್ವರಸ್ವಾಮಿ ದೇಗುಲಕ್ಕೆ ತುಪ್ಪವನ್ನು ಪೂರೈಸಿರುವುದಾಗಿ ದಿಂಡಿಗಲ್ ಮೂಲದ ಸಂಸ್ಥೆಯ ವಕ್ತಾರರು ತಿಳಿಸಿದ್ದಾರೆ.

ಧಾರ್ಮಿಕ ಭಾವನೆಗೆ ಗಾಸಿ: ‘ಸುಪ್ರೀಂ’ಗೆ ಅರ್ಜಿ

ನವದೆಹಲಿ: ತಿರುಪತಿ ಲಾಡು ತಯಾರಿಕೆಗೆ ಪ್ರಾಣಿಗಳ ಕೊಬ್ಬಿನ ಅಂಶವನ್ನು ಬಳಸುವ ಮೂಲಕ ಹಿಂದೂಗಳ ಧಾರ್ಮಿಕ ಭಾವನೆಗಳನ್ನು ಗಾಸಿಗೊಳಿಸಿದಂತಾಗಿದೆ ಎಂದು ಆರೋಪಿಸಿ ವಕೀಲರೊಬ್ಬರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಅಸಂಖ್ಯಾತ ಭಕ್ತರು ಪವಿತ್ರ ಎಂದು ಭಾವಿಸಿ ಪ್ರಸಾದವನ್ನು ಸ್ವೀಕರಿಸುತ್ತಾರೆ. ಆದರೆ ಈಗ ಹಿಂದೂಗಳ ಧಾರ್ಮಿಕ ಪದ್ಧತಿಗಳ ಉಲ್ಲಂಘನೆ ಆಗಿದೆ ಎಂದು ವಕೀಲ ಸತ್ಯಂ ಸಿಂಗ್ ಅರ್ಜಿಯಲ್ಲಿ ತಿಳಿಸಿದ್ದಾರೆ.

ಹಿಂದೂಗಳ ಧಾರ್ಮಿಕ ಆಚರಣೆಗಳ ಪಾವಿತ್ರ್ಯವನ್ನು ರಕ್ಷಿಸುವ ಮತ್ತು ಧಾರ್ಮಿಕ ಸಂಸ್ಥೆಗಳ ಸರಿಯಾದ ನಿರ್ವಹಣೆಯನ್ನು ಖಾತರಿಪಡಿಸುವ ವಿಷಯದಲ್ಲಿ ಮಧ್ಯಪ್ರವೇಶಿಸುವಂತೆ ಅವರು ಸುಪ್ರೀಂ ಕೋರ್ಟ್ ಅನ್ನು ಕೋರಿದ್ದಾರೆ.

ದಸರಾ ಉದ್ಘಾಟನೆಗೆ ಹಂಪನಾ

ಪ್ರಜಾವಾಣಿ ವಾರ್ತೆ



ಮೈಸೂರು: ‘ಹೆಸರಾಂತ ಸಾಹಿತಿ ಹಂ.ಪ. ನಾಗರಾಜಯ್ಯ ಅವರನ್ನು ಈ ಬಾರಿಯ ದಸರಾ ಉದ್ಘಾಟನೆಗೆ ಆಹ್ವಾನಿಸಲು ತೀರ್ಮಾನಿಸಲಾಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಹಂಪನಾ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹಾಗೂ ಜಿಲ್ಲಾಡಳಿತದವರು ಶೀಘ್ರ ಅಧಿಕೃತ ಆಹ್ವಾನ ನೀಡಲಿದ್ದಾರೆ. ಈಚೆಗೆ ನಡೆದ ಉನ್ನತ ಮಟ್ಟದ ಸಭೆಯಲ್ಲಿ, ಉದ್ಘಾಟಕರ ಆಯ್ಕೆಯನ್ನು ನನ್ನ ವಿವೇಚನೆಗೆ ಬಿಡಲಾಗಿತ್ತು; ನಾನು ಈ ತೀರ್ಮಾನ ಮಾಡಿದ್ದೇನೆ’ ಎಂದರು. ಈ ಬಾರಿಯ ದಸರಾ ಮಹೋತ್ಸವವು ಅ.3ರಿಂದ ನಡೆಯಲಿದೆ.

‘ಇದು ಅನಿರೀಕ್ಷಿತವಾಗಿ ದೊರೆತ ಅಪೂರ್ವ, ಅವಿಸ್ಮರಣೀಯ ಸಂತೋಷದ ಸಂದರ್ಭ. ಸಾಮಾನ್ಯವಾಗಿ ವಿದ್ಯುದಾಘಾತವಾಗುವಂತೆ ನನಗೀಗ ಸಂತೋಷಾಘಾತವಾಗಿದೆ’ ಎಂದರು.

‘ಮೈಸೂರಿನಲ್ಲಿ ಓದಿದ ನಾನು ಅದೇ ಊರಿನಲ್ಲಿ ದಸರೆಯ ಉತ್ಸವ ಉದ್ಘಾಟಿಸುವ ಮೊದಲ ಅಗ್ರವೀಳ್ಯವನ್ನು ಪಡೆದಿದ್ದೇನೆ. ರಾಜ್ಯ ಸರ್ಕಾರಕ್ಕೆ ಕೃತಜ್ಞತೆ ಹೇಳುವೆ’ ಎಂದರು.

‘ದಸರೆಯನ್ನು ನಾನಷ್ಟೆ ಉದ್ಘಾಟಿಸುತ್ತಿಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರಜೆಯಾಗಿ, ರಾಜ್ಯ ಕನ್ನಡಿಗರ ಪರವಾಗಿ ಉದ್ಘಾಟಿಸುವೆ ಎಂದು ನಿವೇದಿಸಿಕೊಳ್ಳುವೆ ಎಂದು ಹೇಳಿದರು.

ಚಿಣ್ಣರ ಆಟ ಉತ್ತರ ಪ್ರದೇಶದ ಕಾನ್ಪುರದಲ್ಲಿ ಭಾರಿ ಮಳೆಯಿಂದಾಗಿ ಜಲಾವೃತಗೊಂಡ ಹೊಲದಲ್ಲಿ ಮಕ್ಕಳು ಆಟವಾಡಿದರು –ಪಿಟಿಐ ಚಿತ್ರ

ಠಾಣೆಯಲ್ಲೇ ಕೃತ್ಯ: ಸಂತ್ರಸ್ತೆ ಆರೋಪ • ಎಸ್‌ಐ ಸೇರಿ ಐವರ ಅಮಾನತು

‘ಸೇನಾಧಿಕಾರಿ ಗೆಳತಿ ಮೇಲೆ ಲೈಂಗಿಕ ದೌರ್ಜನ್ಯ’

ಭುವನೇಶ್ವರ (ಪಿಟಿಐ): ‘ಅನುಚಿತ ವರ್ತನೆ ತೋರಿದ್ದ ಆರೋಪದಡಿ ವಶಕ್ಕೆ ಪಡೆಯಲಾಗಿದ್ದ ತಮ್ಮ ಮೇಲೆ ಪೊಲೀಸರು ಠಾಣೆಯಲ್ಲಿಯೇ ಲೈಂಗಿಕ ದೌರ್ಜನ್ಯ ಎಸಗಿದರು’ ಎಂದು ಸೇನಾ ಅಧಿಕಾರಿಯೊಬ್ಬರ ಗೆಳತಿಯು ಗಂಭೀರ ಆರೋಪ ಮಾಡಿದ್ದಾರೆ.

ಸಂತ್ರಸ್ತೆ, ಸೇನಾಧಿಕಾರಿಯ ಗೆಳತಿಯನ್ನು ರಾಜಧಾನಿಯ ಭರತ್‌ಪುರ್ ಠಾಣೆಯ ಪೊಲೀಸರು ಸೆಪ್ಟೆಂಬರ್ 1ರಂದು ವಶಕ್ಕೆ ಪಡೆದಿದ್ದರು. ಹೈಕೋರ್ಟ್‌ನ ಜಾಮೀನು ಆಧರಿಸಿ ಗುರುವಾರ ಅವರನ್ನು ಬಿಡುಗಡೆ ಮಾಡಲಾಗಿತ್ತು. ಮಹಿಳೆ ನಗರದಲ್ಲಿ ರೆಸ್ಟೋರೆಂಟ್ ನಡೆಸುತ್ತಿದ್ದಾರೆ.

ಕೆಲ ಸ್ಥಳೀಯ ಯುವಕರು ಸೇನಾ ಅಧಿಕಾರಿ, ಅವರ ಗೆಳತಿ ಜೊತೆಗೆ ಅನುಚಿತವಾಗಿ ವರ್ತಿಸಿದ್ದರು. ಹೀಗಾಗಿ ನೆರವು ಕೋರಿ ಠಾಣೆಗೆ ತೆರಳಿದ್ದರು. ಅಲ್ಲಿ ಪೊಲೀಸ್ ಸಿಬ್ಬಂದಿ ಜೊತೆಗೆ ವಾಗ್ವಾದ ನಡೆದಿತ್ತು. ಅನುಚಿತವಾಗಿ ವರ್ತಿಸಿದ ಆರೋಪದಡಿ ಪೊಲೀಸರು ಆಕೆಯನ್ನು ವಶಕ್ಕೆ ಪಡೆದಿದ್ದರು. ಆ ಸಂದರ್ಭದಲ್ಲಿ ಲೈಂಗಿಕ ದೌರ್ಜನ್ಯ ನಡೆಸಿ ಹಲ್ಲೆ ಮಾಡಲಾಯಿತು ಎಂಬುದು ಮಹಿಳೆಯ ಆರೋಪ.

ಸಂತ್ರಸ್ತ ಮಹಿಳೆಯು ಸದ್ಯ ಭುವನೇಶ್ವರದ ‘ಏಮ್ಸ್’ನಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ. ಮಾಜಿ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ಕೃತ್ಯದ ತನಿಖೆಗೆ ಎಸ್‌ಐಟಿ ರಚಿಸಬೇಕು ಹಾಗೂ ನ್ಯಾಯಾಂಗ ತನಿಖೆಗೆ ಆದೇಶಿಸಬೇಕು ಎಂದು ಆಗ್ರಹಪಡಿಸಿದ್ದಾರೆ.

ಅಲ್ಲದೆ, ಸಿಸಿಬಿ ಪೊಲೀಸರು ಭರತ್‌ಪುರ್ ಠಾಣೆಯ ಅಧಿಕಾರಿ, ಇನ್‌ಸ್ಪೆಕ್ಟರ್ ದಿನಕೃಷ್ಣ ಮಿಶ್ರಾ, ಸಬ್ ಇನ್‌ಸ್ಪೆಕ್ಟರ್‌ಗಳಾದ ಬೈಸಲಿನಿ ಪಾಂಡಾ, ಸಲಿಲಾಮಯೀ ಸಾಹೂ, ಸಾಗರಿಕಾ ರಥ್ ಮತ್ತು ಕಾನ್‌ಸ್ಟೆಬಲ್ ಬಲರಾಮ್ ಹನ್‌ಸ್ದಾ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿದ್ದಾರೆ. ಅನುಚಿತ ವರ್ತನೆ ತೋರಿದ ಆರೋಪದಡಿ ಈ ಐವರನ್ನು ಸೇವೆಯಿಂದ ಅಮಾನತುಪಡಿಸಲಾಗಿದೆ ಎಂದು ಡಿಜಿಪಿ ತಿಳಿಸಿದ್ದಾರೆ.

‘ಎದೆ ಭಾಗಕ್ಕೆ ಹಲವು ಬಾರಿ ಒದ್ದರು

ಸಂತ್ರಸ್ತ ಮಹಿಳೆಯು ಜಾಮೀನು ಪಡೆದು ಬಿಡುಗಡೆಯಾದ ಶುಕ್ರವಾರ ಸುದ್ದಿಗಾರರ ಜೊತೆಗೆ ಘಟನೆಯ ವಿವರಗಳನ್ನು ಹಂಚಿಕೊಂಡಿದ್ದಾರೆ.

‘ರೆಸ್ಟೋರೆಂಟ್ ಮುಚ್ಚಿದ ಬಳಿಕ ರಾತ್ರಿ ಗೆಳೆಯ, ಸೇನಾ ಅಧಿಕಾರಿ ಜೊತೆಗೆ ಮನೆಗೆ ಮರಳುತ್ತಿದ್ದೆ. ಆಗ ಕೆಲ ಯುವಕರು ಅನುಚಿತವಾಗಿ ವರ್ತಿಸಿದರು. ಆಗ, ನೆರವು ಕೋರಿ ಭರತ್‌ಪುರ್ ಠಾಣೆಗೆ ತೆರಳಿದ್ದೆವು. ಅಲ್ಲಿ, ಸಾಮಾನ್ಯ ಉಡುಪಿನಲ್ಲಿದ್ದ ಮಹಿಳಾ ಕಾನ್‌ಸ್ಟೆಬಲ್ ದೂರು ದಾಖಲಿಸಿಕೊಳ್ಳದೆ ನನ್ನನ್ನೇ ನಿಂದಿಸಿದರು’ ಎಂದು ಸಂತ್ರಸ್ತೆ ಆರೋಪಿಸಿದರು.

‘ಕೆಲ ಹೊತ್ತಿನ ಬಳಿಕ ಇನ್ನಷ್ಟು ಸಿಬ್ಬಂದಿ ಠಾಣೆಗೆ ಬಂದಿದ್ದು, ದೂರು ಬರೆದುಕೊಡುವಂತೆ ನನ್ನ ಗೆಳೆಯನಿಗೆ ತಿಳಿಸಿದರು. ನನ್ನ ಗೆಳೆಯನನ್ನೇ ಪೊಲೀಸರು ಲಾಕ್‌ಅಪ್‌ಗೆ ತಳ್ಳಿದರು. ‘ನೀವು ಹೀಗೆ ಸೇನಾ ಅಧಿಕಾರಿಯನ್ನು ಬಂಧಿಸಲಾಗದು. ಇದು ಕಾನೂನುಬಾಹಿರ’ ಎಂದು ನಾನು ತೀವ್ರವಾಗಿ ಪ್ರತಿಭಟಿಸಿದೆ. ಆಗ ಇಬ್ಬರು ಮಹಿಳಾ ಅಧಿಕಾರಿಗಳು ನನ್ನ ಮೇಲೆಯೇ ಹಲ್ಲೆ ಮಾಡಿದರು’ ಎಂದು ವಿವರಿಸಿದರು.

‘ಆಗಲೂ ನಾನು ಪ್ರತಿರೋಧ ವ್ಯಕ್ತಪಡಿಸಿದೆ. ಆದರೆ, ಮಹಿಳಾ ಅಧಿಕಾರಿಗಳು ನನ್ನ ಕತ್ತನ್ನು ಬಿಗಿಯಾಗಿ ಹಿಡಿದಿದ್ದರು. ಬಳಿಕ ನನ್ನ ಕೈ ಮತ್ತು ಕಾಲುಗಳನ್ನು ಕಟ್ಟಿಹಾಕಿ ಕೊಠಡಿಯೊಂದರಲ್ಲಿ ಕೂಡಿಹಾಕಿದರು. ಕೆಲಹೊತ್ತಿನ ನಂತರ ಬಂದ ಪುರುಷ ಅಧಿಕಾರಿಯೊಬ್ಬರು ನನ್ನನ್ನು ಇರಿಸಿದ್ದ ಕೊಠಡಿಯ ಬಾಗಿಲು ತೆರೆದು ನನ್ನ ಎದೆಗೆ ಹಲವು ಬಾರಿ ಒದ್ದರು. ನಾನು ಧರಿಸಿದ್ದ ಪ್ಯಾಂಟ್ ಅನ್ನು ಕೆಳಗೆ ಜಾರಿಸಿದರು. ತನ್ನ ಪ್ಯಾಂಟ್ ಅನ್ನು ಕಳಚಿದ ಅವರು ಗುಪ್ತಾಂಗವನ್ನು ತೋರಿಸುತ್ತಾ, ‘ಸುಮ್ಮನಿರಲು ನಿನಗೆ ಎಷ್ಟು ಸಮಯ ಬೇಕು’ ಎಂದು ಪ್ರಶ್ನಿಸಿದರು’ ಎಂದು ಸಂತ್ರಸ್ತೆ ಆರೋಪಿಸಿದರು.

ಐಎನ್‌ಎಸ್ ವಿಕ್ರಾಂತ್

‘ಐಎನ್‌ಎಸ್ ವಿಕ್ರಾಂತ್’ ಸೇರ್ಪಡೆ ನೌಕಾಪಡೆಯ ಸಾಮರ್ಥ್ಯಕ್ಕೆ ಬಲ

ಪ್ರಜಾವಾಣಿ ವಾರ್ತೆ

ಮುಂಬೈ: ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿರುವ ಯುದ್ಧವಿಮಾನಗಳ ನೌಕಾವಾಹಕ ‘ಐಎನ್‌ಎಸ್ ವಿಕ್ರಾಂತ್’ ಗುರುವಾರ ಭಾರತೀಯ ನೌಕಾಪಡೆಯ ಭಾಗವಾದ ‘ವೆಸ್ಟರ್ನ್ ಫ್ಲೀಟ್’ಗೆ ಸೇರ್ಪಡೆಯಾಗಿದೆ.

‘ನೌಕಾಪಡೆಗೆ ಇದು ಮಹತ್ವದ ದಿನವಾಗಿದ್ದು, ಈ ಸೇರ್ಪಡೆ ನೌಕಾಪಡೆ ಸಾಮರ್ಥ್ಯವನ್ನು ಗಣನೀಯವಾಗಿ ವೃದ್ಧಿಸಲಿದೆ. ವೆಸ್ಟರ್ನ್ ಫ್ಲೀಟ್ ಮುಂಬೈನಲ್ಲಿ ಕೇಂದ್ರ ಕಚೇರಿಯುಳ್ಳ ಪಶ್ಚಿಮ ನೌಕಾ ಕಮಾಂಡ್‌ನ (ಡಬ್ಲ್ಯುಎನ್‌ಸಿ) ಭಾಗವಾಗಿದೆ.

‘ಐಎನ್‌ಎಸ್ ವಿಕ್ರಮಾದಿತ್ಯ ನಿರ್ವಹಣೆಯ ತಂಡದ ಸಾರಥ್ಯದಲ್ಲಿ ಐಎನ್‌ಎಸ್ ವಿಕ್ರಾಂತ್ ನೌಕಾವಾಹಕದ ಸೇರ್ಪಡೆಯಾಯಿತು. ಇದನ್ನು ಬಳಸಿಕೊಂಡು ಅರಬ್ಬಿ ಸಮುದ್ರದಲ್ಲಿ ಜೋಡಿ ಯುದ್ಧ ವಿಮಾನಗಳ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ನಡೆಸಲಾಯಿತು’ ಎಂದು ನೌಕಾಪಡೆಯ ವಕ್ತಾರರು ತಿಳಿಸಿದ್ದಾರೆ.

ಐಎನ್‌ಎಸ್ ವಿಕ್ರಮಾದಿತ್ಯ ಮತ್ತು ವಿಕ್ರಾಂತ್ ಎರಡೂ ನೌಕಾವಾಹಕಗಳು ಈ ಅರಬ್ಬಿ ಸಮುದ್ರದಲ್ಲಿ ನೆಲೆಗೊಂಡಿವೆ. ಕರ್ನಾಟಕದ ಕಾರವಾರದ ಐಎನ್‌ಎಸ್ ಕದಂಬ ನೌಕಾನೆಲೆ ವ್ಯಾಪ್ತಿಗೆ ಬರಲಿವೆ.

ಪ್ರಧಾನಿ ನರೇಂದ್ರ ಮೋದಿ ಸೆ. 2, 2022ರಂದು ‘ಐಎನ್‌ಎಸ್ ವಿಕ್ರಾಂತ್’ ಕಾರ್ಯಾಚರಣೆಗೊಳಿಸಿದ್ದರು. ನೌಕಾಪಡೆಯ ಯುದ್ಧವಾಹಕ ವಿನ್ಯಾಸ ಮಂಡಳಿ (ಡಬ್ಲ್ಯುಡಿಬಿ) ವಿನ್ಯಾಸಗೊಳಿಸಿದ್ದು, ಕೊಚ್ಚಿಯ ಸಿಎಸ್‌ಎಲ್ ಸಂಸ್ಥೆ ನಿರ್ಮಾಣ ಮಾಡಿದೆ. ‘ಐಎನ್‌ಎಸ್ ವಿಕ್ರಾಂತ್’ ಒಟ್ಟು 262.5 ಮೀಟರ್ ಉದ್ದ, 61.6 ಮೀಟರ್ ಅಗಲವಿದೆ. 43 ಸಾವಿರ ಟನ್ ತೂಕ ಹೊರುವ ಸಾಮರ್ಥ್ಯವಿದೆ. 2,200 ಕಂಪಾರ್ಟ್‌ಮೆಂಟ್‌ಗಳಿದ್ದು, 1,600 ಸಿಬ್ಬಂದಿಗೆ ಬಳಸಲು ರೂಪಿಸಲಾಗಿದೆ.

ಸುದ್ದಿ 2 ನಿಮಿಷ

ನ್ಯಾಯಮೂರ್ತಿಗಳ ನೇಮಕಾತಿ: ಮಾಹಿತಿ ಕೇಳಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಹೈಕೋರ್ಟ್ ನ್ಯಾಯಮೂರ್ತಿಗಳ ನೇಮಕಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಕೊಲಿಜಿಯಂ ಮತ್ತೆ ಮತ್ತೆ ಕಳುಹಿಸಿಕೊಟ್ಟ ಹೆಸರುಗಳ ಬಗ್ಗೆ ಮಾಹಿತಿ ನೀಡುವಂತೆ ಸುಪ್ರೀಂ ಕೋರ್ಟ್, ಶುಕ್ರವಾರ ಕೇಂದ್ರ ಸರ್ಕಾರವನ್ನು ಕೇಳಿದೆ.

ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿರುವ ನ್ಯಾಯಮೂರ್ತಿಗಳ ನೇಮಕಾತಿ ಸಂಬಂಧದ ಅಧಿಸೂಚನೆಗೆ ಕಾಲಮಿತಿ ನಿಗದಿಪಡಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ವಕೀಲ ಹರ್ಷ ವಿಭೋರ್ ಸಿಂಘಾಲ್ ಎಂಬವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಈ ನಿರ್ದೇಶನ ನೀಡಿದೆ.

‘ಕೊಲಿಜಿಯಂ ಮತ್ತೆ ಮತ್ತೆ ಕಳುಹಿಸಿಕೊಟ್ಟ ಹೆಸರುಗಳು ಎಷ್ಟಿವೆ ಎಂಬುದರ ಪಟ್ಟಿ ಮಾಡಿ. ಅವರ ನೇಮಕಾತಿ ಏಕೆ ಬಾಕಿಯಿದೆ ಮತ್ತು ನೇಮಕಾತಿ ಪ್ರಕ್ರಿಯೆ ಯಾವ ಹಂತದಲ್ಲಿದೆ ಎಂಬುದರ ಮಾಹಿತಿ ಕೊಡಿ’ ಎಂದು ಪೀಠವು ಕೇಂದ್ರ ಸರ್ಕಾರದ ಪರ ಹಾಜರಿದ್ದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರಲ್ಲಿ ಕೇಳಿತು. ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಪೀಠದಲ್ಲಿದ್ದಾರೆ.

ಆ ಬಳಿಕ ಅಟಾರ್ನಿ ಜನರಲ್ ಮಾಡಿದ ಮನವಿಯನ್ನು ಪರಿಗಣಿಸಿದ ಪೀಠವು, ವಿಚಾರಣೆಯನ್ನು ಮುಂದೂಡಿತು.

‘ನ್ಯಾಯಮೂರ್ತಿಗಳ ನೇಮಕಾತಿ ಅಧಿಸೂಚನೆಯನ್ನು ಸರ್ಕಾರವು ತನ್ನ ಇಚ್ಛೆಗೆ ತಕ್ಕಂತೆ ವಿಳಂಬಗೊಳಿಸುತ್ತಿದ್ದು, ಆ ಮೂಲಕ ನ್ಯಾಯಾಂಗದ ಸ್ವಾತಂತ್ರ್ಯವನ್ನು ಹತ್ತಿಕ್ಕುತ್ತಿದೆ’ ಎಂದು ಅರ್ಜಿದಾರರು ದೂರಿದ್ದರು.

‘ನೀಟ್–ಪಿಜಿ’: ಪರೀಕ್ಷಾ ವಿಧಾನ ಬದಲಿಸಿದ್ದೇಕೆ?

ನವದೆಹಲಿ(ಪಿಟಿಐ): ಪ್ರಸಕ್ತ ಸಾಲಿನ ‘ನೀಟ್–ಪಿಜಿ’ ಪರೀಕ್ಷಾ ವಿಧಾನದಲ್ಲಿ ಕೊನೆ ಕ್ಷಣದಲ್ಲಿ ಬದಲಾವಣೆ ಮಾಡಿರುವುದನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಪ್ರಶ್ನಿಸಿದೆ.

‘ಇದು ಅತ್ಯಂತ ಅಸಹಜ ನಡೆ. ಇದರಿಂದ ವಿದ್ಯಾರ್ಥಿಗಳು ತೊಂದರೆ ಅನುಭವಿಸಬೇಕಾಗುತ್ತದೆ’ ಎಂದಿರುವ ಸುಪ್ರೀಂ ಕೋರ್ಟ್, ಈ ಕುರಿತು ವಾರದೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರ ಮತ್ತು ರಾಷ್ಟ್ರೀಯ ಶಿಕ್ಷಣ ಮಂಡಳಿಗೆ (ಎನ್‌ಬಿಇ) ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

ವಿದ್ಯಾರ್ಥಿಗಳ ಪರ ಹಾಜರಿದ್ದ ಹಿರಿಯ ವಕೀಲರಾದ ವಿಭಾ ದತ್ತ ಮಖೀಜಾ ಮತ್ತು ತನ್ವಿ ದುಬೆ ಅವರ ವಾದಗಳನ್ನು ಆಲಿಸಿದ ಪೀಠ, ವಿಚಾರಣೆಯನ್ನು ಸೆ.27ಕ್ಕೆ ಮುಂದೂಡಿತು.

ವಿಚಾರಣೆ ವೇಳೆ, ‘ಆ.11ರಂದು ‘ನೀಟ್–ಪಿಜಿ’ ನಡೆದಿತ್ತು. ಅಂಕಗಳ ಸಾಮಾನ್ಯೀಕರಣ, ಉತ್ತರಗಳನ್ನು ಪ್ರಕಟಿಸುವ ವಿಧಾನ ಸೇರಿದಂತೆ ಪರೀಕ್ಷಾ ವಿಧಾನದಲ್ಲಿ ಕೊನೆ ಕ್ಷಣದಲ್ಲಿ ಬದಲಾವಣೆ ಮಾಡಲಾಗಿತ್ತು’ ಎಂದು ವಕೀಲೆ ವಿಭಾ ಮಖೀಜಾ ಪೀಠಕ್ಕೆ ತಿಳಿಸಿದರು.

‘ಪರೀಕ್ಷೆಗಳನ್ನು ಯಾವ ರೀತಿ ನಡೆಸಬೇಕು ಎಂಬ ಕುರಿತು ಯಾವುದೇ ನಿಯಮಗಳು ಇಲ್ಲ. ಅಧಿಕಾರಿಗಳ ಇಚ್ಛೆಯಂತೆಯೇ ಎಲ್ಲವೂ ನಡೆಯುತ್ತಿದೆ. ಈ ವಿಚಾರದಲ್ಲಿ ಪ್ರಮಾಣಿತ ವಿಧಾನವೊಂದನ್ನು ರೂಪಿಸುವ ಅಗತ್ಯವಿದೆ’ ಎಂದು ಹೇಳಿದರು.

ಇದಕ್ಕೆ ಆಕ್ಷೇಪಿಸಿದ ಎನ್‌ಬಿಇ ಪರ ವಕೀಲರು, ಇದರಲ್ಲಿ ಹೊಸದು ಅಥವಾ ಅಸಹಜ ಎನ್ನುವಂಥದ್ದು ಏನೂ ಇಲ್ಲ ಎಂದರು.

ಆಗ ಪ್ರತಿಕ್ರಿಯಿಸಿದ ಮುಖ್ಯನ್ಯಾಯಮೂರ್ತಿ ಚಂದ್ರಚೂಡ್,‘ಇದು ಅತ್ಯಂತ ಅಸಹಜವಾದ ನಡೆ. ಪರೀಕ್ಷೆಗಳು ಆರಂಭವಾಗುವುದಕ್ಕೆ ಮೂರು ದಿನಗಳ ಮೊದಲು ಪರೀಕ್ಷಾ ವಿಧಾನವನ್ನೇ ಬದಲಿಸಿದರೆ ವಿದ್ಯಾರ್ಥಿಗಳಿಗೆ ಕಷ್ಟವಾಗುತ್ತದೆ’ ಎಂದರು.

ಪಶ್ಚಿಮ ಬಂಗಾಳ: ಪ್ರತಿಭಟನೆ ನಿಲ್ಲಿಸಿದ ಕಿರಿಯ ವೈದ್ಯರು

ಕೋಲ್ಕತ್ತ (ಪಿಟಿಐ): ಇಲ್ಲಿನ ಆರ್. ಜಿ ಕರ್ ಆಸ್ಪತ್ರೆಯಲ್ಲಿ ನಡೆದ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಕೊಲೆ ಪ್ರಕರಣವನ್ನು ಖಂಡಿಸಿ ತಾವು ನಡೆಸುತ್ತಿರುವ ಪ್ರತಿಭಟನೆಯನ್ನು ಹಿಂತೆಗೆದುಕೊಳ್ಳುವುದಾಗಿ ಕಿರಿಯ ವೈದ್ಯರು ಶುಕ್ರವಾರ ಸಂಜೆ ಘೋಷಿಸಿದರು.

‘ಶನಿವಾರದಿಂದ ಆಸ್ಪತ್ರೆಗಳಿಗೆ ತೆರಳಿ ಸೇವೆಗೆ ಹಾಜರಾಗುತ್ತೇವೆ. ಆದರೂ ಹೊರರೋಗಿಗಳ ವಿಭಾಗದಲ್ಲಿ (ಒಪಿಡಿ) ನಾವು ಸೇವೆ ಮಾಡುವುದಿಲ್ಲ. ಬದಲಾಗಿ ತುರ್ತು ವಿಭಾಗ ಮತ್ತು ಅಗತ್ಯ ಸೇವೆಗಳಲ್ಲಿ ಮಾತ್ರವೇ ಕಾರ್ಯನಿರ್ವಹಿಸುತ್ತೇವೆ’ ಎಂದು ಅವರು ತಿಳಿಸಿದರು.

ಅಲ್ಲದೇ ತಮಗೆ ನೀಡಿರುವ ಭರವಸೆಗಳನ್ನು ಈಡೇರಿಸದಿದ್ದರೆ ಮತ್ತೆ ಪ್ರತಿಭಟನೆ ಆರಂಭಿಸುವುದಾಗಿ ಪ್ರತಿಭಟನೆಯಲ್ಲಿ ನಿರತರಾಗಿದ್ದ ವೈದ್ಯರೊಬ್ಬರು ಹೇಳಿದರು.

ತಮ್ಮ 42 ದಿನಗಳ ನಿರಂತರ ಪ್ರತಿಭಟನೆಯನ್ನು ಅಂತ್ಯಗೊಳಿಸಿದ ಕಿರಿಯ ವೈದ್ಯರು, ಬಳಿಕ ರಾಜ್ಯ ಆರೋಗ್ಯ ಇಲಾಖೆಯ ಪ್ರಧಾನ ಕಚೇರಿಯಿಂದ ಕೇಂದ್ರೀಯ ತನಿಖಾ ದಳ (ಸಿಬಿಐ) ಕಚೇರಿಯವರೆಗೆ 4 ಕಿ.ಮೀ. ಮಾರ್ಗದಲ್ಲಿ ಮೆರವಣಿಗೆ ನಡೆಸಿದರು.

ಪಿಎಂ ವಿಶ್ವಕರ್ಮ ಯೋಜನೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಮೋದಿ ಹೇಳಿಕೆ

‘ಗಣೇಶ ಪೂಜೆಯನ್ನೂ ಕಾಂಗ್ರೆಸ್ ಸಹಿಸಲ್ಲ’

ವರ್ಧಾ (ಪಿಟಿಐ): ‘ಗಣೇಶ ಪೂಜೆಯನ್ನೂ ಕಾಂಗ್ರೆಸ್ ದ್ವೇಷಿಸುತ್ತದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಹಾರಾಷ್ಟ್ರದ ವರ್ಧಾದಲ್ಲಿ ಶುಕ್ರವಾರ ಪುನರುಚ್ಚರಿಸಿದರು. ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಗಣೇಶ ವಿಗ್ರಹವನ್ನು ಪೊಲೀಸ್ ವಾಹನದಲ್ಲಿ ಒಯ್ದ ಘಟನೆಯನ್ನು ಅವರು ಇಲ್ಲಿಯೂ ಉಲ್ಲೇಖಿಸಿದರು.

ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆಯು ಒಂದು ವರ್ಷ ಪೂರೈಸಿದ ಸಲುವಾಗಿ ಇಲ್ಲಿ ನಡೆದ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಅವರು ಹೀಗೆ ಹೇಳಿದರು. ‘ನಾನು ಗಣೇಶ ಪೂಜೆಗೆ ಹೋಗಿದ್ದನ್ನು ‘ಓಲೈಕೆ ರಾಜಕಾರಣ’ ಎಂದು ಟೀಕಿಸಿದ ಕಾಂಗ್ರೆಸ್, ಕರ್ನಾಟಕದಲ್ಲಿ ಗಣಪತಿ ಬಪ್ಪಾನನ್ನು ಕಂಬಿಗಳ ಹಿಂದೆ ಇರಿಸಿತು. ಗಣಪತಿ ಬಪ್ಪಾನಿಗೆ ಆದ ಅವಮಾನದ ಕುರಿತು ಮಹಾರಾಷ್ಟ್ರದಲ್ಲಿಯ ಕಾಂಗ್ರೆಸ್ ಮಿತ್ರಪಕ್ಷಗಳು ಮೌನ ಕಾಯ್ದುಕೊಂಡವು’ ಎಂದರು.

ಈ ವರ್ಷದ ಅಂತ್ಯದಲ್ಲಿ ನಡೆಯಲಿರುವ ಮಹಾರಾಷ್ಟ್ರ ಚುನಾವಣೆಯನ್ನು ಉಲ್ಲೇಖಿಸಿ ಮಾತನಾಡಿದ ಅವರು, ‘ರಾಜ್ಯದಲ್ಲಿ ನಾವು ಕಾಂಗ್ರೆಸ್‌ನ ಇಬ್ಬಗೆ ನೀತಿ ಕುರಿತು ಎಚ್ಚರಿಕೆಯಿಂದ ಇರಬೇಕು. ಸುಳ್ಳು ಮತ್ತು ವಂಚನೆ ಕಾಂಗ್ರೆಸ್‌ನ ಹಾಲ್‌ಮಾರ್ಕ್ ಆಗಿದೆ’ ಎಂದರು.

ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆಯ ಮೊದಲ ವಾರ್ಷಿಕೋತ್ಸವದ ಅಂಗವಾಗಿ ಮಹಾರಾಷ್ಟ್ರದ ವರ್ಧಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಪ್ರಧಾನಿ ನರೇಂದ್ರ ಮೋದಿ ಅವರನ್ನು ರಾಜ್ಯದ ಮುಖ್ಯಮಂತ್ರಿ ಏಕನಾಥ ಶಿಂದೆ, ಉಪ ಮುಖ್ಯಮಂತ್ರಿಗಳಾದ ಅಜಿತ್ ಪವಾರ್ ಮತ್ತು ದೇವೇಂದ್ರ ಫಡಣವೀಸ್ ಅವರು ಸನ್ಮಾನಿಸಿದರು — ಪಿಟಿಐ ಚಿತ್ರ

> ಕಾಂಗ್ರೆಸ್ ಪಕ್ಷವು ರೈತರನ್ನು ಕೇವಲ ಭ್ರಷ್ಟಾಚಾರಕ್ಕಾಗಿ ಬಳಸಿಕೊಂಡಿದೆ. ನಾವು ಕಾಂಗ್ರೆಸ್‌ಗೆ ಮತ್ತೊಂದು ಅವಕಾಶವನ್ನು ನೀಡಿದರೆ ಅದು ರೈತರನ್ನು ನಾಶಗೊಳಿಸುತ್ತದೆ
> **ನರೇಂದ್ರ ಮೋದಿ,** ಪ್ರಧಾನಿ

‘ಆ ಪಕ್ಷವನ್ನು ತುಕ್ಡೆ ತುಕ್ಡೆ ತಂಡ ಮತ್ತು ನಗರ ನಕ್ಸಲರು ಮುನ್ನಡೆಸುತ್ತಿದ್ದಾರೆ. ಇಂದು ನೀವು ನೋಡುತ್ತಿರುವ ಕಾಂಗ್ರೆಸ್ ಮಹಾತ್ಮ ಗಾಂಧಿ ಅವರಿದ್ದ ಕಾಂಗ್ರೆಸ್ ಅಲ್ಲ. ಕಾಂಗ್ರೆಸ್ ದೇಹದೊಳಗೆ ದ್ವೇಷವೆಂಬ ಭೂತ ಸೇರಿಕೊಂಡಿದೆ. ಕಾಂಗ್ರೆಸ್‌ನ ಆತ್ಮವಾಗಿದ್ದ ‘ರಾಷ್ಟ್ರಭಕ್ತಿ’ ಇಂದು ಮೃತಪಟ್ಟಿದೆ’ ಎಂದರು.

ಲೋಕಸಭೆಯಲ್ಲಿ ವಿರೋಧ ಪಕ್ಷಗಳ ನಾಯಕರಾದ ರಾಹುಲ್ ಗಾಂಧಿ ಅವರ ಹೆಸರು ಉಲ್ಲೇಖಿಸದೇ ಅವರ ವಿರುದ್ಧ ವಾಗ್ದಾಳಿ ನಡೆಸಿದ ಮೋದಿ, ‘ಕಾಂಗ್ರೆಸ್‌ನ ಭಾರತ ವಿರೋಧಿ ನಾಯಕರು ವಿದೇಶಗಳಲ್ಲಿ ದೇಶದ ಘನತೆಗೆ ಧಕ್ಕೆ ತರುತ್ತಿದ್ದಾರೆ’ ಎಂದರು.

‘ಗಾಂಧಿ, ಗೋಡ್ಸೆ– ಮೋದಿ ಯಾರ ಜೊತೆ ಗುರುತಿಸಿಕೊಳ್ಳುತ್ತಾರೆ?’

ನವದೆಹಲಿ (ಪಿಟಿಐ): ‘ಮಹಾತ್ಮ ಗಾಂಧಿ ಮತ್ತು ನಾಥೂರಾಂ ಗೋಡ್ಸೆ ಅವರಿಬ್ಬರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಯಾರ ಜೊತೆ ನಿಲ್ಲುತ್ತಾರೆ’ ಎಂದು ಮೋದಿ ಅವರನ್ನು ಕಾಂಗ್ರೆಸ್ ಪ್ರಶ್ನಿಸಿದೆ.

ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆ ಸಂಬಂಧಿಸಿದ ಕಾರ್ಯಕ್ರಮದ ಅಂಗವಾಗಿ ಮೋದಿ ಅವರು ಮಹಾರಾಷ್ಟ್ರದ ವರ್ಧಾಗೆ ತೆರಳಿದ ಬೆನ್ನಲ್ಲೇ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಮೋದಿ ಅವರಿಗೆ ಮೂರು ಪ್ರಶ್ನೆಗಳನ್ನು ‘ಎಕ್ಸ್’ ಜಾಲತಾಣದ ಮೂಲಕ ಕೇಳಿದ್ದಾರೆ.

ರೈತರ ಆತ್ಮಹತ್ಯೆ ತಡೆಯಲು ಬಿಜೆಪಿ ಯಾವ ಕ್ರಮಗಳನ್ನು ತೆಗೆದುಕೊಂಡಿದೆ, ಅರಣ್ಯ ಹಕ್ಕು ಕಾಯ್ದೆ ಜಾರಿ ವೇಳೆ ಆದಿವಾಸಿ ಸಮುದಾಯವನ್ನು ಕೈಬಿಟ್ಟಿದ್ದೇಕೆ– ಇವು ಜೈರಾಮ್ ಅವರು ಕೇಳಿರುವ ಇನ್ನೆರಡು ಪ್ರಶ್ನೆಗಳು.

ಮಹಾರಾಷ್ಟ್ರದಲ್ಲಿ ಪ್ರತಿದಿನ ಕನಿಷ್ಠ ಏಳು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಕಳೆದ ವರ್ಷ ಜನವರಿಯಿಂದ ಅಕ್ಟೋಬರ್‌ವರೆಗೆ 2,366 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಅವರು ಹೇಳಿದ್ದಾರೆ.

ಯೋಜನೆಗೆ ಚಾಲನೆ: ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆ ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡಿದ ಮೋದಿ ಅವರು ಯೋಜನೆಯ ಕೆಲ ಫಲಾನುಭವಿಗಳ ಜೊತೆ ಮಾತುಕತೆ ನಡೆಸಿದರು. ಮಹಾರಾಷ್ಟ್ರ ಸರ್ಕಾರದ ಯೋಜನೆಗಳಾದ ‘ಆಚಾರ್ಯ ಚಾಣಕ್ಯ ಕೌಶಲಾಭಿವೃದ್ಧಿ ಕೇಂದ್ರ’, ‘ಪುಣ್ಯಶ್ಲೋಕ್ ಅಹಿಲ್ಯಾದೇವಿ ಹೋಳ್ಕರ್– ಮಹಿಳಾ ಸ್ಟಾರ್ಟ್‌ಅಪ್ ಯೋಜನೆ’ಗೆ ಚಾಲನೆ ನೀಡಿದರು.

ಇದೇ ವೇಳೆ, ರಾಜ್ಯದ ಅಮರಾವತಿಯಲ್ಲಿ ನಿರ್ಮಾಣವಾಗಲಿರುವ ಪಿಎಂ ಮೆಗಾ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ರೀಜನ್ಸ್ ಆ್ಯಂಡ್ ಅಪ್ಪಾರೆಲ್ ಪಾರ್ಕ್‌ಗೆ ಶಿಲಾನ್ಯಾಸ ನೆರವೇರಿಸಿದರು.

ಹರಿಯಾಣ ವಿಧಾನಸಭೆ ಚುನಾವಣೆ ಪ್ರಚಾರದಲ್ಲಿ ಅರವಿಂದ ಕೇಜ್ರಿವಾಲ್ ಪ್ರತಿಪಾದನೆ

‘ಎಎಪಿ ನೆರವಿಲ್ಲದೆ ಸರ್ಕಾರ ರಚನೆ ಅಸಾಧ್ಯ’

ಚಂಡೀಗಢ (ಪಿಟಿಐ): ‘ಹರಿಯಾಣದಲ್ಲಿ ಆಮ್ ಆದ್ಮಿ ಪಕ್ಷದ (ಎಎಪಿ) ಬೆಂಬಲವಿಲ್ಲದೆ ಸರ್ಕಾರ ರಚಿಸಲಾಗದು. ಇಡೀ ರಾಜ್ಯ ಬದಲಾವಣೆ ಬಯಸಿದೆ. ಜನರು ಬಿಜೆಪಿಯನ್ನು ಅಧಿಕಾರದಿಂದ ಕಿತ್ತೊಗೆಯಲಿದ್ದಾರೆ’ ಎಂದು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಪ್ರತಿಪಾದಿಸಿದ್ದಾರೆ.

ಶುಕ್ರವಾರ ಹರಿಯಾಣ ವಿಧಾನಸಭಾ ಚುನಾವಣೆಗೆ ಪಕ್ಷದ ಪರ ಪ್ರಚಾರ ಆರಂಭಿಸಿದ ಅವರು, ‘ಅಕ್ಟೋಬರ್ 5ರಂದು ರಾಜ್ಯ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿ ಬಿಜೆಪಿ ಅಧಿಕಾರ ಕಳೆದುಕೊಳ್ಳುವುದು ನಿಶ್ಚಿತ’ ಎಂದು ಹೇಳಿದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸುಶೀಲ್ ಗುಪ್ತಾ ಅವರ ಜೊತೆಗೂಡಿ ಕೇಜ್ರಿವಾಲ್ ಅವರು ಯಮುನಾನಗರ ಜಿಲ್ಲೆಯಲ್ಲಿನ ಜಗಾಧರಿ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಆದರ್ಶ್ ಪಾಲ್ ಪರವಾಗಿ ರೋಡ್ ಶೋ ನಡೆಸಿದರು.

ಹರಿಯಾಣ ವಿಧಾನಸಭೆ ಚುನಾವಣೆಗೆ ಜಗಧಾರಿ ಕ್ಷೇತ್ರದ ಪಕ್ಷದ ಅಭ್ಯರ್ಥಿ ಪರ, ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಶುಕ್ರವಾರ ರೋಡ್ ಶೋ ನಡೆಸಿದರು —ಪಿಟಿಐ ಚಿತ್ರ

ಕಾಂಗ್ರೆಸ್ ಜೊತೆಗಿನ ಮೈತ್ರಿ ಮಾತುಕತೆ ವಿಫಲವಾದ ಬಳಿಕ ಎಎಪಿ ರಾಜ್ಯದಲ್ಲಿ ಏಕಾಂಗಿಯಾಗಿ ಕಣಕ್ಕಿಳಿದಿದೆ.

‘ಎಎಪಿ ರಾಜ್ಯದಲ್ಲಿ ಗಣನೀಯ ಪ್ರಮಾಣದ ಕ್ಷೇತ್ರಗಳಲ್ಲಿ ಗೆಲ್ಲಲಿದೆ. ಇಲ್ಲಿಗೆ ಬರುತ್ತಿದ್ದಂತೆ ನಾನು ಲೆಕ್ಕ ಹಾಕಿದೆ. ಎಎಪಿ ಬೆಂಬಲವಿಲ್ಲದೇ ಸರ್ಕಾರ ರಚನೆ ಅಸಾಧ್ಯ ಎನ್ನುವಷ್ಟು ಸ್ಥಾನಗಳನ್ನು ಪಕ್ಷ ಗೆಲ್ಲಲಿದೆ’ ಎಂದು ಕೇಜ್ರಿವಾಲ್ ಹೇಳಿದರು.

ರೋಡ್ ಶೋ ವೇಳೆ ಬಿಜೆಪಿ ವಿರುದ್ಧ ನೇರ ದಾಳಿ ನಡೆಸಿದ ಅವರು, ರಾಜ್ಯದಲ್ಲಿ ಬಿಜೆಪಿ ಆಡಳಿತದಲ್ಲಿ ಭ್ರಷ್ಟಾಚಾರ, ನಿರುದ್ಯೋಗ, ಹಣದುಬ್ಬರ, ಮಾದಕವಸ್ತು ಸಾಗಣೆ ಹೆಚ್ಚಾಗಿದೆ ಎಂದು ಆರೋಪಿಸಿದರು.

ತಮ್ಮ ವಿರುದ್ಧದ ಪ್ರಕರಣ, ಜೈಲುವಾಸ ಉಲ್ಲೇಖಿಸಿದ ಅವರು, ನನ್ನ ವಿರುದ್ಧ ಅವರು (ಬಿಜೆಪಿ) ಏನೆಲ್ಲಾ ಮಾಡಿದರೋ, ಹರಿಯಾಣದ ಪ್ರತಿಯೊಬ್ಬರೂ ಅದಕ್ಕೆ ಪ್ರತೀಕಾರ ತೆಗೆದುಕೊಳ್ಳಲಿದ್ದಾರೆ. ಪ್ರತಿ ಮಗುವು ಪ್ರತೀಕಾರ ತೆಗೆದುಕೊಳ್ಳಲಿದೆ ಎಂದರು.

90 ಸದಸ್ಯ ಬಲದ ರಾಜ್ಯ ವಿಧಾನಸಭೆಗೆ ಅಕ್ಟೋಬರ್ 5ರಂದು ಚುನಾವಣೆ ನಡೆಯಲಿದ್ದು, ಅಕ್ಟೋಬರ್ 8ರಂದು ಮತಎಣಿಕೆ ನಡೆಯಲಿದೆ.

ಭಾಸ್ಕರ್‌ರಾವ್ ಮತ್ತೆ ಕಾಂಗ್ರೆಸ್‌ಗೆ

ಮುಂಬೈ: ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ, ರಾಜ್ಯಸಭಾ ಸದಸ್ಯ ಅಶೋಕ್ ಚವ್ಹಾಣ್ ಅವರ ಸಂಬಂಧಿ ಭಾಸ್ಕರ್‌ರಾವ್ ಖತಗಾಂವಕರ್ ಪಾಟೀಲ್ ಅವರು ಶುಕ್ರವಾರ ಕಾಂಗ್ರೆಸ್‌ಗೆ ಮರಳಿದ್ದಾರೆ.

2014ರಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರಿದ್ದ ಭಾಸ್ಕರ್ ಅವರು, ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ನಾನಾ ಪಾಟೋಲೆ ಅವರು ಸಮ್ಮುಖದಲ್ಲಿ ಮತ್ತೆ ಕೈ ಪಾಳಯಕ್ಕೆ ಸೇರ್ಪಡೆಗೊಂಡರು.

ಸುಧಾ, ಮಯೂರ ಓದಿರಿ

ಜಮ್ಮು–ಕಾಶ್ಮೀರ: ದಿಗ್ಗಜರಿಂದ ಪ್ರಚಾರ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣಾ ಕಹಳೆ ಜೋರಾಗಿದ್ದು, ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ಪ್ರಮುಖ ನಾಯಕರು ದಣಿವರಿಯದೆ ಪ್ರಚಾರಕ್ಕೆ ಇಳಿದಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಶನಿವಾರ (ಸೆಪ್ಟೆಂಬರ್ 21) ಜಮ್ಮುವಿಗೆ ಭೇಟಿ ನೀಡಿ, ರ್‍ಯಾಲಿಯಲ್ಲಿ ಪಾಲ್ಗೊಂಡು ತಮ್ಮ ಅಭ್ಯರ್ಥಿಗಳ ಪರ ಮತಯಾಚಿಸಲಿದ್ದಾರೆ. ಇದಕ್ಕೂ ಮುನ್ನ ಸೆಪ್ಟೆಂಬರ್ 16ರಿಂದ ಸತತ ಮೂರು ರ್‍ಯಾಲಿಗಳಲ್ಲಿ ಭಾಗಿಯಾಗಿ ಸೆಪ್ಟೆಂಬರ್ 20ರಂದು ಹಿಂದಿರುಗಿದ್ದರು.

ರಾಜನಾಥ್ ಸಿಂಗ್ ಅವರು ಒಂದೇ ದಿನ ಸುಂದರಬನಿ, ಆರ್‌ಎಸ್ ಪೋರಾ, ಪೂಂಛ್‌ನಲ್ಲಿ ರ್‍ಯಾಲಿ ಉದ್ದೇಶಿಸಿ ಮಾತನಾಡಲಿದ್ದಾರೆ. ಬಿಜೆಪಿ ಮಾಜಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಜಮ್ಮುವಿನ ಪೂರ್ವ ಸೆಗ್ಮೆಂಟ್‌ನಲ್ಲಿ ರೋಡ್ ಶೋ ನಡೆಸಲಿದ್ದಾರೆ.

ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸೆಪ್ಟೆಂಬರ್ 23ರಂದು ಸೂರನಕೋಟೆಯಲ್ಲಿ ಮತಯಾಚಿಸಲಿದ್ದಾರೆ.

ಜಮ್ಮು–ಕಾಶ್ಮೀರ– ಶೇ 61.38ರಷ್ಟು ಮತದಾನ: ಜಮ್ಮು–ಕಾಶ್ಮೀರ ವಿಧಾನಸಭೆ ಚುನಾವಣೆಯ ಮೊದಲ ಹಂತದಲ್ಲಿ ಶೇ 61.38ರಷ್ಟು ಮತದಾನವಾಗಿದೆ. ಮತದಾನ ಕುರಿತಂತೆ, ಆಯೋಗವು ಪರಿಷ್ಕೃತ ಅಂಕಿ–ಅಂಶಗಳನ್ನು ಬಿಡುಗಡೆ ಮಾಡಿದೆ.



ಮಹಿಳೆಯರಿಗಿಂತ ಪುರುಷರು ಚಲಾಯಿಸಿದ ಮತ ಪ್ರಮಾಣ ಶೇ 4.79ರಷ್ಟು ಹೆಚ್ಚು ಎಂದು ಚುನಾವಣಾ ಆಯೋಗ ಶುಕ್ರವಾರ ತಿಳಿಸಿದೆ.

ಪ್ರಜಾ ಮತ
ಜನತಂತ್ರದ ಹಬ್ಬ

ದಿ ಜಯನಗರ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್

ನಂ.902, 8ನೇ ಮುಖ್ಯ ರಸ್ತೆ 2ನೇ ಬಡಾವಣೆ, ಜಯನಗರ, ಬೆಂಗಳೂರು–560 011
ದೂರವಾಣಿ: 080–26568074

74ನೇ ವಾರ್ಷಿಕ ಸರ್ವಸದಸ್ಯರ ಸಭೆ

2023–24ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯ ತಿಳುವಳಿಕೆ ಪತ್ರ

ಮೇಲ್ಕಂಡ ಸಂಘದ **2023–24** ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ: **22–09–2024ನೇ ಭಾನುವಾರ ಬೆಳಗ್ಗೆ 10:00 ಘಂಟೆಗೆ ಸಂಘದ ಅಧ್ಯಕ್ಷರಾದ “ಸಹಕಾರ ಕೌಸ್ತುಭಶ್ರೀ” ಶ್ರೀ ಬಿ.ಆರ್. ವಾಸುದೇವ್ (ವಾಸು)** ಇವರ ಅಧ್ಯಕ್ಷತೆಯಲ್ಲಿ **“ಸಹಕಾರಿ ವಿದ್ಯಾಕೇಂದ್ರ ಶಾಲಾ ಆವರಣ”** ನಂ.3, 41ನೇ ಕ್ರಾಸ್, ಈಸ್ಟ್ ಎಂಡ್ "ಬಿ" ಮುಖ್ಯರಸ್ತೆ, ಜಯನಗರ 9ನೇ ಬಡಾವಣೆ, ಬೆಂಗಳೂರು–560 069, ಇಲ್ಲಿ ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರು ದಯವಿಟ್ಟು ಸಭೆಗೆ ಹಾಜರಾಗಬೇಕೆಂದು ಈ ಮೂಲಕ ಕೋರಲಾಗಿದೆ.

ಆಡಳಿತ ಮಂಡಳಿ ಪರವಾಗಿ
(ಎಂ. ಶಿವಣ್ಣ)
ಕಾರ್ಯದರ್ಶಿ

ಸ್ಥಳ: ಬೆಂಗಳೂರು
ದಿನಾಂಕ: 21–09–2024

ಭಾರತೀಯ ಸ್ಟೇಟ್ ಬ್ಯಾಂಕ್ SBI

ಪ್ರಾದೇಶಿಕ ವ್ಯಾಪಾರ ಕಛೇರಿ, ಪ್ರಾದೇಶಿಕ–1,ಆ. ಕ–2 ಬೆಂಗಳೂರು ಉತ್ತರ, ವಲಯ–1, 4ನೇ ಮಹಡಿ, ಮೈಸೂರು ಬ್ಯಾಂಕ್ ಸರ್ಕಲ್, ಕೆ.ಜಿ ರಸ್ತೆ, ಬೆಂಗಳೂರು– 560 009

ಕಛೇರಿಗಾಗಿ ಸ್ಥಳಾವಕಾಶ ಬಾಡಿಗೆಗೆ ಬೇಕಾಗಿದೆ

ಪ್ರಾದೇಶಿಕ ವ್ಯವಸ್ಥಾಪಕರ ಕಛೇರಿ, ಪ್ರಾದೇಶಿಕ–1,ಆ. ಕ–2,ವಲಯ–1, ಎಸ್‌ಬಿಐ ಪರವಾಗಿ ನೆಲಮಾಳಿಗೆ ಪ್ರದೇಶವನ್ನು ಹೊಂದಿರುವ ವಾಣಿಜ್ಯ / ಕಚೇರಿ ಬಳಕೆಗಾಗಿ ಗುತ್ತಿಗೆ ಆಧಾರದ ಮೇಲೆ **232 ಚ.ಮೀ (2500 ಚ.ಅಡಿ +/– 25%)** ಕಾರ್ಪೆಟ್ ಏರಿಯಾ ವಿಸ್ತೀರ್ಣವುಳ್ಳ ಕಟ್ಟಡದ ಮಾಲೀಕರು/ಪವರ್ ಆಫ್ ಆಟಾರ್ನಿ ಹೊಂದಿರುವವರಿಂದ ಅರ್ಜಿಗಳನ್ನು **ಎಸ್‌ಬಿಐ ಕೆಐಎಡಿಬಿ ಬಾಗಲೂರು ಶಾಖೆಗೆ** ಆಹ್ವಾನಿಸಿರುತ್ತಾರೆ. ಕೆಐಎಡಿಬಿ ವಸತಿ ಪ್ರದೇಶಗಳ ಮುಖ್ಯ ರಸ್ತೆಯ ನೆಲ ಮಹಡಿಯಲ್ಲಿರುವ ಕಟ್ಟಡಗಳಿಗೆ ಆದ್ಯತೆ ನೀಡಲಾಗುವುದು.

ತಾಂತ್ರಿಕ ಹರಾಜು ಹಾಗೂ ಸಲ್ಲಿಸಬೇಕಾದ ಅರ್ಜಿ ನಮೂನೆ, ವಿವರವಾದ ಮಾನದಂಡಗಳು ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು, ಎಸ್‌ಬಿಐ ವೆಬ್ ಸೈಟ್ **www.sbi.co.in** ನಲ್ಲಿ **SBI in the News/Procurement News** ಅಡಿಯಲ್ಲಿ ದಿನಾಂಕ **21.09.2024** ರಿಂದ ದಿನಾಂಕ **04.10.2024** ರವರೆಗೆ ಅರ್ಜಿ ಡೌನ್ ಲೋಡ್ ಮಾಡಬಹುದು. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: **04.10.2024 ಮಧ್ಯಾಹ್ನ 3.00** ಗಂಟೆಯವರೆಗೆ. ದಲ್ಲಾಳಿಗಳಿಗೆ ಅವಕಾಶ ನೀಡಲಾಗುವುದಿಲ್ಲ.

ಸಹಿ/– ಪ್ರಾದೇಶಿಕ ವ್ಯವಸ್ಥಾಪಕರು,
ಪ್ರಾದೇಶಿಕ–1,ಆ. ಕ–2 ಬೆಂಗಳೂರು ಉತ್ತರ,ವಲಯ–1

ಮ.प्र. खादी तथा ग्रामोद्योग बोर्ड

(म.प्र. शासन का उपक्रम)
74, अरेरा हिल्स, केन्द्रीय विद्यालय के पास, भोपाल
दूरभाष : 7745964170, E-mail : productionkhadi@gmail.com
क्र./उत्पादन-13/99/2024-25/2069 भोपाल, दिनांक : 20.09.2024

ई-निविदा विज्ञप्ति

म.प्र. खादी तथा ग्रामोद्योग बोर्ड, भोपाल के विभागीय उत्पादन केन्द्र, महेश्वर, जिला खरगोन/इन्दौर के लिए मलबरी ककून से धागा बनाने के लिए रीलिंग चरखा, टसर ककून से धागा बनाने के लिए स्पिनिंग चरखा, ट्विस्टिंग मशीन, सिल्क एवं कोसा बुनाई के लिए मोडिफाइड लूम क्रय के लिए प्रतिष्ठित एवं मान्यता प्राप्त संस्थाओं से दरें/प्रस्ताव ई-निविदा के माध्यम से **दिनांक 14.10.2024 दोपहर 12:00 बजे तक** आमंत्रित किए जाते हैं।

ई-निविदा संबंधी नियम/शर्तें एवं जानकारी **https://mptenders.gov.in** पर अवलोकन कर ऑनलाइन ई-निविदा प्रस्ताव/दरें प्रस्तुत की जा सकती है। ऑनलाइन ई-निविदा दिनांक 16.10.2024 को दोपहर 12.00 बजे समिति एवं उपस्थित निविदाकर्ताओं के समक्ष खोली जावेंगी।

म.प्र. माध्यम/116505/2024 **प्रबन्ध संचालक**

ಕರ್ನಾಟಕ ಸರ್ಕಾರ

ಕರ್ನಾಟಕ ಸಹಕಾರಿ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಂಘಗಳ ಮಹಾ ಮಂಡಳ (ನಿ),

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಛೇರಿ, ಪಿ.ಡಿ.ಡಿ.ಎಲ್ ಕಟ್ಟಡ, ಪಶುಪಾಲನಾ ಭವನದ ಹಿಂಭಾಗ, ಹೆಬ್ಬಾಳ, ಬೆಂಗಳೂರು–24, ಇ–ಮೇಲ್: ceokcsgf@gmail.com

ನೋ.ಸಂಖ್ಯೆ: ಅನಿ–ಕೈತಸಂ–2–154–ನೋ–47960–2015–16

ಪತ್ರಿಕಾ ಪ್ರಕಟಣೆ

ದಿನಾಂಕ: **24–09–2024** ರಂದು ಬೆಳ್ಳಿಗ್ಗೆ **11.00** ಗಂಟೆಗೆ ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಂಘಗಳ ಮಹಾಮಂಡಳದ **2023–24** ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಕರ್ನಾಟಕ ಪಶುವೈದ್ಯಕೀಯ ಪರಿಷತ್ತು ಸಭಾಂಗಣ, ಹೆಬ್ಬಾಳ, ಬೆಂಗಳೂರು–24 ಇಲ್ಲಿ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿರುತ್ತದೆ. ಈ ಸಂಬಂಧ ಈಗಾಗಲೇ ಎಲ್ಲ ಸದಸ್ಯರಿಗೆ ಸಭಾ ಸೂಚನಾ ಪತ್ರವನ್ನು ಕಳುಹಿಸಲಾಗಿರುತ್ತದೆ. ಒಂದು ವೇಳೆ ಸಭಾ ಸೂಚನಾ ಪತ್ರ ತಲುಪದಿದ್ದಲ್ಲಿ, ಇದನ್ನೇ ಆಹ್ವಾನ ಪತ್ರಿಕೆಯೆಂದು ಪರಿಗಣಿಸಿ ಸಭೆಗೆ ಹಾಜರಾಗಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಿ ಮಹಾಮಂಡಳದ ವಾರ್ಷಿಕ ಮಹಾಸಭೆಯನ್ನು ಯಶಸ್ವಿಗೊಳಿಸಲು ಕೋರಲಾಗಿದೆ.

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕರ್ನಾಟಕ ಸಹಕಾರಿ ಕುರಿ ಮತ್ತು ಮೇಕೆ
ಸಾಕಾಣಿಕೆದಾರರ ಸಂಘಗಳ ಮಹಾಮಂಡಳ (ನಿ)

DIPR/CP/2081/Zen/2024-25

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿನ್ ಸಂಖ್ಯೆ: U04010KA2002SGC030436

ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ ಕಾನಿಇಂ/ಸಕಾನಿಇಂ/2024–25/32256–60 ದಿನಾಂಕ:19.09.2024

:: ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ) ::

ಈ ಕೆಳ ಕಾಣಿಸಿದ ಸಾಮಗ್ರಿಗಳನ್ನು ಗು.ವಿ.ಸ.ಕಂ.ನಿ ತಾಂತ್ರಿಕ ನಿರ್ದಿಷ್ಟತೆಯಂತೆ ತಯಾರಿಕೆ ಮತ್ತು ಪೂರೈಕೆ ಮಾಡುವುದು.

ಇನ್ಸುಲೇಟರ್:
ಪಿಸಿ–1371: 1.1 ಕೆ. ವಿ ಪಿನ್ ಸೇರಮಿಕ್ ಪೀನ್ ಇನ್ಸುಲೇಟರ್ (ಶೆಲ್ ಮಾತ್ರ), **ಪಿಸಿ–1372:** ನಂ. 8 ಗೈ ಸ್ಟ್ರೈನ್ ಇನ್ಸುಲೇಟರ್, **ಪಿಸಿ–1373:** ನಂ.15 ಗೈ ಸ್ಟ್ರೈನ್ ಇನ್ಸುಲೇಟರ್

ಎಲೆಕ್ಟ್ರಿಕಲ್ ಮಾರ್ಗದ ಸಾಮಗ್ರಿಗಳು:
ಪಿಸಿ–1376: 1.1 ಕೆವಿ ಜಿ ಐ ಪೀನ್ ಫಾರ್ 1.1 ಕೆವಿ ಸೇರಮಿಕ್ ಶೆಲ್ ಇನ್ಸುಲೇಟರ್, **ಪಿಸಿ–1377:** 11 ಕೆವಿ ಹಾರಿಜಂಟಲ್ ಕ್ರಾಸ್ ಆರ್ಮ್ ಎಮ್.ಎಸ್, **ಪಿಸಿ–1378:** ಎಲ್‌ಟಿ ಎಸ್‌ಟಿ ಸಪೋರ್ಟ್ 50*6 ಎಮ್‌ಎಮ್ ಫ್ಲಾಟ್– ಎಮ್.ಎಸ್, **ಪಿಸಿ–1379:** ಹೆಚ್‌ಟಿ ಎಸ್‌ಟಿ ಸಪೋರ್ಟ್ 50*8 ಎಮ್‌ಎಮ್ ಫ್ಲಾಟ್– ಎಮ್.ಎಸ್., **ಪಿಸಿ–1380:** ಹೆಚ್–ಫ್ರೇಮ್ ಸೆಟ್ ಫಾರ್ ಫಿಕ್ಸಿಂಗ್ 11ಕೆವಿ 200 ಆಂಪ್ಸ್ ಸಿಂಗಲ್ ಬ್ರೇಕ್, **ಪಿಸಿ–1381:** ಅಂಕ್ಕರ್ ರಾಡ್ 12 ಎಮ್‌ಎಮ್ ರೌಂಡ್ಸ್ ಬಳಸಿ /ಗೈ ರಾಡ್–ಎಮ್.ಎಸ್., **ಪಿಸಿ–1382:** ಆರ್‌ಸಿಸಿ ಪೋಲ್ ಕ್ಲ್ಯಾಂಪ್–ಎಮ್.ಎಸ್., **ಪಿಸಿ–1383:** ಪಿಎಸ್‌ಸಿಸಿ ಪೋಲ್ (140 ಕೆಜಿ ಡಬ್ಲ್ಯೂ/ಎಲ್) ಕ್ಲ್ಯಾಂಪ್– ಎಮ್.ಎಸ್., **ಪಿಸಿ–1384:** ಪಿಎಸ್‌ಸಿಸಿ ಪೋಲ್ (200 ಕೆಜಿ ಡಬ್ಲ್ಯೂ/ಎಲ್) ಕ್ಲ್ಯಾಂಪ್– ಎಮ್.ಎಸ್.,

ಗೈ / ಜಿಐ ವೈಯರ್
ಪಿಸಿ–1385: 8 ಎಸ್‌ಡಬ್ಲ್ಯೂಜಿ ಜಿಐ ವೈಯರ್., **ಪಿಸಿ–1374:** 7/10 ಎಸ್‌ಡಬ್ಲ್ಯೂಜಿ ಗೈ ವೈಯರ್.

ಲೈಟನಿಂಗ್ ಅರೆಸ್ಟರ್
ಪಿಸಿ–1375: 30 ಕೆವಿ ಲೈಟನಿಂಗ್ ಅರೆಸ್ಟರ್ ನಾರ್ಮಲ್ ಡ್ಯೂಟಿ ಪಾಲಿಮರಿಕ್ ಡಿಸ್ಚಾರ್ಜ್ ಕ್ಲಾಸ್–2

ದಿನಾಂಕ: ಕೆಪಿಪಿಪಿ ಪೋರ್ಟಲ್ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: **21.09.2024** ರಂದು ಅಥವಾ ನಂತರ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **07.10.2024 @ 17:30 ಗಂಟೆಗೆ,** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **09.10.2024 @ 11:00 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ ದಿನಾಂಕ: **10.10.2024 @ 11:00 ಗಂಟೆಗೆ.**

ಟೆಂಡರ್ ಮೊತ್ತ: **ಅತಿ ಹೆಚ್ಚು: ರೂ. 195.81 ಲಕ್ಷ ಅತಿ ಕಡಿಮೆ: ರೂ. 10.73 ಲಕ್ಷ.**

ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಅಧೀಕ್ಷಕ ಅಭಿಯಂತರರು (ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 9448359006 (ಕಾರ್ಯ ನಿರ್ವಾಹಕ ಅಭಿಯಂತರರು) ಅಂತರ್ಜಾಲತಾಣದ ವಿಳಾಸ: https://kppp.karnataka.gov.in.

ಸಹಿ/– ಅಧೀಕ್ಷಕ ಅಭಿಯಂತರರು (ವಿ).,
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/454/ಕೆ.ಎಸ್.ಎಂ.ಸಿ.&ಎ/2024–25

ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು – 560 011.
ದೂ: 080–26564516,26562500, ಗ್ರಾಮ್ಸ್:SITO ಫ್ಯಾಕ್ಸ್:26565222 ಇ–ಮೇಲ್: sitodirector@gmail.com
ಸಂಖ್ಯೆ:ಸಂಗಾಂಟ್ರಾಅಚಿ/ಇ–ಟೆಂಡರ್/ಮ್ಯಾನಿಕ್ವೀನ್/ಸ್ಕಿಲ್ ಲ್ಯಾಬ್/119/2024–25 ದಿನಾಂಕ:19.09.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ) (2ನೇ ಕರೆ)

ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು–11 ಇವರು ಅರ್ಹ ಟೆಂಡರುದಾರರಿಂದ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ.

SUPPLY OF MANEQUINS AND OTHER ITEMS FOR SKILL LAB AT SGITO

(1) ಟೆಂಡರ್ ದಾಖಲೆಗಳನ್ನು **https://kppp.karnataka.gov.in** ನಿಂದ ದಿನಾಂಕ **21.09.2024**ರಿಂದ ಅಥವಾ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮತ್ತು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪೋರ್ಟಲ್ ಮುಖಾಂತರ ದಿನಾಂಕ **30.09.2024**ರ ಸಂಜೆ **4:00** ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು. (2) ಟೆಂಡರ್‌ನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ/ತಿರಸ್ಕರಿಸುವ ಅಥವಾ ರದ್ದುಪಡಿಸುವ ಅಧಿಕಾರದ ಹಕ್ಕನ್ನು ಟೆಂಡರ್ ಅಂಗೀಕಾರ ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ.

ಸಹಿ/–
ಮುಖ್ಯ ಆಡಳಿತಾಧಿಕಾರಿ,
ಟೆಂಡರ್ ಆಹ್ವಾನ ಪ್ರಾಧಿಕಾರ

ಡಿ.ಐ.ಪಿ.ಆರ್/ಸ್ಪೆಕ್ಟ್ರಮ್/2079/2024–25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಳಿಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲ ಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಛೇರಿ (ತ್ಯಾನಿನಿ)–ಪಶ್ಚಿಮ, 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009

ಕ್ರ.ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರಿಗಿಟ್ಟ ಮೊತ್ತ(ರೂ.ಗಳಲ್ಲಿ) / ಇಎಂಡಿ ಮೊತ್ತ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1.	(ತ್ಯಾನೀನಿ–ಎಸ್‌ಟಿಪಿ) ಹೆಚ್& ಎ.ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ–ಎಸ್‌ಟಿಪಿ–ಹೆಚ್& ಎ.ವ್ಯಾಲಿ)/ಪಿಬಿ/257/2024–25 ದಿನಾಂಕ:18.09.2024	ರೂ.10.61 ಲಕ್ಷಗಳು / ರೂ.26,600/–	27.09.2024ರ ಸಂಜೆ 5:30 ಗಂಟೆಯವರೆಗೆ	30.09.2024ರ ಮಧ್ಯಾಹ್ನ 12:00 ಗಂಟೆಗೆ
2.		ಬೆಂಜಮಂ/ಕಾನಿಅ(ತ್ಯಾನೀನಿ–ಎಸ್‌ಟಿಪಿ–ಹೆಚ್& ಎ.ವ್ಯಾಲಿ)/ಪಿಬಿ/259/2024–25 ದಿನಾಂಕ:18.09.2024	ರೂ.19.45 ಲಕ್ಷಗಳು / ರೂ.48,630/–		
3.		ಬೆಂಜಮಂ/ಕಾನಿಅ(ತ್ಯಾನೀನಿ–ಎಸ್‌ಟಿಪಿ–ಹೆಚ್& ಎ.ವ್ಯಾಲಿ)/ಪಿಬಿ/261/2024–25 ದಿನಾಂಕ:18.09.2024	ರೂ.19.45 ಲಕ್ಷಗಳು / ರೂ.48,630/–		
4.		ಬೆಂಜಮಂ/ಕಾನಿಅ(ತ್ಯಾನೀನಿ–ಎಸ್‌ಟಿಪಿ–ಹೆಚ್& ಎ.ವ್ಯಾಲಿ)/ಪಿಬಿ/263/2024–25 ದಿನಾಂಕ:18.09.2024	ರೂ.19.45 ಲಕ್ಷಗಳು / ರೂ.48,630/–		
5.		ಬೆಂಜಮಂ/ಕಾನಿಅ(ತ್ಯಾನೀನಿ–ಎಸ್‌ಟಿಪಿ–ಹೆಚ್& ಎ.ವ್ಯಾಲಿ)/ಪಿಬಿ/266/2024–25 ದಿನಾಂಕ:18.09.2024	ರೂ.36.08 ಲಕ್ಷಗಳು / ರೂ.72,200/–	27.09.2024ರ ಮಧ್ಯಾಹ್ನ 3:00 ಗಂಟೆಯವರೆಗೆ	30.09.2024ರ ಮಧ್ಯಾಹ್ನ 3:30 ಗಂಟೆಗೆ
					ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ತ್ಯಾನೀನಿ–ಎಸ್‌ಟಿಪಿ) ಹೆಚ್&ಎ.ವ್ಯಾಲಿ
6.	(ತ್ಯಾನೀನಿ–ಎನ್) ವಿ.ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ–ಎನ್–ವಿ.ವ್ಯಾಲಿ)/ ಪಿಬಿ/689//2024–25 ದಿನಾಂಕ:19.09.2024	1. ರೂ.13.37 ಲಕ್ಷಗಳು / ರೂ.33,500/–	05.10.2024ರ ಸಂಜೆ 5:30 ಗಂಟೆಯವರೆಗೆ	07.10.2024ರ ಸಂಜೆ 04:00 ಗಂಟೆಗೆ
7.			2. ರೂ.11.24 ಲಕ್ಷಗಳು / ರೂ.28,100/–		
8.		ಬೆಂಜಮಂ/ಕಾನಿಅ(ತ್ಯಾನೀನಿ–ಎನ್–ವಿ.ವ್ಯಾಲಿ)/ ಪಿಬಿ/689//2024–25 ದಿನಾಂಕ:19.09.2024 (ಪರಿಶಿಷ್ಟ ಜಾತಿಗೆ ಮೀಸಲು)	3. ರೂ.21.28 ಲಕ್ಷಗಳು / ರೂ.21,300/–		
9.		ಬೆಂಜಮಂ/ಕಾನಿಅ(ತ್ಯಾನೀನಿ–ಎನ್–ವಿ.ವ್ಯಾಲಿ)/ ಪಿಬಿ/691/2024–25 ದಿನಾಂಕ:19.09.2024	ರೂ.70.57 ಲಕ್ಷಗಳು / ರೂ.1,41,200/–		
					ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಎನ್)–ವಿ.ವ್ಯಾಲಿ

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/KAVITA/2087/2024-25

ಕರ್ನಾಟಕ ಗೃಹ ಮಂಡಳಿ

Karnataka Housing Board — Building Communities
ಗೃಹ ಆಯುಕ್ತರ ಕಛೇರಿ, ಕಾವೇರಿ ಭವನ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಪ.ಪ್ರ/2024–25 ದಿನಾಂಕ: 19–09–2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಈ ಕೆಳಕಂಡ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿರುವ ಮನೆ/ನಿವೇಶನಗಳನ್ನು ಹಂಚಿಕೆ ಮಾಡಲು **ದಿನಾಂಕ: 27.08.2024ರ** ದಿನಪತ್ರಿಕೆಗಳಲ್ಲಿ ನೀಡಿರುವ ಪ್ರಕಟಣೆಗೆ ಅನುಗುಣವಾಗಿ ನಿಗಧಿತ ಆರಂಭಿಕ ಠೇವಣಿಯೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಅರ್ಜಿದಾರರಿಗೆ ಇ–ಲಾಟರಿ ಮೂಲಕ ಸ್ವತ್ತುಗಳನ್ನು ಹಂಚಿಕೆ ಮಾಡಲು ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

ಕ್ರ.ಸಂ.	ಬಡಾವಣೆ	ತಾತ್ಕಾಲಿಕ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿ ಪ್ರಕಟಿಸುವ ದಿನಾಂಕ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ	ಅಂತಿಮ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿ ಪ್ರಕಟಿಸುವ ದಿನಾಂಕ	ಇ–ಲಾಟರಿ ನಡೆಯುವ ದಿನಾಂಕ ಮತ್ತು ಸಮಯ
1.	ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು ಚಿಕ್ಕಬಾದವಾಡಗಿ	24–09–2024	30–09–2024	03–10–2024	05–10–2024 ಬೆಳಗ್ಗೆ 11:00 ಗಂಟೆ
2.	ಬಾಗಲಕೋಟೆ ಜಿಲ್ಲೆ, ಬೀಳಗಿ	24–09–2024	30–09–2024	03–10–2024	05–10–2024 ಮಧ್ಯಾಹ್ನ 12:00 ಗಂಟೆ
3.	ವಿಜಯಪುರ ಜಿಲ್ಲೆ, ಬಬಲೇಶ್ವರ	24–09–2024	30–09–2024	03–10–2024	05–10–2024 ಮಧ್ಯಾಹ್ನ 01:00 ಗಂಟೆ
4.	ವಿಜಯಪುರ ಜಿಲ್ಲೆ, ಮಹಲ್‌ಬಗಾಯತ್	24–09–2024	30–09–2024	03–10–2024	05–10–2024 ಮಧ್ಯಾಹ್ನ 03:00 ಗಂಟೆ
5.	ವಿಜಯಪುರ ಜಿಲ್ಲೆ, ಮುದ್ದೇಬಿಹಾಳ 2ನೇ ಹಂತ	24–09–2024	30–09–2024	03–10–2024	05–10–2024 ಸಂಜೆ 04:00 ಗಂಟೆ
6.	ಚಿಕ್ಕಮಗಳೂರು ಜಿಲ್ಲೆ, ಕಡೂರು	24–09–2024	30–09–2024	03–10–2024	07–10–2024 ಬೆಳಗ್ಗೆ 11:00 ಗಂಟೆ
7.	ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಅನಂತನಹಳ್ಳಿ & ಮೆಳ್ಳೆಕಟ್ಟೆ	24–09–2024	30–09–2024	03–10–2024	07–10–2024 ಮಧ್ಯಾಹ್ನ 12:00 ಗಂಟೆ
8.	ದಾವಣಗೆರೆ ಜಿಲ್ಲೆ, ಕುಂದುವಾಡ–ದಾವಣಗೆರೆ	24–09–2024	30–09–2024	03–10–2024	07–10–2024 ಮಧ್ಯಾಹ್ನ 01:00 ಗಂಟೆ
9.	ಕಲಬುರಗಿ ಜಿಲ್ಲೆ, ಕಾಳಗನೂರು ಕುಸನೂರು 1ನೇ ಹಂತ	24–09–2024	30–09–2024	03–10–2024	07–10–2024 ಮಧ್ಯಾಹ್ನ 3:00 ಗಂಟೆ
10.	ಕಲಬುರಗಿ ಜಿಲ್ಲೆ, ಚಿಂಚೋಳ್ಳಿ ಸರ್ವೆ ನಂ. 155/5, 155/7	24–09–2024	30–09–2024	03–10–2024	07–10–2024 ಸಂಜೆ 4:00 ಗಂಟೆ
11.	ಬೆಳಗಾವಿ ಜಿಲ್ಲೆ, ಬಸವನಕುಡಚಿ 1ನೇ ಹಂತ	24–09–2024	30–09–2024	03–10–2024	08–10–2024 ಬೆಳಗ್ಗೆ 11–00 ಗಂಟೆ
12.	ಬೆಳಗಾವಿ ಜಿಲ್ಲೆ, ಬಸವನಕುಡಚಿ 2ನೇ ಹಂತ	24–09–2024	30–09–2024	03–10–2024	08–10–2024 ಮಧ್ಯಾಹ್ನ 12:00 ಗಂಟೆ
13.	ಬೀದರ್ ಜಿಲ್ಲೆ, ಔರಾದ್	24–09–2024	30–09–2024	03–10–2024	08–10–2024 ಮಧ್ಯಾಹ್ನ 03:00 ಗಂಟೆ
14.	ದಕ್ಷಿಣ ಕನ್ನಡ ಜಿಲ್ಲೆ, ಅಮ್ಟಾಡಿ–ಬಂಟ್ವಾಳ	24–09–2024	30–09–2024	03–10–2024	08–10–2024 ಸಂಜೆ: 04:00 ಗಂಟೆ
15.	ಯಾದಗಿರಿ ಜಿಲ್ಲೆ, ಎಂ. ಹೊಸಹಳ್ಳಿ	24–09–2024	30–09–2024	03–10–2024	09–10–2024 ಬೆಳಗ್ಗೆ 11:00 ಗಂಟೆ
16.	ಯಾದಗಿರಿ ಜಿಲ್ಲೆ, ಸುರಪುರ 2ನೇ ಹಂತ (ಕವಡಿಮಟ್ಟಿ)	24–09–2024	30–09–2024	03–10–2024	09–10–2024 ಮಧ್ಯಾಹ್ನ 12:00 ಗಂಟೆ
17.	ರಾಯಚೂರು ಜಿಲ್ಲೆ, ಮಾನ್ವಿ 2ನೇ ಹಂತ	24–09–2024	30–09–2024	03–10–2024	09–10–2024 ಮಧ್ಯಾಹ್ನ 01:00 ಗಂಟೆ
18.	ಧಾರವಾಡ ಜಿಲ್ಲೆ, ಹಿರೇಮಲ್ಲಿಗೆವಾಡ	24–09–2024	30–09–2024	03–10–2024	09–10–2024 ಮಧ್ಯಾಹ್ನ 03:00 ಗಂಟೆ

ಇ–ಲಾಟರಿ ನಡೆಯುವ ಸ್ಥಳ: ಮಂಡಳಿಯ ಸಭಾಂಗಣ, ಕೇಂದ್ರ ಕಛೇರಿ, ಕಾವೇರಿ ಭವನ, 4ನೇ ಮಹಡಿ, ಕೆ.ಜಿ ರಸ್ತೆ, ಬೆಂಗಳೂರು–9.

ವಿಶೇಷ ಸೂಚನೆ: ತಾತ್ಕಾಲಿಕ ಮತ್ತು ಅಂತಿಮ ಅರ್ಹ/ಅನರ್ಹ ಅರ್ಜಿದಾರರ ವಿವರಗಳನ್ನು ಮಂಡಳಿಯ ವೆಬ್‌ಸೈಟ್ **https://www.khb.karnataka.gov.in** ಹಾಗೂ ಕೇಂದ್ರ ಕಛೇರಿಯ ಮತ್ತು ಆಯಾ ಜಿಲ್ಲಾ ಯೋಜನಾ ಕಛೇರಿಗಳ ಸೂಚನಾ ಫಲಕಗಳಲ್ಲಿ ಮೇಲೆ ತಿಳಿಸಿರುವ ದಿನಾಂಕಗಳಂದು ಪ್ರಕಟಿಸಲಾಗುವುದು.

ಅನರ್ಹ ಅರ್ಜಿದಾರರು ಆಕ್ಷೇಪಣೆ ಸಲ್ಲಿಸಲು ತಿಳಿಸಿರುವ ಕೊನೆಯ ದಿನಾಂಕದೊಳಗೆ ಮಾಹಿತಿ/ದಾಖಲೆಗಳನ್ನು ಸಂಬಂಧಿಸಿದ ಜಿಲ್ಲಾ ಯೋಜನಾ ಕಛೇರಿಗಳಲ್ಲಿ ಅಥವಾ ಕೇಂದ್ರ ಕಛೇರಿ, ಹಂಚಿಕೆ ಶಾಖೆ, ಕಾವೇರಿ ಭವನ, ಬೆಂಗಳೂರು–9 ಇಲ್ಲಿ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ವಿವರಗಳಿಗಾಗಿ ಮಂಡಳಿ **ವೆಬ್‌ಸೈಟ್** ಅನ್ನು ಸಂಪರ್ಕಿಸುವುದು.

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/RO2094/AAPL/2024-25

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಅಧೀನಕ್ಕೊಳಪಟ್ಟಿದೆ)
‘ಕೌಶಲ್ಯ ಭವನ’, ಡೈರಿ ಸರ್ಕಲ್ ಹತ್ತಿರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–29.
ದೂರವಾಣಿ: 080–29522222 ಇ–ಮೇಲ್: eoi_rfp@kaushalkar.com

No: KSDC/ADM/MANPOWER, CALL-2/CR-08/2024-25 ದಿನಾಂಕ: 20.09.2024

ಇ–ಟೆಂಡರ್ ಅಧಿಸೂಚನೆ

ಕರ್ನಾಟಕ ವೃತ್ತಿ ತರಬೇತಿ ಮತ್ತಿ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ Procurement of Manpower Services in Karnataka Vocational Training and Skill Development Corporation (KSDC) ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಮತ್ತು ನೊಂದಾಯಿತ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಟೆಂಡರ್ ದಾಖಲೆಯ ಶೀರ್ಷಿಕೆ “Procurement of Manpower Services of Karnataka Vocational Training and Skill Development Corporation (KSDC)” ಟೆಂಡರ್ ದಾಖಲೆಯ ಸಂಖ್ಯೆ **KSDC/ADM/MAN POWER CALL-2/ CR-08/2024-25** ದಾಖಲೆ ಡೌನ್‌ಲೋಡ್ ಮಾಡಲು ಲಭ್ಯವಾಗುವ ದಿನಾಂಕ: **21/09/2024** ಪ್ರಸ್ತಾವನೆ ಸಲ್ಲಿಸಲು ಕೊನೆಯ ದಿನಾಂಕ: **05/10/2024**. ಇ–ಟೆಂಡರ್ ಅಧಿಸೂಚನೆಯ ದಾಖಲೆಗಳನ್ನು ಟೆಂಡರ್ ಸಂಸ್ಕರಣ ಶುಲ್ಕಗಳು, ಇಎಂಡಿ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಮತ್ತು ಸಹಾಯವಾಣಿ ಸಂಖ್ಯೆ +91–8046010000 / +91–8068948777 ಅಥವಾ ಕೆಲಸದ ಸಮಯದಲ್ಲಿ ನೀವು ಈ ಕಛೇರಿಯನ್ನು ಸಹ ಸಂಪರ್ಕಿಸಬಹುದು.

ಸಹಿ/–
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹಾಗೂ
ಕಾರ್ಯನಿರ್ವಾಹಕ ನಿರ್ದೇಶಕರು
ಕೆ.ಎಸ್.ಡಿ.ಸಿ., ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/2096/ಆಕಾರ್/2024–25

ಸಮಾಜ ಕಲ್ಯಾಣ ಇಲಾಖೆ
ಜಂಟಿ ನಿರ್ದೇಶಕರ ಕಾರ್ಯಾಲಯ, ಧಾರವಾಡ

ಕಚೇರಿ ದೂರವಾಣಿ ಸಂಖ್ಯೆ:0836–2447201 Email:dswo.dharwad@gmail.com

ಸಂ:ಜಂನಿ/ಸಕಇ–ಧಾ/ಎಸ್–2/ಹೊ.ಗು.ಸಿ.ಟೆಂ/ಸಿಆರ್–3/2024–25/2ನೇ ಕರೆ ದಿನಾಂಕ:20–09–2024

2ನೇ ಕರೆಯ ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ವಿಷಯ: 2024–25ನೇ ಸಾಲಿಗೆ ಧಾರವಾಡ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿ ಕಾವಲುಗಾರರ ಖಾಲಿ ಇರುವ ಗ್ರೂಪ್–ಡಿ ಹುದ್ದೆಗಳಿಗೆ, ಇಲಾಖೆಯ ಕಛೇರಿಗಳಲ್ಲಿ ಕಾರ್ಯನಿರ್ವಹಿಸಲು ಖಾಲಿ ಇರುವ ಗ್ರೂಪ್–‘ಡಿ’ ಹುದ್ದೆಯ ಜವಾನರು ಹಾಗೂ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಮತ್ತು ನಿರಾಶ್ರಿತರ ಪರಿಹಾರ ಕೇಂದ್ರ ಇಲ್ಲಿ ಕಾರ್ಯನಿರ್ವಹಿಸಲು ಸ್ಟಾಫ್‌ನರ್ಸ್, ಪ್ರ.ದ.ಸ., ಟೈಪಿಸ್ಟ್, ವಾಹನ ಚಾಲಕರು, ಹೆಡ್‌ವಾರ್ಡರ್, ವಾರ್ಡರ್, ಅಡುಗೆಯವರು, ಕ್ಷೌರಿಕ, ಸ್ವೀಪರ್, ರಾತ್ರಿ ಕಾವಲುಗಾರರ ಹುದ್ದೆಗಳನ್ನು ಹೊರಸಂಪನ್ಮೂಲ ಏಜೆನ್ಸಿ ಮೂಲಕ ಪಡೆಯಲು ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸುವ ಕುರಿತು.

ವಿಷಯಕ್ಕೆ ಸಂಬಂಧಿಸಿದಂತೆ 2024–25ನೇ ಸಾಲಿಗೆ ಧಾರವಾಡ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿ ಕಾವಲುಗಾರರ ಖಾಲಿ ಇರುವ ಗ್ರೂಪ್–‘ಡಿ’ ಹುದ್ದೆಗಳಿಗೆ, ಇಲಾಖೆಯ ಕಛೇರಿಗಳಲ್ಲಿ ಕಾರ್ಯನಿರ್ವಹಿಸಲು ಖಾಲಿ ಇರುವ ಗ್ರೂಪ್–‘ಡಿ’ ಹುದ್ದೆಯ ಜವಾನರು ಹಾಗೂ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಮತ್ತು ನಿರಾಶ್ರಿತರ ಪರಿಹಾರ ಕೇಂದ್ರ ಇಲ್ಲಿ ಕಾರ್ಯನಿರ್ವಹಿಸಲು ಸ್ಟಾಫ್‌ನರ್ಸ್, ಪ್ರ.ದ.ಸ., ಟೈಪಿಸ್ಟ್, ವಾಹನ ಚಾಲಕರು, ಹೆಡ್‌ವಾರ್ಡರ್, ವಾರ್ಡರ್, ಅಡುಗೆಯವರು, ಕ್ಷೌರಿಕ, ಸ್ವೀಪರ್, ರಾತ್ರಿ ಕಾವಲುಗಾರರ ಹುದ್ದೆಗಳಿಗೆ ಹೊರಸಂಪನ್ಮೂಲ ಸಿಬ್ಬಂದಿಯವರುಗಳನ್ನು ಹೊರಸಂಪನ್ಮೂಲ ಏಜೆನ್ಸಿ ಮೂಲಕ ಸೇವೆ ಪಡೆಯಲು ಕರ್ನಾಟಕ ಪಾರದರ್ಶಕ **(KTPP)**ಅಧಿನಿಯಮ 1999 ಮತ್ತು 2000 ನಿಯಮಗಳ ಪ್ರಕಾರ ಅಲ್ಪಾವಧಿ ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಿದ ಅರ್ಹ ಹಾಗೂ ಅಂಗೀಕೃತ ಏಜೆನ್ಸಿಗಳು ಅಲ್ಪಾವಧಿ ಇ–ಟೆಂಡರಿನಲ್ಲಿ ಭಾಗವಹಿಸಬಹುದು. ಇ–ಟೆಂಡರ್ ಪ್ರಕ್ರಿಯೆ ವಿವರ ಈ ಕೆಳಗಿನಂತಿದೆ.

1	ಇ–ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ	ಸಂ:ಜಂನಿ/ಸಕಇ–ಧಾ/ಎಸ್–2/ಹೊ.ಗು.ಸಿ.ಟೆಂ/ಸಿಆರ್–3/2024–25 /2ನೇ ಕರೆ ದಿನಾಂಕ:20–09–2024
2	ಇ–ಟೆಂಡರ್‌ಗೆ ಇಟ್ಟ ಮೊತ್ತ	**ರೂ. 6,97,05,900/–**
3	ಟೆಂಡರ್‌ದಾರರು ಆನ್ ಲೈನ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸಲು ಪ್ರಾರಂಭಿಸುವ ದಿನಾಂಕ	**ದಿ: 20–09–2024**
4	ಟೆಂಡರ್‌ದಾರರು ಆನ್ ಲೈನ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	**ದಿ:30–09–2024, ಸಮಯ: 17:30 ಗಂಟೆ ವರೆಗೆ**
5	ಇ–ಟೆಂಡರ್ ಪೂರ್ವಭಾವಿ ಸಭೆ ದಿನಾಂಕ, ಸಮಯ ಮತ್ತು ಸ್ಥಳ	ದಿ:24–09–2024/2022ಸಮಯ: 11:30 ಗಂಟೆಗೆ ಸ್ಥಳ: ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಧಾರವಾಡ.
6	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ, ಸಮಯ ಮತ್ತು ಸ್ಥಳ	ದಿ:01–10–2024 ಸಮಯ: ಬೆಳಗ್ಗೆ 11:30 ಗಂಟೆಗೆ ಸ್ಥಳ: ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಧಾರವಾಡ (ಬದಲಾವಣೆಗೊಳಪಟ್ಟಂತೆ)
7	ಆರ್ಥಿಕ ಬಿಡ್ ದಿನಾಂಕ, ಸಮಯ ಮತ್ತು ಸ್ಥಳ	ದಿ:03–10–2024ಸಮಯ: ಬೆಳಗ್ಗೆ 11:30 ಗಂಟೆಗೆ ಸ್ಥಳ: ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಧಾರವಾಡ (ಬದಲಾವಣೆಗೊಳಪಟ್ಟಂತೆ)
8	ಟೆಂಡರ್‌ದೊಂದಿಗೆ E-procurement cell ಇವರಿಗೆ ಪಾವತಿಸಬೇಕಾದ ಮೊತ್ತ (EMD)	**ರೂ.10,45,589/–**
9	ಟೆಂಡರ್ ಬಗ್ಗೆ ಮಾಹಿತಿ ಪಡೆಯಬೇಕಾದಲ್ಲಿ ಸಂಪರ್ಕಿಸಬೇಕಾದ ಅಧಿಕಾರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆ	ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಡಿ.ಸಿ ಕಂಪೌಂಡ್, ಧಾರವಾಡ – 580001,ಫೋನ್ ನಂ–0836–2447201 email ID-dswo.dharwad@gmail.com
10	ಇ-Tender ಬಗ್ಗೆ ಟೆಕ್ನಿಕಲ್ ಮಾಹಿತಿಗಾಗಿ ಸಂಪರ್ಕಿಸಬಹುದಾದ ವೆಬ್‌ಸೈಟ್ ವಿಳಾಸ.	http://eproc.karnataka.govt.in

ಸಹಿ/– ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ,ಧಾರವಾಡ.

ವಾ.ಸಾ.ಇ/ಧಾರವಾಡ/406/ದೇಶಪಾಂಡೆಪಬ್ಲಿಸಿಟಿ/2024–25

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಅಲ್ಪಸಂಖ್ಯಾತರ ನಿರ್ದೇಶನಾಲಯ,
ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ, ಮಿಲ್ಲರ್ ಟ್ಯಾಂಕ್ ರಸ್ತೆ, ವಸಂತನಗರ, ಬೆಂಗಳೂರು–560052.

Website: https://dom.karnataka.gov.in

ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ

2024–25ನೇ ಸಾಲಿನ B.Sc NURSING & GNM NURSING COURSES ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕ ರಾಜ್ಯದ ಅರ್ಹ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಪ್ರೋತ್ಸಾಹಧನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆನ್‌ಲೈನ್ ಅರ್ಜಿ

2024–25ನೇ ಸಾಲಿಗೆ B.Sc Nursing and GNM Nursing Course ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ನೀಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಮಯಾವಕಾಶ

ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 10.11.2024.

ಅರ್ಹತೆಗಳು

- ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ವಿದ್ಯಾರ್ಥಿಗಳು ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಜನಾಂಗಕ್ಕೆ ಸೇರಿದವರಾಗಿರಬೇಕು.
- ಕೋರ್ಸ್‌ನ ಅವಧಿ – ಪೂರ್ಣಾವಧಿ.
- ವಿದ್ಯಾರ್ಥಿಯ ಕುಟುಂಬದ ಒಟ್ಟು ವಾರ್ಷಿಕ ಆದಾಯ ರೂ.2.50 ಲಕ್ಷ ಮೀರಿರಬಾರದು.
- ವಿದ್ಯಾರ್ಥಿಗಳನ್ನು ಅನುದಾನದ ಲಭ್ಯತೆಯನುಸಾರ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.
- ವಿದ್ಯಾರ್ಥಿಗಳು ಸದರಿ ಯೋಜನೆಯಡಿ ಉತ್ತೇಜನ ಮೊತ್ತವನ್ನು ಪಡೆಯಲು ಪ್ರತಿ ಶೈಕ್ಷಣಿಕ ವರ್ಷದಲ್ಲಿ ಹೊಸ (Fresh) ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಅರ್ಜಿದಾರರಿಗೆ ಸೂಚನೆಗಳು

- ವಿದ್ಯಾರ್ಥಿಗಳು https://sevasindhu.karnataka.gov.in/Sevasindhu/DepartmentServices ಈ ಲಿಂಕ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.
- ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಯೊಂದಿಗೆ ಆಧಾರ್ ಸೀಡಿಂಗ್ ಹಾಗೂ NPCI Mapping ಆಗಿರುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.

ಅರ್ಜಿಗಳನ್ನು ಸಲ್ಲಿಸುವ ವಿಧಾನ ಮತ್ತು ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ಜಾಲತಾಣ: https://dom.karnataka.gov.in ಅನ್ನು ವೀಕ್ಷಿಸಿ ಹಾಗೂ ಹತ್ತಿರದ ಜಿಲ್ಲಾ ಮತ್ತು ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಸಂಪರ್ಕಿಸಬಹುದಾಗಿದೆ.

ದಿನಾಂಕ : 20.09.2024
ಸ್ಥಳ : ಬೆಂಗಳೂರು

ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ,
ಬೆಂಗಳೂರು

ವಾಸಾಸಂಇ/ವಾಪ್ರ/2090/ಎಂಎಎ/24–25

❦ ಸುಭಾಷಿತ ❦

ಬದುಕಿನ ಗದ್ದಲ ಹೆಚ್ಚಾಗಿದ್ದಾಗ ಬಹಳಷ್ಟು ಜನರಿಗೆ ಸಾವಿನ ಸವಾಲು ಕೇಳಿಸುವುದಿಲ್ಲ.

–ಗೋಪಾಲಕೃಷ್ಣ ಅಡಿಗ

ಒಂದು ರಾಷ್ಟ್ರ, ಒಂದು ಚುನಾವಣೆ ಕಾರ್ಯಸಾಧುವಲ್ಲ, ಬಾಧಕವೇ ಹೆಚ್ಚು

‘ಒಂದು ದೇಶ, ಒಂದು ಚುನಾವಣೆ’ ವ್ಯವಸ್ಥೆಯ ಬಗ್ಗೆ ರಾಮನಾಥ ಕೋವಿಂದ್ ನೇತೃತ್ವದ ಸಮಿತಿ ನೀಡಿದ್ದ ಶಿಫಾರಸುಗಳನ್ನು ಕೇಂದ್ರ ಸಚಿವ ಸಂಪುಟ ಒಪ್ಪಿಕೊಂಡಿದೆ. ಅಂದರೆ, ಈ ವ್ಯವಸ್ಥೆಯನ್ನು ಜಾರಿಗೆ ತರುವ ಪ್ರಸ್ತಾವವನ್ನು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಅಧಿಕೃತವಾಗಿ ಅನುಮೋದಿಸಿದಂತೆ ಆಗಿದೆ. ಕೇಂದ್ರ ಸರ್ಕಾರ ಹಾಗೂ ಬಿಜೆಪಿಯು ಈ ವ್ಯವಸ್ಥೆಯ ಪರವಾಗಿ ಈಚೆಗೆ ಹಲವು ವರ್ಷಗಳಿಂದ ಮಾತನಾಡುತ್ತ ಬಂದಿವೆ. ಈಗ ಈ ವ್ಯವಸ್ಥೆಯನ್ನು ಜಾರಿಗೆ ತರಲು ನೀಲನಕ್ಷೆಯೊಂದು ಸಿದ್ಧವಾಗಿದೆ. ಈ ಸಮಿತಿಯು ಕೇಂದ್ರ ಸರ್ಕಾರ ಹೇಳಿದ್ದನ್ನು ಮಾತ್ರ ಮಾಡಲು ಸಾಧ್ಯವಿತ್ತು. ಈ ಸಮಿತಿಗೆ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದ್ದವರನ್ನು ನೇಮಕ ಮಾಡುವ ಮೂಲಕ ಶಿಫಾರಸುಗಳಿಗೆ ಹೆಚ್ಚಿನ ವಿಶ್ವಾಸಾರ್ಹತೆ ತಂದುಕೊಡುವ ಯತ್ನವನ್ನು ಮಾಡಲಾಯಿತು. ಮೊದಲ ಹಂತವಾಗಿ, ಲೋಕಸಭೆ ಹಾಗೂ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಬೇಕು ಎಂದು ಸಮಿತಿಯು ಶಿಫಾರಸು ಮಾಡಿದೆ. ಮುಂದಿನ ಹಂತದಲ್ಲಿ, ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯಿತಿಗಳಿಗೆ 100 ದಿನಗಳ ಒಳಗಾಗಿ ಚುನಾವಣೆ ನಡೆಸಬೇಕು ಎಂದು ಅದು ಹೇಳಿದೆ. ಇಡೀ ಪರಿಕಲ್ಪನೆಯ ಅನುಷ್ಠಾನಕ್ಕೆ ಪ್ರಕ್ರಿಯೆಗಳನ್ನು ಹಾಗೂ ಮಾರ್ಗವನ್ನು ಸಮಿತಿಯು ತೋರಿಸಿಕೊಟ್ಟಿದೆ. ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಲು ಸಂವಿಧಾನಕ್ಕೆ ಕನಿಷ್ಠ 18 ತಿದ್ದುಪಡಿಗಳನ್ನು ತರಬೇಕು ಎಂದು ಅದು ಹೇಳಿದೆ.

ಈ ವ್ಯವಸ್ಥೆಯು ದೇಶದ ವೈವಿಧ್ಯಮಯ ರಾಜಕೀಯ ಸನ್ನಿವೇಶ, ಸಮಾಜದಲ್ಲಿನ ವೈವಿಧ್ಯ ಹಾಗೂ ದೇಶದ ಜನಜೀವನದಲ್ಲಿನ ವೈವಿಧ್ಯಕ್ಕೆ ವಿರುದ್ಧವಾಗಿದೆ

‘ಒಂದು ರಾಷ್ಟ್ರ, ಒಂದು ಚುನಾವಣೆ’ ವಿಚಾರವು ಬಹಳ ವರ್ಷಗಳಿಂದ ಚರ್ಚೆಯಲ್ಲಿದೆ. ಆದರೆ ಈ ಪ್ರಸ್ತಾವಕ್ಕೆ ಬಿಜೆಪಿ ಹೊರತುಪಡಿಸಿ, ಇತರ ಪ್ರಬಲ ರಾಜಕೀಯ ಪಕ್ಷಗಳ ಪೈಕಿ ಹೆಚ್ಚಿನ ಪಕ್ಷಗಳ ಬೆಂಬಲ ಇಲ್ಲ. ಇಲ್ಲಿರುವುದು ಒಂದೇ ಬಗೆಯ ರಾಜಕಾರಣ, ದೇಶದ ಉದ್ದಗಲಕ್ಕೂ ಪ್ರಜಾತಾಂತ್ರಿಕ ಚುನಾವಣಾ ಪ್ರಕ್ರಿಯೆಯು ಒಂದೇ ಬಗೆಯಲ್ಲಿ ಇರುತ್ತದೆ ಎಂಬ ನಂಬಿಕೆಯು ಬಿಜೆಪಿಯಲ್ಲಿ ಇರುವಂತೆ ಕಾಣುತ್ತಿದೆ. ಆ ನಂಬಿಕೆಯ ಕಾರಣದಿಂದಾಗಿ ಬಿಜೆಪಿಯು ಈ ವ್ಯವಸ್ಥೆಯ ಪರವಾಗಿ ಇರುವಂತಿದೆ. ಆದರೆ ಈ ವ್ಯವಸ್ಥೆಯು ದೇಶದ ವೈವಿಧ್ಯಮಯ ರಾಜಕೀಯ ಸನ್ನಿವೇಶ, ಸಮಾಜದಲ್ಲಿನ ವೈವಿಧ್ಯ ಹಾಗೂ ದೇಶದ ಜನಜೀವನದಲ್ಲಿನ ವೈವಿಧ್ಯಕ್ಕೆ ವಿರುದ್ಧವಾಗಿದೆ. ಅಷ್ಟೇ ಅಲ್ಲದೆ, ಈ ವ್ಯವಸ್ಥೆಯು ದೇಶದ ಒಕ್ಕೂಟ ಸ್ವರೂಪಕ್ಕೆ ವಿರುದ್ಧವಾಗಿಯೂ ಇದೆ. ಈ ವ್ಯವಸ್ಥೆಯು ರಾಷ್ಟ್ರೀಯ ಪಕ್ಷಗಳಿಗೆ ಹೆಚ್ಚಿನ ಅನುಕೂಲವನ್ನು ಕಲ್ಪಿಸುತ್ತದೆ. ಹೊಸ ವ್ಯವಸ್ಥೆಯು ಜಾರಿಗೆ ಬಂದರೆ, ರಾಜ್ಯ ಮತ್ತು ಪ್ರಾದೇಶಿಕ ವಿಚಾರಗಳಿಗಿಂತಲೂ ಹೆಚ್ಚಾಗಿ ಚುನಾವಣೆಗಳಲ್ಲಿ ರಾಷ್ಟ್ರೀಯ ವಿಚಾರಗಳಿಗೆ ಸಂಬಂಧಿಸಿದ ಅಬ್ಬರದ ಮಾತುಗಳಿಗೇ ಪ್ರಾಧಾನ್ಯ ಸಿಗುವಂತೆ ಆಗುತ್ತದೆ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಆರಂಭದ ವರ್ಷಗಳಲ್ಲಿ ಲೋಕಸಭೆ ಹಾಗೂ ವಿಧಾನಸಭೆಗಳಿಗೆ ಚುನಾವಣೆಗಳು ಏಕಕಾಲದಲ್ಲಿ ನಡೆದವು. ಅದಾದ ನಂತರದಲ್ಲಿ ದೇಶದ ರಾಜಕಾರಣವು ಬಹಳಷ್ಟು ವಿಕಾಸ ಹೊಂದಿದೆ. ಈ ವಿಕಾಸವು ಬಹಳ ಸಹಜವಾದುದು. ಮನಸ್ಸಿಗೆ ತೋಚಿದಂತೆ ಮಾನದಂಡವೊಂದನ್ನು ರೂಪಿಸಿಕೊಂಡು, ದೇಶವು ಈ ಮಾನದಂಡಕ್ಕೆ ಹೊಂದಿಕೊಳ್ಳಬೇಕು ಎಂಬ ಒತ್ತಡವನ್ನು ಸೃಷ್ಟಿಸಿ, ಸಹಜವಾಗಿ ಆಗಿರುವ ವಿಕಾಸವನ್ನು ಕೃತಕವಾಗಿ ಹಿಂದಕ್ಕೊಯ್ಯುವ ಕೆಲಸ ಮಾಡಬಾರದು. ಭಾರತವು ರಾಜ್ಯಗಳ ಒಂದು ಒಕ್ಕೂಟ. ಇಲ್ಲಿನ ಜನರಿಗೆ ತಮ್ಮ ರಾಜಕೀಯ ಆಯ್ಕೆಗಳನ್ನು ನಿರ್ಧರಿಸಲು ಸ್ವಾತಂತ್ರ್ಯ ಇರಬೇಕು.

‘ಒಂದು ರಾಷ್ಟ್ರ, ಒಂದು ಚುನಾವಣೆ’ ವ್ಯವಸ್ಥೆಯು ಜಾರಿಗೆ ಬಂದರೆ ದೇಶದ ಬೊಕ್ಕಸದ ಮೇಲಿನ ಚುನಾವಣಾ ವೆಚ್ಚಗಳು ತಗ್ಗುತ್ತವೆ, ರಾಜಕೀಯ ಪಕ್ಷಗಳು ಹಾಗೂ ಅಭ್ಯರ್ಥಿಗಳು ಚುನಾವಣೆಗಾಗಿ ಮಾಡುವ ವೆಚ್ಚಗಳೂ ಕಡಿಮೆ ಆಗುತ್ತವೆ ಎಂಬ ವಾದವೊಂದನ್ನು ಜನರ ಮುಂದಿಡಲಾಗಿದೆ. ಈ ವ್ಯವಸ್ಥೆಯು ಜಾರಿಗೆ ಬಂದರೆ, ಆಡಳಿತಕ್ಕೆ ಎದುರಾಗುವ ಅಡ್ಡಿಗಳು ಕೂಡ ಕಡಿಮೆ ಆಗುತ್ತವೆ ಎಂದು ವಾದಿಸಲಾಗಿದೆ. ಆದರೆ ವಾಸ್ತವದಲ್ಲಿ, ಪ್ರಜಾತಂತ್ರವು ಬಹಳ ಅಗ್ಗವಾಗಿ ಸಿಗುವ ವಸ್ತುವಲ್ಲ. ಚುನಾವಣೆಗಳು ಏಕಕಾಲದಲ್ಲಿ ನಡೆಯಲಿ, ಬೇರೆ ಬೇರೆಯಾಗಿ ನಡೆಯಲಿ, ಆ ಸಂದರ್ಭಗಳಲ್ಲಿ ರಾಜಕೀಯ ಪಕ್ಷಗಳು ಸಂಗ್ರಹಿಸುವ ಹಾಗೂ ವೆಚ್ಚ ಮಾಡುವ ಹಣದ ಮೊತ್ತವನ್ನು ಕಡಿಮೆ ಮಾಡುವ ಯತ್ನವೊಂದು ಆಗಬೇಕಿದೆ. ವಾಸ್ತವದಲ್ಲಿ ಇದೇ ನಿಜವಾದ ಸಮಸ್ಯೆ. ಹೀಗಾಗಿ, ‘ಒಂದು ರಾಷ್ಟ್ರ, ಒಂದು ಚುನಾವಣೆ’ ವ್ಯವಸ್ಥೆಯಿಂದಾಗಿ ವೆಚ್ಚಗಳು ಕಡಿಮೆ ಆಗುತ್ತವೆ ಎಂದು ಹೇಳುವುದು ಜನರ ಗಮನವನ್ನು ಬೇರೆಡೆ ಸೆಳೆಯುವ ಒಂದು ತಂತ್ರದಂತೆ ಮಾತ್ರ ಕಾಣುತ್ತದೆ. ಹೊಸ ವ್ಯವಸ್ಥೆಯ ಬಗ್ಗೆ ಎಲ್ಲರಲ್ಲಿ ಸಹಮತ ಮೂಡಿಸುವ ಉದ್ದೇಶ ತನ್ನದು ಎಂದು ಕೇಂದ್ರ ಸರ್ಕಾರ ಹೇಳಿದೆ. ಆದರೆ ಸರ್ಕಾರದ ಮಾತುಗಳಲ್ಲಿ ಪ್ರಾಮಾಣಿಕತೆ ಕಾಣುತ್ತಿಲ್ಲ. ವಿರೋಧ ಪಕ್ಷಗಳು ತಮ್ಮ ಕಳವಳವನ್ನು ಸ್ಪಷ್ಟವಾಗಿ ತಿಳಿಸಿವೆ, ಕೋವಿಂದ್ ನೇತೃತ್ವದ ಸಮಿತಿಗೂ ಅವು ತಮ್ಮ ಕಳವಳಗಳನ್ನು ಹೇಳಿವೆ. ಹೀಗಿದ್ದರೂ ಸಮಿತಿಯು ತನ್ನ ಪೂರ್ವನಿರ್ಧರಿತ ಶಿಫಾರಸುಗಳನ್ನು ಸರ್ಕಾರಕ್ಕೆ ನೀಡಿದೆ, ಸರ್ಕಾರವು ಆ ಶಿಫಾರಸುಗಳನ್ನು ಒಪ್ಪಿಕೊಂಡಿದೆ. ದೇಶದ ರಾಜಕೀಯ ವ್ಯವಸ್ಥೆಯು ಮುಂದಕ್ಕೆ ಸಾಗುವಂತೆ ಮಾಡಬೇಕಿರುವುದು ಇಲ್ಲಿನ ರಾಜಕೀಯ ಪಕ್ಷಗಳು. ಹೆಚ್ಚಿನ ಸಂಖ್ಯೆಯ ರಾಜಕೀಯ ಪಕ್ಷಗಳಿಗೆ ಒಂದು ರಾಷ್ಟ್ರ ಒಂದು ಚುನಾವಣೆ ವ್ಯವಸ್ಥೆ ಬೇಕಾಗಿಲ್ಲ ಎಂದಾದರೆ, ಅದು ಜಾರಿಗೆ ಬರಲು ಸಾಧ್ಯವಿಲ್ಲ. ಈಗಿನ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಈ ವ್ಯವಸ್ಥೆಯನ್ನು ಜಾರಿಗೆ ತರಲು ಅಗತ್ಯವಿರುವ ಸಂವಿಧಾನ ತಿದ್ದುಪಡಿಗಳಿಗೆ ಸಂಸತ್ತಿನ ಅಂಗೀಕಾರ ಪಡೆದುಕೊಳ್ಳುವ ಸಾಧ್ಯತೆಯೂ ಕಡಿಮೆ ಇದೆ.

ದಿನದ ಟ್ವೀಟ್

ಆಹಾರ ಸುರಕ್ಷತೆ ಎಲ್ಲರ ಆದ್ಯತೆಯಾಗಲಿ

ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ರಾಷ್ಟ್ರೀಯ ಆಹಾರ ಸುರಕ್ಷತಾ ಸೂಚ್ಯಂಕದಲ್ಲಿ ಕೇರಳವು ಸತತ ಎರಡನೇ ವರ್ಷವೂ ಮೊದಲ ಸ್ಥಾನ ಪಡೆದುಕೊಂಡಿದೆ. ಜಾಗೃತಿ ಮೂಡಿಸುವುದು, ತರಬೇತಿ, ಮೇಲ್ವಿಚಾರಣೆ, ಪರೀಕ್ಷೆಗೆ ಒಳಪಡಿಸುವುದು ಮತ್ತು ಕಾನೂನು ಕ್ರಮ ಸೇರಿದಂತೆ 40ಕ್ಕೂ ಹೆಚ್ಚು ವಿಷಯಗಳಲ್ಲಿ ತೋರುವ ಸಾಧನೆಯನ್ನು ಪರಿಗಣಿಸಿ ಈ ಸೂಚ್ಯಂಕವನ್ನು ನಿರ್ಧರಿಸಲಾಗುತ್ತದೆ.

ಥಾಮಸ್ ಐಸಾಕ್, ಸಿಪಿಎಂ ಕೇಂದ್ರ ಸಮಿತಿ ಸದಸ್ಯ

ಕಿಡಿನುಡಿ

ಪ್ರಿಯ ಪವನ್ ಕಲ್ಯಾಣ್, ನೀವು ಉಪಮುಖ್ಯಮಂತ್ರಿಯಾಗಿರುವ ರಾಜ್ಯದಲ್ಲಿ ಇದು ಘಟಿಸಿದೆ. ದಯಮಾಡಿ ತನಿಖೆ ನಡೆಸಿ... ತಪ್ಪಿತಸ್ಥರನ್ನು ಕಂಡುಹಿಡಿದು ಕಠಿಣ ಶಿಕ್ಷೆ ವಿಧಿಸಿ. ಆತಂಕ ವ್ಯಾಪಿಸುವಂತೆ ಮತ್ತು ರಾಷ್ಟ್ರ ಮಟ್ಟದಲ್ಲಿ ಈ ವಿಷಯ ಸ್ಫೋಟಿಸುವಂತೆ ಯಾಕೆ ಮಾಡುತ್ತಿದ್ದೀರಿ... ದೇಶದಲ್ಲಿ ಈಗಾಗಲೇ ಇರುವ ಕೋಮು ಸಂಬಂಧಿ ಆತಂಕವೇ ನಮಗೆ ಸಾಕಾಗಿದೆ...

(‘ತಿರುಮಲ ತಿರುಪತಿ ದೇವಸ್ಥಾನದ ಲಡ್ಡು ತಯಾರಿಕೆಯಲ್ಲಿ ಆಂಧ್ರಪ್ರದೇಶದ ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಪ್ರಾಣಿಗಳ ಕೊಬ್ಬು ಬಳಕೆಯಾಗಿದೆ ಎಂಬುದು ನಮ್ಮನ್ನು ವಿಚಲಿತರನ್ನಾಗಿಸಿದೆ’ ಎಂಬ ಪವನ್ ಕಲ್ಯಾಣ್ ಅವರ ಹೇಳಿಕೆಗೆ ಪ್ರತಿಕ್ರಿಯೆ)

ಪ್ರಕಾಶ್ ರಾಜ್, ಚಲನಚಿತ್ರನಟ

25 ವರ್ಷಗಳ ಹಿಂದೆ

ಮಂಗಳವಾರ, 21-9-1999

● ನಕಲಿ ಮತಪತ್ರ ವಿವಾದ ಸಚಿವ ಜಾರ್ಜ್‌ಗೆ ಛೀಮಾರಿ

ನವದೆಹಲಿ, ಸೆ. 20 (ಯುಎನ್ಐ, ಪಿಟಿಐ)– ಬಿಹಾರದಲ್ಲಿ ನಕಲಿ ಮತಪತ್ರಗಳನ್ನು ಮುದ್ರಿಸಲಾಗಿದೆ ಎಂಬ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ಅವರ ಆರೋಪವನ್ನು ಸ್ಪಷ್ಟವಾಗಿ ತಳ್ಳಿಹಾಕಿದ ಚುನಾವಣಾ ಆಯೋಗ ‘ಇದು ಕೆಟ್ಟ ರಾಜಕೀಯ’ ಎಂದು ಛೀಮಾರಿ ಹಾಕಿದೆ.

● ಚಳ್ಳಕೆರೆ ವಿದ್ಯುತ್ ನಿಗಮದ ಕಚೇರಿಗೆ ಮುತ್ತಿಗೆ

ಚಿತ್ರದುರ್ಗ, ಸೆ. 20– ವಿದ್ಯುತ್ ಸರಬರಾಜು ಅವ್ಯವಸ್ಥೆ ಪ್ರತಿಭಟಿಸಿ ಉದ್ರಿಕ್ತ ಗುಂಪೊಂದು ಇಂದು ಮಧ್ಯಾಹ್ನ ಚಳ್ಳಕೆರೆಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಕಚೇರಿಗೆ ನುಗ್ಗಿ ಸಿಬ್ಬಂದಿಯನ್ನು ಥಳಿಸಿದೆ.

ಪೀಠೋಪಕರಣಗಳನ್ನು ಜಖಂಗೊಳಿಸಿ ಕಾಗದಪತ್ರಗಳನ್ನು ಚೆಲ್ಲಾಪಿಲ್ಲಿ ಮಾಡಿದೆ.

50 ವರ್ಷಗಳ ಹಿಂದೆ

ಶನಿವಾರ, 21-9-1974

● ರಾಜ್ಯದಲ್ಲಿ ಶೇ 30ರಷ್ಟು ಹೈಟೆನ್ಷನ್ ವಿದ್ಯುತ್ ಖೋತಾ ರದ್ದು

ಬೆಂಗಳೂರು, ಸೆ. 20– ಕಳೆದ ಮೂರು ವಾರಗಳಿಂದ ಲಿಂಗನಮಕ್ಕಿ ಜಲಾನಯನ ಪ್ರದೇಶದಲ್ಲಿ ಮಳೆಯ ದರ್ಶನವಿಲ್ಲದ ಪರಿಣಾಮವಾಗಿ, ಶೇಕಡ 30ರಷ್ಟಿರುವ ಹೈಟೆನ್ಷನ್ ವಿದ್ಯುತ್ ಖೋತಾ ಕಳೆದ ವರ್ಷದ ಮಟ್ಟಕ್ಕೆ ಇಳಿಯುವ ಸಾಧ್ಯತೆ ಸಂಪೂರ್ಣವಾಗಿ ಮಾಯವಾದಂತಾಗಿದೆ.

ಕಳೆದ ಹತ್ತರಂದು ಖೋತಾವನ್ನು ಶೇಕಡ 40ರಿಂದ 30ಕ್ಕೆ ಇಳಿಸುವಾಗ, ನೀರಿನಮಟ್ಟ ಕಳೆದ ವರ್ಷದ ಅದೇ ದಿನದ ಮಟ್ಟಕ್ಕಿಂತ ಒಂದು ಅಡಿ ಹೆಚ್ಚಾಗಿದ್ದರೆ, ಇಂದಿನ ಮಟ್ಟ ಕಳೆದ ವರ್ಷಕ್ಕಿಂತ 2.65 ಅಡಿಗಳಷ್ಟು ಕಡಿಮೆಯಾಗಿದೆ.

● ತಲೆಮರೆಸಿಕೊಂಡಿರುವ ಕಳ್ಳಸಾಗಣೆ ದೊರೆ ಯೂಸುಫ್ ಪಟೇಲ್

ಮುಂಬಯಿ, ಸೆ. 20– ರಾಷ್ಟ್ರದ ಮೂವರು ಕಳ್ಳಸಾಗಣೆ ದೊರೆಗಳಲ್ಲಿ ಒಬ್ಬನಾದ ಯೂಸುಫ್ ಪಟೇಲ್ ತಲೆತಪ್ಪಿಸಿಕೊಂಡಿರುವನೆಂದು ನಂಬಲಾಗಿದೆ.

ಇತರ ನಾಲ್ವರು ಕುಖ್ಯಾತ ಕಳ್ಳಸಾಗಣೆದಾರರು ಮತ್ತು ಅವರ ಅನೇಕ ಸಹಾಯಕರು ಮುಂಬಯಿ ಪೊಲೀಸರಿಗೆ ಬೇಕಾಗಿದ್ದು, ಈಗ ಅವರೆಲ್ಲ ತಲೆಮರೆಸಿಕೊಂಡಿರುವರೆಂದು ಅಧಿಕೃತ ಮೂಲಗಳು ಶಂಕೆ ವ್ಯಕ್ತಪಡಿಸಿವೆ.

ಸೈಬರ್ ಅಪರಾಧಗಳು ಮಹಿಳೆಯರಿಗೆ ದೊಡ್ಡ ಬೆದರಿಕೆಯಾಗಿ ಪರಿಣಮಿಸಿವೆ

ಸಿಂಪಡಿಸೋಣ ಸೈಬರ್ ‘ಕ್ರಿಮಿ’ನಾಶಕ!

ವಿಶ್ಲೇಷಣೆ

ಸಿ.ಕೆ. ಬಾಬಾ

ಬೆಂಗಳೂರು ನಗರದ ಹೊರವಲಯದ, ಆಡಳಿತಾತ್ಮಕವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ ಪ್ರದೇಶಗಳ ಮಹಿಳೆಯರು ತಮ್ಮ ದೈನಂದಿನ ಜೀವನದಲ್ಲಿ ಹಲವು ವಿರೋಧಾಭಾಸಗಳನ್ನು ಎದುರಿಸುತ್ತಿದ್ದಾರೆ. ಕ್ಷಿಪ್ರಗತಿಯಲ್ಲಿ ವಿಸ್ತರಣೆಯಾಗುತ್ತಿರುವ ನಗರವು ಒಂದು ಕಾಲದಲ್ಲಿ ಸುಂದರವಾಗಿದ್ದ ಅವರ ಗ್ರಾಮೀಣ ಜೀವನವನ್ನು ಅತಿಕ್ರಮಿಸಿದೆ. ಒಬ್ಬರನ್ನೊಬ್ಬರು ಚೆನ್ನಾಗಿ ಬಲ್ಲ, ನಿಕಟ ಸಂಬಂಧ ಹೊಂದಿದ್ದ ಸಮುದಾಯ ಅವರದ್ದಾಗಿತ್ತು. ಇಂದು, ತಂತ್ರಜ್ಞಾನವು ಜೀವನದ ಪ್ರತಿ ಆಯಾಮವನ್ನೂ ಪ್ರವೇಶಿಸಿದೆ. ನಗರೀಕರಣದ ಅಲೆಯಲ್ಲಿ ಸಿಲುಕಿರುವ ಗ್ರಾಮೀಣ ಪ್ರದೇಶಗಳು ಮತ್ತು ಮಹಿಳೆಯರು ಇದರ ಅಡ್ಡಪರಿಣಾಮಗಳನ್ನು ಎದುರಿಸುತ್ತಿದ್ದಾರೆ.

ತಂತ್ರಜ್ಞಾನವನ್ನು ಬಳಸಿಕೊಂಡು ಮಹಿಳೆಯರ ವಿರುದ್ಧ ನಡೆಯುವ ಅಪರಾಧಗಳು ಇಂತಹ ಪ್ರದೇಶಗಳಲ್ಲಿ ಪ್ರತಿದಿನ ಸಂಭವಿಸುತ್ತಿವೆ. ಆದರೆ ಸಮಾಜಕ್ಕೆ ಹೆದರಿಯೋ ಅಥವಾ ಮತ್ತಷ್ಟು ತೊಂದರೆಗೆ ಸಿಲುಕಬಹುದು ಎಂಬ ಭಯದಿಂದಲೋ ಸಂತ್ರಸ್ತರು ದೂರು ನೀಡಲು ಮುಂದೆ ಬರುವುದಿಲ್ಲ. ಮರ್ಯಾದೆಗೆ ಅಂಜಿ ಅತ್ತ ಪೊಲೀಸರಿಗೂ ದೂರು ನೀಡದೆ, ಇತ್ತ ಆಪ್ತರೊಂದಿಗೂ ಹೇಳಲಾಗದೆ ನೋವು, ಅವಮಾನ ಸಹಿಸಿಕೊಂಡು ಬದುಕು ಸಾಗಿಸುತ್ತಿದ್ದಾರೆ. ಮಹಿಳೆಯರಿಗೆ ಕಿರುಕುಳ ನೀಡುವ ಅಥವಾ ಬ್ಲ್ಯಾಕ್‌ಮೇಲ್ ಮಾಡುವ ಕೆಲಸವನ್ನು ಸಾಮಾಜಿಕ ಜಾಲತಾಣಗಳು ಇನ್ನಷ್ಟು ಸಲೀಸಾಗಿಸಿವೆ.

ಬೆಂಗಳೂರಿನ ಹೊರವಲಯ ಮತ್ತು ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಹಲವು ಪ್ರಕರಣಗಳು ವರದಿಯಾಗುತ್ತಿವೆ. ಈ ಅಪರಾಧಗಳು ಆನ್‌ಲೈನ್‌ನಲ್ಲಿ ಲೈಂಗಿಕ ಕಿರುಕುಳ ನೀಡುವುದರಿಂದ ಆರಂಭಗೊಂಡು, ಮಹಿಳೆಯರ ಫೋಟೊ ಮತ್ತು ಹೆಸರು ಬಳಸಿಕೊಂಡು ನಕಲಿ ಖಾತೆ ತೆರೆಯುವುದು, ಖಾಸಗಿ ಕ್ಷಣಗಳ ಫೋಟೊ, ವಿಡಿಯೊ ಬಹಿರಂಗಪಡಿಸುವುದಾಗಿ ಹೆದರಿಸಿ ಹಣಕ್ಕೆ ಬೇಡಿಕೆಯಿಡುವುದು ಸೇರಿದಂತೆ ತೀವ್ರತರದ ಹಲವು ಶೋಷಣೆಗಳವರೆಗೆ ಮುಂದುವರಿಯುತ್ತವೆ.

ಗ್ರಾಮೀಣ ಪ್ರದೇಶದ ಮಹಿಳೆಯರು ಸಾಮಾನ್ಯವಾಗಿ ಡಿಜಿಟಲ್ ಸಾಕ್ಷರತೆ ಮತ್ತು ಅರಿವಿನ ಕೊರತೆಯಿಂದ ಸೈಬರ್ ವಂಚಕರಿಗೆ ಸುಲಭದ ಗುರಿಯಾಗುತ್ತಿದ್ದಾರೆ. ಈಚೆಗೆ ನಡೆದ ಒಂದು ಪ್ರಕರಣವು ಪರಿಸ್ಥಿತಿಯ ತೀವ್ರತೆಯನ್ನು ಅನಾವರಣಗೊಳಿಸುತ್ತದೆ. ಬೆಂಗಳೂರು ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ನೆಲಸಿರುವ ಮಹಿಳೆಯೊಬ್ಬರ ಜತೆ ವ್ಯಕ್ತಿಯೊಬ್ಬ ಸ್ನೇಹ ಬೆಳೆಸಿ, ಸಲುಗೆಯ ಮಾತುಗಳನ್ನಾಡಿ ವಿಶ್ವಾಸ ಗಳಿಸಿದ. ಆಕೆಯೊಂದಿಗೆ ಆತ್ಮೀಯವಾಗಿ ಕಳೆದ ಕ್ಷಣಗಳನ್ನು ರಹಸ್ಯವಾಗಿ ರೆಕಾರ್ಡ್ ಮಾಡಿ, ಆ ವಿಡಿಯೊವನ್ನು ಸ್ನೇಹಿತನೊಂದಿಗೆ ಹಂಚಿಕೊಂಡ. ಆ ಸ್ನೇಹಿತ ಆ ವಿಡಿಯೊ ಬಳಸಿಕೊಂಡು ಆಕೆಗೆ ಬ್ಲ್ಯಾಕ್‌ಮೇಲ್ ಮಾಡತೊಡಗಿದ. ಲೈಂಗಿಕವಾಗಿ ಸಹಕರಿಸುವಂತೆ ಹಾಗೂ ಆಭರಣಗಳನ್ನು ನೀಡುವಂತೆ ಬಲವಂತಪಡಿಸಿದ. ಈ ಆಘಾತಕಾರಿ ಪ್ರಕರಣವು ಆನ್‌ಲೈನ್ ಮೂಲಕ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯದ ಒಂದು ಸಣ್ಣ ನಿದರ್ಶನ ಮಾತ್ರ.

ಇಂತಹ ಅಪರಾಧಗಳು ಉಂಟುಮಾಡುವ ಮಾನಸಿಕ ಆಘಾತ ತೀವ್ರವಾಗಿರುತ್ತದೆ. ಇದು ಸಾಮಾನ್ಯವಾಗಿ ದೀರ್ಘಕಾಲೀನ ಮಾನಸಿಕ ಆರೋಗ್ಯ ಸಮಸ್ಯೆಗಳಿಗೂ ಕಾರಣವಾಗಬಲ್ಲದು. ಸಂಪ್ರದಾಯನಿಷ್ಠ ಗ್ರಾಮೀಣ ಸಮುದಾಯಗಳಲ್ಲಿ, ಮಹಿಳೆಯ ಮರ್ಯಾದೆಯು ಆಕೆಯ ಕುಟುಂಬದ ಗೌರವದ ಜತೆ ನಂಟು ಹೊಂದಿರುತ್ತದೆ. ಸಂತ್ರಸ್ತೆಯ ಕುಟುಂಬವು ಸಾಮಾಜಿಕ ಬಹಿಷ್ಕಾರಕ್ಕೆ ಗುರಿಯಾದರೆ ಅದರಿಂದ ಉಂಟಾಗುವ ಪರಿಣಾಮ ಮತ್ತಷ್ಟು ಮಾರಕವಾಗಿರುತ್ತದೆ. ನಗರ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಸಂತ್ರಸ್ತೆ ಯಾರೆಂಬುದು ಇನ್ನೊಬ್ಬರಿಗೆ ತಿಳಿದಿರುವುದಿಲ್ಲ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ಸಂತ್ರಸ್ತೆಯು ಇತರರಿಗೆ ಪರಿಚಿತಳೇ ಆಗಿರುತ್ತಾಳೆ.

ಇನ್ನೊಂದು ಪ್ರಕರಣ ಹೀಗಿದೆ: ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಗಳಿಸಲು ವಿಫಲನಾದ ತಮಿಳುನಾಡಿನ 37 ವರ್ಷದ ಎಂಜಿನಿಯರ್‌ವೊಬ್ಬ ಬೆಂಗಳೂರಿನಲ್ಲಿ ಉದ್ಯೋಗ ಪಡೆದುಕೊಳ್ಳುತ್ತಾನೆ. ಸಾಮಾಜಿಕ ಮಾಧ್ಯಮಗಳಲ್ಲಿ, ಅದರಲ್ಲೂ ವಿಶೇಷವಾಗಿ ಇನ್‌ಸ್ಟಾಗ್ರಾಂ ಮತ್ತು ವಿವಿಧ ಡೇಟಿಂಗ್ ಆ್ಯಪ್‌ಗಳಲ್ಲಿ ಆತ ಹೆಚ್ಚು ಸಕ್ರಿಯನಾಗಿದ್ದ. ಡೇಟಿಂಗ್ ಆ್ಯಪ್ ಒಂದರ ಮೂಲಕ ಆತನಿಗೆ ಮಹಿಳೆಯೊಬ್ಬರ ಪರಿಚಯವಾಗುತ್ತದೆ. ಇಬ್ಬರೂ ಬೆಂಗಳೂರಿನಲ್ಲಿ ಹಲವು ಸಲ ಭೇಟಿಯಾಗಿ ಖಾಸಗಿ ಕ್ಷಣಗಳನ್ನು ಕಳೆಯುತ್ತಾರೆ. ಇಂತಹ ಭೇಟಿಯ ಸಂದರ್ಭದಲ್ಲಿ ಆತ, ಮಹಿಳೆಯ ಹಲವು ಫೋಟೊಗಳನ್ನು ರಹಸ್ಯವಾಗಿ ತೆಗೆದಿಟ್ಟುಕೊಂಡಿದ್ದ.

ಮುಂದೆ ಅವನು ಉದ್ಯೋಗವನ್ನು ಕಳೆದುಕೊಂಡಾಗ ಇಬ್ಬರ ನಡುವಣ ಸಂಬಂಧ ಹದಗೆಡುತ್ತದೆ. ಮಹಿಳೆಯು ಆ ವ್ಯಕ್ತಿಯಿಂದ ಅಂತರ ಕಾಯ್ದುಕೊಂಡು, ಆತನ ಸ್ನೇಹಿತನೊಬ್ಬನಿಗೆ ಹತ್ತಿರವಾಗುತ್ತಾಳೆ. ಇದರಿಂದ ಕುಪಿತಗೊಂಡ ಆತ, ಈ ಹಿಂದೆ ಆಕೆಯೊಂದಿಗೆ ಕಳೆದಿದ್ದ ಖಾಸಗಿ ಕ್ಷಣಗಳ ಫೋಟೊಗಳನ್ನು ಬಹಿರಂಗಪಡಿಸುವುದಾಗಿ ಬೆದರಿಕೆ ಹಾಕುತ್ತಾನೆ. ಮಹಿಳೆಯರು ತಮ್ಮ ವೈಯಕ್ತಿಕ ಮಾಹಿತಿಗಳನ್ನು ಸಂರಕ್ಷಿಸುವ ಮತ್ತು ಆನ್‌ಲೈನ್ ಸಂವಹನಗಳಲ್ಲಿ ಎಚ್ಚರ ವಹಿಸಬೇಕಾದ ಪ್ರಾಮುಖ್ಯವನ್ನು ಈ ಪ್ರಕರಣ ಒತ್ತಿ ಹೇಳುತ್ತದೆ. ಸಾಮಾನ್ಯವಾಗಿ ಇಂತಹ ಅಪರಾಧಗಳನ್ನು ಎದುರಿಸುವಷ್ಟು ಅಥವಾ ಆ ಬಗ್ಗೆ ದೂರು ನೀಡುವಷ್ಟು ಸಾಮರ್ಥ್ಯ ತಮಗೆ ಇಲ್ಲ ಎಂಬ ಭಾವನೆ ಗ್ರಾಮೀಣ ಭಾಗದ ಮಹಿಳೆಯರಲ್ಲಿದೆ.

ಮೇಲಿನ ಎರಡೂ ಸಂದರ್ಭಗಳಲ್ಲಿ, ಮಹಿಳೆಯರು ದೂರು ಸಲ್ಲಿಸಲು ಮುಂದೆ ಬಂದರು. ತಕ್ಷಣ ಪ್ರತಿಕ್ರಿಯಿಸಿದ ಪೊಲೀಸರು, ಎರಡೂ ಪ್ರಕರಣಗಳನ್ನು ಅತ್ಯಂತ ಸೂಕ್ಷ್ಮವಾಗಿ ನಿರ್ವಹಿಸಿದರು. ದೂರುದಾರರ ಗೋಪ್ಯತೆ ಕಾಯ್ದುಕೊಂಡರು. ಆರೋಪಿಗಳನ್ನು ಬಂಧಿಸಲಾಗಿದ್ದು, ಅವರು ಇನ್ನೂ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಮಹಿಳೆಯರನ್ನು ಗುರಿಯಾಗಿಸಿ ನಡೆಯುತ್ತಿರುವ ಸೈಬರ್ ಅಪರಾಧಗಳು ದೊಡ್ಡ ಬೆದರಿಕೆಯಾಗಿ ಪರಿಣಮಿಸಿವೆಯಾದರೂ, ಇದರಿಂದ ರಕ್ಷಣೆ ಪಡೆಯಲು ಹಲವು ಮಾರ್ಗಗಳಿವೆ. ನಗರದ ಹೊರವಲಯ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಮಹಿಳೆಯರು ತಮ್ಮನ್ನು ತಾವು ರಕ್ಷಿಸಿಕೊಳ್ಳುವ ದಿಸೆಯಲ್ಲಿನ ಕೆಲವು ಸಲಹೆಗಳು ಇಲ್ಲಿವೆ:

- ಸೈಬರ್ ಅಪರಾಧಗಳ ಮೇಲೆ ನಿಗಾ ವಹಿಸಲು ಮತ್ತು ಅಂತಹ ಪ್ರಕರಣಗಳು ವರದಿಯಾದರೆ ತಕ್ಷಣ ಸ್ಪಂದಿಸಲು ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಸೈಬರ್ ದಳ ಸ್ಥಾಪಿಸುವುದು. ಈ ತಂಡವು ಸ್ಥಳೀಯ ಪೊಲೀಸರೊಂದಿಗೆ ಸಂಪರ್ಕದಲ್ಲಿರಬೇಕು. ಗೋಡೆ ಬರಹ ಮತ್ತು ಪೋಸ್ಟರ್‌ಗಳ ಮೂಲಕ ಸೈಬರ್ ಅಪರಾಧಗಳ ಬಗ್ಗೆ ಜಾಗೃತಿ ಮೂಡಿಸಬೇಕು.
- ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಕಾಲಕಾಲಕ್ಕೆ ಡಿಜಿಟಲ್ ಸಾಕ್ಷರತೆ ಕುರಿತು ಕಾರ್ಯಾಗಾರ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿ, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬೇಕು.
- ಸಾಮಾಜಿಕ ಜಾಲತಾಣಗಳ ಮೂಲಕ ಸ್ನೇಹಿತರನ್ನು ಸಂಪಾದಿಸುವಾಗ ಎಚ್ಚರ ವಹಿಸುವುದು ಅಗತ್ಯ. ಮಹಿಳೆಯರು ತಮ್ಮ ವೈಯಕ್ತಿಕ ಮಾಹಿತಿ, ಫೋಟೊ ಅಥವಾ ವಿಡಿಯೊಗಳನ್ನು ಅಪರಿಚಿತರ ಜತೆ ಹಂಚಿಕೊಳ್ಳಬಾರದು.
- ಅಪರಿಚಿತ ವ್ಯಕ್ತಿಗಳಿಂದ ಬರುವ ಫ್ರೆಂಡ್ ರಿಕ್ವೆಸ್ಟ್ ಅಥವಾ ಅನಪೇಕ್ಷಿತ ಸಂದೇಶ ಸೇರಿದಂತೆ ಯಾವುದೇ ಅನುಮಾನಾಸ್ಪದ ಚಟುವಟಿಕೆಗಳನ್ನು ತಕ್ಷಣದಲ್ಲೇ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಬೇಕು.
- ಆನ್‌ಲೈನ್ ಖಾತೆಗಳಿಗೆ ಬಹು ಹಂತಗಳ ದೃಢೀಕರಣ ಅಳವಡಿಸಿ. ಇದು ಹ್ಯಾಕರ್‌ಗಳು ನಿಮ್ಮ ಖಾತೆಗೆ ಸುಲಭದಲ್ಲಿ ಕನ್ನ ಹಾಕಲು ಸಾಧ್ಯವಾಗದಂತಹ ಹೆಚ್ಚುವರಿ ಭದ್ರತೆಯನ್ನು ಒದಗಿಸುತ್ತದೆ.
- ಆನ್‌ಲೈನ್ ಮೂಲಕ ನಡೆಸುವ ವಹಿವಾಟುಗಳಲ್ಲಿ ಯಾವುದಕ್ಕೆಲ್ಲಾ ಸಮ್ಮತಿ ನೀಡಬೇಕು ಎಂಬುದರ ಬಗ್ಗೆ ಅರಿವು ಮೂಡಿಸುವುದು.
- ಆನ್‌ಲೈನ್‌ನಲ್ಲಿ ಅತ್ಯಂತ ಸೂಕ್ಷ್ಮ ವಹಿವಾಟುಗಳನ್ನು ನಡೆಸಲು ಸಾರ್ವಜನಿಕ ವೈಫೈ ಸೌಲಭ್ಯವನ್ನು ಬಳಸಬೇಡಿ. ಏಕೆಂದರೆ, ಅದು ಅಷ್ಟೊಂದು ಸುರಕ್ಷಿತವಾಗಿರದ ಕಾರಣ ಸೈಬರ್ ಅಪರಾಧಿಗಳಿಗೆ ಸುಲಭದಲ್ಲಿ ನಿಮ್ಮ ರಹಸ್ಯ ಮಾಹಿತಿಗಳನ್ನು ಪಡೆಯಲು ಸಾಧ್ಯವಾಗುತ್ತದೆ.
- ಮಹಿಳೆಯರು ಕಾನೂನಿನ ನೆರವು ಪಡೆಯುವುದಕ್ಕೆ ಹಿಂಜರಿಯಬಾರದು. ಆನ್‌ಲೈನ್ ಮೂಲಕ ವಂಚನೆಗೆ ಒಳಗಾದವರಿಗೆ ನೆರವಾಗಲು ಸಹಾಯವಾಣಿಗಳು ಮತ್ತು ಸಂಸ್ಥೆಗಳಿವೆ. ಮಹಿಳೆಯರು ಪರಸ್ಪರರನ್ನು ಅರಿತುಕೊಳ್ಳಲು ಸ್ಥಳೀಯವಾಗಿ ಗುಂಪುಗಳನ್ನು ರಚಿಸಬಹುದು. ಅಲ್ಲಿ ತಮ್ಮ ಅನುಭವ ಮತ್ತು ಮಾಹಿತಿಗಳನ್ನು ಹಂಚಿಕೊಂಡರೆ, ಅದು ಇತರರಿಗೆ ಜಾಗ್ರತೆ ವಹಿಸಲು ಹಾಗೂ ತಮ್ಮನ್ನು ತಾವು ಸುರಕ್ಷಿತವಾಗಿ ಇರಿಸಿಕೊಳ್ಳಲು ಸಹಾಯ ಮಾಡುತ್ತದೆ.

ಲೇಖಕ: ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಚುರುಮುರಿ

ಸ್ನಾನವಿನಾ ವಿಚ್ಛೇದನ!

● ತುರುವೇಕೆರೆ ಪ್ರಸಾದ್

‘ರೀ ಪೇಪರ್ ಓದುದ್ರಾ? ಲಕ್ನೋದಲ್ಲಿ ಒಬ್ಬಳು ಗಂಡ ಸ್ನಾನ ಮಾಡಲ್ಲ ಅಂತ ಡೈವೋರ್ಸ್ ಕೇಳಿದಾಳಂತೆ’ ಅಂದ್ರು ಪದ್ದಮ್ಮ ಪೇಪರ್ ಹಿಡ್ಕೊಂಡು. ‘ಅಯ್ಯೋ ದೇವರೇ, ಹೌದೇನೇ? ಇದು ತೀರಾ ಅನ್ಯಾಯ’ ಎಂದ ಪರ್ಮೇಶಿ.

‘ಏನು ನಿಮ್ಮ ಮಾತಿನ ಅರ್ಥ? ತಿಂಗಳುಗಟ್ಟಲೆ ಸ್ನಾನ ಮಾಡದೆ ಗಬ್ಬು ನಾರೋನ್ ಜೊತೆ ಸಂಸಾರ ಮಾಡ್ಬೇಕು ಅಂತನಾ?’

‘ಪ್ರಾಣನಾಥ ಅಂತ ಹೇಳಲ್ವಾ? ಹೇಗೋ ಅಡ್ಜಸ್ಟ್ ಮಾಡ್ಕೊಂಡ್ ಹೋಗ್ಬೇಕಪ್ಪ’.

‘ಸಾಕು ಸುಮ್ನಿರ್ರೀ, ಸ್ನಾನ ಮಾಡಿರೋ ಜ್ಞಾನತೀರ್ಥದಲಿ ನಾನು ನೀನೆಂಬ ಅಹಂಕಾರವ ಬಿಟ್ಟು ಅಂತ ದಾಸರೇ ಹೇಳಿಲ್ವಾ?’

‘ಲೇಯ್, ಸ್ನಾನ ಮಾಡದೋರ ಬಗ್ಗೆ ಅಷ್ಟು ಹಗುರವಾಗಿ ಮಾತಾಡ್ಬೇಡ. ಈ ತರ ಸ್ನಾನ ಮಾಡದೋರ ದೊಡ್ಡ ಪರಂಪರೇನೆ ಇದೆ. ಇಂಗ್ಲೆಂಡಿನ ಸಾಮ್ರಾಟ ಆರನೇ ಹೆನ್ರಿ, ಯುರೋಪಿನ ಸಂತ ಪೀಟರ್, ಫ್ರಾನ್ಸಿನ ದೊರೆ ಲೂಯಿ ಇವರೆಲ್ಲಾ ಜೀವಮಾನದಲ್ಲಿ ಒಮ್ಮೆಯೂ ಸ್ನಾನ ಮಾಡಿರಲಿಲ್ಲವಂತೆ! ಇನ್ನು ಸ್ನಾನವನ್ನೇ ಮಾಡದ ಆರ್ಕಿಮಿಡೀಸ್ ಸ್ನಾನದ ತೊಟ್ಟಿಗೆ ಇಳಿದ ಕೂಡಲೇ ಸಂಶೋಧನೆಯ ಫಲ ಸಿಕ್ಕಿ, ಅರ್ಧಕ್ಕೇ ಯುರೇಕಾ ಅಂತ ಓಡಿ ಬಂದಿದ್ದ’.

‘ಹೌದಾ, ಗಂಡಸರ ಬುದ್ಧೀನೇ ಅಷ್ಟು ಬಿಡಿ. ಹಾಸ್ಟೆಲ್‌ನಲ್ಲಿದ್ದಾಗ ನಿಮ್ದೂ ಅದೇ ಗತಿಯಂತೆ. ಊರಿಗೆ ಒಗೆಯಕ್ಕೆ ಬಟ್ಟೆ ತಂದಾಗ ಮಾಸ್ಕ್ ಹಾಕ್ಕಂಡು ಬಟ್ಟೆ ಒಗೀತಿದ್ರಂತೆ ಅತ್ತೆ’.

‘ಏಯ್, ಗಂಡಸರಷ್ಟೇ ಈ ಕೆಟಗರಿ ಅಂದ್ಕೊಬೇಡ. ಸ್ನಾನನೇ ಮಾಡದಿರೋ ಹೆಂಗಸರೂ ಇದಾರೆ. ಅದ್ರಲ್ಲೂ ಅಪ್ರತಿಮ ಸುಂದರಿ ಸ್ಪೇನಿನ ಮಹಾರಾಣಿ ಇಸಬೆಲ್ಲಾ, ಮತ್ತೆ ಯುರೋಪಿನ ಬ್ಯೂಟಿ ಮಾರ್ಗರೆಟ್ ಇವರೆಲ್ಲಾ ಸ್ನಾನನೇ ಮಾಡ್ತಿರ್ಲಿಲ್ಲ’.

‘ನೀವು ಏನೇ ಪುರಾಣ ಊದುದ್ರೂ ಆಕೆ ಮಾಡಿರೋದೇ ಸರಿ’.

‘ಅದ್ಹೇಗೇ ಸರಿಯಾಗುತ್ತೆ? ಬೇಸಿಗೇಲಿ ನೀರು ಇಲ್ಲ ಅಂತ ಹೋದ ವರ್ಷ ಗಾಡಿ ತೊಳುದ್ರೂ ದಂಡ ಹಾಕಿದ್ರು. ಮುಂದೆ ಒಂದಿನ ಸ್ನಾನ ಮಾಡುದ್ರೂ ದಂಡ ಹಾಕಬಹುದು. ಸ್ನಾನ ಮಾಡದಿರೋದೇ ಸರ್ಕಾರಿ ಪಾಲಿಸಿ ಆಗೋದ್ರೆ ಕೋರ್ಟ್ ನಿಮಗೆ ಡೈವೋರ್ಸ್ ಹೇಗ್ ಕೊಡುತ್ತೆ?’ ಪರ್ಮೇಶಿ ಕಣ್ಣು ಮಿಟುಕಿಸಿ ನಕ್ಕ. ಪದ್ದಮ್ಮ ಪೆಚ್ಚಾದರು.

ಚರ್ಚೆ

ಔಷಧ ಚೀಟಿ: ಧೃತರಾಷ್ಟ್ರ ಆಲಿಂಗನ?

ಇಂಗ್ಲಿಷ್‌ನಲ್ಲಿ ಔಷಧ ಚೀಟಿ ಬರೆದಾಗಲೇ ಅನೇಕ ಸಲ ಎಡವಟ್ಟುಗಳಾಗುತ್ತಿರುವಾಗ ಇನ್ನು ಕನ್ನಡದಲ್ಲಿ ಔಷಧ ಚೀಟಿ ಬರೆದರೆ ಏನೇನಾಗಬಹುದು? ಅದಕ್ಕೆ ಹೊಣೆ ಯಾರು?

ಕನ್ನಡದ ಬಳಕೆಯನ್ನು ತಳಮಟ್ಟದಿಂದ ಬೆಳೆಸುವುದಕ್ಕೆ ಔಷಧದ ಚೀಟಿಗಳನ್ನು ಕನ್ನಡದಲ್ಲಿ ಬರೆಯುವುದೇ ದಾರಿಯಾಗಿದ್ದು, ಅದಕ್ಕೆ ತಕ್ಕ ಆದೇಶವನ್ನು ಸರ್ಕಾರ ಹೊರಡಿಸಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಹೇಳತೊಡಗಿದ್ದಾರೆ. ಅಂತಹ ಆದೇಶವನ್ನು ಹೊರಡಿಸಲಾಗದು ಎಂದು ರಾಜ್ಯ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟವಾಗಿಯೇ ಹೇಳಿದ್ದಾರೆ. ಹಿರಿಯ ವೈದ್ಯರಾದ ಡಾ. ಪಿ.ಎಸ್.ಶಂಕರ್ ಅವರು ಕೂಡ ಔಷಧ ಚೀಟಿಗಳನ್ನು ಕನ್ನಡದಲ್ಲಿ ಬರೆಯುವುದರಿಂದ ಆಗಬಹುದಾದ ಸಮಸ್ಯೆಗಳ ಬಗ್ಗೆ ಬರೆದಿದ್ದಾರೆ (ಸಂಗತ, ಸೆ. 19).

ಔಷಧ ಚೀಟಿಗಳು ಕನ್ನಡದಲ್ಲಿ ಇರದಿದ್ದರೆ ಕನ್ನಡದ ಅಭಿವೃದ್ಧಿಯಾಗದು ಎನ್ನುವುದಾದರೆ, ವೈದ್ಯರು ಚೀಟಿಯನ್ನು ಕನ್ನಡದಲ್ಲಿ ಬರೆದು ಭಾಷಾಭಿವೃದ್ಧಿಯ ಜವಾಬ್ದಾರಿಯನ್ನೂ ಹೊತ್ತುಕೊಳ್ಳಬೇಕು ಎಂದಾದರೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಗತ್ಯವಾದರೂ ಏನು?

ಔಷಧದ ಚೀಟಿಯು ಔಷಧಗಳ ಪಟ್ಟಿ ಮಾತ್ರವಲ್ಲ, ರೋಗದ ಬಗ್ಗೆ ಮಾಹಿತಿಯನ್ನು ನೀಡಬಲ್ಲ, ಕಾನೂನಿನ ಮಾನ್ಯತೆಯನ್ನು ಹೊಂದಿರುವ ವೈದ್ಯಕೀಯ ದಾಖಲೆಯೂ ಆಗಿದೆ. ಇಂದು ವಿಶ್ವದೆಲ್ಲೆಡೆ ಸಾಕ್ಷ್ಯಾಧಾರಿತ ಆಧುನಿಕ ವೈದ್ಯವಿಜ್ಞಾನವೇ ಆರೋಗ್ಯ ಸೇವೆಗಳನ್ನು ಒದಗಿಸುತ್ತಿರುವುದರಿಂದ, ಯಾವುದೇ ಮೂಲೆಯಲ್ಲೂ ಏಕರೂಪದ ಚಿಕಿತ್ಸಾ ಕ್ರಮವನ್ನು ಪಾಲಿಸಲಾಗುತ್ತದೆ. ಮಂಗಳೂರಿನಲ್ಲಿ ಬರೆದ ಔಷಧ ಚೀಟಿಯು ಬೆಂಗಳೂರು, ಹುಬ್ಬಳ್ಳಿ ಮಾತ್ರವಲ್ಲ ಚೆನ್ನೈ, ತಿರುವನಂತಪುರ, ದೆಹಲಿ, ಅಮೆರಿಕದ ನ್ಯೂಯಾರ್ಕ್, ಆಸ್ಟ್ರೇಲಿಯಾದ ಸಿಡ್ನಿಯಲ್ಲಿನ ವೈದ್ಯರಿಗೂ ತಿಳಿಯುತ್ತದೆ. ಈ ಮೂಲಕ ರೋಗಿಯು ಅಲ್ಲೂ ತನ್ನ ಚಿಕಿತ್ಸೆಯನ್ನು ಮುಂದುವರಿಸಲು ಸಾಧ್ಯವಾಗುತ್ತದೆ. ಅಂತಹ ಮೌಲ್ಯ ಇರುವ ವೈದ್ಯಕೀಯ ದಾಖಲೆಯು ವಿಶ್ವಮಾನ್ಯವಾದ, ವೈಜ್ಞಾನಿಕವಾದ ಭಾಷೆಯಲ್ಲಿ ಇರುವ ಅಗತ್ಯವಿಲ್ಲವೇ?

ಔಷಧ ಚೀಟಿಯು ಔಷಧಗಳನ್ನು ಸೇವಿಸಬೇಕಾದವರಿಗಿಂತಲೂ ಹೆಚ್ಚಾಗಿ ಔಷಧಗಳನ್ನು ತೆಗೆದು ಕೊಡುವವರಿಗೆ ವೈದ್ಯರು ನೀಡುವ ಆಣತಿಯಾಗಿರುತ್ತದೆ. ಆದ್ದರಿಂದ ಅದರಲ್ಲಿ ಬರೆದಿರುವುದು ಔಷಧದ ಅಂಗಡಿಗಳಲ್ಲಿ ಇರುವವರಿಗೆ ಅರ್ಥವಾಗಬೇಕು. ಯಾವುದೇ ಔಷಧಗಳ ಪೊಟ್ಟಣಗಳಲ್ಲಿ ಅವುಗಳ ಹೆಸರು ಕನ್ನಡದಲ್ಲಿ ನಮೂದಾಗಿರುವುದೇ ಇಲ್ಲ. ಹೆಚ್ಚಿನ ಔಷಧದ ಅಂಗಡಿಗಳಲ್ಲಿ ಕೆಲಸಕ್ಕೆ ಇರುವವರಿಗೆ ಕನ್ನಡ ಹೋಗಲಿ, ಇಂಗ್ಲಿಷ್ ಅನ್ನೇ ಸರಿಯಾಗಿ ಓದುವುದಕ್ಕೂ ಬರುವುದಿಲ್ಲ. ಈಗ ಇಂಗ್ಲಿಷ್‌ನಲ್ಲೇ ಬರೆದಾಗಲೂ ಅನೇಕ ಸಲ ಎಡವಟ್ಟುಗಳಾಗುತ್ತಿರುವಾಗ ಇನ್ನು ಕನ್ನಡದಲ್ಲಿ ಚೀಟಿ ಬರೆದರೆ ಏನೇನಾದೀತು, ಅದಕ್ಕೆ ಹೊಣೆ ಯಾರು? ಹೊರರಾಜ್ಯಗಳಿಂದ ನಮ್ಮಲ್ಲಿಗೆ ಚಿಕಿತ್ಸೆಗಾಗಿ ಬಂದಿರುವವರಿಗೆ ಕನ್ನಡದಲ್ಲಿ ಚೀಟಿ ಬರೆದುಕೊಟ್ಟರೆ ಹೇಗಾದೀತು? ಇವನ್ನು ಬಗೆಹರಿಸಲು ಪ್ರತಿ ಚೀಟಿಯನ್ನು ಎರಡೆರಡು ಭಾಷೆಗಳಲ್ಲಿ ಬರೆದುಕೊಡಬೇಕೆ?

ಒಟ್ಟಿನಲ್ಲಿ ಔಷಧ ಚೀಟಿಯ ಮೌಲ್ಯವನ್ನು ಅರಿಯದೆ, ವೈದ್ಯಕೀಯ ವಲಯದೊಂದಿಗೂ ಚರ್ಚಿಸದೆ, ಪ್ರಾಧಿಕಾರವು ಏಕಪಕ್ಷೀಯವಾಗಿ ಹೇಳಿಕೆ ನೀಡಿರುವುದರಿಂದ ಒಂದಷ್ಟು ಪೇಚಿಗೀಡಾಗುವಂತೆ ಆಗಿದೆ. ಇದರಿಂದ ಹೊರಬರಲು ಒಂದು ಉಪಾಯವನ್ನು ಮಾಡಬಹುದೇನೊ? ಔಷಧ ಚೀಟಿಯಲ್ಲೂ ಕನ್ನಡವನ್ನು ಕಾಣುವ ಮಹದಾಸೆಯು ಪ್ರಾಧಿಕಾರಕ್ಕೆ ಇದ್ದರೆ, ಅದರಿಂದಷ್ಟೇ ಕನ್ನಡದ ಅಭಿವೃದ್ಧಿ ಸಾಧ್ಯ ಎಂದಾದರೆ, ಔಷಧ ಚೀಟಿಯಲ್ಲಿ ಔಷಧಗಳ ಹೆಸರುಗಳನ್ನು ಕನ್ನಡದಲ್ಲಿ ಬರೆಯುವ ಬದಲಿಗೆ, ಅದರಲ್ಲಿರುವ ವೈದ್ಯರ ಹೆಸರು, ಸಂಸ್ಥೆಯ ಹೆಸರು, ವೈದ್ಯರ ಪರಿಣತಿಯ ವಿವರಗಳು, ಸಂದರ್ಶನದ ಅವಧಿಯಂತಹ ವಿಷಯಗಳನ್ನು ಕನ್ನಡದಲ್ಲೂ ಮುದ್ರಿಸುವಂತೆ ಕೇಳಿಕೊಳ್ಳಬಹುದು.



ಆಧುನಿಕ ವೈದ್ಯ ವಿಜ್ಞಾನದ ವೈದ್ಯರು ಡಾ. ಎಂದು ಬಳಸಿ, ವಿಶೇಷ ಪರಿಣತಿಗಳನ್ನು ಕನ್ನಡ ಪದಗಳ (ಮಿದುಳು, ನರರೋಗ, ಮೂತ್ರಾಂಗ...) ಮೂಲಕ ತಿಳಿಸುವಂತೆ ಮಾಡಬಹುದು. ಆಯುರ್ವೇದ, ಯುನಾನಿ, ಹೋಮಿಯೋಪಥಿ ಚಿಕಿತ್ಸೆ ನೀಡುವವರು ಸ್ಪಷ್ಟವಾಗಿ ಅವನ್ನು ಹಾಗೆಯೇ ಬರೆದು, ವೈದ್ಯ, ಹಕೀಮ್, ಹೋಮಿಯೋ ಎಂದು ಹಾಕಬಹುದು. ಇದರಿಂದ ಕನ್ನಡ ಬೆಳೆಯುವುದಕ್ಕೂ ಜನರ ಗೊಂದಲ ಇಳಿಯುವುದಕ್ಕೂ ಸಹಾಯ ಆಗಬಹುದು.

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ಮಂಗಳೂರು

ಮಮತೆಯ ಸಲಹೆ

ಔಷಧ ಚೀಟಿಗೆ ಸಂಬಂಧಿಸಿದಂತೆ ಕನ್ನಡಿಗರಿಗೆ ಇಂಗ್ಲಿಷನ್ನು ಹೇಗೆ ಹಗುರ ಮಾಡಬಹುದು ಎಂಬುದರ ಬಗೆಗೆ, ಡಾ. ಪಿ.ಎಸ್.ಶಂಕರ್ ತಮ್ಮ ಲೇಖನದಲ್ಲಿ ಕಾರ್ಯಸಾಧ್ಯ ಮಾರ್ಗವನ್ನು ನೀಡಿದ್ದಾರೆ. ನಾನು ನಾಲ್ಕು ದಶಕಗಳಿಂದಲೂ ಒತ್ತಾಯಿಸುತ್ತಿರುವ, ಕನ್ನಡವನ್ನೇ ಮೊದಲ ಭಾಷೆಯನ್ನಾಗಿ ಮಾಡಿ, ತಾಂತ್ರಿಕ ಪದವನ್ನು ಬದಲಾಯಿಸುವ ಅಥವಾ ಭಾಷಾಂತರಿಸುವ ಗೋಜಿಗೆ ಹೋಗಬೇಡಿ, ಅದನ್ನು ಇದ್ದಹಾಗೇ ಕಲಿಸಿ ಎಂಬ ಆಗ್ರಹಕ್ಕೆ ಬಲ ಬಂದಂತಾಗಿದೆ.

ಹೀಗೆ ಮಾಡುವುದರಿಂದ ಬಡ ಬೋರೇಗೌಡನ ಮಗನಿಗೂ ಉಳ್ಳವರ ಮಕ್ಕಳಿಗೆ ಸಿಗುವ ಉನ್ನತ ನೌಕರಿ ಸಿಗುತ್ತದೆ ಎಂಬ ಹಂಬಲ ಇದರ ಹಿಂದೆ ಇದೆ. ಹಣ ಪೀಕಿಸುವ ಇಂಗ್ಲಿಷ್ ಮಾಧ್ಯಮದ ದೈತ್ಯ ಸಂಸ್ಥೆಗಳಿಗೂ ಕಡಿವಾಣ ಬೀಳುತ್ತದೆ.

ಡಾ. ಶಂಕರ್ ಅವರ ಸಲಹೆಯು ಮಾತೆಯ ಮಮತೆಯಂತಿದೆ. ಇಂಗ್ಲಿಷ್‌ನಲ್ಲಿ ವೈದ್ಯಕೀಯ ಕಲಿತಿರುವ ವೈದ್ಯರನ್ನು ಕನ್ನಡದಲ್ಲಿ ಬರೆಯಲು ಒತ್ತಾಯಿಸುವುದು ಧೃತರಾಷ್ಟ್ರ ಆಲಿಂಗನವಾಗುತ್ತದೆ. ತಾಯಿಯ ಅಪ್ಪುಗೆಗೂ ಧೃತರಾಷ್ಟ್ರನ ಆಲಿಂಗನಕ್ಕೂ ಅಜಗಜಾಂತರ ಇದೆ ಅಲ್ಲವೇ?

ಈಶ್ವರ ಶಾಸ್ತ್ರಿ ಮೋಟಿನಸರ, ಶಿರಸಿ

ವಾಚಕರ ವಾಣಿ

ಸಾಧಕರನ್ನು ಗುರುತಿಸುವ ಮಾನದಂಡ ಬದಲಾಗಲಿ

ವಿಶೇಷ ಸಾಧನೆ ಮಾಡಿದ ಸಾಧಕರಿಗೆ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡುವುದು ವಾಡಿಕೆ. ಆದರೆ ಪ್ರಸ್ತುತ ರಾಜ್ಯದ ಕೆಲವು ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡುವುದರಲ್ಲಿ ತಾ ಮುಂದು ನಾ ಮುಂದು ಎಂಬಂತೆ ಜಿದ್ದಿಗೆ ಬಿದ್ದಿವೆ. ರಾಜ್ಯದಲ್ಲಿನ ವಿಶ್ವವಿದ್ಯಾಲಯವೊಂದು ಕನ್ನಡದ ಪ್ರಮುಖ ಚಿತ್ರನಟರೊಬ್ಬರಿಗೆ ಗೌರವ ಡಾಕ್ಟರೇಟ್ ನೀಡಲು ಮುಂದಾದಾಗ, ಅವರು ‘ನನಗಿಂತಲೂ ಸಾಧನೆ ಮಾಡಿದ ಹಿರಿಯರಿಗೆ ಕೊಟ್ಟರೆ ಸರಿಯೆನಿಸುತ್ತದೆ’ ಎಂದರಲ್ಲದೆ, ಈಗಲೇ ಆ ಗೌರವವನ್ನು ಸ್ವೀಕಾರ ಮಾಡುವಷ್ಟು ವೈಯಕ್ತಿಕವಾಗಿ ಸಾಧನೆ ಮಾಡಿಲ್ಲವೆಂದು ಸವಿನಯವಾಗಿಯೇ ತಿರಸ್ಕರಿಸಿದರು.

ವಿಶ್ವವಿದ್ಯಾಲಯಗಳು ಈಗಾಗಲೇ ಜನಪ್ರಿಯ ಆಗಿರುವವರ ಬೆನ್ನುಹತ್ತುವ ಬದಲು ಎಲೆಮರೆ ಕಾಯಿಯಂತೆ ಸಾಧನೆ ಮಾಡಿದವರನ್ನು ಗುರುತಿಸಿ, ಅವರಿಗೆ ಗೌರವ ಡಾಕ್ಟರೇಟ್ ನೀಡಿದರೆ ಅದರಿಂದ ಆ ಪದವಿಯ ಮೌಲ್ಯವೂ ಹೆಚ್ಚುತ್ತದೆ. ಈ ದಿಸೆಯಲ್ಲಿ ಯೋಚಿಸುವುದು ಒಳಿತು.

ದಿವಾಕರ್ ಡಿ., ಮಂಡ್ಯ

ಗೋವಿಂದಾ...ಗೋ...!

ತಿರುಪತಿಯ ಲಡ್ಡುಗೆ
ಪ್ರಾಣಿಗಳ ಕೊಬ್ಬು
ಸೇರಿಸಿದವರು,
ಆ ಪ್ರಸಾದ ಸೇವಿಸಿದವರು,
ಇಬ್ಬರೂ ಈಗ ಅವನನ್ನೇ
ಭಜಿಸಬೇಕು... ಕಾಪಾಡು
ಗೋವಿಂದಾ ಗೋ...!

ಮ.ಗು.ಬಸವಣ್ಣ, ಮೈಸೂರು

ವ್ಯರ್ಥವಾಯಿತು ಪರೀಕ್ಷೆ ತಯಾರಿ

ಇದೇ 14 ಮತ್ತು 15ರಂದು ನಿಗದಿಯಾಗಿದ್ದ ಗ್ರೂಪ್ ‘ಬಿ’ ಮತ್ತು ‘ಸಿ’ ಹುದ್ದೆಗಳ ಪರೀಕ್ಷೆಗಾಗಿ ತಯಾರಿ ನಡೆಸಿ, ಪರೀಕ್ಷೆ ಬರೆಯಬೇಕಾದ ಕೇಂದ್ರಕ್ಕೆ ಮುಂಚೆಯೇ ಹೋಗಿ ಕುಳಿತಿದ್ದ ವಿದ್ಯಾರ್ಥಿಗಳನ್ನು ಪರೀಕ್ಷೆ ಮುಂದೂಡಿಕೆಯ ವಿಷಯ ವಿಚಲಿತರನ್ನಾಗಿಸಿದೆ. ನಾಲ್ಕೈದು ತಿಂಗಳಿನಿಂದ ತಯಾರಿ ನಡೆಸಿ, ಎಲ್ಲಾ ಸಿದ್ಧತೆಗಳೊಂದಿಗೆ ದೃಢವಾಗಿ ಪರೀಕ್ಷೆ ಬರೆಯಲು ಹೋಗಿದ್ದ ನನ್ನಂತಹ ಎಷ್ಟೋ ಆಕಾಂಕ್ಷಿಗಳಿಗೆ ಇದು ಆಘಾತವನ್ನು ತಂದಿದೆ. ಪರೀಕ್ಷೆಯ ತಯಾರಿ ಹೊಳೆಯಲ್ಲಿ ಹುಣಸೇಹಣ್ಣು ತೊಳೆದಂತಾಗಿದೆ.

ವಿಶ್ವಪೂರ್ವ ಸತ್ಯಂಪೇಟೆ, ಸುರಪುರ, ಯಾದಗಿರಿ

ಜಗತ್ತಿಗೇ ನೀತಿ ಪಾಠ ಹೇಳುವವರು...

ಖಾಲಿಸ್ತಾನಿ ಉಗ್ರ ಸಂಘಟನೆಯ ಮುಖ್ಯಸ್ಥ ಗುರು ಪತ್ವಂತ್ ಸಿಂಗ್ ಪನ್ನು ದೂರಿನ ಮೇರೆಗೆ ಅಮೆರಿಕದ ಕೋರ್ಟ್ ಭಾರತಕ್ಕೆ ಹಾಗೂ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರಿಗೆ ಸಮನ್ಸ್ ಜಾರಿ ಮಾಡಿರುವುದು ಉದ್ಧಟತನದ ನಡೆ. ಅಮೆರಿಕದ ಶಾಲೆಗಳಲ್ಲಿ ಪ್ರತಿವರ್ಷ ನಡೆಯುವ ಶೂಟೌಟ್ ಪ್ರಕರಣಗಳಲ್ಲಿ ಹಲವಾರು ವಿದ್ಯಾರ್ಥಿಗಳು ಪ್ರಾಣ ಕಳೆದುಕೊಳ್ಳುತ್ತಾರೆ. ಜಗತ್ತಿಗೆ ನೀತಿ ಪಾಠ ಹೇಳುವ ಅಮೆರಿಕದಲ್ಲೇ ಕಾನೂನು ಸುವ್ಯವಸ್ಥೆಯ ಗಂಭೀರ ಸಮಸ್ಯೆ ಇದೆ. ತನ್ನಲ್ಲೇ ಇಷ್ಟೊಂದು ಸಮಸ್ಯೆಗಳು ಇರುವ ಆ ದೇಶ, ಒಬ್ಬ ಭಯೋತ್ಪಾದಕನ ದೂರಿಗೆ ಸ್ಪಂದಿಸಿ ಭಾರತಕ್ಕೆ ಸಮನ್ಸ್ ಜಾರಿ ಮಾಡಿದ್ದು ಖಂಡನೀಯ. ಅಮೆರಿಕದ ‘ದೊಡ್ಡಣ್ಣನ ನೀತಿ’ಗೆ ತಕ್ಕ ಉತ್ತರವನ್ನು ಭಾರತ ನೀಡಿದ್ದು ಶ್ಲಾಘನೀಯ.

ಲಕ್ಷ್ಮೀಕಾಂತ್ ಕೊಟ್ಟಾರ ಚೌಕಿ, ಮಂಗಳೂರು

ವಿಶ್ವಗುರು ಆದರ್ಶ ಆಚರಣೆಯಲ್ಲಿ ಬರಲಿ!

ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರ ತಲೆದಂಡ ಕೇಳುವ, ಅವರ ನಾಲಿಗೆ ಕತ್ತರಿಸಬೇಕು ಎನ್ನುವ, ಅವರ ಅಜ್ಜಿಗೆ ಆದ ಗತಿಯೇ ಇವರಿಗೂ ಆಗುತ್ತದೆ ಎಂದೆಲ್ಲ ತಮ್ಮ ನಾಲಿಗೆ ಹರಿಯಬಿಡುವ ಬಿಜೆಪಿ ನಾಯಕರನ್ನು ಸಭ್ಯತೆ, ಸಂಸ್ಕೃತಿ ಇರುವ ಪಕ್ಷ ಎಂದು ಹೇಳಿಕೊಳ್ಳುವ ಬಿಜೆಪಿ ಹೇಗಾದರೂ ಸಹಿಸಿಕೊಂಡಿದೆಯೋ?

ಪಂಡಿತ್ ಜವಾಹರಲಾಲ್ ನೆಹರೂ ಅವರು ಪ್ರತಿಪಕ್ಷದ ನಾಯಕ ಲೋಹಿಯಾ ಎಂದಾದರೂ ಸಭೆಗೆ ಬಾರದೇ ಇದ್ದರೆ ‘ಯಾಕೆ, ಅವರು ಕ್ಷೇಮವಾಗಿ ಇದ್ದಾರೆಯೇ?’ ಎಂದು ವಿಚಾರಿಸಿಕೊಳ್ಳುತ್ತಿದ್ದರು. ಆದರೆ ‘ಭಾರತದ ವಿಶ್ವಗುರು’ ಎಂದು ಹೇಳುವ ಪ್ರಧಾನಿ ನರೇಂದ್ರ ಮೋದಿ ಅವರು ಈ ಬಗ್ಗೆ ತುಟಿ ಬಿಚ್ಚುತ್ತಿಲ್ಲ. ವಿಶ್ವಗುರುವಿನ ಆದರ್ಶವು ಆಚರಣೆಯಲ್ಲಿ ಬೇಡವೇ?

ಪ್ರೊ. ಶಿವರಾಮಯ್ಯ, ಬೆಂಗಳೂರು

ಕಾಯುವ ಸಂಕಷ್ಟ ಅರಿವಾಗುವುದೆಂದು?

ಸಾರ್ವಜನಿಕ ಸ್ಥಳಗಳಲ್ಲಿ ತಮ್ಮ ಕೆಲಸಕ್ಕಾಗಿ ಗಂಟೆಗಟ್ಟಲೆ ಕಾಯಬೇಕಾದ ಸಂಕಷ್ಟವನ್ನು ಬಣ್ಣಿಸುತ್ತಾ ಸಮಯದ ಮಹತ್ವವನ್ನು ತಿಳಿಸಿದ್ದಾರೆ ಸದಾಶಿವ್ ಸೊರಟೂರು (ಸಂಗತ, ಸೆ. 20). ಇತ್ತೀಚೆಗೆ ನನಗೂ ಬಹಳ ಹೊತ್ತು ಕಾಯುವಂತಹ ಇಂತಹುದೇ ಒಂದು ಪ್ರಸಂಗ ಎದುರಾಯಿತು. ಅನಾರೋಗ್ಯದ ನಿಮಿತ್ತ ನಾನು ಚಿತ್ರದುರ್ಗದಲ್ಲಿ ವೈದ್ಯರೊಬ್ಬರ ಬಳಿ ಹೋದಾಗ ಮಧ್ಯಾಹ್ನ 3.33ರಿಂದ ಸಂಜೆ 5.55ರ ತನಕ ಕಾಯಬೇಕಾಯಿತು. ವೈದ್ಯರು ತಮ್ಮ ನರ್ಸಿಂಗ್ ಹೋಮ್‌ನ ಆಡಳಿತಾತ್ಮಕ ಮಾತುಕತೆ, ಆ ಸಂಬಂಧದ ಕಡತಗಳಿಗೆ ಸಹಿ ಮಾಡುವುದರ ಜೊತೆಗೆ ಫೋನ್ ಅಟೆಂಡ್ ಮಾಡುತ್ತಾ ನಡುನಡುವೆ ರೋಗಿಗಳ ತಪಾಸಣೆ ಮಾಡುತ್ತಿದ್ದರು.

ದೂರದ ಊರುಗಳಿಂದ ಅಥವಾ ಎಲ್ಲೆಲ್ಲಿಂದಲೋ ತಪಾಸಣೆಗಾಗಿ ಬಂದಿದ್ದ ರೋಗಿಗಳನ್ನು ಪರೀಕ್ಷಿಸಿ ನಂತರ ತಮ್ಮ ಕೆಲಸ ಮಾಡಿಕೊಂಡಿದ್ದರೆ ಎಷ್ಟೊಂದು ಜನರಿಗೆ ಅನುಕೂಲವಾಗುತ್ತಿತ್ತು. ಯಾರ್‍ಯಾರಿಗೆ ಏನೇನು ತುರ್ತಿನ ಕೆಲಸಗಳು ಇರುತ್ತವೋ ಗೊತ್ತಿರುವುದಿಲ್ಲ. ಕಾಯಿಸುವುದು ಅನುಚಿತ ಎಂದೆನಿಸಿತಾದರೂ ಯಾರೂ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಆಸ್ಪತ್ರೆ ಸದಾ ರೋಗಿಗಳಿಂದ ತುಂಬಿರುತ್ತದೆ ಎಂಬ ಹೆಸರು ಪಡೆಯಲು ಈ ರೀತಿ ಮಾಡುವುದಿದೆ ಎಂದು ಅಲ್ಲಿದ್ದ ಒಬ್ಬರು ಹೇಳಿದರು. ಇರಬಹುದು ಅಂದುಕೊಂಡೆ. ಸಾರ್ವಜನಿಕರ ಸಮಯ ಹಾಳು ಮಾಡಿ ತಮ್ಮ ಕೀರ್ತಿ, ಪ್ರತಿಷ್ಠೆ ಹೆಚ್ಚಿಸಿಕೊಳ್ಳುವುದಾದರೆ ಸಮಯಕ್ಕೆಲ್ಲಿದೆ ಬೆಲೆ? ಮುತ್ತು ಕಳೆದರೆ ಸಿಕ್ಕೀತು, ಹೊತ್ತು ಕಳೆದರೆ ಸಿಕ್ಕೀತೇ ಎನ್ನುವ ನಾಣ್ಣುಡಿ ಇಂತಹ ಜನರಿಗೆ ಅರ್ಥವಾಗುವುದಾದರೂ ಯಾವಾಗ?

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕನ್ನಡ ಚಿತ್ರೋದ್ಯಮದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆಗೆ ಸಮಿತಿ ಬೇಕಿದೆಯೇ?

ಮಹಿಳೆಯರಿಗೆ ಸುರಕ್ಷಿತ ವಾತಾವರಣ ನಮ್ಮ ಬೇಡಿಕೆ

'ಫೈರ್' ಕೇಳುತ್ತಿರುವುದು ಜೀವಪರವಾಗಿರುವ ವ್ಯವಸ್ಥೆ. ಪುರುಷರ ವಿರುದ್ಧ ಸುಳ್ಳು ದೂರುಗಳು ಬಂದರೆ, ಮಿಥ್ಯಾರೋಪಗಳಿದ್ದರೆ ಅವರೊಟ್ಟಿಗೆ ನಿಲ್ಲುವುದು ಬೇಡವೇ? ಕೇವಲ ಸ್ತ್ರೀ-ಪುರುಷರ ಬಗೆಗೆ ಮಾತಾಡುವುದಲ್ಲ, ಲಿಂಗತ್ವ ಅಲ್ಪಸಂಖ್ಯಾತರನ್ನು ನಮ್ಮ ಸಿನಿಮಾಗಳಲ್ಲಿ ಹೇಗೆ ನಡೆಸಿಕೊಳ್ಳುತ್ತಾರೆ ಎಂಬ ಅಂದಾಜಾದರೂ ಇದೆಯೇ? 'ಪಾಶ್' ಸಮಿತಿ ರಚನೆಯಾದರೆ, ಕಲಾವಿದರೆಲ್ಲರಿಗೂ ತಾವು ಸುರಕ್ಷಿತ ವಾತಾವರಣದಲ್ಲಿ ಕೆಲಸ ಮಾಡುತ್ತಿದ್ದೇವೆ ಎಂಬ ವಿಶ್ವಾಸ ಮೂಡುತ್ತದೆ

● ಕವಿತಾ ಲಂಕೇಶ್

ಯಾವ ಕ್ಷೇತ್ರದಲ್ಲಿಲ್ಲ ಲೈಂಗಿಕ ಕಿರುಕುಳ? ಅಥವಾ ಅನುಚಿತವಾಗಿ ವರ್ತಿಸೋದು, ನೋಡೋದು...? ಎಲ್ಲ ಕ್ಷೇತ್ರಗಳಲ್ಲಿಯೂ ಇದೆ. ಆದರೆ, ಎಲ್ಲಿಯೂ ಬೆಳಕಿಗೆ ಬರುತ್ತಿಲ್ಲ. ಬೆಳಕಿಗೆ ಬಂದಾಗ ವಾದಗಳು ಎಲ್ಲೆಲ್ಲಿಯೋ ದಾರಿ ತಪ್ಪಿಹೋಗುತ್ತವೆ. 'ಫೈರ್' (Film Industry for Right and Equality) ಕೇಳುತ್ತಿರುವುದು ಕನ್ನಡ ಚಿತ್ರೋದ್ಯಮದಲ್ಲಿ ಲೈಂಗಿಕ ದೌರ್ಜನ್ಯ ತಡೆ (ಪಾಶ್ – POSH) ಸಮಿತಿ ಸ್ಥಾಪಿಸಬೇಕು ಎಂದು. ಈ ಸಮಿತಿ ಇದ್ದರೆ ಒಂದು ಎಚ್ಚರ ಎಲ್ಲರ ಮನದಲ್ಲಿ ಇರುತ್ತದೆ. ಯಾರಿಗೆ ದೂರು ಸಲ್ಲಿಸಬೇಕು ಎಂಬುದು ಸಂತ್ರಸ್ತರ ಗಮನದಲ್ಲಿಯೂ ಇರುತ್ತದೆ.

'ಫೈರ್' ಅಧಿಕಾರ ಕೇಳುತ್ತಿಲ್ಲ. ನಮ್ಮ ಬೇಡಿಕೆ ಬಲು ಸ್ಪಷ್ಟವಾಗಿದೆ. ಲಿಂಗಸಂವೇದನೆ ಇರುವವರು ಸಮಿತಿಯಲ್ಲಿರಬೇಕು. ಚಳವಳಿಕಾರರು, ಲಿಂಗಸಂವೇದನೆಯಲ್ಲಿ ಕೆಲಸ ಮಾಡುತ್ತಿರುವ ತಜ್ಞರು, ಫಿಲ್ಮ್ ಚೇಂಬರ್‌ನವರು, ವಕೀಲರು, ಮಾನವ ಹಕ್ಕು ಹೋರಾಟಗಾರರು ಹೀಗೆ ಎಲ್ಲರೂ ಆ ಸಮಿತಿಯಲ್ಲಿರಲಿ. ನ್ಯಾಯಮೂರ್ತಿ ಹೇಮಾ ಸಮಿತಿಯ ತನಿಖೆಯಿಂದಲೇ ಮಲಯಾಳ ಸಿನಿಮಾ ರಂಗದ ಹಲವಾರು ಕಿರುಕುಳದ ಪ್ರಕರಣಗಳು ಬೆಳಕಿಗೆ ಬಂದವು. ಮಹಿಳಾ ಆಯೋಗದ ಅಧ್ಯಕ್ಷರಾದ ನಾಗಲಕ್ಷ್ಮಿ ಚೌಧರಿ ಅವರು ಈ ಬಗ್ಗೆ ಒಂದು ಗೋಪ್ಯ ಸಮೀಕ್ಷೆ ನಡೆಸಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆಗ ಏನೆಲ್ಲ ಆಗಿವೆ, ಆಗಿಹೋಗಿವೆ ಎಂಬುದೂ ಬೆಳಕಿಗೆ ಬರುತ್ತದೆ. ಕನ್ನಡ ಚಿತ್ರೋದ್ಯಮದಲ್ಲಿಯೂ 'ಪಾಶ್'ನಂತಹ (ಲೈಂಗಿಕ ದೌರ್ಜನ್ಯ ತಡೆ) ವ್ಯವಸ್ಥೆ ಜಾರಿಗೆ ತರಬೇಕು. ಮತ್ತಿತರ ಸಮಸ್ಯೆಗಳ ಚರ್ಚೆಯಾಗಬೇಕು.

ಸಿನಿಮಾ ರಂಗದ ದೊಡ್ಡ ದುರಂತವೆಂದರೆ, ಕಿರುಕುಳದ ಪ್ರಕರಣ ಬೆಳಕಿಗೆ ಬಂದ ತಕ್ಷಣ ಆ ಮಹಿಳೆಯ ಚಾರಿತ್ರ್ಯ ಹನನ ಮಾಡಲಾಗುತ್ತದೆ. 'ಹೊಂದಾಣಿಕೆ ಮಾಡಿಕೊಂಡು ಹೋಗಬೇಕಿತ್ತು' ಎಂಬ ಮಾತುಗಳು ಕೇಳಿಬರುತ್ತವೆ. 'ಸಿನಿಮಾ ಅಂದ್ರೇನೆ ಗ್ಲಾಮರಸ್ ಜಗತ್ತು, ಇಲ್ಲಿ ಇದೆಲ್ಲ ಸಾಮಾನ್ಯವಾದುದು, ತುಸು ಹೊಂದಿಕೊಳ್ಳಲು ಏನಾಗುತ್ತದೆ? ಇಷ್ಟೆಲ್ಲ ಮಡಿವಂತಿಕೆ ಇದ್ದರೆ ಈ ಕ್ಷೇತ್ರಕ್ಕೇ ಕಾಲಿಡಬಾರದು' ಎಂದೆಲ್ಲ ಮಾತಾಡುತ್ತಾರೆ.

ಸಮಾಜವು ಹಾಕಿರುವ ಇಂಥ ಚೌಕಟ್ಟಿನಿಂದಾಗಿ ಮಹಿಳೆಯರು ಎಲ್ಲವನ್ನೂ ನುಂಗಿಕೊಂಡಿರಬೇಕಾದ ವಾತಾವರಣ ಇದೆ. ಹೇಳಿದಷ್ಟೂ ತಾವೇ ಬಯಲಾಗುವ ಭೀತಿಯೊಡನೆ ಮಹಿಳೆಯರು ಬಾಯಿಬಿಡುತ್ತಿಲ್ಲ. ಮುಟ್ಟಿದರೆ, ಕೆಟ್ಟದಾಗಿ ಮಾತನಾಡಿದರೆ ಮಾತ್ರವಲ್ಲ; ಕೆಲವೊಮ್ಮೆ ನೋಟಗಳು, ಮಾತುಗಳು, ಮೇಲ್ನೋಟಕ್ಕೆ ತೀರ ಸಹಜವೆನಿಸಿದರೂ ಅಸಹ್ಯವೆನಿಸುವ ವ್ಯಾವಹಾರಿಕ ಸ್ಪರ್ಶಗಳೂ ಇದರಲ್ಲಿ ಸೇರಿವೆ. ಇವುಗಳ ಬಗ್ಗೆ ಯಾರಲ್ಲಿ ಹೇಳಬೇಕು? ಕೇವಲ ಅತ್ಯಾಚಾರ, ಕಿರುಕುಳ, ಸಹಮತವಿಲ್ಲದ ಶಾರೀರಿಕ ಸಂಬಂಧ ಇವುಗಳಿಗೆ ಮಾತ್ರ ದೂರು ಸಲ್ಲಿಸಬೇಕೆ? ಮತ್ತೆ ಇಂಥವುಗಳಿಗೆ ಸಾಕ್ಷ್ಯ ಒದಗಿಸುವುದು ಹೇಗೆ?

ಮಹಿಳೆಯರನ್ನು ಒಂದು ವಸ್ತುವಿನಂತೆ ಕಾಣಕೂಡದು. ಮಾತುಗಳಲ್ಲಿ, ಜೋಕುಗಳೆಂದು ಮಾತು ತೇಲಿಬಿಡುವಲ್ಲಿ ಮಹಿಳೆಯರನ್ನು ಹೀಗಳೆಯುವ ಅಥವಾ ಜರೆಯುವಂತಹ ಸಂಭಾಷಣೆಗಳಿರಬಾರದು. ಅವರ ಆಕಾರವನ್ನುದ್ದೇಶಿಸಿ ಕೆಟ್ಟಕೆಟ್ಟದಾಗಿ ಉದ್ಗರಿಸುವ, ಸಂಬೋಧಿಸುವ ಕೆಲವು ಅಭ್ಯಾಸಗಳಿವೆ. ಮಹಿಳೆಯರು ಹೊಂದಾಣಿಕೆ ಮಾಡಿಕೊಂಡು ಹೋಗಲಿ ಎಂಬ ವಾತಾವರಣದಿಂದಲೇ ಅಸಹಜಗಳೆಲ್ಲವೂ ಸಹಜವಾಗಿವೆ. ನಾವು ಕೇಳುತ್ತಿರುವುದು ಸುರಕ್ಷಿತ ವಾತಾವರಣ. ದೂರು ಸಲ್ಲಿಸಲು ಒಂದು ಸಮಿತಿ ಅಷ್ಟೇ ಅಲ್ಲ.

ಅದೆಷ್ಟೋ ಸಲ ಕಡಿಮೆ ಬಜೆಟ್‌ನ ನೆಪ ಹೇಳಿ, ಮಹಿಳೆಯರಿಗೆ ಬಟ್ಟೆ ಬದಲಿಸಲೂ ಹೆಚ್ಚಿನ ಸೌಕರ್ಯ ನೀಡಿರುವುದಿಲ್ಲ. ಸಹಕಲಾವಿದರು ನಾಲ್ಕು ದಿಕ್ಕಿಗೂ ಸೀರೆ ಹಿಡಿದು, ಮರೆ ಮಾಡಿರುತ್ತಾರೆ. ಅಂಥ ಮರೆಯಲ್ಲಿ ಬಟ್ಟೆ ಬದಲಿಸಿ ಶೂಟಿಂಗ್ ಪೂರೈಸಿದ ಅದೆಷ್ಟೋ ಜನ ಹಿರಿಕಿರಿಯ ಕಲಾವಿದೆಯರಿದ್ದಾರೆ. ಎಲ್ಲರಿಗೂ ವ್ಯಾನಿಟಿ ವ್ಯಾನ್ ಬೇಕೆಂದು ಬೇಡಿಕೆ ಇಡುತ್ತಿಲ್ಲ. ಆದರೆ ಸಮಾಧಾನದಿಂದ ಬಟ್ಟೆ ಬದಲಿಸುವಷ್ಟು ಮೂಲ ಸೌಕರ್ಯವನ್ನೂ ಕೇಳಬಾರದೇ? ಶೌಚಾಲಯಗಳಿರುವುದಿಲ್ಲ. ನೈರ್ಮಲ್ಯ ಇರುವುದಿಲ್ಲ. ಹೀಗೊಮ್ಮೆ ಏನಾದರೂ ಕೇಳಿದರೆ 'ಕಂಡಿದೀವಿ ಬಾರಮ್ಮ...' ಎಂಬ ತಾತ್ಸಾರದ ನುಡಿಗಳೇ ಸಿಗುತ್ತವೆ. ಮನಸಿಗೆ ಆಗುವ ಕಿರಿಕಿರಿಯೊಂದಿಗೆ ಈ ಅವಮಾನವನ್ನೂ ಅವರು ಸಹಿಸಿಕೊಳ್ಳಬೇಕಲ್ಲ... ಇಂಥ ಸೌಕರ್ಯಗಳನ್ನೆಲ್ಲ ಚಿತ್ರೋದ್ಯಮ ಬಿಟ್ಟು ಯಾರ ಬಳಿ ಕೇಳುವುದು?

ನಮ್ಮ ಪೀಳಿಗೆಯವರಿಗೆ ಯಾರೂ ಗುಡ್ ಟಚ್, ಬ್ಯಾಡ್ ಟಚ್‌ಗಳಂಥದ್ದನ್ನು ಹೇಳಿಕೊಟ್ಟಿರಲಿಲ್ಲ. 'ಏನಿದ್ದರೂ ಮಾತಾಡಕೂಡದು, ಸಹಿಸಿಕೊಂಡು ಸುಮ್ನಿರು' ಎಂದೇ ಬೆಳೆಸಿದರು. ನಮ್ಮ ಮುಂದಿನ ತಲೆಮಾರು ಸಹ ಇಂಥದ್ದೇ ಪರಿಸರದಲ್ಲಿ ಬೆಳೆಯಬೇಕೆ? ಈ ಪ್ರಶ್ನೆಗಳನ್ನು ಎತ್ತಿದಾಗಲೆಲ್ಲ, 'ಗ್ಲಾಮರಸ್ ಲೋಕಕ್ಕೆ ಬರುವಾಗ ಗೊತ್ತಿರಲಿಲ್ಲವೇ... ಈ ಕಷ್ಟಗಳೆಲ್ಲ ಇವೆಯೆಂದು ತಿಳಿದಿರಲಿಲ್ಲವೇ...' ಎಂದು ಮರು ಪ್ರಶ್ನಿಸುತ್ತಾರೆ. 'ಹಣ ಬೇಕು, ಹೆಸರು ಬೇಕು, ಅವಕಾಶಗಳು ಬೇಕು ಎನ್ನುವುದಾದರೆ ಇಂಥವನ್ನು ಸಹಿಸಲೇಬೇಕು' ಎಂಬಂಥ ಶರಾ ಬರೆಯುತ್ತಾರೆ.

ಕಲಾವಿದೆಯರು ಆಸಕ್ತಿಯಿಂದ ಬರುತ್ತಾರೆ. ಜಾಣ್ಮೆ ಇದ್ದಲ್ಲಿ, ಪ್ರತಿಭೆ ಇದ್ದಲ್ಲಿ ನೆಲೆ ನಿಲ್ಲುತ್ತಾರೆ ಎನ್ನುವಂಥ ವಾತಾವರಣ ಬರಬೇಕಿದೆ. ಸ್ಪಷ್ಟವಾದ ಒಪ್ಪಂದಗಳಾಗಬೇಕು. ಶೃಂಗಾರದಂಥ ದೃಶ್ಯಗಳಲ್ಲಿ ನಟಿಸುವಾಗಲೂ ನಟನೆ ಮತ್ತು ಅನುಭೂತಿಯ ನಡುವೆ ತೆಳ್ಳಗಿನ ಗೆರೆ ಇರುತ್ತದೆ. ಅದು ಸ್ಪಷ್ಟವಾಗಬೇಕು. ಬಾಲಿವುಡ್‌ನಲ್ಲಿ, ಹಾಲಿವುಡ್‌ನಲ್ಲಿ ಇಂಥ ವಿಶೇಷ ಒಪ್ಪಂದಗಳಾಗುತ್ತವೆ. ಇಲ್ಲಿಯೂ ಆಗಲಿ. ಬೋಲ್ಡ್ ಸೀನುಗಳಿವೆ ಎಂದು ಮಾತಿನಲ್ಲಿ ತೇಲಿಸುವುದಲ್ಲ. ಅದೆಷ್ಟು ಬಯಲಾಗಬೇಕು, ಬೆತ್ತಲಾಗಬೇಕು, ಅದೆಷ್ಟು ಅನಿವಾರ್ಯ ಎಂಬುದೆಲ್ಲವೂ ಒಪ್ಪಂದದ ಮೊದಲಿನ ಚರ್ಚೆಯಲ್ಲಿ ಮತ್ತು ಲಿಖಿತವಾಗಿ ದಾಖಲಾಗಬೇಕು.

ಈಗ 'ಫೈರ್' ಮುಂದಿಟ್ಟಿರುವ ಬೇಡಿಕೆಯನ್ನು ಕೇವಲ ನಟ, ನಟಿಯರು ಮತ್ತು ಕಿರುಕುಳದ ದೃಷ್ಟಿಯಿಂದ ನೋಡಲಾಗುತ್ತಿದೆ. ಸಹಕಲಾವಿದರು, ಕಲಾವಿದೆಯರಲ್ಲಿ ತಂತ್ರಜ್ಞರಲ್ಲಿ, ಸಹಾಯಕರಲ್ಲಿ ಎ, ಬಿ, ಸಿ ಎಂದು ಗ್ರೇಡುಗಳನ್ನು ಮಾಡಿದ್ದಾರೆ. ಇಲ್ಲಿ ವಯಸ್ಸು, ಬಣ್ಣ, ಗಾತ್ರ ಎಲ್ಲವೂ ಪರಿಗಣಿಸಲಾಗುತ್ತಿದೆ. ಆದರೆ ಇವೆಲ್ಲವೂ ಅಲಿಖಿತವಾಗಿವೆ. ಎಲ್ಲ ನಿಯಮಗಳೂ ಮಹಿಳೆಯರನ್ನು ಶೋಷಿಸುವ ದಿಸೆಯಲ್ಲಿ ಅನುಕೂಲಸಿಂಧುವಾಗಿರುವಂತೆ ನೋಡಿಕೊಳ್ಳಲಾಗುತ್ತಿದೆ. 'ಫೈರ್' ಕೇಳುತ್ತಿರುವುದು ಜೀವಪರವಾಗಿರುವ ವ್ಯವಸ್ಥೆ. ಪುರುಷರ ವಿರುದ್ಧ ಸುಳ್ಳು ದೂರುಗಳು ಬಂದರೆ, ಮಿಥ್ಯಾರೋಪಗಳಿದ್ದರೆ ಅವರೊಟ್ಟಿಗೆ ನಿಲ್ಲುವುದು ಬೇಡವೇ? ಕೇವಲ ಸ್ತ್ರೀ ಪುರುಷರ ಬಗೆಗೆ ಮಾತಾಡುವುದಲ್ಲ, ಲಿಂಗತ್ವ ಅಲ್ಪಸಂಖ್ಯಾತರನ್ನು ನಮ್ಮ ಸಿನಿಮಾಗಳಲ್ಲಿ ಹೇಗೆ ನಡೆಸಿಕೊಳ್ಳುತ್ತಾರೆ ಎಂಬ ಅಂದಾಜಾದರೂ ಇದೆಯೇ? ಒಂದೋ ಎರಡೂ ಒಳ್ಳೆಯ ಸಿನಿಮಾಗಳು ಬಂದಿವೆ. ಆದರೆ ಬಹುತೇಕ ಸಿನಿಮಾಗಳಲ್ಲಿ ಅವರಿಗೆ ನೀಡುವ ಪಾತ್ರಗಳು, ಸಂಭಾಷಣೆ, ಸಂಭಾವನೆ, ಅವರಿಗೆ ನೀಡುವ ಸೌಕರ್ಯ... ಇವೆಲ್ಲ ಚರ್ಚೆಯಾಗಬೇಕಿದೆ.

'ಪಾಶ್'ನಂಥ ಸಮಿತಿ ರಚನೆಯಾದರೆ, ಕಲಾವಿದರೆಲ್ಲರಿಗೂ ತಾವು ಸುರಕ್ಷಿತ ವಾತಾವರಣದಲ್ಲಿ ಕೆಲಸ ಮಾಡುತ್ತಿದ್ದೇವೆ ಎಂಬ ವಿಶ್ವಾಸ ಮೂಡುತ್ತದೆ. ಅಪಸವ್ಯಗಳಾದಾಗ ಧ್ವನಿ ಎತ್ತಲು ನೈತಿಕ ಸ್ಥೈರ್ಯವಿರುತ್ತದೆ. ಈ ಹಿಂದೆ ನನ್ನ ಸಿನಿಮಾ ಒಂದರಲ್ಲಿ ನಟಿಸಿದ, ನಟಿಯೊಬ್ಬಳು ಬಂದು, 'ನಿಮ್ಮ ಸೆಟ್‌ನಲ್ಲಿ ಅದೆಷ್ಟು ಸುರಕ್ಷಿತ ಮತ್ತು ಬೆಚ್ಚನೆಯ ವಾತಾವರಣವಿದೆ. ಎಲ್ಲ ಕಡೆಯೂ ಹೀಗಿದ್ದರೆ ನಾವಿನ್ನೂ ಅದೆಷ್ಟು ಚೆನ್ನಾಗಿ ಕೆಲಸ ಮಾಡಬಹುದು' ಎಂದಿದ್ದರು. ಈ ಮೆಚ್ಚುಗೆಗಿಂತಲೂ, ಹೇಳದ ದೂರುಗಳೆಷ್ಟು ಇದ್ದವೋ.. ಇದು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿರುವ ವಿಷಯ. ಆ ಮೆಚ್ಚುಗೆಯಂಥ ವಾತಾವರಣ ನಿರ್ಮಿಸುವುದು 'ಫೈರ್' ಗುರಿ.

ಲೇಖಕಿ: 'ಫೈರ್' ಅಧ್ಯಕ್ಷೆ, ಚಿತ್ರ ನಿರ್ದೇಶಕಿ

ನಿರೂಪಣೆ: ರಶ್ಮಿ ಎಸ್.

ಕಲಾವಿದರಿಗೆ ಸ್ಪರ್ಶದ ಅರಿವು, ವೃತ್ತಿಪರತೆ ಬಹಳ ಮುಖ್ಯ

ಸಿನಿಮಾವು ದೇಹ ಮತ್ತು ಮನಸ್ಸಿನ ದ್ವಂದ್ವಗಳನ್ನು ಎತ್ತಿ ಹಿಡಿಯುವ ಮಾಧ್ಯಮ. ಇದೊಂದು ವೃತ್ತಿ, ತಾನು ಪಾತ್ರ ಮಾತ್ರ ಮಾಡುತ್ತಿದ್ದೇನೆ ಎಂಬ ಅರಿವು ಚಿತ್ರರಂಗದಲ್ಲಿ ತೊಡಗಿರುವ ಮಹಿಳೆಗೆ ಇರಬೇಕು. ಚಿತ್ರರಂಗಕ್ಕೆ ಬರುವ ಪ್ರತಿ ಹೆಣ್ಣಿಗೂ ಸ್ಪರ್ಶದ ಬಗ್ಗೆ ಸ್ಪಷ್ಟ ಅರಿವಿದೆ. ಮಹಿಳೆಯು ಚಿತ್ರರಂಗದಲ್ಲಿ ವೃತ್ತಿಪರತೆಯಿಂದ ತೊಡಗಿಕೊಂಡು, ತನ್ನ ಜವಾಬ್ದಾರಿಯನ್ನು ಸಮರ್ಪಕವಾಗಿ ಗ್ರಹಿಸಿ ಸಹಕಲಾವಿದರ ಘನತೆಯನ್ನು ಉಳಿಸಿದರೆ ಮಾತ್ರ ವೃತ್ತಿಪರತೆ ಎಂಬ ಪದಕ್ಕೆ ಅರ್ಥ ಬರುತ್ತದೆ

● ಭಾವನಾ

'**ಕನ್ನಡ** ಚಿತ್ರೋದ್ಯಮದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು, ಲೈಂಗಿಕ ಕಿರುಕುಳದ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಲು ನಿವೃತ್ತ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ಸಮಿತಿ ರಚಿಸಬೇಕು' ಎಂದು ಫಿಲ್ಮ್ ಇಂಡಸ್ಟ್ರಿ ಫಾರ್ ರೈಟ್ಸ್ ಆ್ಯಂಡ್ ಈಕ್ವಾಲಿಟಿ (ಫೈರ್) ಆಗ್ರಹಿಸಿದೆ. ಇದೇ ವಿಚಾರವಾಗಿ ಒಂದು ಸಭೆಯೂ ನಡೆದಿದೆ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, ನಮ್ಮಲ್ಲಿ ಕನ್ನಡ ಚಿತ್ರೋದ್ಯಮ ಎನ್ನುವುದೇ ಇಲ್ಲ. ಇದು ದಾಖಲೆಯಾಗಿ ಕಾಗದದ ಮೇಲೆ ಎಲ್ಲೂ ಇಲ್ಲ. ನಿರ್ಮಾಪಕರು, ಪ್ರದರ್ಶಕರು ಮತ್ತು ವಿತರಕರು ಸೇರಿಕೊಂಡು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ (ಕೆಎಫ್‌ಸಿಸಿ) ರಚಿಸಿಕೊಂಡಿದ್ದಾರೆ. ಚಿತ್ರರಂಗದಲ್ಲಿ ತೊಡಗಿಕೊಂಡಿರುವ ನಾವು ಬೇರೆಯೇ ಕಾಯ್ದೆಯಡಿ ಬರುತ್ತೇವೆ. ಹೀಗಿರುವಾಗ ಕೆಎಫ್‌ಸಿಸಿಗೂ, ಸಿನಿಮಾ ಕ್ಷೇತ್ರದಲ್ಲಿನ ಮಹಿಳೆಯರಿಗೂ ಏನು ಸಂಬಂಧ? ಹಾಗಾಗಿ, ಮಂಡಳಿಯಲ್ಲಿ ಲೈಂಗಿಕ ದೌರ್ಜನ್ಯ ತಡೆ (ಪಾಶ್) ಸಮಿತಿ ರಚಿಸಲು ಸಾಧ್ಯವೇ ಇಲ್ಲ.

ಇದೇ 16ರಂದು ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ನೇತೃತ್ವದಲ್ಲಿ ನಡೆದ ಸಭೆಯ ಬಗ್ಗೆ ನನಗೆ ತಕರಾರಿದೆ. ಯಾವುದೋ ಒಂದು ಸಂಸ್ಥೆ ಹೋಗಿ ಪಾಶ್ ಸಮಿತಿ ರಚನೆ ಬಗ್ಗೆ ಆಗ್ರಹಿಸಿದಾಗ ಆಯೋಗವು ಯಾವ ಆಧಾರದ ಮೇಲೆ ವಾಣಿಜ್ಯ ಮಂಡಳಿಗೆ ಬಂದು ಸಭೆ ನಡೆಸಿತ್ತು? 'ಕೇರಳದಲ್ಲಿ 'ವಿಮೆನ್ ಇನ್ ಸಿನಿಮಾ ಕಲೆಕ್ಟಿವ್' ಎಂಬ ಸಂಸ್ಥೆ ಕೊಟ್ಟ ದೂರಿನ ಆಧಾರದಲ್ಲಿ ಅಲ್ಲಿನ ಸರ್ಕಾರ ನಿವೃತ್ತ ಮಹಿಳಾ ನ್ಯಾಯಮೂರ್ತಿಯವರ ನೇತೃತ್ವದಲ್ಲಿ ರಚಿಸಿದ ಸಮಿತಿಯಂತೆ ನಮ್ಮ ರಾಜ್ಯದಲ್ಲೂ ಸಮಿತಿ ರಚನೆ ಮಾಡಲೇಬೇಕು, ಚಿತ್ರರಂಗದಲ್ಲಿ ಲೈಂಗಿಕ ದೌರ್ಜನ್ಯ ತಡೆ (ಪಾಶ್) ಸಮಿತಿಯನ್ನು ಕಡ್ಡಾಯವಾಗಿ ರಚಿಸಲೇಬೇಕು' ಎಂಬ ರೀತಿಯಲ್ಲಿ ಮಾತನಾಡಿದರು. ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು ಕನ್ನಡ ಚಲನಚಿತ್ರರಂಗದ ಬಗ್ಗೆ ಮಾಹಿತಿಯನ್ನು ಪಡೆಯದೇ ಸಭೆಗೆ ಬಂದಂತೆ ನನಗೆ ಭಾಸವಾಯಿತು.

ಏಕೆಂದರೆ, ನಮ್ಮ ದೇಶದಲ್ಲಿ ಪ್ರತಿ ಕಾಯ್ದೆಗೂ ಅದರದೇ ಆದ ಮಾನದಂಡಗಳಿವೆ. ಕಾಯ್ದೆ ಜಾರಿಯಾದ ಬಳಿಕ ಅದನ್ನೇ ಮುಂದಿಟ್ಟುಕೊಂಡು ಸಹಕಲಾವಿದರು ಅದರಲ್ಲೂ ಪುರುಷ ಕಲಾವಿದರ ಮೇಲೆ ಸುಳ್ಳು ಆಪಾದನೆಗಳು ಬಂದಲ್ಲಿ ಆ ಕಲಾವಿದರ ಹೆಂಡತಿ, ತಾಯಿ, ಮಗಳು ಹೀಗೆ ಕುಟುಂಬದ ಎಲ್ಲ ಮಹಿಳೆಯರೂ ಸಮಾಜದ ದೃಷ್ಟಿಯಲ್ಲಿ ಆರೋಪಿಗಳೇ ಎಂಬಂತಹ ಸ್ಥಿತಿ ನಿರ್ಮಾಣವಾಗಬಹುದು. ಅದು ಆ ಕಲಾವಿದನ ಇಡೀ ಕುಟುಂಬದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು. ಸಾಮಾಜಿಕ ಮಾಧ್ಯಮಗಳು ಉತ್ತುಂಗದಲ್ಲಿರುವ ಇಂದಿನ ಜಗತ್ತಿನಲ್ಲಿ ಯಾವುದೇ ಸುದ್ದಿ ಕಾಳ್ಗಿಚ್ಚಿನಂತೆ ಹತ್ತಿ ಉರಿಯುತ್ತದೆ. ಚಿತ್ರರಂಗದಲ್ಲಿ ಹಲವು ನಿರ್ಮಾಪಕರು, ಕಲಾವಿದರಿಗೆ ಇಂತಹ ಅನುಭವಗಳು ಈಗಾಗಲೇ ಆಗಿವೆ. ಹಾಗಾಗಿ, ಯಾವುದೇ ಕಾಯ್ದೆ, ಸಮಿತಿಯ ಸ್ಥಾಪನೆ ಅಥವಾ ನಿಯಮಗಳನ್ನು ಜಾರಿಗೊಳಿಸುವಾಗ ಎಲ್ಲ ಆಯಾಮಗಳಲ್ಲೂ ಯೋಚಿಸಬೇಕಾಗುತ್ತದೆ.

'ಫೈರ್' ಸಂಸ್ಥೆಯು ಮುಖ್ಯಮಂತ್ರಿಯವರಿಗೆ ನೀಡಿದ ಮನವಿ ಪತ್ರದಲ್ಲಿ ಹಲವು ಖ್ಯಾತ ನಟ, ನಟಿಯರ ಹೆಸರಿದೆ. ಚಿತ್ರರಂಗದಲ್ಲಿ ಮಹಿಳೆಯರಿಗೆ ಸಮಸ್ಯೆಗಳಿವೆ, ಅವರ ಮೇಲೆ ಲೈಂಗಿಕ ಕಿರುಕುಳ, ಶೋಷಣೆ ನಡೆಯುತ್ತಿದೆ ಎಂದಾಗಿದ್ದರೆ ಅವರೆಲ್ಲ ಇಲ್ಲಿಯವರೆಗೆ ಏಕೆ ಧ್ವನಿ ಎತ್ತಿಲ್ಲ? ಮೊನ್ನೆ ನಡೆದ ಸಭೆಗೆ ಅವರು ಏಕೆ ಬರಲಿಲ್ಲ? ಸಂತ್ರಸ್ತ ಮಹಿಳೆಯರಿಗೆ ನ್ಯಾಯ ಕೊಡಿಸುವ ಪ್ರಯತ್ನ ಏಕೆ ಮಾಡಿಲ್ಲ? ಮೂಕವೇದನೆ ಅನುಭವಿಸುವ ಸ್ಥಿತಿ ಏಕೆ ಬಂತು? ಯಾವ ಆಧಾರದ ಮೇಲೆ ಈ ರೀತಿ ಸಮಿತಿ ಆಗಬೇಕು ಎಂದು ಅವರು ಈ ಪ್ರಸ್ತಾವಕ್ಕೆ ಬೆಂಬಲ ಸೂಚಿಸಿದ್ದಾರೆ? ಮಾಧ್ಯಮಗಳ ಎದುರು ಕಳೆದ ಹಲವು ವರ್ಷಗಳಿಂದಲೂ ಮಾತನಾಡುತ್ತಾ ಬಂದಿರುವ ನಿರ್ದೇಶಕಿ ಕವಿತಾ ಲಂಕೇಶ್ ಅವರು ಈಗ, 'ನಮ್ಮ ಧ್ವನಿಯನ್ನು ಯಾರೂ ಕೇಳುತ್ತಿಲ್ಲ' ಎಂದು ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಮನವಿ ಮಾಡಿರುವುದು ಅಚ್ಚರಿ ಉಂಟು ಮಾಡಿದೆ.

ಶಿವರಾಮ ಕಾರಂತರ ಜನಪ್ರಿಯ ಕೃತಿಯಾಗಿರುವ 'ಮೈಮನಗಳ ಸುಳಿಯಲ್ಲಿ' ಶೀರ್ಷಿಕೆ ನನಗೆ ನೆನಪಿಗೆ ಬರುತ್ತಿದೆ. ಸಿನಿಮಾವು ದೇಹ ಮತ್ತು ಮನಸ್ಸಿನ ದ್ವಂದ್ವಗಳನ್ನು ಎತ್ತಿ ಹಿಡಿಯುವ ಮಾಧ್ಯಮ. ಈ ರಂಗದಲ್ಲಿ ತೊಡಗಿರುವ ಹೆಣ್ಣು, ಚಿತ್ರೀಕರಣಕ್ಕೆ ಯಾವ ರೂಪದಲ್ಲಿ ಬರುತ್ತಾಳೆ ಎಂಬುದು ಬಹಳ ಮುಖ್ಯ. ಅಂದರೆ, ಅವಳು ಮಗಳಾಗಿ ಬರುತ್ತಿದ್ದಾಳೆಯೇ, ಹೆಂಡತಿಯಾಗಿ ಬರುತ್ತಿದ್ದಾಳೆಯೇ, ಪ್ರೇಯಸಿಯಾಗಿ ಬರುತ್ತಿದ್ದಳೆಯೇ ಎಂಬುದು ಮುಖ್ಯವಾಗುತ್ತದೆ. ಇದೊಂದು ವೃತ್ತಿ, ತಾನು ಪಾತ್ರ ಮಾತ್ರ ಮಾಡುತ್ತಿದ್ದೇನೆ ಎಂಬ ಅರಿವು ಅವಳಿಗೆ ಇದೆಯೇ ಎಂಬುದೂ ಬಹು ಮುಖ್ಯ.

ಮಾನಸಿಕವಾಗಿ ಒಂದು ಪಾತ್ರವಾಗಿ ಸಜ್ಜುಗೊಂಡು ಚಿತ್ರೀಕರಣಕ್ಕೆ ಬರದೇ ಇದ್ದಲ್ಲಿ ಯಾವುದೋ ಗಂಡಸಿನ, ಅಂದರೆ ಆ ಚಿತ್ರೀಕರಣದಲ್ಲಿ ಪಾಲ್ಗೊಂಡಿರುವ ಪುರುಷನ ಸ್ಪರ್ಶ ಆಕೆಗೆ ಕಿರುಕುಳದಂತಾಗಬಹುದು. ಆ ಪ್ರತಿಕ್ರಿಯೆಯಿಂದ ಅದೇ ದೃಶ್ಯದಲ್ಲಿರುವ ಪುರುಷನಿಗೂ ಮುಜುಗರವಾಗುವ ಸಾಧ್ಯತೆ ಇದೆ. ಇದರ ಪರಿಣಾಮ ಆ ಪುರುಷ ಕಲಾವಿದನ ಮೇಲೂ ಆಗುತ್ತದೆ. ಸ್ಪರ್ಶವು ಕಲಾವಿದೆ ಅಥವಾ ಕಲಾವಿದನಿಗೆ ಬಹಳ ಮುಖ್ಯ. ಈ ರಂಗಕ್ಕೆ ಬರುವ ಪ್ರತಿ ಹೆಣ್ಣಿಗೂ ಸ್ಪರ್ಶದ ಬಗ್ಗೆ ಸ್ಪಷ್ಟವಾದ ಅರಿವಿದೆ. ಮಹಿಳೆಯು ಚಿತ್ರರಂಗದಲ್ಲಿ ವೃತ್ತಿಪರತೆಯಿಂದ ತೊಡಗಿಕೊಂಡು, ತನ್ನ ಜವಾಬ್ದಾರಿಯನ್ನು ಸಮರ್ಪಕವಾಗಿ ಗ್ರಹಿಸಿ ಸಹಕಲಾವಿದರ ಘನತೆಯನ್ನು ಉಳಿಸಿದರೆ ಮಾತ್ರ ವೃತ್ತಿಪರತೆ ಎಂಬ ಪದಕ್ಕೆ ಅರ್ಥ ಬರುತ್ತದೆ.

ಒಂದು ವೇಳೆ ಚಿತ್ರರಂಗದಲ್ಲಿ ಶೋಷಣೆ, ದೌರ್ಜನ್ಯ, ಕಿರುಕುಳ ನಡೆಯುತ್ತಿದೆ ಎಂದಾದರೆ, ಈ ಶೋಷಣೆ, ದೌರ್ಜನ್ಯ, ಕಿರುಕುಳ ಎಂದರೇನು ಎಂಬ ಬಗ್ಗೆ ಸೂಕ್ತ ವಿವರಣೆ ಬೇಕು. 'ನೀರು ಕುಡಿಯಲು ಬಿಟ್ಟಿಲ್ಲ', 'ಶೌಚಾಲಯಕ್ಕೆ ಹೋಗಲು ಬಿಟ್ಟಿಲ್ಲ', 'ಮೂಲಸೌಕರ್ಯವಿಲ್ಲ' ಎಂದು ದೂರುವ ಮೊದಲು ಇರುವ ಸ್ಥಳ ಹಾಗೂ ಪರಿಸ್ಥಿತಿಯನ್ನು ನಾವು ಅರಿತುಕೊಳ್ಳುವುದು ಮುಖ್ಯ. ಕೆಲವು ಸಿನಿಮಾಗಳು ₹25 ಲಕ್ಷದಲ್ಲಿ ಮುಗಿದರೆ, ಇನ್ನೂ ಕೆಲ ಸಿನಿಮಾಗಳು ₹200 ಕೋಟಿಯಲ್ಲಿ ಆಗುತ್ತವೆ. ಹೀಗಿರುವಾಗ ₹25 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗುವ ಸಿನಿಮಾ ಸೆಟ್‌ನಲ್ಲಿ ಬಾಟಲಿ ನೀರು ಕೊಟ್ಟಿಲ್ಲ ಎಂದು ದೂರಲು ಆಗುವುದಿಲ್ಲ.

ಮಾಫಿಯಾ, ಹೊಂದಾಣಿಕೆ, ರಾಜಿ... ಹೀಗೆ ಎಲ್ಲರ ಕಣ್ಣು, ಕಿವಿ ಎದ್ದು ನಿಲ್ಲುವಂತೆ ಸೆಳೆಯುವಂತಹ ಪದಗಳು, ಭಾಷೆಯ ಬಳಕೆಯಿಂದ ಮತ್ತು ಟಿಆರ್‌ಪಿ ಹೆಸರಿನಲ್ಲಿ ಇದನ್ನು ಸಮರ್ಥಿಸಿಕೊಳ್ಳುತ್ತಿರುವ ಕೆಲವರಿಂದ ಈ ಇಡೀ ವಿಷಯವೇ ಬೇರೆ ಬೇರೆ ರೂಪಗಳನ್ನು ಪಡೆಯುತ್ತಿರುವುದು ಖಂಡನೀಯ ಮತ್ತು ಸರ್ವಥಾ ಒಪ್ಪುವಂತಹದ್ದಲ್ಲ.

ಲೇಖಕಿ: ಚಿತ್ರ ನಟಿ

ನಿರೂಪಣೆ: ಅಭಿಲಾಷ್ ಪಿ.ಎಸ್.

ಸಿನಿ ಬಿಟ್ಸ್

ರಾಜೀವ್ ಹನುಗೆ 'ಭೀಮ' ಬಲ

ರಾಜೀವ್

ಮಂಜು ಕಥೆ ಬರೆದು ನಿರ್ದೇಶಿಸಿರುವ, 'ಬಿಗ್‌ಬಾಸ್' ಖ್ಯಾತಿಯ ರಾಜೀವ್ ಹನು ನಟಿಸಿರುವ 'ಬೇಗೂರು ಕಾಲೋನಿ' ಚಿತ್ರದ ಕ್ಯಾರೆಕ್ಟರ್ ಮೋಷನ್ ಪೋಸ್ಟರ್ ಅನ್ನು ನಟ 'ದುನಿಯಾ' ವಿಜಯ್ ಇತ್ತೀಚೆಗೆ ಬಿಡುಗಡೆಗೊಳಿಸಿದರು.

ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಕಲಾವಿದರ ಸಂಘದಲ್ಲಿ ಮೋಷನ್ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ.ಎನ್. ಸುರೇಶ್, ಸಂಭಾಷಣೆಗಾರ ಮಾಸ್ತಿ ಉಪಸ್ಥಿತರಿದ್ದರು. 'ಹೋರಾಟವನ್ನು ಇಟ್ಟುಕೊಂಡು ಮಾಡಿರುವ ಕಥೆಯಂತೆ ಇದು ಕಾಣುತ್ತಿದೆ. ಈ ಹೋರಾಟದ ಕಥೆ ಸರ್ಕಾರಕ್ಕೆ ಮುಟ್ಟಲಿ. ಕಾಲೋನಿ ಇಲ್ಲದೇ ನಗರ ಆಗುವುದಿಲ್ಲ. ಮಾಲ್ ನಗರ ಆಗುವುದು ಕಾಲೋನಿಯಿಂದ. ಇಡೀ ತಂಡಕ್ಕೆ ಶುಭವಾಗಲಿ' ಎಂದರು ವಿಜಯ್.

'ಕಾಲೋನಿಯಲ್ಲಿ ಎಲ್ಲಾ ರೀತಿಯ ಜನ ವಾಸ ಮಾಡುತ್ತಾರೆ. ಅಲ್ಲಿ ನಡೆಯುವ ಒಂದು ಸಣ್ಣ ಕಥೆಯೇ ಈ ಸಿನಿಮಾ. ಇದು ಹೋರಾಟದ ಕಥೆ' ಎನ್ನುತ್ತಾರೆ ಮಂಜು. ಈ ಚಿತ್ರವನ್ನು ಶ್ರೀಮಾ ಸಿನಿಮಾಸ್ ಬ್ಯಾನರ್‌ನಲ್ಲಿ ಎಂ.ಶ್ರೀನಿವಾಸ್ ಬಾಬು ನಿರ್ಮಾಣ ಮಾಡಿದ್ದು, ರಾಜೀವ್ ಹನು ಸೇರಿದಂತೆ ಮಂಜು, ಪಲ್ಲವಿ ಹರ್ವ, ಕೀರ್ತಿ ಭಂಡಾರಿ, ಬಲ ರಾಜವಾಡಿ ಮತ್ತಿತರರು ಬಣ್ಣ ಹಚ್ಚಿದ್ದಾರೆ. ಪ್ರಮೋದ್ ತಳವಾರ್ ಸಂಕಲನ, ಕಾರ್ತಿಕ್ ಛಾಯಾಚಿತ್ರಗ್ರಹಣ ಹಾಗೂ ಅಭಿನಂದನ್ ಕಶ್ಯಪ್ ಸಂಗೀತ ಚಿತ್ರಕ್ಕಿದೆ. ❖

'45' ಸಿನಿಮಾದಲ್ಲಿ ಹೀಗಿದ್ದಾರೆ ಉಪೇಂದ್ರ

ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಆ್ಯಕ್ಷನ್ ಕಟ್ ಹೇಳುತ್ತಿರುವ, ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಜೊತೆಯಾಗಿ ಕಾಣಿಸಿಕೊಳ್ಳಲಿರುವ '45' ಸಿನಿಮಾದ ಬಗ್ಗೆ ಪ್ರೇಕ್ಷಕರಲ್ಲಿ ಕುತೂಹಲವಿದೆ.

ಅರ್ಜುನ್ ಜನ್ಯ ಚೊಚ್ಚಲ ನಿರ್ದೇಶನದ ಈ ಸಿನಿಮಾದ ಚಿತ್ರೀಕರಣ ಅಂತಿಮ ಹಂತಕ್ಕೆ ತಲುಪಿದ್ದು, ಇತ್ತೀಚೆಗೆ ಉಪೇಂದ್ರ ಜನ್ಮದಿನದಂದು ಚಿತ್ರದ ಹೊಸ ಪೋಸ್ಟರ್ ಬಿಡುಗಡೆಯಾಗಿದೆ. ಭಿನ್ನವಾದ ಲುಕ್‌ನಲ್ಲಿ ಉಪೇಂದ್ರ ಕಾಣಿಸಿಕೊಂಡಿದ್ದಾರೆ. ಸೂರಜ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಉಮಾ ರಮೇಶ್ ರೆಡ್ಡಿ ಅವರು ನಿರ್ಮಿಸುತ್ತಿರುವ ಈ ಸಿನಿಮಾ ಕನ್ನಡ, ತಮಿಳು, ತೆಲುಗು, ಹಿಂದಿ ಹಾಗೂ ಮಲಯಾಳದಲ್ಲಿ ತೆರೆಕಾಣಲಿದೆ. ಚಿತ್ರಕ್ಕೆ ಅರ್ಜುನ್ ಜನ್ಯ ಅವರೇ ಚಿತ್ರಕಥೆ ಬರೆದಿದ್ದಾರೆ. ಯೋಗರಾಜ್ ಭಟ್ ನಿರ್ದೇಶನದ 'ಗಾಳಿಪಟ 2' ಚಿತ್ರದ ಬಳಿಕ ರಮೇಶ್ ರೆಡ್ಡಿ ಅವರ ಸೂರಜ್ ಪ್ರೊಡಕ್ಷನ್ಸ್‌ನ ಎರಡನೇ ಸಿನಿಮಾವಿದು.

ಉಪೇಂದ್ರ

ಸಿನಿಮಾ ಅದ್ದೂರಿಯಾಗಿ ನಿರ್ಮಾಣವಾಗಿದ್ದು, ಶಿವರಾಜ್‌ಕುಮಾರ್ ಪಾತ್ರ ಪ್ರವೇಶದ ಚಿತ್ರೀಕರಣಕ್ಕಾಗಿ ಸಾವಿರ ಜನ ಜೂನಿಯರ್ ಆರ್ಟಿಸ್ಟ್‌ಗಳನ್ನು ಬಳಸಿಕೊಳ್ಳಲಾಗಿತ್ತು. ಚಿತ್ರದ 10–12 ನಿಮಿಷದ ಕ್ಲೈಮ್ಯಾಕ್ಸ್ ದೃಶ್ಯಗಳಿಗೇ 30 ದಿನಗಳ ಶೂಟಿಂಗ್ ಯೋಜನೆಯ ಹಾಕಿಕೊಂಡಿದ್ದೇವೆ. ಸಾಹಸ ನಿರ್ದೇಶಕ ರವಿ ವರ್ಮಾ ಅವರು ಇದನ್ನು ನಿರ್ದೇಶಿಸಲಿದ್ದಾರೆ ಎಂದು ಅರ್ಜುನ್ ಜನ್ಯ ಇತ್ತೀಚೆಗೆ ಹೇಳಿದ್ದರು. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5809

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಒಪ್ಪವಾಗಿ ಮಾಡಿರುವ ತರ್ಜುಮೆ (4)
3.ಅಂತರಂಗದ ಒಪ್ಪಿಗೆ (4)
5.ಸೂರ್ಯನನ್ನು ಹೀಗೂ ಕರೆಯುತ್ತಾರೆ (3)
7.ಮಂದಿಗೆಲ್ಲಾ ತಿಳಿದಿರುವಂಥದ್ದು (5)
10.ಬಿಳುಪು ಎಂಬರ್ಥದ ಗ್ರಹ (2)
11.ಮೊಂಡುತನ ಅಥವಾ ಹಟ (2)
12.ಅಶ್ವಯುಜ ಶುದ್ಧನವಮಿಯಂದು ನಡೆಸುವ ಹಬ್ಬ (5)
15.ಹಸಿರು ಬಣ್ಣ (3)
17.ಪಟದಲ್ಲಿ ಪೇಚಾಟ! (4)
18.ಗುಣವನ್ನು ಹೊಗಳುವುದು (4)

ಮೇಲಿಂದ ಕೆಳಕ್ಕೆ

1.ಇಂದ್ರಿಯಗಳ ಹಿಡಿತಕ್ಕೆ ಮೀರಿದವನು (3)
2.ವಾದ್ಯವನ್ನು ನುಡಿಸುವಿಕೆ (3)
3.ಶ್ರೀಗಂಧ ಇಲ್ಲಿದೆ (4)
4.ಭೂಮಿಯನ್ನು ಮುಟ್ಟಿದಂತೆ ಕಾಣುವ ಆಕಾಶ ಭಾಗ (3)
6.ಶೌರ್ಯ ಈ ಕ್ರಮದಲ್ಲಿ ಬಂದಿದೆ (4)
8.ನರ್ತಕನನ್ನು ಹೀಗೂ ಕರೆಯುತ್ತಾರೆ (3)
9.ತರತರದ ಕಾಯಿಪಲ್ಲೆ (4)
13.ನಲಿದಾಟವಲ್ಲ! ವೇದನೆ ಪಡುವಿಕೆ! (4)
14.ಸ್ಲೇಟಿನ ಮೇಲೆ ಬರೆಯುವ ಸಾಧನ (3)
15.ಹುಲ್ಲೆ ಇಲ್ಲಿದೆ (3)
16.ಒಂದೇ ವಿಷಯದಲ್ಲಿ ಅಸಕ್ತನಾದವನು (3)



5808ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಠೋರ 3.ಅಜರಾಮರ 5.ಕದನ 6.ಸರ 10.ಕೆಲಸಿಗ 12.ನಳಪಾಕ 14.ಕಸ 17.ಅದ್ದೂರಿ 18.ಲವಲವಿಕೆ 19.ವಿಯೋಗ

ಮೇಲಿಂದ ಕೆಳಕ್ಕೆ:
1.ಕರ್ಣಾಕರ್ಣಿಕೆ 2.ರಸನ 3.ಅತ್ತರು 4.ರಾಯಸ 7.ರಮಪಾ 8.ಅಗಳಿ 9.ನನಸು 11.ಲಮಕ 13.ಕಸ್ತೂರಿಮೃಗ 15.ಸಲಿಲ 16.ಸಲಾಕೆ 17.ಅಡವಿ

ಸುಡೊಕು 6194

			5		6			7
	9			4			8	6
7		4	9			5		3
	1				5			
		7		9				5
5	2		6		3			
8		1		5			6	
			1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6193 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶನಿವಾರ ಸೆಪ್ಟೆಂಬರ್ 21, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಚತುರ್ಥಿ ಗಂ. 18-14 **ನಕ್ಷತ್ರ:** ಭರಣಿ ಗಂ. 24-36 **ಯೋಗ:** ವ್ಯಾಘಾತ ಗಂ. 11-36 **ಕರಣ:** ಬವ ಗಂ. 7-42, ಕನ್ಯಾ ಮಾಸದ 05 ನೇ ದಿನ, ಮಳೆನಕ್ಷತ್ರ: ಉತ್ತರಫಲ್ಗುಣಿ 3.
ರಾಹುಕಾಲ: ಬೆಳಿಗ್ಗೆ 09-00 – 10-30
ಸೂರ್ಯೋದಯ: 06-23 **ಸೂರ್ಯಾಸ್ತ:** 06-24 **ಮುಸ್ಲಿಂ ದಿನಾಂಕ:** 17 ರಬಿಉಲ್ಲಾವಲ್
ದಿನ ವಿಶೇಷ: ಶ್ರೀ ನಾರಾಯಣ ಗುರುಗಳ ಸಮಾಧಿ ದಿನ (ಕೇರಳ), ಈದ್-ಇ-ಮೌಲಾದ್ (ಮುಸ್ಲಿಂ) **ಅದೃಷ್ಟ ಸಂಖ್ಯೆ:** 7, 2

ಮೇಷ: ಆದರ್ಶವಾದಿ ಗುಂಪಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ನಿಮ್ಮ ವ್ಯಕ್ತಿತ್ವದಲ್ಲಿ ಒಳ್ಳೆಯ ಬದಲಾವಣೆಗಳಾಗುವುದು. ನಿಮ್ಮ ದುರಾಲೋಚನೆಗಳನ್ನು ಬದಲಿಸಿಕೊಳ್ಳುವ ದಿನವಾಗಿದೆ.

ವೃಷಭ: ಕೋರ್ಟ್ ವ್ಯವಹಾರಗಳು ಬಗೆಹರಿಯಬಹುದೆಂಬ ಆಲೋಚನೆಯು ಇತರರ ದುರ್ಬುದ್ಧಿಯಿಂದ ವ್ಯತ್ಯಾಸಗಳಾಗುತ್ತವೆ. ನೌಕರಿಯಲ್ಲಿ ಬಡ್ತಿ ಹೊಂದುವ ಬಗ್ಗೆ ಪ್ರಯತ್ನ ಇರಲಿ. ಹೆಂಡತಿಯ ಆರೋಗ್ಯ ಸುಧಾರಿಸುತ್ತದೆ.

ಮಿಥುನ: ನವ ದಂಪತಿಗಳಿಗೆ ಹರ್ಷದ ಸಮಾಚಾರ ಕೇಳಿ ಬರುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು. ದೈವಾನುಗ್ರಹದಿಂದ ಕೆಲಸದಲ್ಲಿ ಒಳ್ಳೆಯ ಲಾಭ ಪಡೆಯುವಿರಿ. ಪಿತೃ ವರ್ಗದವರ ಸಹಾಯಾಸ್ತ ಸಿಗುವುದು.

ಕರ್ಕಾಟಕ: ನಿಮ್ಮ ಗಡಿಬಿಡಿಯ ಸ್ವಭಾವದಿಂದಾಗಿ ಕಂಪನಿಯಲ್ಲಿ ಉಂಟಾದ ತಪ್ಪುಗಳಿಗೆ ನೇರ ಹೊಣೆಗಾರಿಕೆ ನಿಮ್ಮದ್ದಾಗಿರುತ್ತದೆ. ಮನೆಯಲ್ಲಿ ದೇವತಾಕಾರ್ಯಗಳನ್ನು ನಡೆಸುವ ಬಗ್ಗೆ ತಂದೆಯವರಲ್ಲಿ ಮಾತನಾಡಿ.

ಸಿಂಹ: ಸಮಯ ಮತ್ತು ಅನುಕೂಲತೆಯ ಮೇಲೆ ಹೊಸ ಕೆಲಸಗಳನ್ನು ಒಪ್ಪಿಕೊಳ್ಳುವ ನಿರ್ಧಾರಕ್ಕೆ ಬನ್ನಿರಿ. ದೇವತಾನುಗ್ರಹದಿಂದ ಸಕಲ ಅಭೀಷ್ಟವು ಸಿದ್ಧಿಯಾಗಿ ಸಂತೃಪ್ತಿಯಾಗುವುದು. ಕುಟುಂಬದಲ್ಲಿ ಸುಖ ನೆಮ್ಮದಿ ವೃದ್ಧಿ.

ಕನ್ಯಾ: ಕಾರ್ಖಾನೆಯಲ್ಲಿ ಹೊಸ ವಿದ್ಯುತ್ ಉಪಕರಣಗಳನ್ನು ಅಳವಡಿಸುವಲ್ಲಿ ಅಧಿಕ ಬಂಡವಾಳವನ್ನು ಹೂಡುವಿರಿ. ಸಾಧು ಸಂತರ ದರ್ಶನದಿಂದ ಮನಸ್ಸಿಗೆ ಹೆಚ್ಚಿನ ಸಮಾಧಾನ ಸಿಗಲಿದೆ. ಒಂಟಿತನದ ಚಿಂತೆಯು ಆಗಾಗ ಕಾಡಲಿದೆ.

ತುಲಾ: ಕೆಲವು ವೈಯಕ್ತಿಕ ವಿಚಾರಗಳನ್ನು ಆಪ್ತ ಮಿತ್ರರೊಬ್ಬರಲ್ಲಿ ಹೇಳಿಕೊಳ್ಳಲೇಬೇಕಾದ ಸಂದರ್ಭ ಬರಲಿದೆ. ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗವಹಿಸುವಿರಿ. ರಕ್ತದೊತ್ತಡ ನಿಯಂತ್ರಣಕ್ಕೆ ಬರುವುದು.

ವೃಶ್ಚಿಕ: ಫ್ಯಾಷನ್ ಡಿಸೈನರ್‌ಗಳು ಹೆಚ್ಚಿನ ಅವಕಾಶ ಮತ್ತು ಉತ್ತಮ ಧನಲಾಭ ಪಡೆಯುವರು. ಸಹೋದರನ ಮೂಲಕ ಜಮೀನಿನ ಖರೀದಿ ವಿಚಾರದ ಮಾತುಕತೆಗಳು ಜರುಗುವುದು. ಅಧಿಕ ಹೊತ್ತು ವಿಶ್ರಾಂತಿ ಬೇಕೆನಿಸಲಿದೆ.

ಧನು: ಬಂಧು ಮಿತ್ರರ ಸಹಾಯಗಳನ್ನು ಬಯಸದೆ ಸ್ವತಂತ್ರವಾಗಿ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಲು ಅಭ್ಯಾಸ ಮಾಡಿ. ಬಾಕಿ ಉಳಿಸಿಕೊಂಡಿರುವ ಕೆಲಸಗಳನ್ನು ಬೇಗ ಮುಗಿಸಿಕೊಳ್ಳುವಂತಹ ಪ್ರಯತ್ನ ನಡೆಯಲಿ.

ಮಕರ: ವಿದ್ಯಾ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಕೆಲಸದಲ್ಲಿ ಉತ್ಸಾಹ ವೃದ್ಧಿಯಾಗುವುದು. ಇಂದಿನ ರಾಜಕೀಯ ಸನ್ನಿವೇಶಗಳು ನಿಮಗೆ ಅನುಕೂಲವಾಗಿರುವುದು. ಈ ದಿನ ನಿಮ್ಮ ಆರೋಗ್ಯವು ಸುಧಾರಿಸುವುದು.

ಕುಂಭ: ಅಪರಿಚಿತ ವ್ಯಕ್ತಿಯೊಬ್ಬರು ಉತ್ತಮ ಉಪಾಯಗಳನ್ನು ಮತ್ತು ಅನುಭವಗಳನ್ನು ನೀಡುವುದಾಗಿ ಹೇಳಿ ತಪ್ಪು ಮಾರ್ಗಕ್ಕೆ ಎಳೆಯಲಿದ್ದಾರೆ. ಶ್ರೀಕ್ಷೇತ್ರಕ್ಕೆ ಹೋಗುವ ಯೋಜನೆಯನ್ನು ಕಾರ್ಯರೂಪಕ್ಕೆ ತನ್ನಿರಿ.

ಮೀನ: ಕೆಲಸದ ಒತ್ತಡವನ್ನು ಅಥವಾ ಸಂಘ ಸಂಸ್ಥೆಯ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿಭಾಯಿಸುವಂತಾಗುವುದು. ಒಪ್ಪಿಸಿರುವ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿ ಮುಗಿಸುವಿರಿ. ಮನೆಯಲ್ಲಿ ಜವಾಬ್ದಾರಿ ಹೆಚ್ಚಲಿದೆ.

ಷೇರುಪೇಟೆ ವಹಿವಾಟು 1359



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,415
ಇಂದಿನ ಅಂತ್ಯ	25,790
▲	375
ದಿನದ ಗರಿಷ್ಠ	25,849

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹227
ಆರ್‌ಎಸ್‌ಎಸ್-5 ₹222
ಗುಡ್ ಲಾಟ್ (ಪ್ರತಿ ಕೆ.ಜಿಗೆ) ₹207

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100ಕ್ಕೆ ₹550
12 ಕ್ಕೆ ₹75
ಮೈಸೂರು
100ಕ್ಕೆ ₹555

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹388-585
ದ್ವಿತಳಿ (ಬಿ.ವಿ) ₹333-777

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹17900
ಎಸಿ	₹11070
ಆರ್‌ಪಿ	₹20000
ಆರ್‌ಸಿ	₹10270

ಅಡುಗೆ ಎಣ್ಣೆ ದರ ಹೆಚ್ಚಳ ವಿವರಣೆ ಕೇಳಿದ ಕೇಂದ್ರ

ನವದೆಹಲಿ (ಪಿಟಿಐ): ಅಡುಗೆ ಎಣ್ಣೆ ದಾಸ್ತಾನು ಸಾಕಷ್ಟಿದೆ. ಹಾಗಾಗಿ, ಚಿಲ್ಲರೆ ದರ ಏರಿಕೆ ಮಾಡಬಾರದು ಎಂದು ಕೇಂದ್ರ ಸರ್ಕಾರ ನೀಡಿದ್ದ ನಿರ್ದೇಶನವನ್ನು ಉಲ್ಲಂಘಿಸಿರುವ ಖಾದ್ಯ ತೈಲ ತಯಾರಿಕಾ ಕಂಪನಿಗಳು ಬೆಲೆ ಹೆಚ್ಚಿಸಿವೆ.

ಈ ಕುರಿತು ವಿವರಣೆ ನೀಡುವಂತೆ ಕಂಪನಿಗಳಿಗೆ ಕೇಂದ್ರವು ಶುಕ್ರವಾರ ಸೂಚಿಸಿದೆ.

ದೇಶೀಯ ಎಣ್ಣೆಕಾಳು ಬೆಳೆಗಾರರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಕಚ್ಚಾ ಮತ್ತು ಸಂಸ್ಕರಿಸಿದ ತಾಳೆ, ಸೂರ್ಯಕಾಂತಿ ಮತ್ತು ಸೋಯಾಬಿನ್ ಎಣ್ಣೆ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಸರ್ಕಾರ ಹೆಚ್ಚಿಸಿತ್ತು. ಕಂಪನಿಗಳೊಂದಿಗೆ ಆಹಾರ ಸಚಿವಾಲಯದ ಕಾರ್ಯದರ್ಶಿ ನಡೆಸಿದ ಸಭೆಯಲ್ಲಿ ಚಿಲ್ಲರೆ ದರ ಹೆಚ್ಚಳ ಮಾಡುವುದಿಲ್ಲ ಎಂದು ಕಂಪನಿಗಳು ಹೇಳಿಕೆ ನೀಡಿದ್ದವು.

'ಹಬ್ಬದ ಋತುವಿನಲ್ಲಿ ದರ ಏರಿಕೆ ಮಾಡದಂತೆ ಸರ್ಕಾರದ ನಿರ್ದೇಶನ ಇದ್ದರೂ ಆಮದು ಸುಂಕ ಹೆಚ್ಚಳದ ದಿನದಿಂದಲೇ ಬೆಲೆ ಹೆಚ್ಚಿಸಿವೆ. ಇದಕ್ಕೆ ಇರುವ ಕಾರಣ ಕುರಿತು ಸ್ಪಷ್ಟನೆ ನೀಡುವಂತೆ ಸೂಚಿಸಲಾಗಿದೆ' ಎಂದು ಆಹಾರ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಡಿಮೆ ಕಸ್ಟಮ್ಸ್ ಸುಂಕ ಜಾರಿಯಲ್ಲಿದ್ದ ವೇಳೆ ಆಮದು ಮಾಡಿಕೊಂಡಿರುವ 30 ಲಕ್ಷ ಟನ್‌ನಷ್ಟು ಖಾದ್ಯ ತೈಲ ದಾಸ್ತಾನಿದೆ. ಇದು 45ರಿಂದ 50 ದಿನದ ವರೆಗೆ ದೇಶೀಯ ಬಳಕೆಗೆ ಸಾಕಾಗಲಿದೆ. ಹಾಗಾಗಿ, ಚಿಲ್ಲರೆ ಮಾರಾಟ ದರ ಏರಿಕೆ ಮಾಡಬಾರದೆಂದು ಸರ್ಕಾರವು ಸೂಚಿಸಿತ್ತು.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-40500
ಹಳತು	40500-48000
ಚಿತ್ರದುರ್ಗ	
ಅಪಿ	47600-48000
ಬೆಟ್ಟೆ	33300-33700
ಕೆಂಪುಗೋಟು	27800-28200
ರಾಶಿ	47100-47500
ಕುಮಟ	
ಚಿಪ್ಪು	22019-26109
ಕೋಕ	4509-22099
ಫ್ಯಾಕ್ಟರಿ	6019-16629
ಹಳೆಚಾಲಿ	36869-38729
ಹೊಸಚಾಲಿ	28999-34499
ಶಿವಮೊಗ್ಗ	
ಬೆಟ್ಟೆ	47099-55300
ಗೊರಬಲು	16519-33200
ಹೊಸತು	42109-44199
ರಾಶಿ	30638-48899
ಸರಕು	60399-86300
ಸಿದ್ದಾಪುರ	
ಬಿಳಿಗೋಟು	24109-27908
ಚಾಲಿ	31699-34109
ಕೋಕ	20019-25789
ಕೆಂಪುಗೋಟು	17899-21699
ರಾಶಿ	41699-45799
ತಟ್ಟಿಬೆಟ್ಟೆ	30099-32099
ಶಿರಸಿ	
ಬೆಟ್ಟೆ	27399-37739
ಬಿಳಿಗೋಟು	24619-29700
ಚಾಲಿ	32408-35788
ಕೆಂಪುಗೋಟು	16710-20899
ರಾಶಿ	40009-44989
ಯಲ್ಲಾಪುರ	
ಅಪಿ	55965-55965
ಬಿಳಿಗೋಟು	14899-28290
ಚಾಲಿ	29299-35399
ಕೋಕ	6112-17109
ಕೆಂಪುಗೋಟು	14016-21525
ರಾಶಿ	38139-52259
ತಟ್ಟಿಬೆಟ್ಟೆ	24306-36299

ಗ್ರಾಹಕರ ಬೇಡಿಕೆ ಪೂರೈಸಲು ಆಗುತ್ತಿಲ್ಲ: ಸಚಿವ ಕೆ. ವೆಂಕಟೇಶ್

'ಮೈಸೂರು ಸಿಲ್ಕ್'ಗೆ ಬೇಕು ನೆರವು

ಪ್ರಜಾವಾಣಿ ವಾರ್ತೆ

ಮೈಸೂರು: 'ಬೇಡಿಕೆಗೆ ಅನುಗುಣವಾಗಿ ಮೈಸೂರು ಸಿಲ್ಕ್ ಸೀರೆಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ಹೊಸ ಯಂತ್ರಗಳನ್ನು ಅಳವಡಿಸುವ ಯೋಚನೆ ಇದ್ದು, ಕೇಂದ್ರ ಸರ್ಕಾರದಿಂದ ಹೆಚ್ಚಿನ ಸಹಕಾರದ ಅಗತ್ಯವಿದೆ' ಎಂದು ಪಶು ಸಂಗೋಪನೆ ಹಾಗೂ ರೇಷ್ಮೆ ಇಲಾಖೆ ಸಚಿವ ಕೆ. ವೆಂಕಟೇಶ್ ತಿಳಿಸಿದರು.

ನಗರದಲ್ಲಿ ಶುಕ್ರವಾರ ಕೇಂದ್ರ ರೇಷ್ಮೆ ಮಂಡಳಿಯ ಅಮೃತ ಮಹೋತ್ಸವದಲ್ಲಿ ಮಾತನಾಡಿದ ಅವರು, 'ರೇಷ್ಮೆ ಮಾರುಕಟ್ಟೆ ಬೆಲೆಯ ಅಸ್ಥಿರತೆ ಹಾಗೂ ನಷ್ಟದ ನಡುವೆಯೂ ರೇಷ್ಮೆ ಬೆಳೆಯುತ್ತಿರುವ ರೈತರ ಸಂಕಷ್ಟಕ್ಕೆ ರಾಜ್ಯ ಸರ್ಕಾರ ಸ್ಪಂದಿಸುತ್ತಿದೆ. ಇದಕ್ಕೆ ಕೇಂದ್ರವೂ ಹೆಚ್ಚಿನ ನೆರವು ನೀಡಬೇಕು' ಎಂದರು.

ಸೇವಾ ಕೇಂದ್ರ ತೆರೆಯಿರಿ: ಕೇಂದ್ರ ಜವಳಿ ಸಚಿವ ಗಿರಿರಾಜ್ ಸಿಂಗ್ ಮಾತನಾಡಿ, 'ಬೆಂಗಳೂರಿನ ದೊಡ್ಡ ಉದ್ಯಮಿಗಳು ರೇಷ್ಮೆ ಉದ್ಯಮ ಪ್ರವೇಶಿಸಿದ್ದಾರೆ. ಇದರಿಂದ ರೈತರು ಮಧ್ಯವರ್ತಿಗಳ ಮೊರೆ ಹೋಗಬೇಕಾಗಿದೆ. ಹೀಗಾಗಿ ರಾಜ್ಯ ಸರ್ಕಾರವು ನಾಗರಿಕ ಸೇವಾ ಕೇಂದ್ರ ತೆರೆಯುವ ಯೋಜನೆ ರೂಪಿಸಿ ಕೇಂದ್ರದೊಂದಿಗೆ ಚರ್ಚಿಸಿದರೆ ರೈತರಿಗೆ ಒಳಿತಾಗುವ ಯೋಜನೆ ರೂಪಿಸಬಹುದು' ಎಂದು ಹೇಳಿದರು.

'ಚೀನಾವು ಭಾರತದ ಪ್ರತಿಸ್ಪರ್ಧಿಯಾಗಿದೆ. ವಾರ್ಷಿಕವಾಗಿ ರೇಷ್ಮೆ ಉತ್ಪಾದನೆಯನ್ನು 50 ಸಾವಿರ ಟನ್‌ನಿಂದ 94 ಸಾವಿರ ಟನ್‌ಗೆ ಹೆಚ್ಚಿಸಿಕೊಂಡಿದೆ. ಭಾರತವೂ ಮುಂದಿನ ವರ್ಷಗಳಲ್ಲಿ ಒಂದು ಲಕ್ಷ ಟನ್ ರೇಷ್ಮೆ ಉತ್ಪಾದನೆಯ ಗುರಿ ಹೊಂದಿದ್ದು, ಚೀನಾವನ್ನು ಹಿಂದಿಕ್ಕಲಿದೆ. ಬೆಳೆಗಾರರಿಗೆ ಸಹಕಾರ ನೀಡಲು ಕೇಂದ್ರ ಸರ್ಕಾರ ಬದ್ಧವಾಗಿದೆ. ಹಿಪ್ಪುನೇರಳೆ, ರೋಗಬಾಧೆ ರಹಿತ ಮೊಟ್ಟೆ ವಿತರಿಸಲು ಕ್ರಮವಹಿಸಲಾಗುವುದು' ಎಂದರು.

'ಹತ್ತು ವರ್ಷದ ಹಿಂದೆ ಕೆ.ಜಿ ರೇಷ್ಮೆ ಗೂಡಿಗೆ ₹260 ದರ ದೊರೆಯುತ್ತಿತ್ತು. ಈಗ ₹550 ದೊರೆಯುತ್ತಿದೆ. ಮಾರುಕಟ್ಟೆಯಲ್ಲಿ ಬೆಲೆಯ ಸ್ಥಿರತೆ ಕಾಯ್ದುಕೊಳ್ಳಲು ಒತ್ತು ನೀಡಲಾಗುವುದು ಎಂದರು.

ರೇಷ್ಮೆಯು ಸೀರೆ ತಯಾರಿಕೆಗಷ್ಟೇ ಉಪಯೋಗವಾಗುತ್ತಿಲ್ಲ. ಫ್ಯಾಷನ್ ಲೋಕದಲ್ಲೂ ಬಳಸಲಾಗುತ್ತಿದೆ. ಅದರ ತ್ಯಾಜ್ಯವನ್ನು 'ತ್ರಿಡಿ' ಪ್ರಿಂಟಿಂಗ್‌ಗೆ ಬಳಸುವುದರಿಂದ ಬೇಡಿಕೆ ಹೆಚ್ಚಲಿದೆ ಎಂದು ಹೇಳಿದರು.

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮಾತನಾಡಿ, 'ಕೇಂದ್ರ ಸರ್ಕಾರವು ₹15 ಸಾವಿರ ಕೋಟಿಯನ್ನು ರೈತರ ಅಭಿವೃದ್ಧಿಗೆ ಮೀಸಲಿಟ್ಟಿದೆ' ಎಂದರು.

ಮೈಸೂರಿನಲ್ಲಿ ಶುಕ್ರವಾರ ಆಯೋಜಿಸಿದ್ದ ಕೇಂದ್ರ ರೇಷ್ಮೆ ಮಂಡಳಿಯ ಅಮೃತ ಮಹೋತ್ಸವವನ್ನು ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಉದ್ಘಾಟಿಸಿದರು. ರೇಷ್ಮೆ ಸಚಿವ ಕೆ. ವೆಂಕಟೇಶ್, ರಾಜ್ಯಸಭಾ ಸದಸ್ಯ ನಾರಾಯಣ ಕೊರಗಪ್ಪ, ಕೇಂದ್ರ ಸಚಿವರಾದ ಪಬಿತ್ರಾ ಮಾರ್ಗರಿಟಾ, ಎಚ್.ಡಿ. ಕುಮಾರಸ್ವಾಮಿ, ಶಾಸಕ ಜಿ.ಟಿ. ದೇವೇಗೌಡ, ಜವಳಿ ಸಚಿವಾಲಯದ ಕಾರ್ಯದರ್ಶಿ ರಚನಾ ಶಾ ಇದ್ದರು– ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ನಾಗರಿಕ ಸೇವಾ ಕೇಂದ್ರ ತೆರೆಯಲು ಸಲಹೆ
- ಒಂದು ಲಕ್ಷ ಟನ್ ರೇಷ್ಮೆ ಉತ್ಪಾದನೆ ಗುರಿ

ರೇಷ್ಮೆ ಉತ್ಪಾದನೆಗೆ ಮಹಿಷಾಸುರರು ಅಡ್ಡಿಯುಂಟು ಮಾಡುತ್ತಿದ್ದಾರೆ. ಅವರನ್ನು ಸಂಹರಿಸುವಂತೆ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ಬೇಡಿಕೊಂಡೆ

ಗಿರಿರಾಜ್ ಸಿಂಗ್, ಕೇಂದ್ರ ಜವಳಿ ಸಚಿವ

ಸಾಧಕರಿಗೆ ಪ್ರಶಸ್ತಿ ಪ್ರದಾನ

ರೇಷ್ಮೆ ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸಾಧನೆ ಮಾಡಿದ ಅಧಿಕಾರಿಗಳಿಗೆ 'ಜೀವಮಾನ ಶ್ರೇಷ್ಠ ಸಾಧನೆ', ರೇಷ್ಮೆ ಬೆಳೆಯುವ 26 ರಾಜ್ಯದ ವಿಶೇಷ ಸಾಧಕರಿಗೆ 'ಬೆಸ್ಟ್ ಅಚೀವರ್ಸ್' ಹಾಗೂ ಸಂಶೋಧನಾ ಕ್ಷೇತ್ರದ ಸಾಧಕರಿಗೆ 'ಉತ್ತಮ ವಿಜ್ಞಾನಿ' ಪ್ರಶಸ್ತಿ ನೀಡಲಾಯಿತು. ಅಮೃತ ಮಹೋತ್ಸವದ ಅಂಗವಾಗಿ ರೇಷ್ಮೆ ಮಂಡಳಿ ಲಾಂಛನವುಳ್ಳ ₹75 ಮೌಲ್ಯದ ನಾಣ್ಯ, ವಿಶೇಷ ಅಂಚೆ ಚೀಟಿ, ಹೊಸ ಹಿಪ್ಪು ನೇರಳೆ ತಳಿಯನ್ನು ಸಚಿವ ಗಿರಿರಾಜ್ ಸಿಂಗ್ ಬಿಡುಗಡೆಗೊಳಿಸಿದರು.

ಸುದ್ದಿ 2 ನಿಮಿಷ

84 ಸಾವಿರ ದಾಟಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರ ನಡೆದ ವಹಿವಾಟಿನಲ್ಲಿ ಮೊದಲ ಬಾರಿಗೆ 84 ಸಾವಿರ ಅಂಶ ದಾಟಿದೆ.

ಬ್ಯಾಂಕಿಂಗ್ ಷೇರುಗಳ ಮಾರಾಟದ ಏರಿಕೆಯಿಂದಾಗಿ ಷೇರುಪೇಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು. ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಕಡಿತಗೊಳಿಸಿರುವುದು ಹೂಡಿಕೆದಾರರಲ್ಲಿ ಉತ್ಸಾಹ ಹೆಚ್ಚಿಸಿದೆ. ಹಾಗಾಗಿ, ಸೂಚ್ಯಂಕಗಳು ಏರಿಕೆಯ ಹಾದಿ ಹಿಡಿದಿವೆ.



ಹೂಡಿಕೆದಾರರ ಸಂಪತ್ತು ₹6.24 ಲಕ್ಷ ಕೋಟಿ ಹೆಚ್ಚಳವಾಗಿದೆ.

ಸೆನ್ಸೆಕ್ಸ್ 1,359 ಅಂಶ ಏರಿಕೆ ಕಂಡು, 84,544 ಅಂಶಗಳಲ್ಲಿ ಮುಕ್ತಾಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 375 ಅಂಶ ಏರಿಕೆ ಕಂಡು 25,790 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಮಹೀಂದ್ರ ಆ್ಯಂಡ್ ಮಹೀಂದ್ರ ಷೇರಿನ ಮೌಲ್ಯದಲ್ಲಿ ಶೇ 5ರಷ್ಟು ಹೆಚ್ಚಳವಾಗಿದೆ.

ಜೆಎಸ್‌ಡಬ್ಲ್ಯು ಸ್ಟೀಲ್, ಐಸಿಐಸಿಐ ಬ್ಯಾಂಕ್, ಎಲ್ ಆ್ಯಂಡ್ ಟಿ, ಭಾರ್ತಿ ಏರ್‌ಟೆಲ್, ನೆಸ್ಲೆ, ಅದಾನಿ ಪೋರ್ಟ್ಸ್, ಎಚ್‌ಸಿಎಲ್, ಎಚ್‌ಡಿಎಫ್‌ಸಿ, ಟೆಕ್ ಮಹೀಂದ್ರ, ಮಾರುತಿ, ಕೋಟಕ್ ಮಹೀಂದ್ರ ಬ್ಯಾಂಕ್ ಮತ್ತು ಟಾಟಾ ಸ್ಟೀಲ್ ಷೇರುಗಳ ಮೌಲ್ಯ ಏರಿಕೆ ಕಂಡಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಇಂಡಸ್ ಇಂಡ್ ಬ್ಯಾಂಕ್, ಟಿಸಿಎಸ್ ಮತ್ತು ಬಜಾಜ್ ಫೈನಾನ್ಸ್ ಷೇರುಗಳ ಮೌಲ್ಯದಲ್ಲಿ ಇಳಿಕೆಯಾಗಿದೆ.

ಅಡಿಕೆ ಸಿಪ್ಪೆ ರಸದಿಂದ ತಯಾರಿಸಿದ ಸಾಬೂನಿಗೆ ಪೇಟೆಂಟ್

ಬಂಟ್ವಾಳ (ದಕ್ಷಿಣ ಕನ್ನಡ ಜಿಲ್ಲೆ): ಇಲ್ಲಿನ ಕೆದಿಲ ಹಾರ್ದಿಕ್ ಹರ್ಬಲ್ಸ್ ಸಂಸ್ಥೆಯು ಹಣ್ಣಡಿಕೆ ಸಿಪ್ಪೆ ರಸದಿಂದ ತಯಾರಿಸಿದ 'ಸತ್ವಂ' ಹರ್ಬಲ್ ಸ್ನಾನದ ಸಾಬೂನಿಗೆ ಕೇಂದ್ರ ಸರ್ಕಾರವು ಸೆ. 13ರಂದು ಪೇಟೆಂಟ್ ನೀಡಿದೆ.

ಈ ಕೋಕಾರೇಕ ಹರ್ಬಲ್ ಸ್ನಾನದ ಸಾಬೂನು ಮೂರು ವರ್ಷದಿಂದ ಮಾರುಕಟ್ಟೆಯಲ್ಲಿದೆ.

'ಬಾಲ್ಯದಲ್ಲಿ ಬೆವರಿನಿಂದ ಉಂಟಾಗುವ ತುರಿಕೆಗೆ ಹಿರಿಯರು ಹಣ್ಣಡಿಕೆ ಸಿಪ್ಪೆ ರಸ ಸವರುವ ಮೂಲಕ ತುರಿಕೆ ಗುಣಪಡಿಸುತ್ತಿದ್ದರು. ಇದನ್ನೇ ಮುಂದಿಟ್ಟುಕೊಂಡು ಸಂಶೋಧನೆಗೆ ಒಳಪಡಿಸಿ ಸಾಬೂನು ತಯಾರಿಸಿದ್ದೇವೆ. ಇಲ್ಲಿನ ಸಂಶೋಧಕ ಬದನಾಜೆ ಶಂಕರ ಭಟ್, ಶ್ರೀಕುಮಾರ್ ಅವರು ಮಾರ್ಗದರ್ಶನ ನೀಡಿದ್ದಾರೆ' ಎಂದು ಸಂಸ್ಥೆಯ ಸಿಇಒ ಮುರಳೀಧರ ಕೆ. ತಿಳಿಸಿದ್ದಾರೆ.

'ಹಣ್ಣಡಿಕೆ ಸಿಪ್ಪೆ ರಸದೊಂದಿಗೆ ಕೊತ್ತಂಬರಿ, ಲಾವಂಚ, ಅಲೊವೆರಾ, ಸಾಗುವಾನಿ ಎಲೆ, ಅರಿಸಿನ, ತೆಂಗಿನ ಎಣ್ಣೆ ಸೇರಿಸಿ ಸಾಬೂನು ತಯಾರಿಸಲಾಗಿದೆ. 2021ರಲ್ಲಿ ಪೇಟೆಂಟ್ ಪಡೆಯುವ ಕಾರ್ಯ ಆರಂಭಿಸಿದ್ದು, ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ಅನುಮೋದನೆ ಪಡೆದ ಬಳಿಕ ಭಾರತದ ಹಕ್ಕುಸ್ವಾಮ್ಯ ಕಾರ್ಯಾಲಯವು ಪೇಟೆಂಟ್ ನೀಡಿದೆ' ಎಂದು ತಿಳಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಟಿ. ಶ್ರೀನಿವಾಸ
14-04-1942 23-09-2002
ವರದಾ ಶ್ರೀನಿವಾಸ ಕುಟುಂಬ, ಬಂಧುವರ್ಗ ಮತ್ತು ಶ್ರೀ ವೆಂಕಟೇಶ್ವರ ವಿದ್ಯಾಪೀಠ

29ನೇ ವರ್ಷದ ಚಿರಸ್ಮರಣೆ
ಕೀರ್ತಿಶೇಷ ಎಂ. ರಾಮಣ್ಣ ನವರು
ನಿಧನ: 21.09.1995
ನೀವು ತೋರಿದ ಹಾದಿಯಲ್ಲಿ ಮುನ್ನಡೆಯುತ್ತಿರುವ ಹಾಗೂ ಸದಾ ನಿಮ್ಮ ಸ್ಮರಣೆಯಲ್ಲಿ
ಧರ್ಮಪತ್ನಿ ಶ್ರೀಮತಿ ಕೆಂಪಲಕ್ಕಮ್ಮ ರಾಮಣ್ಣ (ಮಾಜಿ ಅಧ್ಯಕ್ಷರು, ಗ್ರಾಮ ಪಂಚಾಯಿತಿ)
ಮಕ್ಕಳು ಮತ್ತು ಮೊಮ್ಮಕ್ಕಳು
ರಾಮಣ್ಣ ವೃತ್ತ, ಹೊರಮಾವು ಅಗರ, ಬೆಂಗಳೂರು–560043
Mob: 9742344413,

ಅಕ್ಟೋಬರ್ 1ರಂದು ಆರಂಭಿಕ ದಿನ

ವಿವಾದ್ ಸೆ ವಿಶ್ವಾಸ್‌ಗೆ ಅಧಿಸೂಚನೆ

ನವದೆಹಲಿ (ಪಿಟಿಐ): ತೆರಿಗೆ ವಿವಾದ ಪರಿಹಾರ ಯೋಜನೆಯ (ವಿವಾದ್ ಸೆ ವಿಶ್ವಾಸ್ 2.0) ಆಯ್ಕೆಗೆ ಅಕ್ಟೋಬರ್ 1 ಅನ್ನು ಆರಂಭಿಕ ದಿನವಾಗಿ ನಿಗದಿಪಡಿಸಲಾಗಿದೆ.

2024–25ನೇ ಸಾಲಿನ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಈ ಯೋಜನೆಯನ್ನು ಪ್ರಕಟಿಸಿತ್ತು. ಆದಾಯ ತೆರಿಗೆ ವಿವಾದಕ್ಕೆ ಸಂಬಂಧಿಸಿದಂತೆ ಕೆಲವು ಮೇಲ್ಮನವಿ ಪ್ರಕರಣಗಳನ್ನು ಇದರಡಿ ಇತ್ಯರ್ಥ ಪಡಿಸಿಕೊಳ್ಳಬಹುದಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ಅಧಿಸೂಚನೆ ತಿಳಿಸಿದೆ.

ವಿವಿಧ ಕಾನೂನು ವೇದಿಕೆಗಳಲ್ಲಿ 2.7 ಕೋಟಿ ನೇರ ತೆರಿಗೆ ವಿವಾದ ಪ್ರಕರಣಗಳು ವಿಚಾರಣೆ ಹಂತದಲ್ಲಿವೆ. ಇವುಗಳ ಒಟ್ಟು ತೆರಿಗೆ ಮೊತ್ತ ₹35 ಲಕ್ಷ ಕೋಟಿ ಆಗಿದೆ.

'ಹಣಕಾಸು ಸಚಿವಾಲಯವು ವಿವಾದ್ ಸೆ ವಿಶ್ವಾಸ್ 2.0ಕ್ಕೆ ಸಂಬಂಧಿಸಿದ ನಿಯಮಾವಳಿಗಳು ಮತ್ತು ಸಲ್ಲಿಸಬೇಕಿರುವ ಅರ್ಜಿ ನಮೂನೆಗಳನ್ನು ಮುಂದಿನ ವಾರ ಪ್ರಕಟಿಸುವ ನಿರೀಕ್ಷೆಯಿದೆ' ಎಂದು ಡೆಲಾಯ್ಟ್ ಇಂಡಿಯಾದ ಪಾಲುದಾರ ಆರ್. ಫಾಟರ್‌ಫೇಕರ್ ತಿಳಿಸಿದ್ದಾರೆ.

'ಯೋಜನೆಯ ಆಯ್ಕೆಗೆ ಕಡಿಮೆ ಕಾಲಾವಧಿ ಇರುತ್ತದೆ. ಅರ್ಹರು ತ್ವರಿತವಾಗಿ ಇದನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ' ಎಂದು ಹೇಳಿದ್ದಾರೆ.

2020ರಲ್ಲಿ ಮೊದಲ ಬಾರಿಗೆ ಕೇಂದ್ರವು ಈ ಯೋಜನೆಯನ್ನು ಜಾರಿಗೊಳಿಸಿತ್ತು. ಒಂದು ಲಕ್ಷ ತೆರಿಗೆದಾರರು ಇದರ ಪ್ರಯೋಜನ ಪಡೆದಿದ್ದು, ಸರ್ಕಾರದ ಬೊಕ್ಕಸಕ್ಕೆ ₹75 ಸಾವಿರ ಕೋಟಿ ಪಾವತಿಯಾಗಿದೆ.

ಯಾವ ತೆರಿಗೆದಾರರು ಅರ್ಹ?

ಪ್ರಸಕ್ತ ವರ್ಷದ ಜುಲೈ 22ಕ್ಕೂ ಮುಂಚೆ ಬಾಕಿ ಉಳಿದಿರುವ ಮೇಲ್ಮನವಿ ಪ್ರಕರಣಗಳಿಗೆ ಈ ಯೋಜನೆ ಅನ್ವಯವಾಗಲಿದೆ.

ಸುಪ್ರೀಂ ಕೋರ್ಟ್, ಹೈಕೋರ್ಟ್, ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಳಿ, ಆಯುಕ್ತರು ಮತ್ತು ಜಂಟಿ ಆಯುಕ್ತರಿಗೆ ಸಲ್ಲಿಸಿರುವ ಮೇಲ್ಮನವಿ ಮತ್ತು ವಿಶೇಷ ಮೇಲ್ಮನವಿಗಳನ್ನು ಇದರಡಿ ಇತ್ಯರ್ಥ ಪಡಿಸಿಕೊಳ್ಳಲು ಅವಕಾಶವಿದೆ.

2021–22ನೇ ಸಾಲಿನ ಬಜೆಟ್‌ನಲ್ಲಿ ವಿವಾದ ಪರಿಹಾರ ಸಮಿತಿಯನ್ನು (ಡಿಆರ್‌ಸಿ) ಘೋಷಿಸಲಾಗಿತ್ತು. ಇದರ ಮುಂದೆ ಬಾಕಿ ಇರುವ ಪ್ರಕರಣಗಳು ಮತ್ತು ಆದಾಯ ತೆರಿಗೆ ಆಯುಕ್ತರಿಗೆ ಸಲ್ಲಿಸಿರುವ ಪರಿಷ್ಕೃತ ಅರ್ಜಿಗಳಿಗೂ ಈ ಯೋಜನೆಯು ಅನ್ವಯವಾಗಲಿದೆ.

ಎಲ್‌ಐಸಿ ಮ್ಯೂಚುವಲ್ ಫಂಡ್ ಹೊಸ ಯೋಜನೆ ಪ್ರಕಟ

ಮುಂಬೈ (ಪಿಟಿಐ): ಭಾರತೀಯ ಜೀವ ವಿಮಾ (ಎಲ್‌ಐಸಿ) ಮ್ಯೂಚುವಲ್ ಫಂಡ್, ಹೊಸದಾಗಿ ಮ್ಯಾನುಫ್ಯಾಕ್ಚರಿಂಗ್ ಫಂಡ್ ಆರಂಭಿಸಿದೆ. ಇದು ಓಪನ್ ಎಂಡೆಡ್ ಈಕ್ವಿಟಿ ಯೋಜನೆಯಾಗಿದೆ. ಈ ನ್ಯೂ ಫಂಡ್ ಆಫರ್‌ನ (ಎನ್‌ಎಫ್‌ಒ) ಚಂದಾದಾರಿಕೆ ಪಡೆಯಲು ಅಕ್ಟೋಬರ್ 4ರ ವರೆಗೆ ಕಾಲಾವಕಾಶವಿದೆ. ಅಕ್ಟೋಬರ್ 11ರಂದು ಯೂನಿಟ್‌ಗಳನ್ನು ವಿತರಿಸಲಾಗುತ್ತದೆ. ನಿಫ್ಟಿ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಇಂಡೆಕ್ಸ್‌ನಡಿ ಈ ಫಂಡ್ ಇರಲಿದೆ ಎಂದು ಕಂಪನಿ ತಿಳಿಸಿದೆ.

'ಭಾರತದ ಜಿಡಿಪಿ ಬೆಳವಣಿಗೆ ಉತ್ತಮವಾಗಿದೆ. ನಗರೀಕರಣ ವೇಗವಾಗಿ ಬೆಳೆಯುತ್ತಿದೆ. ದೇಶದಲ್ಲಿ ಮಧ್ಯಮ ವರ್ಗದ ಜನಸಂಖ್ಯೆ ಏರಿಕೆಯಾಗುತ್ತಿದೆ. ಸರ್ಕಾರವು ರಫ್ತಿಗೆ ಉತ್ತೇಜನ ನೀಡುತ್ತಿದೆ. 'ಮೇಕ್ ಇನ್ ಇಂಡಿಯಾ'ದಡಿ ಉತ್ಪಾದನೆ ಆಧಾರಿತ ಪ್ರೋತ್ಸಾಹ ನೀಡುತ್ತಿದೆ. ಇದರಿಂದ ತಯಾರಿಕಾ ಸರಕುಗಳಿಗೆ ಬೇಡಿಕೆ ಹೆಚ್ಚಿದೆ' ಎಂದು ಎಲ್‌ಐಸಿ ಮ್ಯೂಚುವಲ್ ಫಂಡ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಆರ್.ಕೆ. ಝಾ ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9148525233, 9900859248

ಛಾಬ್ರಿಯಾ ಅಂಡ್ ಸನ್ಸ್
ಬೇಕಾಗಿದ್ದಾರೆ ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ. ವೇತನ ಶ್ರೇಣಿ: 17,000/– ರಿಂದ 19,000/– ಸ್ಥಳ: ಬೆಂಗಳೂರು. ಉದ್ಯೋಗ: ಆಫೀಸ್ ಬಾಯ್, & ಡೆಲಿವರಿ ಬಾಯ್, ವಾಟ್ಸಪ್ ನಂ: 8792898561, 9164887571 ಸಮಯ: ಬೆಳಿಗ್ಗೆ 10 ರಿಂದ ರಾತ್ರಿ 8:30ರವರೆಗೆ ಕೆಲಸದ ಸಮಯ: ಸೋಮವಾರ ದಿಂದ ಶನಿವಾರ ಮಾತ್ರ

ಬೇಕಾಗಿದ್ದಾರೆ, ವಯಸ್ಸಾದ ವೃದ್ಧರನ್ನು ನೋಡಿಕೊಳ್ಳಲು ಅನುಭವವಿರುವ ಯುವಕ-ಯುವತಿಯರು ಬೇಕಾಗಿದ್ದಾರೆ. ಸ್ಥಳ-ಮೈಸೂರು, ಮಡಿಕೇರಿ ಮತ್ತು ಮಂಗಳೂರು. ಸಂಬಳ-18,000/- ಮೇಲ್ಪಟ್ಟು. 9916905188

ಪ್ರವಾಸ

Travel

ದಸರಾ ರಜೆಯಲ್ಲಿ ರಿಯಾಯಿತಿ ದರದಲ್ಲಿ ವಿದೇಶ ಪ್ರವಾಸ. 7/11 ದಿನಗಳ ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್. 6 ದಿನಗಳ ಬಾಲಿ. ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04. 9900080793 9900080796

ಭವಿಷ್ಯ

Astrology

ಒಂದೇ ಕರೆಯಲ್ಲಿ 100% ಶಾಶ್ವತ ಪರಿಹಾರ ಕೆಲವೇ ಗಂಟೆಗಳಲ್ಲಿ ಅಸಾಧ್ಯವಾದದ್ದು ಇಲ್ಲಿ ಸಾಧ್ಯ ಸಮಸ್ಯೆ ನಿಮ್ಮದು ಪರಿಹಾರ ನಮ್ಮದು: 9741637382

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Mysore Road

SALE I.B.OFFICERS Layout (BDA)Near RV Engg College Mysuru- Road Corner Site. 3122 Sft. 9980021280 7019023906

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164
*Conditions apply

ಯುರೋಪ್‌ಗೆ ಇ.ವಿ ಬೈಕ್ ರಫ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡಿಗ ಉದ್ಯಮಿಗಳೇ ಸೇರಿಕೊಂಡು ಸ್ಥಾಪಿಸಿರುವ ಅಲ್ಟ್ರಾವಯೋಲೆಟ್ ಕಂಪನಿ ತಯಾರಿಸಿರುವ ವಿದ್ಯುತ್ ಚಾಲಿತ ಬೈಕ್‌ಗಳನ್ನು ಯುರೋಪಿನ ಹಲವು ರಾಷ್ಟ್ರಗಳಿಗೆ ರಫ್ತು ಮಾಡುವ ಕಾರ್ಯಕ್ರಮಕ್ಕೆ ಇದೇ 24ರಂದು ಚಾಲನೆ ನೀಡಲಾಗುವುದು ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಈ ಕುರಿತು ಮಾಹಿತಿ ನೀಡಿರುವ ಅವರು, 'ನಮ್ಮವರ ಈ ಸಾಹಸವನ್ನು ಉತ್ತೇಜಿಸುವುದು ನಮ್ಮ ಕರ್ತವ್ಯವಾಗಿದೆ' ಎಂದರು.

ಜರ್ಮನಿ, ಇಟಲಿ, ಟರ್ಕಿ ಮತ್ತು ಸ್ಪೇನ್‌ಗೆ ಭಾರತದಿಂದ ಇದೇ ಮೊದಲ ಬಾರಿಗೆ ಎಫ್77–ಸ್ಪೋರ್ಟ್ಸ್ ಸ್ತರದ ಇ.ವಿ ಬೈಕ್‌ಗಳನ್ನು ರಫ್ತು ಮಾಡಲಾಗುತ್ತಿದೆ. ಈ ವಾಹನಗಳನ್ನು ಜಿಗಣಿಯಲ್ಲಿರುವ ಉತ್ಪಾದನಾ ಘಟಕದಲ್ಲಿ ತಯಾರಿಸಲಾಗಿದೆ ಎಂದು ಹೇಳಿದರು.

ಬೈಕ್ ಬೆಲೆ ₹2.99 ಲಕ್ಷವಾಗಿದ್ದು, ಈಗಾಗಲೇ ಸ್ಥಳೀಯವಾಗಿಯೂ ಲಭ್ಯವಿದೆ. ಒಂದು ಸಲ ಚಾರ್ಜ್ ಮಾಡಿದರೆ 323 ಕಿ.ಮೀ ಚಲಾಯಿಸಬಹುದು. ಜತೆಗೆ, ಯುಎನ್ 38.3 ದರ್ಜೆಯ ಉತ್ಕೃಷ್ಟ ಬ್ಯಾಟರಿ ಅಳವಡಿಸಲಾಗಿದೆ. ಇದು ಎ1 ಕ್ಯಾಟಗರಿಗೆ ಸೇರಿದೆ. ಈ ಬೈಕ್‌ಗಳ ರಫ್ತು ವಹಿವಾಟಿನಿಂದ ರಾಜ್ಯ ಮತ್ತು ದೇಶದ ಆರ್ಥಿಕತೆಗೆ ಬಲ ಬರಲಿದೆ ಎಂದು ವಿವರಿಸಿದರು.

ಅಲ್ಟ್ರಾವಯೊಲೆಟ್ ಕಂಪನಿಯ ಪರವಾಗಿ ಕಂಪನಿಯ ಸಹ ಸಂಸ್ಥಾಪಕ ಮತ್ತು ನಿರ್ದೇಶಕ ನೀರಜ್ ರಾಜಮೋಹನ್, ಸಹಾಯಕ ಉಪಾಧ್ಯಕ್ಷ ಧೀರಜ್ ಶೆಟ್ಟಿ ಅವರು ಸಚಿವರಿಗೆ ಇ.ವಿ ಮೋಟಾರ್ ಸೈಕಲ್ ವಿಶೇಷತೆ ಕುರಿತು ವಿವರಿಸಿದರು.

ವಿದ್ಯುತ್ ಚಾಲಿತ ಬೈಕ್‌ನೊಂದಿಗೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ

ಶ್ರೀಲಂಕಾದಲ್ಲಿ ಮತದಾನ ಇಂದು

ಕೊಲಂಬೊ (ಪಿಟಿಐ): 2022ರಲ್ಲಿ ಆರ್ಥಿಕ ಬಿಕ್ಕಟ್ಟಿನ ಬಳಿಕ ಮೊದಲ ಬಾರಿಗೆ ಅಧ್ಯಕ್ಷೀಯ ಚುನಾವಣೆ ಎದುರಿಸುತ್ತಿರುವ ಶ್ರೀಲಂಕಾದಲ್ಲಿ ಶನಿವಾರ ಮತದಾನ ನಡೆಯಲಿದೆ.

ಹಾಲಿ ಅಧ್ಯಕ್ಷ ರಾನಿಲ್ ವಿಕ್ರಮ್‌ಸಿಂಘೆ ಅವರು ಚುನಾವಣಾ ಕಣದಲ್ಲಿದ್ದಾರೆ. ಇವರಿಗೆ ಎದುರಾಳಿಗಳಾಗಿ ನ್ಯಾಷನಲ್ ಪೀಪಲ್ಸ್ ಪವರ್ (ಎನ್‌ಪಿಪಿ) ಪಕ್ಷದ ಅಧ್ಯಕ್ಷ ಅನುರಕುಮಾರ ದಿಸನಾಯಕೆ ಮತ್ತು ವಿರೋಧ ಪಕ್ಷದ ಪ್ರಮುಖ ನಾಯಕ, ಸಮಾಗಿ ಜನ ಬಲವೆಗಯ ಪಕ್ಷದ ಸಜಿತ್ ಪ್ರೇಮದಾಸ ಅವರು ಸ್ಪರ್ಧಿಸಲಿದ್ದಾರೆ.

'1982ರ ಬಳಿಕ ಶ್ರೀಲಂಕಾದಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಗಳಲ್ಲಿ ಮೂವರು ಅಭ್ಯರ್ಥಿಗಳು ಸ್ಪರ್ಧಿಸುತ್ತಿರುವುದು ಇದೇ ಮೊದಲು' ಎಂದು ತಜ್ಞರು ತಿಳಿಸಿದ್ದಾರೆ.

'ಕಣದಲ್ಲಿರುವ ಮೂರು ಅಭ್ಯರ್ಥಿಗಳು 2020ರ ಸಂಸದೀಯ ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಿದ್ದರು. ಹಾಗಾಗಿ ಈ ಹಿಂದಿನ ಎಲ್ಲ ಚುನಾವಣೆಗಳಿಗಿಂತಲೂ ಈ ಬಾರಿಯು ಚುನಾವಣೆ ಭಿನ್ನವಾಗಿರಲಿದೆ' ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

13,400 ಮತಗಟ್ಟೆಗಳಲ್ಲಿ ಮತದಾನ ನಡೆಯಲಿದ್ದು, ಸುಮಾರು 1.70 ಲಕ್ಷ ಜನರು ಮತ ಚಲಾಯಿಸುವ ಹಕ್ಕನ್ನು ಹೊಂದಿದ್ದಾರೆ. ಶೇ 80ರಷ್ಟು ಮತದಾನವಾಗುವ ನಿರೀಕ್ಷೆಯಿದೆ. ಭಾನುವಾರ ಚುನಾವಣಾ ಫಲಿತಾಂಶ ಹೊರಬೀಳಲಿದೆ.

'ಭಾರತವನ್ನು ನಾಯಕನಾಗಿ ಅಮೆರಿಕ ಕಾಣುತ್ತದೆ'

ವಾಷಿಂಗ್ಟನ್ (ಪಿಟಿಐ): ಭಾರತವನ್ನು ಕ್ವಾಡ್ ಒಕ್ಕೂಟದ ನಾಯಕ ರಾಷ್ಟ್ರವಾಗಿ ಅಮೆರಿಕ ಕಾಣುತ್ತದೆ ಮತ್ತು ನಾಲ್ಕು ರಾಷ್ಟ್ರಗಳ ಒಕ್ಕೂಟ ರಚನೆಗೆ ಭಾರತವು ಮಹತ್ವದ ಪಾತ್ರ ವಹಿಸಿರುವುದಕ್ಕೆ ಆಭಾರಿ ಎಂದು ಶ್ವೇತಭವನದ ಉನ್ನತ ಅಧಿಕಾರಿ ಮೀರಾ ರಾಪ್-ಹೂಪರ್ ಹೇಳಿದ್ದಾರೆ.

ಶ್ವೇತಭವನದ ಭದ್ರತಾ ಮಂಡಳಿಯಲ್ಲಿ ಪೂರ್ವ ಏಷ್ಯಾ ಮತ್ತು ಓಸಿನಿಯಾದ ಹಿರಿಯ ನಿರ್ದೇಶಕರಾಗಿರುವ ಅವರು, ಕ್ವಾಡ್ ಶೃಂಗಸಭೆಗೆ ಎರಡು ದಿನ ಇರುವ ಮಧ್ಯೆಯೇ ಈ ಹೇಳಿಕೆ ನೀಡಿದ್ದಾರೆ.

ಕ್ವಾಡ್ ಒಕ್ಕೂಟವು ಭಾರತ, ಆಸ್ಟ್ರೇಲಿಯಾ ಜಪಾನ್ ಮತ್ತು ಅಮೆರಿಕ ದೇಶಗಳನ್ನು ಒಳಗೊಂಡಿದೆ.

ಶನಿವಾರ ನಡೆಯಲಿರುವ ಶೃಂಗದ ಸಂದರ್ಭದಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು, ಪ್ರಧಾನಿ ನರೇಂದ್ರ ಮೋದಿ, ಆಸ್ಟ್ರೇಲಿಯಾ ಪ್ರಧಾನಿ ಆಂಥೋನಿ ಅಲ್ಬನೀಸ್, ಜಪಾನ್ ಪ್ರಧಾನಿ ಕಿಶಿದಾ ಫುಮಿನೊ ಅವರಿಗೆ ಆತಿಥ್ಯ ನೀಡಲಿದ್ದಾರೆ.

ಜಿಇಎಂ: ವಹಿವಾಟು ಶುಲ್ಕ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರದ ಇ-ಮಾರುಕಟ್ಟೆ ಪೋರ್ಟಲ್ ಆದ 'ಜಿಇಎಂ'ನಲ್ಲಿ ಮಾರಾಟಗಾರರು ಮತ್ತು ಸೇವಾ ಪೂರೈಕೆದಾರರ ವಹಿವಾಟಿನ ಮೇಲೆ ವಿಧಿಸುತ್ತಿದ್ದ ಶುಲ್ಕವನ್ನು ಕೇಂದ್ರ ಸರ್ಕಾರ ಇಳಿಕೆ ಮಾಡಿದೆ.

'ಕೇಂದ್ರ ಸರ್ಕಾರದ 100 ದಿನಗಳ ಕಾರ್ಯಕ್ರಮದ ಅಂಗವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು 'ಜಿಇಎಂ'ನ ಹೆಚ್ಚುವರಿ ಸಿಇಒ ಅಜಿತ್ ಬಿ. ಚೌಹಾಣ್ ತಿಳಿಸಿದ್ದಾರೆ.

ಆಗಸ್ಟ್ 9ರಿಂದ ಜಾರಿಗೆ ಬಂದಿರುವ ಹೊಸ ನೀತಿ ಅನ್ವಯ ಈ ಕ್ರಮ ಕೈಗೊಳ್ಳಲಾಗಿದೆ. ಇ-ಪೋರ್ಟಲ್‌ನಲ್ಲಿ ₹10 ಲಕ್ಷ ಮೌಲ್ಯದ ಆರ್ಡರ್‌ಗಳ ವಹಿವಾಟಿಗೆ ಯಾವುದೇ ಶುಲ್ಕ ಇರುವುದಿಲ್ಲ. ಈ ಮೊದಲು ₹5 ಲಕ್ಷ ಮೌಲ್ಯದ ವರೆಗಿನ ಆರ್ಡರ್‌ಗಳಿಗೆ ಶುಲ್ಕ ವಿನಾಯಿತಿ ನೀಡಲಾಗಿತ್ತು.

₹10 ಲಕ್ಷ ಮೇಲ್ಪಟ್ಟು, ₹10 ಕೋಟಿವರೆಗಿನ ಒಟ್ಟು ಆರ್ಡರ್‌ಗಳ ಮೌಲ್ಯದ ಮೇಲೆ ಶೇ 0.30ರಷ್ಟು ಶುಲ್ಕ ನಿಗದಿಪಡಿಸಲಾಗಿದೆ. ಈ ಮೊದಲು ಶೇ 0.45ರಷ್ಟು ಶುಲ್ಕ ವಿಧಿಸಲಾಗುತ್ತಿತ್ತು. ₹10 ಕೋಟಿ ಮೇಲ್ಪಟ್ಟ ಆರ್ಡರ್‌ಗಳಿಗೆ ₹3 ಲಕ್ಷ ಶುಲ್ಕ ವಿಧಿಸಲಾಗುತ್ತದೆ. ಈ ಮೊದಲು ₹72.5 ಲಕ್ಷ ಮೌಲ್ಯದ ಆರ್ಡರ್‌ಗಳಿಗೆ ಇಷ್ಟು ಮೊತ್ತದ ಶುಲ್ಕ ವಿಧಿಸಲಾಗುತ್ತಿತ್ತು ಎಂದು ವಿವರಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

20-09-2024

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ(ಹೊಸ)	9000-9100
ದಪ್ಪ ಗುಜರಾತ್(ಹೊಸ)	9800-9900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1475 (1520)
ಒಂದು ವಾರದ ಡೆಲಿವರಿ	1470 (1515)
ಪಾಮ್ ವಾರದ ಡೆಲಿವರಿ	1243 (1208)
ಸೂರ್ಯಕಾಂತಿ ಎಣ್ಣೆ ಕಚ್ಚಾ	1170 (1160)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹73,550 (73,050)
ಬೆಳ್ಳಿ ಕೆ.ಜಿ ₹88,600 (88,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಅಸುರಕ್ಷಿತ ಆಹಾರ: ವಾರ್ಷಿಕ 4.20 ಲಕ್ಷ ಜನ ಸಾವು-ಡಬ್ಲ್ಯುಎಚ್‌ಒ

ನವದೆಹಲಿ (ಪಿಟಿಐ): ಅಸುರಕ್ಷಿತ ಆಹಾರ ಸೇವನೆಯಿಂದ ವಿಶ್ವದಲ್ಲಿ ವಾರ್ಷಿಕ 4.20 ಲಕ್ಷ ಜನರು ಮೃತಪಡುತ್ತಿದ್ದರೆ, 60 ಕೋಟಿಗೂ ಹೆಚ್ಚು ಆಹಾರ ಸಂಬಂಧಿತ ಅನಾರೋಗ್ಯ ಪ್ರಕರಣಗಳು ವರದಿಯಾಗುತ್ತಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಪ್ರಧಾನ ನಿರ್ದೇಶಕ ಟೆಡ್ರೊಸ್ ಅಧಾನೊಮ್ ಘೆಬ್ರೆಯೆಸಸ್ ಹೇಳಿದ್ದಾರೆ.

ಜಾಗತಿಕ ಆಹಾರ ನಿಯಂತ್ರಕರ ಸಮ್ಮೇಳನದಲ್ಲಿ ಶುಕ್ರವಾರ ನಡೆದ ಎರಡನೇ ದಿನದ ಕಾರ್ಯಕ್ರಮದಲ್ಲಿ ವಿಡಿಯೊ ಸಂದೇಶದಲ್ಲಿ ಅವರು ಈ ಮಾಹಿತಿ ನೀಡಿದ್ದಾರೆ.

ಹವಾಮಾನ ಬದಲಾವಣೆ, ಜನಸಂಖ್ಯಾ ಬೆಳವಣಿಗೆ, ಹೊಸ ತಂತ್ರಜ್ಞಾನ, ಜಾಗತೀಕರಣದಿಂದ ಆಹಾರ ವ್ಯವಸ್ಥೆಯು ಹೆಚ್ಚು ಸವಾಲುಗಳನ್ನು ಎದುರಿಸುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಅಸುರಕ್ಷಿತ ಆಹಾರ ಸೇವನೆಯಿಂದ ಮೃತಪಡುವವರ ಪೈಕಿ ಐದು ವರ್ಷದೊಳಗಿನ ಮಕ್ಕಳ ಸಂಖ್ಯೆ ಶೇ 70ರಷ್ಟಿದೆ ಎಂದು ಹೇಳಿದ್ದಾರೆ.

ವಿಶ್ವದಲ್ಲಿ 30 ಲಕ್ಷಕ್ಕೂ ಹೆಚ್ಚಿನ ಜನರು ಪೌಷ್ಟಿಕ ಆಹಾರ ಪಡೆಯಲು ಸಾಧ್ಯವಾಗುತ್ತಿಲ್ಲ. ಇಂತಹ ಜಾಗತಿಕ ಸವಾಲು ಎದುರಿಸುವಲ್ಲಿ ಆಹಾರ ನಿಯಂತ್ರಕ ಸಮುದಾಯದ ಪಾತ್ರ ಮಹತ್ವದ್ದಾಗಿದೆ. ಎಲ್ಲರಿಗೂ ಸುರಕ್ಷಿತ ಆಹಾರ ನೀಡಲು ಎಲ್ಲ ದೇಶಗಳ ಸಹಕಾರ ಅಗತ್ಯವಾಗಿದೆ ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪೇಜರ್ ಸ್ಫೋಟ: ಕೇರಳ ಮೂಲದ ವ್ಯಕ್ತಿ ಭಾಗಿ

ತಿರುವನಂತಪುರ: ಲೆಬನಾನ್‌ನಲ್ಲಿನ ಪೇಜರ್ ಸ್ಫೋಟ ಪ್ರಕರಣದ ನಂಟು ಹೊಂದಿರುವ ಆರೋಪ ಹೊತ್ತಿರುವ ಬಲ್ಗೇರಿಯನ್‌ನ ಕಂಪನಿಯು ಕೇರಳ ಮೂಲದ ವ್ಯಕ್ತಿಗೆ ಸೇರಿದ್ದಾಗಿದೆ.

ಕೇರಳ ಮೂಲದ ರಿನ್ಸನ್ ಜೋಸ್(39) ಅವರಿಗೆ ಸೇರಿದ ನೋರ್ಟ ಗ್ಲೋಬಲ್ ಸಂಸ್ಥೆಯು, ಪೇಜರ್‌ಗಳ ಖರೀದಿಗಾಗಿ ಹಣ ವರ್ಗಾವಣೆ ಮಾಡಿರುವುದಾಗಿ ವರದಿಗಳು ತಿಳಿಸಿವೆ. ಆದರೆ ಸ್ಫೋಟ ಪ್ರಕರಣದಲ್ಲಿ ನೇರವಾಗಿ ಭಾಗಿಯಾಗಿರುವ ಬಗ್ಗೆ ಯಾವುದೇ ಮಾಹಿತಿ ಸಿಕ್ಕಿಲ್ಲ.

10 ವರ್ಷಗಳ ಹಿಂದೆ ವಯನಾಡ್ ಜಿಲ್ಲೆಯ ಮಾನಂದವಾಡಿಯಿಂದ ವಿದೇಶಕ್ಕೆ ತೆರಳಿದ್ದ ರಿನ್ಸನ್ ಅವರು ನಾರ್ವೆ ದೇಶದ ಪೌರತ್ವವನ್ನು ಹೊಂದಿದ್ದಾರೆ. 10 ತಿಂಗಳ ಹಿಂದೆ ಅಂದರೆ ನವೆಂಬರ್‌ನಲ್ಲಿ ಕೇರಳದಲ್ಲಿರುವ ತಮ್ಮ ಮನೆಗೆ ಭೇಟಿ ನೀಡಿದ್ದ ಅವರು, ಜನವರಿಯಲ್ಲಿ ಹಿಂತಿರುಗಿದ್ದರು.

ಪುರಿ: ಇಂದಿನಿಂದ ತಾಂತ್ರಿಕ ಸಮೀಕ್ಷೆ

ಭುವನೇಶ್ವರ(ಪಿಟಿಐ): ಜಗನ್ನಾಥ ದೇವಾಲಯದ 'ರತ್ನ ಭಂಡಾರ' ಕುರಿತ ತಾಂತ್ರಿಕ ಸಮೀಕ್ಷೆಯನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಶನಿವಾರದಿಂದ ಮತ್ತೆ ಆರಂಭಿಸಲಿದೆ ಎಂದು ಶ್ರೀ ಜಗನ್ನಾಥ ದೇವಸ್ಥಾನ ಆಡಳಿತ (ಎಸ್‌ಜೆಟಿಎ) ಹೇಳಿದೆ.

'ಸೆ.21, 22 ಹಾಗೂ 23ರಂದು ಮಧ್ಯಾಹ್ನ 1ರಿಂದ ಸಂಜೆ 6ರ ವರೆಗೆ ಈ ಸಮೀಕ್ಷೆ ನಡೆಯಲಿದೆ' ಎಂದು ಎಸ್‌ಜೆಟಿಎ ಮುಖ್ಯ ಅಧಿಕಾರಿ ಅರವಿಂದ ಪಾಢಿ ಶುಕ್ರವಾರ ತಿಳಿಸಿದ್ದಾರೆ.

'ಸಮೀಕ್ಷೆ ಕಾರಣಕ್ಕೆ, ದೇವಸ್ಥಾನಕ್ಕೆ ಭೇಟಿ ನೀಡುವ ಭಕ್ತರಿಗೆ ಕೆಲ ನಿರ್ಬಂಧಗಳನ್ನು ವಿಧಿಸಲಾಗುತ್ತದೆ. ಸಮೀಕ್ಷೆ ನಡೆಯುವ ಸಮಯದಲ್ಲಿ ದೇವಸ್ಥಾನದ ದ್ವಾರಗಳನ್ನು ಮುಚ್ಚಲಾಗುತ್ತದೆ' ಎಂದು ಅವರು ತಿಳಿಸಿದ್ದಾರೆ. ದಸರಾ, ಕಾರ್ತಿಕ ಮಾಸದಲ್ಲಿ ದೇವಸ್ಥಾನದಲ್ಲಿ ವಿಶೇಷ ಧಾರ್ಮಿಕ ವಿಧಿಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಈ ಕಾರಣದಿಂದ ಸೆ.24ರ ಒಳಗಾಗಿ 'ರತ್ನ ಭಂಡಾರ'ದ ತಾಂತ್ರಿಕ ಸಮೀಕ್ಷೆಯನ್ನು ಪೂರ್ಣಗೊಳಿಸುವಂತೆ ಎಎಸ್‌ಐ ಪ್ರಧಾನ ನಿರ್ದೇಶಕರಿಗೆ ದೇವಸ್ಥಾನದ ಆಡಳಿತ ಸೆ.18ರಂದು ಪತ್ರ ಬರೆದು ಮನವಿ ಮಾಡಿತ್ತು.

ಚೆನ್ನೈ ಟೆಸ್ಟ್: ಭಾರತಕ್ಕೆ ಮೊದಲ ಇನಿಂಗ್ಸ್‌ನಲ್ಲಿ ದೊಡ್ಡ ಮುನ್ನಡೆ; ಮಿಂಚಿದ ಆಕಾಶ್ ದೀಪ್, ಸಿರಾಜ್

ಬೂಮ್ರಾ ಬಿಸಿಗೆ ಕರಗಿದ ಬಾಂಗ್ಲಾ

ಪ್ರಜಾವಾಣಿ ವಾರ್ತೆ

ಚೆನ್ನೈ: ಬಾಂಗ್ಲಾದೇಶ ತಂಡವು ಇದುವರೆಗೆ ಭಾರತದ ಎದುರು 13 ಟೆಸ್ಟ್ ಕ್ರಿಕೆಟ್ ಪಂದ್ಯಗಳನ್ನು ಆಡಿದೆ. ಅದರಲ್ಲಿ 11ರಲ್ಲಿ ಭಾರತ ಗೆದ್ದಿದೆ. ಎರಡು ಪಂದ್ಯಗಳು ಡ್ರಾ ಆಗಿವೆ. ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಬಾಂಗ್ಲಾ ತಂಡವು ಭಾರತದ ಎದುರು ಕೆಲವು ಪಂದ್ಯಗಳನ್ನು ಗೆದ್ದಿದೆ. ಆದರೆ ಕೆಂಪು ಚೆಂಡಿನ ಕ್ರಿಕೆಟ್‌ನಲ್ಲಿ ಇದುವರೆಗೆ ಜಯದ ರುಚಿ ಸವಿದಿಲ್ಲ.

ಇದೀಗ ಭಾರತದ ಎದುರು ಎಂಟನೇ ಸರಣಿ ಆಡುತ್ತಿರುವ ಬಾಂಗ್ಲಾ ತಂಡವು ಮತ್ತೊಮ್ಮೆ ನಿರಾಶೆಯ ಹಾದಿಯಲ್ಲಿದೆ. ಈ ಸಂಗತಿಯನ್ನು ಅರಗಿಸಿಕೊಳ್ಳುವುದು ಪ್ರವಾಸಿ ತಂಡಕ್ಕೆ ಕಷ್ಟವಾಗಬಹುದು. ಆದರೆ ಆತಿಥೇಯರ ಪ್ರಬಲ ಆಟದ ಮುಂದೆ ಬಾಂಗ್ಲಾ ತಂಡವು ಮಂಕಾಗಿರುವುದು ನಿಜ.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದ ಮೊದಲ ದಿನದ ಆಟದಲ್ಲಿ ಆರ್. ಅಶ್ವಿನ್ ಮತ್ತು ರವೀಂದ್ರ ಜಡೇಜ ಅವರ ಜೊತೆಯಾಟದ ಬ್ಯಾಟಿಂಗ್ ಮುಂದೆ ಬಾಂಗ್ಲಾ ಕಂಗಾಲಾಯಿತು. ಎರಡನೇ ದಿನವಾದ ಶುಕ್ರವಾರ ಜಸ್‌ಪ್ರೀತ್ ಬೂಮ್ರಾ (50ಕ್ಕೆ4) ಅವರ ನೇತೃತ್ವದ ಮಧ್ಯಮವೇಗಿಗಳ ಪಡೆಯ ದಾಳಿಗೆ ಕುಸಿಯಿತು. ಭಾರತದ ಮೊದಲ ಇನಿಂಗ್ಸ್‌ನ 376 ರನ್‌ಗಳಿಗೆ ಉತ್ತರವಾಗಿ ಬಾಂಗ್ಲಾ ಗಳಿಸಿದ್ದು 149 ರನ್ (47.1 ಓವರ್‌ಗಳಲ್ಲಿ) ಮಾತ್ರ. ಆಕಾಶ್ ದೀಪ್ (19ಕ್ಕೆ2) ಮತ್ತು ಮೊಹಮ್ಮದ್ ಸಿರಾಜ್ (30ಕ್ಕೆ2) ಬೂಮ್ರಾಗೆ ಉತ್ತಮ ಬೆಂಬಲ ನೀಡಿದರು.

227 ರನ್‌ಗಳ ದೊಡ್ಡ ಮುನ್ನಡೆ ಸಾಧಿಸಿದ ಭಾರತ ಎರಡನೇ ಇನಿಂಗ್ಸ್ ಆರಂಭಿಸಿದೆ. ದಿನದಾಟದ ಮುಕ್ತಾಯಕ್ಕೆ 3 ವಿಕೆಟ್‌ಗಳಿಗೆ 81 ರನ್ ಗಳಿಸಿದೆ. ಶುಭಮನ್ ಗಿಲ್ (ಬ್ಯಾಟಿಂಗ್ 33) ಮತ್ತು ರಿಷಭ್ ಪಂತ್ (ಬ್ಯಾಟಿಂಗ್ 12) ಕ್ರೀಸ್‌ನಲ್ಲಿದ್ದಾರೆ. ಒಟ್ಟು 308 ರನ್‌ಗಳ ಮುನ್ನಡೆಯನ್ನು ಭಾರತ ಸಾಧಿಸಿದೆ.

ಆತಿಥೇಯ ತಂಡವು ಗುರುವಾರ ದಿನದಾಟದ ಮುಕ್ತಾಯಕ್ಕೆ 6 ವಿಕೆಟ್‌ಗಳಿಗೆ 339 ರನ್ ಗಳಿಸಿತ್ತು. ಶತಕ ಗಳಿಸಿ ಕ್ರೀಸ್‌ನಲ್ಲಿದ್ದ ಆರ್. ಅಶ್ವಿನ್ ಮತ್ತು ಶತಕದ ಸನಿಹದಲ್ಲಿದ್ದ ರವಿಂದ್ರ ಜಡೇಜ ಎರಡನೇ ದಿನದಾಟದ ಬೆಳಿಗ್ಗೆ ಬೇಗನೆ ಔಟಾದರು. ಒಟ್ಟು 11.2 ಓವರ್‌ಗಳಲ್ಲಿ ಇವರಿಬ್ಬರೂ ಸೇರಿದಂತೆ ನಾಲ್ವರು ಬ್ಯಾಟರ್‌ಗಳ ವಿಕೆಟ್‌ಗಳನ್ನು ಬಾಂಗ್ಲಾ ಬೌಲರ್‌ಗಳು ಉರುಳಿಸಿದರು. ಒಟ್ಟು 47 ರನ್‌ಗಳು ತಂಡದ ಖಾತೆಗೆ ಸೇರಿದವು. ಬಾಂಗ್ಲಾ ವೇಗಿ ತಸ್ಕಿನ್ ಅಹಮದ್ (6-3-8-3) ಮಿಂಚಿದರು.

ಆದರೆ ಬಾಂಗ್ಲಾ ಬಳಗದಲ್ಲಿ ಈ ಸಂತಸವು ಹೆಚ್ಚು ಹೊತ್ತು ಉಳಿಯಲಿಲ್ಲ. ಇನಿಂಗ್ಸ್‌ನ ಆರಂಭದಿಂದಲೇ ಬೂಮ್ರಾ ಅಬ್ಬರ ಶುರುವಾಯಿತು. ಆರಂಭಿಕ ಬ್ಯಾಟರ್ ಶಾದ್ಮನ್ ಇಸ್ಲಾಂ ಅವರನ್ನು ಮೊದಲ ಓವರ್‌ನ ಕೊನೆಯ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಮಾಡಿದರು. ಇದಾಗಿ ಸ್ವಲ್ಪಹೊತ್ತಿನ ನಂತರ ಇನ್ನೊಂದು ಬದಿಯಿಂದ ದಾಳಿ ಆರಂಭಿಸಿದ್ದ ಆಕಾಶ್ ದೀಪ್ ಸತತ ಎರಡು ಎಸೆತಗಳಲ್ಲಿ ಝೂಕೀರ್ ಹಸನ್ ಹಾಗೂ ಮೊಮಿನುಲ್ ಹಕ್ ಅವರ ವಿಕೆಟ್‌ಗಳನ್ನು ಉರುಳಿಸಿದರು.

ನೆಲಕಚ್ಚಿ ಆಡುತ್ತಿದ್ದ ನಾಯಕ ನಜ್ಮುಲ್ ಹುಸೇನ್ ಶಾಂತೊ (20; 30ಎ) ಅವರ ವಿಕೆಟ್ ಪಡೆಯುವಲ್ಲಿ ಸಿರಾಜ್ ಯಶಸ್ವಿಯಾದರು. ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾದ ಶಕೀಬ್ ಅಲ್ ಹಸನ್ (32 ರನ್), ಲಿಟನ್ ದಾಸ್ (22 ರನ್) ಮತ್ತು ಮೆಹದಿ ಹಸನ್ ಮಿರಾಜ್ (ಔಟಾಗದೆ 27) ಅವರು ಒಂದಿಷ್ಟು ಹೋರಾಟ ನಡೆಸಿದರು. ಎಡಗೈ ಸ್ಪಿನ್ನರ್ ಜಡೇಜ ಅವರು ಶಕೀಬ್ ಮತ್ತು ಲಿಟನ್‌ಗೆ ಪೆವಿಲಿಯನ್ ಹಾದಿ ತೋರಿಸಿದರು. ಬೌಲರ್‌ಗಳು ಯಾವುದೇ ಹಂತದಲ್ಲಿಯೂ ದೊಡ್ಡ ಜೊತೆಯಾಟ ಬೆಳೆಯಲು ಆಸ್ಪದ ಕೊಡಲಿಲ್ಲ.

ಭಾರತ ತಂಡದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರನ್ನು ಅಭಿನಂದಿಸಿದ ಸಹ ಆಟಗಾರರು – ಎಎಫ್‌ಪಿ ಚಿತ್ರ

‘300ನೇ ವಿಕೆಟ್‌ಗೆ ಸೂಕ್ತ ಮೈದಾನ’

ಚೆನ್ನೈ (ಪಿಟಿಐ): ‘ಟೆಸ್ಟ್ ಕ್ರಿಕೆಟ್‌ನಲ್ಲಿ ನನಗೆ 300ನೇ ವಿಕೆಟ್ ಗಳಿಸಲು ಇದು ಸೂಕ್ತ ಕ್ರೀಡಾಂಗಣವಾಗಿದೆ. ಇಲ್ಲಿ ಅದನ್ನು ಸಾಧಿಸುವ ವಿಶ್ವಾಸವಿದೆ’ ಎಂದು ಭಾರತ ತಂಡದ ಆಲ್‌ರೌಂಡರ್ ರವೀಂದ್ರ ಜಡೇಜ ಹೇಳಿದರು.

ಅವರು ಬಾಂಗ್ಲಾ ಎದುರಿನ ಟೆಸ್ಟ್‌ನಲ್ಲಿ ಅಶ್ವಿನ್ ಜೊತೆಗೆ ಬ್ಯಾಟಿಂಗ್‌ನಲ್ಲಿಯೂ ಮಿಂಚಿದ್ದರು. ಇಬ್ಬರೂ ಏಳನೇ ವಿಕೆಟ್‌ಗೆ 199 ರನ್ ಸೇರಿಸಿ ತಂಡವು ಉತ್ತಮ ಮೊತ್ತ ಗಳಿಸಲು ಕಾರಣರಾದರು. ನಂತರ ಬೌಲಿಂಗ್‌ನಲ್ಲಿಯೂ ಎರಡು ವಿಕೆಟ್ ಪಡೆದರು. ಅವರ ಖಾತೆಯಲ್ಲಿ ಸದ್ಯ 296 ವಿಕೆಟ್‌ಗಳು ಇವೆ.

ಒಂದೇ ದಿನ 17 ವಿಕೆಟ್

ಚೆಪಾಕ್‌ನಲ್ಲಿ ಶುಕ್ರವಾರ ಒಂದೇ ದಿನ 17 ವಿಕೆಟ್‌ಗಳು ಪತನವಾದವು. ಪಿಚ್ ಬ್ಯಾಟರ್‌ಗಳಿಗೆ ನೆರವಾಗುವಂತೆ ಕಂಡರೂ ಬೌಲರ್‌ಗಳು ಪಾರಮ್ಯ ಮೆರೆದರು.

ಸ್ಕೋರ್ ಕಾರ್ಡ್

ಭಾರತ
ಮೊದಲ ಇನಿಂಗ್ಸ್ 376 (91.2 ಓವರ್‌ಗಳಲ್ಲಿ)
ಜಡೇಜ ಸಿ ಲಿಟನ್ ಬಿ ತಸ್ಕಿನ್ 86 (124ಎ, 4X10, 6X2), ಅಶ್ವಿನ್ ಸಿ ಶಾಂತೊ ಬಿ ತಸ್ಕಿನ್ 113 (133ಎ, 4X11, 6X2), ಆಕಾಶ್ ಸಿ ಶಾಂತೊ ಬಿ ತಸ್ಕಿನ್ 17 (30ಎ, 4X4), ಬೂಮ್ರಾ ಸಿ ಝೂಕೀರ್ ಬಿ ಹಸನ್ 7 (9ಎ, 4X1), ಸಿರಾಜ್ ಔಟಾಗದೆ 0 (1ಎ)
ಇತರೆ: 30 (ಬೈ 18, ಲೆಗ್‌ಬೈ 7, ವೈಡ್ 1, ನೋಬಾಲ್ 4)
ವಿಕೆಟ್ ಪತನ: 7-343 (ರವೀಂದ್ರ ಜಡೇಜ; 82.1), 8-367 (ಆಕಾಶದೀಪ್ 88.5), 9-374 (ಅಶ್ವಿನ್; 90.5), 10-376 (ಬೂಮ್ರಾ 91.2),
ಬೌಲಿಂಗ್
ತಸ್ಕಿನ್ ಅಹಮದ್ 21-4-55-3, ಹಸನ್ ಮೆಹಮೂದ್ 22.2-4-83-5, ನಹೀದ್ ರಾಣಾ 18-2-82-1, ಮೆಹದಿ ಹಸನ್ ಮಿರಾಜ್ 21-2-77-1, ಶಕೀಬ್ ಅಲ್ ಹಸನ್ 8-0-50-0, ಮೊಮಿನುಲ್ ಹಕ್ 1-0-4-0.

ಬಾಂಗ್ಲಾದೇಶ
ಮೊದಲ ಇನಿಂಗ್ಸ್ 149 (47.1 ಓವರ್‌ಗಳಲ್ಲಿ)
ಶಾದ್ಮನ್ ಬಿ ಬೂಮ್ರಾ 2 (6ಎ)
ಝೂಕೀರ್ ಬಿ ಆಕಾಶ್‌ದೀಪ್ 3 (22ಎ)
ಶಾಂತೊ ಸಿ ಕೊಹ್ಲಿ ಬಿ ಸಿರಾಜ್ 20 (30ಎ, 4X3), ಮೊಮಿನುಲ್ ಬಿ ಆಕಾಶ್‌ದೀಪ್ 0 (1ಎ), ಮುಷ್ಫೀಕುರ್ ಸಿ ರಾಹುಲ್ ಬಿ ಬೂಮ್ರಾ 8 (14ಎ, 4X2), ಶಕೀಬ್ ಸಿ ಪಂತ್ ಬಿ ಜಡೇಜ 32 (64ಎ, 4X5), ಲಿಟನ್ ಸಿ ಧ್ರುವ ಜುರೇಲ್ (ಬದಲೀ), ಬಿ ಜಡೇಜ 22 (42ಎ, 4X3), ಮೆಹದಿ ಔಟಾಗದೆ 27 (52ಎ, 4X2, 6X1), ಹಸನ್ ಸಿ ಕೊಹ್ಲಿ ಬಿ ಬೂಮ್ರಾ 9 (22ಎ, 4X2), ತಸ್ಕಿನ್ ಬಿ ಬೂಮ್ರಾ 11 (21ಎ, 4X1), ರಾಣಾ ಬಿ ಸೂರಜ್ 11 (11ಎ, 4X2)
ಇತರೆ: 4 (ಲೆಗ್‌ಬೈ 2, ನೋಬಾಲ್ 2)
ವಿಕೆಟ್ ಪತನ: 1-2 (ಶಾದ್ಮನ್ ಇಸ್ಲಾಂ; 0.6), 2-22 (ಝೂಕೀರ್ ಹಸನ್ 8.1), 3-22 (ಮೊಮಿನುಲ್ ಹಕ್, 8.2), 4-36 (ಶಾಂತೊ; 11.1), 5-40 (ಮುಷ್ಫೀಕುರ್ ರಹೀಂ 12.5), 6-91 (ಲಿಟನ್ ದಾಸ್; 28.2), 7-29 (ಶಕೀಬ್ ಅಲ್ ಹಸನ್; 30.3), 8-112 (ಹಸನ್ ಮೆಹಮೂದ್; 36.5), 9-130 (ತಸ್ಕಿನ್ ಅಹಮದ್; 42.4), 10-149 (ನಹೀದ್ ರಾಣಾ; 47.1)
ಬೌಲಿಂಗ್
ಜಸ್‌ಪ್ರೀತ್ ಬೂಮ್ರಾ 11-1-50-4, ಮೊಹಮ್ಮದ್ ಸಿರಾಜ್ 10.1-1-30-2, ಆಕಾಶದೀಪ್ 5-0-19-2, ಆರ್. ಅಶ್ವಿನ್ 13-4-29-0, ರವೀಂದ್ರ ಜಡೇಜ 8-2-19-2.

ಭಾರತ
ಎರಡನೇ ಇನಿಂಗ್ಸ್ 3ಕ್ಕೆ81 (23 ಓವರ್‌ಗಳಲ್ಲಿ)
ಯಶಸ್ವಿ ಸಿ ಲಿಟನ್ ಬಿ ರಾಣಾ 10 (17ಎ, 4X2), ರೋಹಿತ್ ಸಿ ಝೂಕೀರ್ ಬಿ ತಸ್ಕಿನ್ 5 (7ಎ, 4X1)
ಶುಭಮನ್ ಬ್ಯಾಟಿಂಗ್ 33 (64ಎ, 4X4), ವಿರಾಟ್ ಎಲ್‌ಬಿಡಬ್ಲ್ಯು ಬಿ ಮೆಹದಿ 17 (37ಎ, 4X2)
ರಿಷಭ್ ಬ್ಯಾಟಿಂಗ್ 12 (13ಎ, 4X1, 6X1)
ಇತರೆ: 4 (ಲೆಗ್‌ಬೈ 4)
ವಿಕೆಟ್ ಪತನ: 1-15 (ರೋಹಿತ್ ಶರ್ಮಾ; 2.3), 2-28 (ಯಶಸ್ವಿ ಜೈಸ್ವಾಲ್; 6.4), 3-67 (ವಿರಾಟ್ ಕೊಹ್ಲಿ; 19.2)
ಬೌಲಿಂಗ್
ತಸ್ಕಿನ್ ಅಹಮದ್ 3-0-17-1, ಹಸನ್ ಮೆಹಮೂದ್ 5-1-12-0, ನಹೀದ್ ರಾಣಾ 3-0-12-1, ಶಕೀಬ್ ಅಲ್ ಹಸನ್ 6-0-20-0, ಮೆಹದಿ ಹಸನ್ ಮಿರಾಜ್ 6-0-16-1.

ಒಲಿಂಪಿಯಾಡ್ ಟ್ರೋಫಿ ಕಾಣೆ

ಚೆನ್ನೈ (ಪಿಟಿಐ): ಚೆಸ್ ಒಲಿಂಪಿಯಾಡ್‌ನಲ್ಲಿ ಭಾರತ ತಂಡ ಕಳೆದ ಬಾರಿ ಗೆದ್ದಿದ್ದ ಟ್ರೋಫಿಯು, ಇಲ್ಲಿನ ಅಖಿಲ ಭಾರತ ಚೆಸ್ ಫೆಡರೇಷನ್ (ಎಐಸಿಎಫ್) ಕಚೇರಿಯಿಂದ ಕಾಣೆಯಾಗಿದ್ದು, ತೀವ್ರ ಮುಜುಗರಕ್ಕೆ ಒಳಗಾಗಿರುವ ಫೆಡರೇಷನ್, ಈ ಬಗ್ಗೆ ಪೊಲೀಸ್ ಠಾಣೆಗೆ ದೂರನ್ನು ನೀಡಿದೆ.

ಮಾತ್ರವಲ್ಲ, ಅದರ ಪ್ರತಿಕೃತಿಗೆ ಏರ್ಪಾಡು ಮಾಡಿದ್ದು, ಫಿಡೆಯ ಕ್ಷಮೆ ಯಾಚಿಸಿದೆ. ಇದು ರೋಲಿಂಗ್ (ಪರ್ಯಾಯ) ಟ್ರೋಫಿಯಾಗಿದೆ. ಪ್ರಸ್ತುತ ಬುಡಾಪೆಸ್ಟ್‌ನಲ್ಲಿ ನಡೆಯುತ್ತಿರುವ ಹಾಲಿ ಒಲಿಂಪಿಯಾಡ್‌ನಲ್ಲಿ ಭಾರತ ಪುರುಷರ ತಂಡವು ಚಿನ್ನದ ಪದಕದ ಸನಿಹ ಇರುವಾಗಲೇ ಟ್ರೋಫಿ ನಾಪತ್ತೆ ಆಗಿರುವುದು ಬಹಿರಂಗವಾಗಿದೆ.

ಗಾಪ್ರಿನ್‌ದಶ್ವಿಲಿ ಟ್ರೋಫಿಯನ್ನು ಒಲಿಂಪಿಯಾಡ್‌ನಲ್ಲಿ ಒಟ್ಟಾರೆ (ಓಪನ್ ಮತ್ತು ಮಹಿಳೆಯರ ವಿಭಾಗ ಒಳಗೊಂಡು) ಉತ್ತಮ ಪ್ರದರ್ಶನ ನೀಡುವ ತಂಡಕ್ಕೆ ನೀಡಲಾಗುತ್ತಿದೆ. 2022ರಲ್ಲಿ ಚೆನ್ನೈನಲ್ಲಿ ನಡೆದ ಒಲಿಂಪಿಯಾಡ್‌ನಲ್ಲಿ ಭಾರತ ತಂಡಕ್ಕೆ ಈ ಟ್ರೋಫಿ ಒಲಿದಿತ್ತು.

‘ಒಂದು ತಿಂಗಳ ಹಿಂದೆ ಟ್ರೋಫಿ ಕಳೆದುಹೋಗಿದೆ. ಹಾಲಿ ಒಲಿಂಪಿಯಾಡ್ ನಡೆಯುತ್ತಿರುವ ಬುಡಾಪೆಸ್ಟ್‌ಗೆ ಈ ಟ್ರೋಫಿಯನ್ನು ಕಳಿಸುವಂತೆ ವಿಶ್ವ ಚೆಸ್ ಫೆಡರೇಷನ್ (ಫಿಡೆ) ಕೇಳಿದಾಗಷ್ಟೇ ಟ್ರೋಫಿ ನಾಪತ್ತೆ ಆಗಿರುವುದು ಗೊತ್ತಾಗಿದೆ’ ಎಂದು ಎಐಸಿಎಫ್ ಉಪಾಧ್ಯಕ್ಷ ಅನಿಲ್ ಕುಮಾರ್ ರಾಯ್‌ಝಾದಾ ಪಿಟಿಐಗೆ ತಿಳಿಸಿದ್ದಾರೆ.

ಮಹಿಳಾ ತಂಡಕ್ಕೆ ಮೊದಲ ಸೋಲು

ಬುಡಾಪೆಸ್ಟ್ (ಪಿಟಿಐ): ಅಗ್ರ ಶ್ರೇಯಾಂಕದ ಭಾರತ ಮಹಿಳೆಯರ ತಂಡ, 45ನೇ ಚೆಸ್ ಒಲಿಂಪಿಯಾಡ್‌ನ ಎಂಟನೇ ಸುತ್ತಿನಲ್ಲಿ ಗುರುವಾರ ಪೋಲೆಂಡ್ ಎದುರು 1.5–2.5 ಅಂತರದಲ್ಲಿ ಆಘಾತ ಅನುಭವಿಸಿತು. ಇದು ಭಾರತ ವನಿತೆಯರಿಗೆ ಎದುರಾದ ಮೊದಲ ಸೋಲು.

ಓಪನ್ ವಿಭಾಗದಲ್ಲಿ ಭಾರತ ತಂಡ ಸಂಭವನೀಯ 16 ಪಾಯಿಂಟ್ಸ್ ಕಲೆ ಹಾಕಿದ್ದು, ಚಿನ್ನ ಗೆಲ್ಲುವ ಹಾದಿಯಲ್ಲಿದೆ. ಎರಡನೇ ಸ್ಥಾನದಲ್ಲಿರುವ ಹಂಗರಿ ಮತ್ತು ಉಜ್ಬೇಕಿಸ್ತಾನ ತಂಡಗಳಿಗಿಂತ ಭಾರತ ತಂಡ 2 ಪಾಯಿಂಟ್ ಮುನ್ನಡೆ ಹೊಂದಿದೆ.

ಮಹಿಳಾ ವಿಭಾಗದ ಮೊದಲ ಬೋರ್ಡ್‌ನಲ್ಲಿ ದ್ರೋಣವಲ್ಲಿ ಹಾರಿಕಾ ಅವರು ಎಂಟನೇ ಸುತ್ತಿನಲ್ಲೂ ಲಯಕ್ಕೆ ಮರಳಲಾಗಲಿಲ್ಲ. ಅಲಿನಾ ಕಾಶ್ಲಿನ್‌ಸ್ಕಾಯಾ ಎದುರು ಸೋಲು ಅನುಭವಿಸಿದರು. ಮೋನಿಕಾ ಸೊಕೊ, ಎರಡನೇ ಬೋರ್ಡ್‌ನಲ್ಲಿ ಆರ್.ವೈಶಾಲಿ ಎದುರು ಜಯಗಳಿಸಿದರು.

ದಿವ್ಯಾ ದೇಶಮುಖ್, ಅಲೆಕ್ಸಾಂಡ್ರಾ ಮಾಸ್ಟ್‌ಸೆವ್‌ಸ್ಕಾಯಾ ಎದುರು ಜಯಗಳಿಸಿದ್ದರಿಂದ ಎಲ್ಲರ ಕಣ್ಣು, ಕೊನೆಯ ಬೋರ್ಡ್‌ನಲ್ಲಿದ್ದ ವಂತಿಕಾ ಅಗರವಾಲ್– ಅಲಿಸಿಯಾ ಸ್ಲಿವಿಕಾ ಪಂದ್ಯದ ಮೇಲೆ ನೆಟ್ಟಿತು. ಆದರೆ ಈ ಪಂದ್ಯ ಅಂತಿಮವಾಗಿ ‘ಡ್ರಾ’ ಆಯಿತು.

ಸಿಬಿಎಸ್‌ಸಿ ಕೊಕ್ಕೊ 23ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದ್ರಾ ಲೇಔಟ್‌ನಲ್ಲಿರುವ ಶ್ರೀ ಸಿದ್ಧಗಂಗಾ ಶಾಲೆಯ ಆಶ್ರಯದಲ್ಲಿ ಕೇಂದ್ರಿಯ ಮಾಧ್ಯಮಿಕ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಕ್ಲಸ್ಟರ್ ಎಂಟರ ಕೊಕ್ಕೊ ಟೂರ್ನಿಯು ಇದೇ 23 ರಿಂದ 25ರವರೆಗೆ ನಡೆಯಲಿದೆ.

ಎಸ್‌ಪಿಎಸ್ ಮೈದಾನದಲ್ಲಿ ಟೂರ್ನಿಯು ನಡೆಯಲಿದ್ದು, ಸಿಬಿಎಸ್‌ಇ ಶಾಲಾ ತಂಡಗಳು ಭಾಗವಹಿಸಲಿವೆ. 23ರಂದು ಬೆಳಿಗ್ಗೆ 10.30ಕ್ಕೆ ಟೂರ್ನಿಯನ್ನು ರಾಮನಗರ ಜಿಲ್ಲಾಧಿಕಾರಿ ಯಶವಂತ ಗುರುಕಾರ್ ಉದ್ಘಾಟಿಸುವರು. ಅಂತರರಾಷ್ಟ್ರೀಯ ಅಥ್ಲೀಟ್ ಅಶ್ವಿನಿ ಅಕ್ಕುಂಜಿ, ಸಿಬಿಎಸ್‌ಇ ಪ್ರಾದೇಶಿಕ ಕಚೇರಿ ಕಾರ್ಯದರ್ಶಿ ಅನಿತಾ ಜೆ ಸಾಸ್ವೆನ್ ಹಾಜರಿರುವರು.

ದುಲೀಪ್ ಟ್ರೋಫಿ: ಅಭಿಷೇಕ್ ಪೊರೆಲ್ ಏಕಾಂಗಿ ಹೋರಾಟ

ಭಾರತ ಸಿ ತಂಡದ ಹೋರಾಟ

ಅನಂತಪುರ (ಏಜೆನ್ಸೀಸ್): ಪ್ರಮುಖ ಆಟಗಾರರಾದ ಋತುರಾಜ್ ಗಾಯಕವಾಡ, ಸಾಯಿ ಸುದರ್ಶನ್, ರಜತ್ ಪಾಟೀದಾರ ಮತ್ತು ಇಶಾನ್ ಕಿಶನ್ ತಮಗೆ ದೊರೆತ ಉತ್ತಮ ಅವಕಾಶಗಳನ್ನು ವ್ಯರ್ಥಪಡಿಸಿಕೊಂಡರು. ಭಾರತ ‘ಎ’ ತಂಡದ 297 ರನ್‌ಗಳಿಗೆ ಉತ್ತರವಾಗಿ ದುಲೀಪ್ ಟ್ರೋಫಿ ಕ್ರಿಕೆಟ್ ಲೀಗ್ ಪಂದ್ಯದ ಎರಡನೇ ದಿನವಾದ ಶುಕ್ರವಾರ ದಿನದಾಟ ಮುಗಿದಾಗ ಭಾರತ ‘ಸಿ’ ತಂಡ 7 ವಿಕೆಟ್‌ಗೆ 216 ರನ್ ಗಳಿಸಲಷ್ಟೇ ಶಕ್ತವಾಯಿತು.

ಮಧ್ಯಮ ಕ್ರಮಾಂಕದ ಆಟಗಾರ ಅಭಿಷೇಕ್ ಪೊರೆಲ್ 82 (113ಎ, 4x9) ಮಾತ್ರ ‘ಸಿ’ ತಂಡದ ಪರ ಉತ್ತಮವಾಗಿ ಆಡಿದರು. ಕೊನೆಯಲ್ಲಿ ಪುಲ್ಕಿತ್ ನಾರಂಗ್ (ಔಟಾಗದೇ 35) ಮತ್ತು ವೈಶಾಖ ವಿಜಯಕುಮಾರ್ (ಔಟಾಗದೇ 14) ಮುರಿಯದ ಎಂಟನೇ ವಿಕೆಟ್‌ಗೆ 49 ರನ್ ಸೇರಿಸಿದ್ದರಿಂದ ಸ್ವಲ್ಪ ಚೇತರಿಸಿಕೊಂಡಿತು.

ಉತ್ತರ ಪ್ರದೇಶದ 20 ವರ್ಷ ವಯಸ್ಸಿನ ವೇಗಿ ಅಕಿಬ್ ಖಾನ್ (43ಕ್ಕೆ3) ಅವರು ಗಾಯಕವಾಡ್, ಪಾಟೀದಾರ ಮತ್ತು ಸುದರ್ಶನ್ ಅವರ ವಿಕೆಟ್‌ಗಳನ್ನು ಪಡೆದು ಗಮನಸೆಳೆದರು.

ಇದಕ್ಕೆ ಮೊದಲು ಗುರುವಾರ 7 ವಿಕೆಟ್‌ಗೆ 224 ರನ್ ಗಳಿಸಿದ್ದ ಭಾರತ ‘ಎ’ ತಂಡ ಕೆಳಕ್ರಮಾಂಕದಲ್ಲಿ ಆವೇಶ್ ಖಾನ್ ಅವರ ಅರ್ಧ ಶತಕದ ನೆರವಿನಿಂದ (ಅಜೇಯ 51, 68ಎ, 4x5, 6x4) ತನ್ನ ಮೊತ್ತವನ್ನು 300ರ ಗಡಿಯ ಬಳಿ ತಲುಪಿಸಿತು. ಅವರಿಗೆ ನೆರವು ನೀಡಿದ ಕನ್ನಡಿಗ ವೇಗಿ ಪ್ರಸಿದ್ಧ ಕೃಷ್ಣ 34 ರನ್ ಗಳಿಸಿದರು. ಶಾಶ್ವತ್ ರಾವತ್ (ಗುರುವಾರ ಔಟಾಗದೇ 122) ನಿನ್ನೆಯ ಮೊತ್ತಕ್ಕೆ 2 ರನ್ ಸೇರಿಸಲಷ್ಟೇ ಶಕ್ತರಾದರು. ಅವರ ವಿಕೆಟ್ ಸೇರಿದಂತೆ ಕರ್ನಾಟಕದ ಬೌಲರ್ ವೈಶಾಖ ವಿಜಯಕುಮಾರ್ 51 ರನ್ನಿಗೆ 4 ವಿಕೆಟ್ ಪಡೆದು ಯಶಸ್ವಿಯೆನಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಎ: 90.5 ಓವರುಗಳಲ್ಲಿ 297 (ಶಾಶ್ವತ್ ರಾವತ್ 124, ಆವೇಶ್ ಖಾನ್ ಔಟಾಗದೇ 51, ವೈಶಾಖ ವಿಜಯ ಕುಮಾರ್ 34; ಅನ್ಶುಲ್ ಕಾಂಬೋಜ್ 49ಕ್ಕೆ3, ವೈಶಾಖ ವಿಜಯಕುಮಾರ್ 51ಕ್ಕೆ4); ಭಾರತ: 64 ಓವರುಗಳಲ್ಲಿ 7 ವಿಕೆಟ್‌ಗೆ 216 (ಬಾಬಾ ಇಂದ್ರಜಿತ್ ಗಾಯ ಗೊಂಡು ನಿವೃತ್ತ 32, ಅಭಿಷೇಕ್ ಪೊರೆಲ್ 82, ಪುಲ್ಕಿತ್ ನಾರಂಗ್ ಔಟಾಗದೇ 35, ವೈಶಾಖ ವಿಜಯಕುಮಾರ್ ಔಟಾಗದೇ 14; ಅಕಿಬ್ ಖಾನ್ 43ಕ್ಕೆ3, ಶಮ್ಸ್ ಮುಲಾನಿ 30ಕ್ಕೆ2).

ಅಭಿಮನ್ಯು ಈಶ್ವರನ್
ಪಿಟಿಐ ಸಂಗ್ರಹ ಚಿತ್ರ

ಅಭಿಮನ್ಯು ಈಶ್ವರನ್ ತಾಳ್ಮೆಯ ಶತಕ

ಅನಂತಪುರ (ಪಿಟಿಐ): ಮತ್ತೊಮ್ಮೆ ಏಕಾಂಗಿಯಾಗಿ ಹೋರಾಡಿದ ಅಭಿಮನ್ಯುವಿನ ಈಶ್ವರನ್ ಅವರು ತಾಳ್ಮೆಯ ಶತಕ (116, 170ಎ,) ಬಾರಿಸಿದರು. ಇದರ ಹೊರತಾಗಿಯೂ ದುಲೀಪ್ ಟ್ರೋಫಿ ಇನ್ನೊಂದು ಲೀಗ್ ಪಂದ್ಯದ ಎರಡನೇ ದಿನವಾದ ಶುಕ್ರವಾರ ಭಾರತ ‘ಬಿ’ ತಂಡವು 6 ವಿಕೆಟ್‌ಗೆ 210 ರನ್ ಗಳಿಸಲಷ್ಟೇ ಶಕ್ತವಾಗಿದೆ. ಭಾರತ ‘ಡಿ’ ತಂಡದ ಮೊತ್ತ ದಾಟಲು ಅದು ಇನ್ನೂ 140 ರನ್ ದೂರದಲ್ಲಿದೆ.

ಇದಕ್ಕೆ ಮೊದಲು ಸಂಜು ಸ್ಯಾಮ್ಸನ್ ಮೊದಲ ದರ್ಜೆ ಕ್ರಿಕೆಟ್‌ನಲ್ಲಿ 11ನೇ ಶತಕ ಗಳಿಸಿದರು. ಅವರು 106 ರನ್‌ಗಳ (105ಎ, 4x12, 6x3) ನೆರವಿನಿಂದ ಭಾರತ ‘ಡಿ’ ತನ್ನ ಮೊದಲ ಇನಿಂಗ್ಸ್‌ನಲ್ಲಿ 349 ರನ್‌ಗಳ ಉತ್ತಮ ಮೊತ್ತ ಗಳಿಸಿತು. ವೇಗಿ ನವದೀಪ್ ಸೈನಿ 5 ವಿಕೆಟ್‌ಗಳ ಗೊಂಚಲು ಪಡೆದರು.

ಭಾರತ ‘ಬಿ’ ತಂಡದ ಪರ ಈಶ್ವರನ್ ಬಿಟ್ಟರೆ ಉಳಿದವರು ಯಾರೂ ಉಪಯುಕ್ತ ಕೊಡುಗೆ ನೀಡಲಿಲ್ಲ. ವೇಗದ ಬೌಲರ್ ಅರ್ಷದೀಪ್ ಸಿಂಗ್ ಅವರು ‘ಬಿ’ ತಂಡದ ಪ್ರಮುಖ ಆಟಗಾರರಾದ ಸೂರ್ಯಕುಮಾರ್ ಯಾದವ್ (5) ಮತ್ತು ಉತ್ತಮ ಲಯದಲ್ಲಿರುವ ಮುಶೀರ್ ಖಾನ್ (5) ಅವರ ವಿಕೆಟ್‌ಗಳನ್ನು ಪಡೆದರು.

ಒಂದು ಹಂತದಲ್ಲಿ 100 ರನ್‌ಗಳಾಗುಷ್ಟರಲ್ಲಿ 5 ವಿಕೆಟ್ ಕಳೆದುಕೊಂಡಿದ್ದ ‘ಬಿ’ ತಂಡ ಅಭಿಮನ್ಯು ಮತ್ತು ವಾಷಿಂಗ್ಟನ್ ಸುಂದರ್ (ಅಜೇಯ 39) ಅವರ ನಡುವೆ ಆರನೇ ವಿಕೆಟ್‌ಗೆ 105 ರನ್ ಜೊತೆಯಾಟದಿಂದ ಕುಸಿತ ತಪ್ಪಿಸುವಲ್ಲಿ ಯಶಸ್ವಿ ಆಯಿತು.

ಸ್ಕೋರುಗಳು: ಮೊದಲ ಇನಿಂಗ್ಸ್: ಭಾರತ ‘ಡಿ’: 87.3 ಓವರುಗಳಲ್ಲಿ 349 (ಸಂಜು ಸ್ಯಾಮ್ಸನ್ 106; ನವದೀಪ್ ಸೈನಿ 74ಕ್ಕೆ5, ರಾಹುಲ್ ಚಾಹರ್ 60ಕ್ಕೆ3); ಭಾರತ ‘ಬಿ’’ 56 ಓವರುಗಳಲ್ಲಿ 6 ವಿಕೆಟ್‌ಗೆ 210 (ಅಭಿಮನ್ಯು ಈಶ್ವರನ್ 116, ವಾಷಿಂಗ್ಟನ್ ಸುಂದರ್ ಬ್ಯಾಟಿಂಗ್ 39; ಅರ್ಷದೀಪ್ ಸಿಂಗ್ 30ಕ್ಕೆ3, ಆದಿತ್ಯ ಠಾಕ್ರೆ 33ಕ್ಕೆ2).

ಯಜುವೇಂದ್ರಗೆ ಐದು ವಿಕೆಟ್

ನಾರ್ಥಂಪ್ಟನ್‌ಶೈರ್ (ಪಿಟಿಐ): ಭಾರತದ ಲೆಗ್‌ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರು ಇಂಗ್ಲಿಷ್ ಕೌಂಟಿ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಐದು ವಿಕೆಟ್ ಗೊಂಚಲು ಗಳಿಸಿದರು. ನಾರ್ಥಂಪ್ಟನ್ ಶೈರ್ ತಂಡದಲ್ಲಿ ಆಡುತ್ತಿರುವ ಚಾಹಲ್ ಈ ಟೂರ್ನಿಯಲ್ಲಿ ಎರಡನೇ ಬಾರಿ ಈ ಸಾಧನೆ ಮಾಡಿದ್ದಾರೆ.

ಶುಕ್ರವಾರ ನಡೆದ ಪಂದ್ಯದಲ್ಲಿ ನಾರ್ಥಂಪ್ಟನ್ ತಂಡ 9 ವಿಕೆಟ್‌ಗಳಿಂದ ಲೀಸ್ಟರ್‌ಶೈರ್ ವಿರುದ್ಧ ಜಯಿಸಿತು.

ಲೀಸ್ಟರ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 203 ರನ್ ಗಳಿಸಿತ್ತು. ಆ ಇನಿಂಗ್ಸ್‌ನಲ್ಲಿಯೂ ಚಾಹಲ್ ನಾಲ್ಕು ವಿಕೆಟ್ ಕಬಳಿಸಿದ್ದರು. ಅದಕ್ಕುತ್ತರವಾಗಿ ನಾರ್ಥಂಪ್ಟನ್ ತಂಡವು 383 ಗಳಿಸಿ 180 ರನ್‌ಗಳ ಮುನ್ನಡೆ ಸಾಧಿಸಿತು.

ಎರಡನೇ ಇನಿಂಗ್ಸ್‌ನಲ್ಲಿ ಲೀಸ್ಟರ್ ತಂಡವು 316 ಗಳಿಸಿತು. ಚಾಹಲ್ ಐದು ವಿಕೆಟ್ ಗಳಿಸಿದರು. ಇದರಿಂದಾಗಿ 137 ರನ್‌ಗಳ ಗೆಲುವಿನ ಗುರಿಯನ್ನು ನಾರ್ಥಂಪ್ಟನ್‌ಗೆ ನೀಡಿತು. ತಂಡವು 30.3 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ ಗುರಿ ಮುಟ್ಟಿತು.

ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿ

ಘೋಷ್ ಉತ್ತಮ ಬೌಲಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಕೃಷ್ಣ ಘೋಷ್ (19ಕ್ಕೆ5) ಮತ್ತು ಹಿತೇಶ್ ವಳುಂಜಾ (51ಕ್ಕೆ4) ಅವರ ಉತ್ತಮ ಬೌಲಿಂಗ್‌ನಿಂದಾಗಿ ಮಹಾರಾಷ್ಟ್ರ ತಂಡವು ಇಲ್ಲಿ ನಡೆಯುತ್ತಿರುವ ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್ ಎದುರು ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿತು.

ಆಲೂರಿನಲ್ಲಿರುವ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಶುಕ್ರವಾರ ಮಹಾರಾಷ್ಟ್ರ ತಂಡವು 114.5 ಓವರ್‌ಗಳಲ್ಲಿ 421 ರನ್ ಗಳಿಸಿತು. ನಿಖಿಲ್ ನಾಯಕ (107; 151ಎ, 4X10, 6X1) ಶತಕ ದಾಖಲಿಸಿದರು. ಇದಕ್ಕುತ್ತರವಾಗಿ ಬ್ಯಾಟಿಂಗ್ ಆರಂಭಿಸಿದ ಕಾರ್ಯದರ್ಶಿ ತಂಡವು 54.2 ಓವರ್‌ಗಳಲ್ಲಿ 161 ರನ್ ಗಳಿಸಿತು. ಮಹಾರಾಷ್ಟ್ರ ತಂಡವು 260 ರನ್‌ಗಳ ಮುನ್ನಡೆ ಸಾಧಿಸಿತು. ಘೋಷ್ ಮತ್ತು ಹಿತೇಶ್ ಅವರ ಬೌಲಿಂಗ್ ಮುಂದೆ ಕರ್ನಾಟಕದ ತಂಡವು ಕುಸಿಯಿತು. ತಂಡದ ಶ್ರೇಯಸ್ ಗೋಪಾಲ್ (110ಕ್ಕೆ3 ಹಾಗೂ 44 ರನ್) ಆಲ್‌ರೌಂಡ್ ಆಟವಾಡಿದರು.

ಶ್ರೇಯಸ್ ಗೋಪಾಲ್

ಸಂಕ್ಷಿಪ್ತ ಸ್ಕೋರು: ಆಲೂರು (1): ಮಹಾರಾಷ್ಟ್ರ: 114.5 ಓವರ್‌ಗಳಲ್ಲಿ 421 (ನಿಖಿಲ್ ನಾಯಕ 107, ಸತ್ಯಜೀತ್ ಬಚಾವ್ 37, ರಾಮಕೃಷ್ಣ ಘೋಷ್ 39, ಅಭಿಲಾಷ್ 41ಕ್ಕೆ2, ಶಿಖರ್ ಶೆಟ್ಟಿ 91ಕ್ಕೆ3, ಶ್ರೇಯಸ್ ಗೋಪಾಲ್ 110ಕ್ಕೆ3) ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್: 54.2 ಓವರ್‌ಗಳಲ್ಲಿ 161 (ವಿಶಾಲ್ ಓನತ್ 26, ಯಶೋವರ್ಧನ್ ಪರಂತಾಪ್ 26, ಕೆ.ಎಲ್. ಶ್ರೀಜಿತ್ 36, ಶ್ರೇಯಸ್ ಗೋಪಾಲ್ 44, ರಾಮಕೃಷ್ಣ ಘೋಷ್ 19ಕ್ಕೆ5, ಹಿತೇಶ್ ವಳುಂಜಾ 51ಕ್ಕೆ4). ಎರಡನೇ ಇನಿಂಗ್ಸ್: ಮಹಾರಾಷ್ಟ್ರ: 1 ಓವರ್‌ನಲ್ಲಿ ವಿಕೆಟ್ ನಷ್ಟವಿಲ್ಲದೇ 4.

ಚಿನ್ನಸ್ವಾಮಿ ಕ್ರೀಡಾಂಗಣ: ಮಧ್ಯಪ್ರದೇಶ: 118.1 ಓವರ್‌ಗಳಲ್ಲಿ 325. ಬರೋಡಾ:55 ಓವರ್‌ಗಳಲ್ಲಿ 6ಕ್ಕೆ159 (ಜ್ಯೋತ್ಸನಿಲ್ ಸಿಂಗ್ 51, ಕೇದಾರ್ ದೇವಧರ್ 26, ವಿಷ್ಣು ಸೋಳಂಕಿ 31, ಮಿಥೇಶ್ ಪಟೇಲ್ 25, ಕುಲವಂತ್ ಖೆಜ್ರೊಲಿಯಾ 36ಕ್ಕೆ5)

ಹೆಡ್ ಆಟಕ್ಕೆ ಮಣಿದ ಇಂಗ್ಲೆಂಡ್

ನಾಟಿಂಗ್‌ಹ್ಯಾಮ್ (ಎಪಿ): ಆರಂಭ ಆಟಗಾರ ಟ್ರಾವಿಸ್ ಹೆಡ್ ಜೀವನಶ್ರೇಷ್ಠ ಶತಕ (ಔಟಾಗದೇ 154) ಗಳಿಸಿ, ಆಸ್ಟ್ರೇಲಿಯಾ ತಂಡ, ಮೊದಲ ಏಕದಿನ ದಿನ ಪಂದ್ಯದಲ್ಲಿ ಗುರುವಾರ ಇಂಗ್ಲೆಂಡ್ ತಂಡದ ಮೇಲೆ ಏಳು ವಿಕೆಟ್‌ಗಳ ಜಯಪಡೆಯಲು ನೆರವಾದರು. ಇದು ಏಕದಿನ ಮಾದರಿಯಲ್ಲಿ ಆಸ್ಟ್ರೇಲಿಯಾಕ್ಕೆ ಸತತ 13ನೇ ಜಯ.

ಇದು ಎಡಗೈ ಬ್ಯಾಟರ್‌ಗೆ ಏಕದಿನ ಕ್ರಿಕೆಟ್‌ನಲ್ಲಿ ಆರನೇ ಶತಕ. ಹತ್ತು ತಿಂಗಳ ಹಿಂದೆ ಭಾರತ ವಿರುದ್ಧ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಗಳಿಸಿದ ಸ್ಮರಣೀಯ ಶತಕದ ಬಳಿಕ ಇದು ಅವರ ಮೊದಲ ಶತಕ ಕೂಡ. ಅವರ ಸೊಗಸಾದ ಇನಿಂಗ್ಸ್‌ನಲ್ಲಿ ಐದು ಸಿಕ್ಸರ್, 20 ಬೌಂಡರಿಗಳಿದ್ದವು.

ಬೆನ್ ಡಕೆಟ್ ಅವರ ಬಿರುಸಿನ 95 ರನ್‌ಗಳ (91ಎ, 4x11) ನೆರವಿನಿಂದ ಇಂಗ್ಲೆಂಡ್ 315 ರನ್‌ಗಳ ದೊಡ್ಡ ಮೊತ್ತ ಗಳಿಸಿತ್ತು. ಹೀಗಾಗಿ ಆಸ್ಟ್ರೇಲಿಯಾಕ್ಕೆ ಬಿರುಸಿನ ಇನಿಂಗ್ಸ್ ಅಗತ್ಯವಿತ್ತು. ಅದನ್ನು ಹೆಡ್ ಆಡಿದರು.

ಇಂಗ್ಲೆಂಡ್ ಒಂದು ಹಂತದಲ್ಲಿ 32 ಓವರುಗಳಲ್ಲಿ 2 ವಿಕೆಟ್‌ಗೆ 211 ರನ್ ಗಳಿಸಿತ್ತು. ಆದರೆ ಸಾಂದರ್ಭಿಕ ಬೌಲರ್ ಲಾಬುಷೇನ್ 39ಕ್ಕೆ3 ವಿಕೆಟ್ ಗಳಿಸಿ ನಾಗಾಲೋಟಕ್ಕೆ ತಡೆಹಾಕಿದ್ದರು. ಇಂಗ್ಲೆಂಡ್‌ನ ಕೊನೆಯ ಏಳು ವಿಕೆಟ್‌ಗಳು 83 ರನ್ನಿಗೆ ಉರುಳಿದವು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 49.4 ಓವರುಗಳಲ್ಲಿ 315 (ಬೆನ್ ಡಕೆಟ್ 95, ವಿಲ್ ಜಾಕ್ಸ್ 62, ಆ್ಯಡಂ ಜಂಪಾ 49ಕ್ಕೆ3, ಲಾಬುಷೇನ್ 39ಕ್ಕೆ3, ಹೆಡ್ 34ಕ್ಕೆ2); ಆಸ್ಟ್ರೇಲಿಯಾ: 44 ಓವರುಗಳಲ್ಲಿ 3ಕ್ಕೆ 317 (ಟ್ರಾವಿಸ್ ಹೆಡ್ ಔಟಾಗದೇ 154, ಸ್ಟೀವನ್ ಸ್ಮಿತ್ 32, ಕ್ಯಾಮರಾನ್ ಗ್ರೀನ್ 32, ಲಾಬುಷೇನ್ ಔಟಾಗದೇ 77)

ಚೆನ್ನೈ ರೇಸ್

ನ್ಯೂ ಡೈಮನ್ಯನ್ ಗೆಲ್ಲುವ ನಿರೀಕ್ಷೆ

ವಿ.ಎಸ್.ಟಿ ಗ್ರ್ಯಾಂಡೆಯೂರ್ ಟ್ರೋಫಿ ಶನಿವಾರದ ಚೆನ್ನೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನ್ಯೂ ಡೈಮನ್ಯನ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2 ಗಂಟೆಗೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅಕ್ವಿಲಾ 1, ವೆಸ್ಟ್ರನ್ ಗರ್ಲ್ 5, ಮೆಮೋರಿ ಲೈನ್ 7
2ನೇ ರೇಸ್: ಸ್ಟೇಟ್ ಫ್ಲಾಗ್ 9, ಲೂಮಿಯರ್ 5, ಅಮೇಜಿಂಗ್ ಜಾಯ್ 1
3ನೇ ರೇಸ್: ರಾಯಲ್ ಚಿವಲ್ರಿ 1, ಆರಿನಿ 2, ಜೂಲಿಯೆಟ್ ರೋಸ್ 9
4ನೇ ರೇಸ್: ಬರ್ಥಾ 3, ಮಾರಿಸೆಟ್ 4, ಲೈಟ್ ದಿ ವರ್ಲ್ಡ್ 7
5ನೇ ರೇಸ್: ಆಲ್ ಸ್ಪಾರ್ಸ್ 1, ಏಸಿಯೊ 5, ನಾಟಿ ಇನ್ ಬ್ಲೂ 6
6ನೇ ರೇಸ್: ನ್ಯೂ ಡೈಮನ್ಯನ್ 4, ನಾಟಿ ಡ್ಯಾನ್ಸರ್ 1, ಸ್ವಿಲ್ ಐ ರೈಸ್ 3
7ನೇ ರೇಸ್: ಬ್ರಿಲಿಯಂಟ್ ಲೇಡಿ 3, ಕಿಂಗ್ಸ್ ವಾಕ್ 1, ಡೈಮಂಡ್ ಅಂಡ್ ಪರ್ಲ್ಸ್ 2
8ನೇ ರೇಸ್: ಸೇಫ್ಟಿ 4, ಮಲ್ಟಿಫ್ಲೋರ 10, ಸಿಯಾನ್ 3

ಉತ್ತಮ ಬೆಟ್: ಬ್ರಿಲಿಯಂಟ್ ಲೇಡಿ

ಜಾಕ್‌ಪಾಟ್‌ಗೆ	ಟ್ರಿಬಲ್
4,5,6,7,8	6,7,8

ಸ್ಯಾಫ್ ಫುಟ್‌ಬಾಲ್: ಭಾರತದ ಶುಭಾರಂಭ

ಥಿಂಪು (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡವು, 17 ವರ್ಷದೊಳಗಿನವರ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ‘ಎ’ ಗುಂಪಿನ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು 1–0 ಗೋಲಿನಿಂದ ಸೋಲಿಸಿ ಶುಭಾರಂಭ ಮಾಡಿತು.

ಚಾಂಗ್ಲಿಮಿತಾಂಗ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದ ಬಹುಭಾಗ ಬಾಂಗ್ಲಾದೇಶ ತಂಡದ ರಕ್ಷಣಾಕೋಟೆ ಭೇದಿಸಲು ಪರದಾಡಿದ ಭಾರತದ ಮುನ್ಪಡೆ ಆಟಗಾರರು ಪಂದ್ಯದ ಅಂತಿಮ ಹಂತದಲ್ಲಿ ನಿರ್ಣಾಯಕ ಗೋಲು ಗಳಿಸಿದರು. 90 + 1ನೇ ನಿಮಿಷ ರಕ್ಷಣೆ ಆಟಗಾರ ಸುಮಿತ್ ಶರ್ಮಾ ಹೆಡ್ ಮಾಡಿದ ಚೆಂಡು ಬಾಂಗ್ಲಾದೇಶದ ಗೋಲುಬಲೆಗೆ ಹೋಯಿತು.

ಮೂರು ತಂಡಗಳ ಗುಂಪಿನಲ್ಲಿ ಭಾರತ, ಈ ಗೆಲುವಿನಿಂದ ಮೂರು ಪಾಯಿಂಟ್ ಪಡೆಯಿತು. ಆದರೆ ಈ ಗೆಲುವು ಸಂತೃಪ್ತಿಯ ರೀತಿಯಲ್ಲೇನೂ ಇರಲಿಲ್ಲ. ಬಾಂಗ್ಲಾದೇಶದ ಬಿಗಿ ರಕ್ಷಣೆ ಭಾರತದ ಮುನ್ಪಡೆ ಆಟಗಾರರು ಪರದಾಡುವಂತೆ ಮಾಡಿತು.

ಪ್ರಚಾರಕ್ಕಾಗಿ ರಕ್ತದಾನ...

ಪ್ರಜಾವಾಣಿ

ಲಖನೌ: ಉತ್ತರ ಪ್ರದೇಶದ ಮೊರಾದಾಬಾದ್ ನಗರದ ಮೇಯರ್ ಮತ್ತು ಬಿಜೆಪಿ ಹಿರಿಯ ನಾಯಕ ವಿನೋದ್ ಅಗರ್ವಾಲ್ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದಂದು ಪ್ರಚಾರಕ್ಕಾಗಿ ರಕ್ತದಾನ ಮಾಡಿದ್ದಾರೆ ಎಂದು ವರದಿಯಾಗಿದೆ.

ನಗರದ ಬಿಜೆಪಿ ಕಚೇರಿಯಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಭಾಗಿಯಾಗಿದ್ದ ಮೇಯರ್, ರಕ್ತದಾನಕ್ಕೆ ಹಾಸಿಗೆ ಮೇಲೆ ಮಲಗಿದ್ದು, ವೈದ್ಯರು ರಕ್ತ ತೆಗೆಯಲು ಸೂಜಿ ತಂದ ತಕ್ಷಣವೇ ಎದ್ದು ಕೋಣೆಯಿಂದ ಹೊರ ನಡೆದಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದೆ. ವೈರಲ್ ಆದ ವಿಡಿಯೊ ಕುರಿತು ಪ್ರತಿಕ್ರಿಯಿಸಿದ ಮೇಯರ್, ‘ಇದು ನನ್ನ ಎದುರಾಳಿಗಳು ಮಾನಹಾನಿ ಉಂಟುಮಾಡಲು ನಡೆಸಿರುವ ಪಿತೂರಿ’ ಎಂದಿದ್ದಾರೆ.

‘ರಕ್ತದಾನ ಮಾಡುವ ಉದ್ದೇಶದಿಂದಲೇ ರಕ್ತದಾನ ಶಿಬಿರಕ್ಕೆ ಹೋಗಿದ್ದೆ. ಆದರೆ ವೈದ್ಯರು ಮಧುಮೇಹವಿರುವ ಕಾರಣ ರಕ್ತದಾನ ಮಾಡುವಂತಿಲ್ಲ ಎಂದರು’ ಎಂದು ಸ್ಪಷ್ಟನೆ ನೀಡಿದ್ದಾರೆ.

ಕೇರಳ: ನಟಿ ವಿರುದ್ಧ ಪೋಕ್ಸೊದಡಿ ಪ್ರಕರಣ

ಕೊಚ್ಚಿ (ಪಿಟಿಐ): ನಟಿಯೊಬ್ಬರ ವಿರುದ್ಧ ಕೇರಳದ ಪೊಲೀಸರು ಶುಕ್ರವಾರ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮಲಯಾಳ ಚಿತ್ರರಂಗದ ಹೆಸರಾಂತ ನಟರ ವಿರುದ್ಧ ಅತ್ಯಾಚಾರ, ಲೈಂಗಿಕ ಕಿರುಕುಳ ಆರೋಪ ಕುರಿತು ಈ ನಟಿ ದೂರು ನೀಡಿದ್ದರು.

ನಟಿಯ ಸಂಬಂಧಿಕ ಮಹಿಳೆಯೊಬ್ಬರು ನೀಡಿದ್ದ ದೂರು ಆಧರಿಸಿ ಪೋಕ್ಸೊ ಕಾಯ್ದೆಯಡಿ ಇಲ್ಲಿನ ಮೂವಾಟ್ಟುಪುಳ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. 2014ರಲ್ಲಿ ನಡೆದಿದ್ದ ಘಟನೆಗೆ ಸಂಬಂಧಿಸಿದ ದೂರು ದಾಖಲಾಗಿದೆ ಎಂದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಗೆ ಪ್ರಿಯಾಂಕಾ ಗಾಂಧಿ ಪ್ರಶ್ನೆ

‘ಖರ್ಗೆಗೆ ಅಗೌರವ ತೋರುವ ಅಗತ್ಯವೇನಿತ್ತು’

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಪತ್ರಕ್ಕೆ ಪ್ರತಿಕ್ರಿಯೆಯಾಗಿ ಸ್ವತಃ ಪತ್ರ ಬರೆಯದ ಪ್ರಧಾನಿ ಮೋದಿ ಅವರು ಹಿರಿಯ ನಾಯಕರಿಗೆ ಅಗೌರವ ತೋರಿದ್ದಾರೆ ಎಂದು ಪಕ್ಷದ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಆರೋಪಿಸಿದ್ದಾರೆ.

ಪ್ರಿಯಾಂಕಾ ಗಾಂಧಿ

ಈ ಬಗ್ಗೆ ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ಪ್ರಜಾಪ್ರಭುತ್ವದ ಸಂಪ್ರದಾಯಗಳನ್ನು ಉನ್ನತ ಸ್ಥಾನದಲ್ಲಿರುವ ನಾಯಕರು ತಿರಸ್ಕರಿಸಿರುವುದು ದುರದೃಷ್ಟಕರ. ಇಂದಿನ ರಾಜಕಾರಣದಲ್ಲಿ ಪೂರ್ಣ ವಿಷ ತುಂಬಿಕೊಂಡಿದೆ. ಪ್ರಧಾನಿಯವರು ತಮ್ಮ ಸ್ಥಾನದ ಘನತೆಯನ್ನು ಗಮನದಲ್ಲಿಟ್ಟುಕೊಂಡು ವರ್ತಿಸಬೇಕಿತ್ತು. 82 ವರ್ಷದ ಹಿರಿಯ ನಾಯಕರೊಬ್ಬರಿಗೆ ಅಗೌರವ ತೋರುವ ಅಗತ್ಯವೇನಿತ್ತು ಎಂದು ಪ್ರಶ್ನಿಸಿದ್ದಾರೆ.

ಪ್ರಧಾನಿ ಅವರಿಗೆ ಮಂಗಳವಾರ ಪತ್ರ ಬರೆದಿದ್ದ ಖರ್ಗೆ ಅವರು, ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಗುರಿಯಾಗಿಸಿಕೊಂಡು ಆಡಳಿತಾರೂಢ ಮೈತ್ರಿಕೂಟದ ಸದಸ್ಯರು ‘ತೀರಾ ಆಕ್ಷೇಪಾರ್ಹ’ ಹಾಗೂ ಹಿಂಸಾತ್ಮಕ ಹೇಳಿಕೆ ನೀಡುತ್ತಿದ್ದಾರೆ ಎಂದು ಗಮನ ಸೆಳೆದಿದ್ದರು. ಖರ್ಗೆ ಅವರ ಈ ಪತ್ರಕ್ಕೆ ಪ್ರತಿಕ್ರಿಯಿಸಿದ್ದ ಬಿಜೆಪಿ ನಾಯಕ ಜೆ.ಪಿ ನಡ್ಡಾ ಅವರು, ರಾಹುಲ್ ಗಾಂಧಿ ಅವರ ವಿರುದ್ಧ ಬಿಜೆಪಿ ಪಕ್ಷದವರ ದೂರುಗಳು ಹಾಗೂ ಕಾಂಗ್ರೆಸ್ ನಾಯಕರು ಮೋದಿ ಅವರ ವಿರುದ್ಧ ಬಳಸಿದ್ದ ಪದಗಳ ಬಗ್ಗೆ ಪ್ರಸ್ತಾಪಿಸಿದ್ದರು.

‘ಪ್ರಧಾನಿ ಅವರಿಗೆ ಪ್ರಜಾಪ್ರಭುತ್ವದ ಮೌಲ್ಯಗಳ ಮೇಲೆ ವಿಶ್ವಾಸವಿದ್ದಿದ್ದರೆ ಮತ್ತು ಹಿರಿಯರ ಜೊತೆ ಸೌಜನ್ಯವಾಗಿ ಮಾತನಾಡುವ ಹಾಗೂ ಅವರ ಮೇಲೆ ಗೌರವ ಇಟ್ಟುಕೊಂಡಿದ್ದರೆ, ತಮಗೆ ಬಂದ ಪತ್ರಕ್ಕೆ ಸ್ವತಃ ಮೋದಿ ಅವರೇ ಪ್ರತಿಕ್ರಿಯೆ ನೀಡುತ್ತಿದ್ದರು. ಬದಲಿಗೆ ಅವರು ಸಾಕಷ್ಟು ಕೆಳಮಟ್ಟಕ್ಕೆ ಇಳಿದಿದ್ದಾರೆ. ನಡ್ಡಾ ಅವರಿಂದ ಆಕ್ರಮಣಕಾರಿ ಪ್ರತಿಕ್ರಿಯೆ ಕೊಡಿಸಲಾಗಿದೆ. ಪ್ರಶ್ನೆ ಕೇಳುವುದು ಮತ್ತು ಚರ್ಚೆ ನಡೆಸುವುದು ಪ್ರಜಾಪ್ರಭುತ್ವದ ಸಂಪ್ರದಾಯ ಹಾಗೂ ಸಂಸ್ಕೃತಿ’ ಎಂದಿದ್ದಾರೆ.

‘ಪ್ರಿಯಾಂಕಾಗೆ ಸಂಸದೀಯ ಸಂಪ್ರದಾಯಗಳ ಅರಿವಿಲ್ಲ’

ಖರ್ಗೆ ಅವರಿಗೆ ಸ್ವತಃ ಪತ್ರ ಬರೆಯದೆ ಪ್ರಧಾನಿ ಮೋದಿ ಅವರು ಅಗೌರವ ತೋರಿದ್ದಾರೆ ಎಂದು ಆರೋಪಿಸಿರುವ ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೆ ಸಂಸದೀಯ ಸಂಪ್ರದಾಯಗಳು ಮತ್ತು ಮಾನದಂಡಗಳ ಅರಿವಿಲ್ಲ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ.

ಪ್ರಿಯಾಂಕಾ ಅವರು ‘ಎಕ್ಸ್’ನಲ್ಲಿ ಮಾಡಿರುವ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಅವರು, ‘ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರು. ಅವರಿಗೆ ನಾವು ಗೌರವ ನೀಡುತ್ತೇವೆ. ಖರ್ಗೆ ಅವರು ರಾಜ್ಯಸಭೆಯ ವಿರೋಧಪಕ್ಷದ ನಾಯಕರಾಗಿದ್ದು, ಜೆ.ಪಿ ನಡ್ಡಾ ಅವರು ರಾಜ್ಯಸಭೆಯ ಸಭಾನಾಯಕರಾಗಿದ್ದಾರೆ. ಸಭಾನಾಯಕರಿಗಿಂತಲೂ ವಿರೋಧಪಕ್ಷದ ನಾಯಕ ಹೆಚ್ಚೇ’ ಎಂದು ಪ್ರಶ್ನಿಸಿದ್ದಾರೆ.

ಸಂಪೂರ್ಣ ಸಾರ್ವಜನಿಕ ಜೀವನದಲ್ಲೇ ಇರುವ ಹಾಗೂ 140 ಕೋಟಿ ಭಾರತೀಯರ ಪ್ರಧಾನಿಯನ್ನು ನಿಂದಿಸಬೇಡಿ’ ಎಂದು ತಿಳಿಸಿದ್ದಾರೆ.

ಸಿಖ್ಖರ ಕುರಿತ ಹೇಳಿಕೆಗೆ ಆಕ್ಷೇಪ

ರಾಹುಲ್ ವಿರುದ್ಧ 3 ಎಫ್‌ಐಆರ್

ರಾಯಪುರ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಇತ್ತೀಚೆಗೆ ಅಮೆರಿಕದಲ್ಲಿ ಸಿಖ್ಖರ ಕುರಿತು ನೀಡಿದ ಹೇಳಿಕೆಯ ವಿರುದ್ಧ ಛತ್ತೀಸಗಢದಲ್ಲಿ ಬಿಜೆಪಿ ನಾಯಕರು ಮೂರು ಪ್ರತ್ಯೇಕ ಎಫ್‌ಐಆರ್ ದಾಖಲಿಸಿದ್ದಾರೆ.

ರಾಯಪುರ ಸಿವಿಲ್ ಲೈನ್ಸ್ ಪೊಲೀಸ್ ಠಾಣೆಯಲ್ಲಿ ಒಂದು, ಬಿಲಾಸ್‌ಪುರ ಜಿಲ್ಲಾ ಸಿವಿಲ್ ಲೈನ್ಸ್ ಠಾಣೆಯಲ್ಲಿ ಗುರುವಾರ ಎರಡು ಪ್ರಕರಣಗಳು ದಾಖಲಾಗಿವೆ. ದುರ್ಗ್ ಜಿಲ್ಲೆಯ ಕೋಟ್ವಾಲಿ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಒಂದು ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಬಿಜೆಪಿ ನಾಯಕರು ನೀಡಿದ ದೂರಿನ ಮೇರೆಗೆ ರಾಹುಲ್ ಗಾಂಧಿ ವಿರುದ್ಧ ಭಾರತೀಯ ದಂಡ ಸಂಹಿತೆ ಸೆಕ್ಷನ್ 299 ಮತ್ತು 302ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದೆ ಎಂದರು.

ಛತ್ತೀಸಗಢ ರಾಜ್ಯ ಬಿಜೆಪಿ ವಕ್ತಾರ ಅಮರ್‌ಜೀತ್ ಸಿಂಗ್ ಛಾಬ್ರಾ, ‘ರಾಹುಲ್ ಹೇಳಿಕೆಯೂ ಸಿಖ್ ಸಮುದಾಯದ ಧಾರ್ಮಿಕ ಭಾವನೆಗೆ ಧಕ್ಕೆಯಾಗಿದೆ’ ಎಂದು ಆರೋಪಿಸಿ ರಾಯಪುರದಲ್ಲಿ ದೂರು ದಾಖಲಿಸಿದರು.

‘ಭಾರತದಲ್ಲಿ ಸಿಖ್ಖರಿಗೆ ಪಗಡಿ ಅಥವಾ ಕಡಾ ಧರಿಸಲು ಹಾಗೂ ಗುರುದ್ವಾರಕ್ಕೆ ಹೋಗಲು ಅನುಮತಿ ನೀಡುತ್ತಾರೆಯೇ’ ಎಂದು ರಾಹುಲ್ ಗಾಂಧಿ ಅಮೆರಿಕದಲ್ಲಿ ಹೇಳಿಕೆ ನೀಡಿರುವುದಾಗಿ ವಿವರಿಸಿದ್ದಾರೆ.

‘ಭಾರತ ಸೇರಿದಂತೆ ಇಡೀ ಪ್ರಪಂಚದಲ್ಲೇ ಸಿಖ್ ಸಮುದಾಯದವರು ಪಗಡಿ ಮತ್ತು ಕಡಾ ಧರಿಸಿ ಗುರುದ್ವಾರ ಪ್ರವೇಶಿಸುತ್ತಾರೆ. ಪ್ರಧಾನಿ ಕೂಡ ಪಗಡಿ ಮತ್ತು ಕಡಾ ಧರಿಸಿಯೇ ಗುರುದ್ವಾರಕ್ಕೆ ಭೇಟಿ ನೀಡುತ್ತಾರೆ’ ಎಂದು ಅಮರ್‌ಜೀತ್ ಸಿಂಗ್ ಛಾಬ್ರಾ ಹೇಳಿದ್ದಾರೆ.

ರಾಹುಲ್ ಹೇಳಿಕೆಯು ಶಾಂತಿಪ್ರಿಯ ಸಿಖ್ ಸಮುದಾಯದ ಭಾವನೆಗಳಿಗೆ ನೋವುಂಟು ಮಾಡುವುದಾಗಿದೆ. ಇದು ಸಮಾಜದ ಇತರ ಧರ್ಮಗಳೊಂದಿಗೆ ತಾರತಮ್ಯ ಮತ್ತು ದ್ವೇಷವನ್ನು ಉಂಟು ಮಾಡುತ್ತದೆ ಎಂದು ಆರೋಪಿಸಿದ್ದಾರೆ.

ಗೆಲುವಿನ ಸಂಭ್ರಮಾಚರಣೆಯಲ್ಲಿ ಪಂಜಾಬ್ ಎಫ್‌ಸಿ ತಂಡದ ಆಟಗಾರರು

ಐಎಸ್‌ಎಲ್: ಪಂಜಾಬ್ ತಂಡ ಜಯಭೇರಿ

ನವದೆಹಲಿ(ಪಿಟಿಐ): ಪಂಜಾಬ್ ಫುಟ್‌ಬಾಲ್ ಕ್ಲಬ್ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಸತತ ಎರಡನೇ ಪಂದ್ಯದಲ್ಲಿ ಜಯ ಸಾಧಿಸಿತು.

ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಪಂಜಾಬ್ ತಂಡವು 2–1 ಗೋಲುಗಳಿಂದ ಒಡಿಶಾ ಎಫ್‌ಸಿ ವಿರುದ್ಧ ಗೆದ್ದಿತು.

ಪಂಜಾಬ್ ತಂಡದ ನಿಹಾಲ್ ಸುದೀಶ್ (28ನೇ ನಿಮಿಷ) ಮತ್ತು ಲಿಯೊ ಆಗಸ್ಟಿನ್ (89 ನೇ ನಿ) ಅವರು ತಲಾ ಒಂದು ಗೋಲು ಗಳಿಸಿದರು. ಒಡಿಶಾ ತಂಡಕ್ಕೆ ರವಿಕುಮಾರ್ (90 + 6ನಿ) ಗೋಲು ಉಡುಗೊರೆ ನೀಡಿದರು. ಇದರಿಂದಾಗಿ ಗೋಲು ವ್ಯತ್ಯಾಸ ಕಡಿಮೆಯಾಯಿತು.

ಆರು ಅಂಕ ಗಳಿಸಿರುವ ಪಂಜಾಬ್ ಸದ್ಯ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಬೆಂಗಳೂರು ಎಫ್‌ಸಿ ತಂಡವು ಇಷ್ಟೇ ಅಂಕ ಗಳಿಸಿದ್ದು ಗೋಲು ವ್ಯತ್ಯಾಸದಲ್ಲಿ ಮುಂದಿರುವ ಕಾರಣ ಮೊದಲ ಸ್ಥಾನದಲ್ಲಿದೆ.

ಜೂನಿಯರ್ ವಿಶ್ವ ವೇಟ್‌ಲಿಫ್ಟಿಂಗ್ ಧನುಷ್‌ಗೆ ಕಂಚು

ಲಿಯಾನ್, ಸ್ಪೇನ್ (ಪಿಟಿಐ): ಭಾರತದ ಲೋಕನಾಥನ್ ಧನುಷ್ ಇಲ್ಲಿ ನಡೆದ ವಿಶ್ವ ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗಳಿಸಿದರು.

ವಿಶ್ವ ಜೂನಿಯರ್ ವೇಟ್‌ಲಿಫ್ಟಿಂಗ್‌ನ ಪುರುಷರ ವಿಭಾಗದಲ್ಲಿ ಪದಕ ಸಾಧನೆ ಮಾಡಿದ ಭಾರತದ ಮೊದಲ ಲಿಫ್ಟರ್ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾದರು.

17 ವರ್ಷದ ಧನುಷ್ ಒಟ್ಟು 231 ಕೆ.ಜಿ ತೂಕ ಎತ್ತಿದರು. ಸ್ನ್ಯಾಚ್‌ನಲ್ಲಿ 107 ಕೆ.ಜಿ. ಎತ್ತಿದರು. ಕ್ಲೀನ್ ಮತ್ತು ಜರ್ಕ್‌ನಲ್ಲಿ 124 ಕೆ.ಜಿ. ಎತ್ತಿದರು.

ವಿಯೆಟ್ನಾಂ ದೇಶದ ಕೆ. ಡಾಂಗ್ (253 ಕೆ.ಜಿ) ಮತ್ತು ಜಪಾನ್‌ನ ತೊಮಾರಿ ಕೊಟಾರು (247 ಕೆ.ಜಿ.) ಅವರು ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗಳಿಸಿದರು.

ಮಹಿಳೆಯರ ವಿಭಾಗದಲ್ಲಿ ಭಾರತದ ಪಾಯಲ್ 6ನೇ ಸ್ಥಾನ ಪಡೆದರು. 45 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿದ್ದ ಅವರು 150 ಕೆ.ಜಿ. ಭಾರ ಎತ್ತಿದರು.

ಹಾಕಿ: ಒಡಿಶಾಗೆ ಮಣಿದ ಕರ್ನಾಟಕ

ಚೆನ್ನೈ (ಪಿಟಿಐ): ಒಡಿಶಾ ತಂಡವು, 95ನೇ ಎಂಸಿಸಿ– ಮುರುಗಪ್ಪ ಗೋಲ್ಡ್ ಕಪ್ ಅಖಿಲ ಭಾರತ ಹಾಕಿ ಟೂರ್ನಿ ಪಂದ್ಯದಲ್ಲಿ ಶುಕ್ರವಾರ ಕರ್ನಾಟಕ ತಂಡವನ್ನು 4–1 ಗೋಲುಗಳಿಂದ ಸೋಲಿಸಿತು.

ರಾಹುಲ್ ಎಕ್ಕಾ (22ನೇ ನಿಮಿಷ), ರಜತ್ ಆಕಾಶ್ ಟಿರ್ಕಿ (29), ಕಂಗಾಡಿ ಸತೀಶ್ (30 ಮತ್ತು 56ನೇ ನಿಮಿಷ) ಒಡಿಶಾ ಪರ ಗೋಲು ಗಳಿಸಿದರೆ, ಕಳೆದ ಬಾರಿಯ ರನ್ನರ್ ಅಪ್ ಕರ್ನಾಟಕ ಪರ ಚೇತನ್ ಮಲ್ಲಪ್ಪ ಅಂತರ ಕಡಿಮೆ ಮಾಡಿದರು.

ಇನ್ನೊಂದು ಪಂದ್ಯದಲ್ಲಿ ಮಹಾರಾಷ್ಟ್ರ ಹಿನ್ನಡೆಯಿಂದ ಚೇತರಿಸಿ 5–4 ಗೋಲುಗಳಿಂದ ಮಾಜಿ ಚಾಂಪಿಯನ್ ಬಿಪಿಸಿಎಲ್ ತಂಡವನ್ನು ಮಣಿಸಿತು.

ರಾಜಸ್ಥಾನ ರಾಯಲ್ಸ್‌ಗೆ ರಾಥೋಡ್ ಬ್ಯಾಟಿಂಗ್ ಕೋಚ್

ಜೈಪುರ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ರಾಜಸ್ಥಾನ ರಾಯಲ್ಸ್ ತಂಡಕ್ಕೆ ವಿಕ್ರಂ ರಾಥೋಡ್ ಅವರನ್ನು ಬ್ಯಾಟಿಂಗ್ ಕೋಚ್ ಆಗಿ ನೇಮಕ ಮಾಡಲಾಗಿದೆ.

ಇದೇ ತಂಡಕ್ಕೆ ಈಚೆಗಷ್ಟೇ ರಾಹುಲ್ ದ್ರಾವಿಡ್ ಅವರನ್ನು ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿತ್ತು. ದ್ರಾವಿಡ್ ಅವರು ಭಾರತ ತಂಡದ ಮುಖ್ಯ ಕೋಚ್ ಆಗಿದ್ದ ಸಂದರ್ಭದಲ್ಲಿ ವಿಕ್ರಂ ಅವರು ಬ್ಯಾಟಿಂಗ್ ತರಬೇತುದಾರರಾಗಿದ್ದರು. ವಿಕ್ರಂ ಅವರು ಈ ಹಿಂದೆ ಭಾರತ ತಂಡದ ಆರಂಭಿಕ ಬ್ಯಾಟರ್ ಆಗಿ ಆಡಿದ್ದರು.

ರಾಥೋಡ್

‘ರಾಥೋಡ್ ಅವರು ಪರಿಣತ ಬ್ಯಾಟಿಂಗ್ ಕೋಚ್ ಆಗಿದ್ದಾರೆ. ಅವರನ್ನು ರಾಯಲ್ಸ್ ಬಳಗಕ್ಕೆ ಸ್ವಾಗತಿಸುತ್ತೇವೆ’ ಎಂದು ಫ್ರ್ಯಾಂಚೈಸಿಯು ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹಾಕಿದೆ.

‘ದ್ರಾವಿಡ್ ಅವರು ಮುಖ್ಯ ಕೋಚ್ ಮತ್ತು ವಿಕ್ರಂ ಅವರು ಬ್ಯಾಟಿಂಗ್ ಮಾರ್ಗದರ್ಶಕರಾಗಿದ್ದ ಸಂದರ್ಭದಲ್ಲಿ ಭಾರತ ತಂಡವು ಟಿ20 ವಿಶ್ವಕಪ್ ಜಯಿಸಿತ್ತು. ಅವರ ಅವಧಿಯಲ್ಲಿ ಎಲ್ಲ ಮೂರು ಮಾದರಿಗಳಲ್ಲಿಯೂ ತಂಡವು ಉತ್ತಮ ಸಾಧನೆ ಮಾಡಿತ್ತು’ ಎಂದು ಫ್ರ್ಯಾಂಚೈಸಿ ಹೇಳಿದೆ.

ರಾಥೋಡ್ ಅವರು ಭಾರತ ತಂಡದಲ್ಲಿ ಆರು ಟೆಸ್ಟ್ ಮತ್ತು ಏಳು ಏಕದಿನ ಪಂದ್ಯಗಳನ್ನು ಆಡಿದ್ದರು. 33 ಪ್ರಥಮ ದರ್ಜೆ ಪಂದ್ಯಗಳನ್ನೂ ಆಡಿದ್ದಾರೆ.

ಕಿರಿಯರ ಫುಟ್‌ಬಾಲ್ ಫೈನಲ್‌ಗೆ ಮಣಿಪುರ

ಬೆಂಗಳೂರು: ಕೀಶಮ್ ಬಿಕಾಶ್ ಸಿಂಗ್ ಅವರ ಹ್ಯಾಟ್ರಿಕ್ ನೆರವಿನಿಂದ ಮಣಿಪುರ ತಂಡವು ಟೈರ್1 ಸಬ್ ಜೂನಿಯರ್ ಬಾಲಕರ ರಾಷ್ಟ್ರೀಯ ಫುಟ್‌ಬಾಲ್ ಲೀಗ್‌ನ ಸೆಮಿಫೈನಲ್‌ನಲ್ಲಿ 4–0 ಗೋಲಿನಿಂದ ಗೋವಾ ತಂಡವನ್ನು ಸೋಲಿಸಿತು.

ಮಣಿಪುರ ತಂಡವು ಭಾನುವಾರ ಮಧ್ಯಾಹ್ನ 3 ಗಂಟೆಗೆ ನಡೆಯುವ ಫೈನಲ್‌ನಲ್ಲಿ ಆತಿಥೇಯ ಕರ್ನಾಟಕ ತಂಡವನ್ನು ಎದುರಿಸಲಿದೆ.

ಚೀನಾ ಓಪನ್: ಮಾಳವಿಕಾ ಓಟಕ್ಕೆ ತೆರೆ

ಚಾಂಗ್‌ಝೌ (ಚೀನಾ), (ಪಿಟಿಐ): ಭಾರತದ ಯುವ ಆಟಗಾರ್ತಿ ಮಾಳವಿಕಾ ಬನ್ಸೋಡ್ ಅವರು ಎರಡು ಬಾರಿಯ ವಿಶ್ವ ಚಾಂಪಿಯನ್ ಅಕಾನೆ ಯಮಗುಚಿ ಅವರಿಗೆ ಸಾಟಿಯಾಗಲಿಲ್ಲ. ನಾಲ್ಕನ ಶ್ರೇಯಾಂಕದ ಜಪಾನ್‌ನ ಆಟಗಾರ್ತಿ ಶುಕ್ರವಾರ ನೇರ ಗೇಮ್‌ಗಳಿಂದ ಮಾಳವಿಕಾ ಅವರನ್ನು ಸೋಲಿಸಿ ಚೀನಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ತಲುಪಿದರು.

43ನೇ ಕ್ರಮಾಂಕದ ಮಾಳವಿಕಾ 10–21, 21–16 ರಿಂದ ವಿಶ್ವ ಐದನೇ ಕ್ರಮಾಂಕದ ಆಟಗಾರ್ತಿಯೆದುರು ಸೋಲನುಭವಿಸಿದರು. ಈ ಪಂದ್ಯ 35 ನಿಮಿಷಗಳಲ್ಲಿ ಮುಕ್ತಾಯಗೊಂಡಿತು.

22 ವರ್ಷ ವಯಸ್ಸಿನ ಮಾಳವಿಕಾ ಅವರಿಗೆ ಇದು ಯಮಗುಚಿ ಎದುರು ಮೂರನೇ ಸೋಲೆನಿಸಿತು.

ನಾಗ್ಪುರದ ಆಟಗಾರ್ತಿ, ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ 25ನೇ ಕ್ರಮಾಂಕದ ಕ್ರಿಸ್ಟಿ ಗಿಲ್ಮೋರ್ ಅವರನ್ನು ಮಣಿಸಿದ್ದರು. ಗಿಲ್ಮೋರ್, ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದರು.